ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ—೧

ಹರಿಶ್ಚಂದ್ರಕಾವ್ಯ ಸಂಗ್ರಹ

ಮೈಸೂರು:
...ರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಲ್ಪಟ್ಟಿದೆ
೧೯೩೦
[ಬೆಲೆ: ರೂ. ೧-೧೨-೦

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ—೧

ಪ್ರಧಾನ ಸಂಪಾದಕ:
ಕೆ. ವಿ. ಪುಟ್ಟಪ್ಪ, ಎಂ.ಎ.

ಹರಿಶ್ಚಂದ್ರಕಾವ್ಯ ಸಂಗ್ರಹ

ಸಂಪಾದಕರು:
ಟಿ. ಎಸ್. ವೆಂಕಣ್ಣಯ್ಯ, ಎಂ.ಎ.
ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

ವೆಸ್ಲಿ ಪ್ರೆಸ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಐದನೆಯ ಮುದ್ರಣ

೧೯೫೦

ಮುನ್ನುಡಿ

ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸಬೇಕೆಂಬ ಘನೋದ್ದೇಶದಿಂದ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಒಂದು "ಕನ್ನಡ ಪ್ರಕಟನ ಸಮಿತಿ"ಯನ್ನು ನಿಯಮಿಸಿ, ಪ್ರತಿ ವರ್ಷವೂ ಪ್ರಸಿದ್ಧರಾದ ಗ್ರಂಥಕರ್ತರನ್ನು ನಿಷ್ಕರ್ಷಿಸಿ ಅವರಿಂದ ಗ್ರಂಥಗಳನ್ನು ಪ್ರಕಟನೆಗೆ ಸಿದ್ಧಪಡಿಸುವುದಕ್ಕೆ ತಕ್ಕ ಏರ್ಪಾಡನ್ನು ಮಾಡಿರುತ್ತಾರೆ.

ಈ ಗ್ರಂಥಗಳು ಎರಡು ಬಗೆಯವು :—

(೧) ಈ ನವೀನಕಾಲಕ್ಕೆ ಬೇಕಾದ ಮತ್ತು ಜನಸಾಮಾನ್ಯಕ್ಕೆ ಜ್ಞಾನವನ್ನು ಹರಡಬಲ್ಲ ಸಾಹಿತ್ಯ, ಕಲೆ,ವಿಜ್ಞಾನ, ತತ್ವ, ಚರಿತ್ರೆ, ಧರ್ಮ, ನೀತಿ, ಸಂಸ್ಕೃತಿ ಮುಂತಾದ ವಿಷಯಗಳನ್ನು ಲಲಿತವಾದ ಹೊಸಗನ್ನಡ ಶೈಲಿಯಲ್ಲಿ, ವಿವಾದಾಸ್ಪದವಲ್ಲದ ನಿಷ್ಕೃಷ್ಟವಾದ ರೀತಿಯಲ್ಲಿ ತಿಳಿಸತಕ್ಕುವು. ಇವು ಸ್ವತಂತ್ರ ಗ್ರಂಥಗಳಾಗಿರಬಹುದು; ಅಥವಾ ಭಾಷಾಂತರಗಳಾಗಿರಬಹುದು, ಸಂಕಲನಗಳಾಗಿರಬಹುದು.

(೨) ಕನ್ನಡದ ಪೂರ್ವದ ಸಾಹಿತ್ಯವನ್ನು ಜನರಲ್ಲಿಯೂ ವಿದ್ಯಾರ್ಥಿವರ್ಗದಲ್ಲಿಯೂ ಹೆಚ್ಚು ಪ್ರಚಾರಕ್ಕೆ ತರುವುದಕ್ಕಾಗಿ, ಉತ್ತಮಕಾವ್ಯಗಳ ಸಂಗ್ರಹಗಳು. ಇವು ವಿದ್ಯಾರ್ಥಿಗಳ ಪಾಠಕ್ಕೆ ಅನುಕೂಲವಾಗಿರಬೇಕು; ಮೂಲಪ್ರತಿಗಳನ್ನು ಪರಿಶೋಧಿಸಿದ ಶುದ್ಧಪಾಠವನ್ನು ಒಳಕೊಂಡು, ಪೀಠಿಕೆ, ಶಬ್ದಕೋಶ, ಆವಶ್ಯಕವಾದ ಟಿಪ್ಪಣಿಗಳೊಡನೆ ಕೂಡಿರಬೇಕು.

ಹೀಗೆ ಏರ್ಪಟ್ಟು, ಗ್ರಂಥಕರ್ತರಿಗೆ ಒಪ್ಪಿಸಿದ ಕೆಲಸಗಳಲ್ಲಿ ಮೊದಲು ಸಿದ್ಧವಾದ "ಹರಿಶ್ಚಂದ್ರಕಾವ್ಯ ಸಂಗ್ರಹ"ವನ್ನು ಈಗ ಪ್ರಕಟಿಸಿರುತ್ತದೆ. ಈ ಸಂಗ್ರಹ ಕಾರ್ಯವನ್ನು ಕುರಿತು ಗುಣಜ್ಞರ ಪರಾಮರ್ಶೆಗಾಗಿ ಒಂದೆರಡು ಮಾತನ್ನು ಅರಿಕೆಮಾಡಿಕೊಳ್ಳಬೇಕಾಗಿದೆ.

ನಮ್ಮ ಪ್ರೌಢಕಾವ್ಯಗಳು ಸಾಧಾರಣವಾಗಿ ಬಹಳ ವಿಸ್ತಾರವಾಗಿರುವುದರಿಂದ ಅವುಗಳಲ್ಲಿ ಬಹು ಸ್ವಲ್ಪ ಭಾಗವನ್ನು ಮಾತ್ರ ಪರೀಕ್ಷೆಗಳಿಗೆ ಪಠ್ಯಭಾಗವಾಗಿ ಇಡುವ ಪದ್ಧತಿ ರೂಢಿಗೆ ಬಂದಿದೆ. ಸಾಮಾನ್ಯ ಜನರಂತೂ ಈ ಕಾವ್ಯಗಳನ್ನು ಓದುವುದೇ ಅಪೂರ್ವ. ಇದು ವ್ಯಸನಕರವಾದ ಸಂಗತಿ. ಒಂದು ಕಾವ್ಯದ ಸೊಗಸನ್ನು, ಒಬ್ಬ ಕವಿಯ ಕವಿತಾಶಕ್ತಿಯನ್ನು, ತಿಳಿಯಬೇಕಾದರೆ ಕಾವ್ಯವನ್ನು ಸಂಪೂರ್ಣವಾಗಿ ಓದಬೇಕು; ಇಲ್ಲ, ಉತ್ತಮ ಭಾಗಗಳೆಲ್ಲವನ್ನಾದರೂ ನೋಡಬೇಕು. ಈ ಸಮಷ್ಟಿದೃಷ್ಟಿ ಸಾಧ್ಯವಾಗುವಂತೆ, ಪಾಠಕ್ಕೆ ಪ್ರಮಾಣ ಅತಿಮೀರದಂತೆ, ಕಾವ್ಯಗಳನ್ನು ಅದರದರ ಸ್ವಭಾವಕ್ಕೆ ಉಚಿತವಾಗಿ ಸಂಗ್ರಹಿಸಿದರೆ ವಿದ್ಯಾರ್ಥಿಗಳಿಗೂ ಸಾಮಾನ್ಯಜನಕ್ಕೂ ಹಿತಕರವೂ ಪ್ರಯೋಜನಕರವೂ ಆಗಬಹುದೆಂಬ ನಂಬಿಕೆಯಿಂದ ಈ ಸಂಗ್ರಹಗಳನ್ನು ಮಾಡುತ್ತದೆ. ಇದರಲ್ಲಿ ಮುಖ್ಯಗಮನ—ಕಥಾಸರಣಿ ಕೆಡಬಾರದು; ಒಟ್ಟು ಕಥೆಯ ಸ್ವಾರಸ್ಯಕ್ಕೆ, ಪಾತ್ರನಿರೂಪಣಕ್ಕೆ, ಭಂಗಬರಬಾರದು; ಅವಶ್ಯವಾದ ವರ್ಣನೆಯ ಮತ್ತು ವಿವರಣೆಯ ಸಾರ ಬಿಟ್ಟುಹೋಗಬಾರದು; ಎಲ್ಲಕ್ಕಿಂತ ಪ್ರಾಧಾನ್ಯವಾದದ್ದು, ಕವಿಯ ವ್ಯಕ್ತಿತ್ವಕ್ಕೆ, ಆತನ ವಿಶೇಷ ಪ್ರತಿಭೆಗೆ, ಲೋಪ ಬರಕೂಡದು. ಇಷ್ಟನ್ನೂ ಸಾಧಿಸುವುದು ಸಂಗ್ರಹಕಾರನ ಕರ್ತವ್ಯ; ಆದರೆ ಕಷ್ಟ:—ನಿಸ್ಸಾರವಾದ, ಚರ್ವಿತಚರ್ವಣವಾದ ಭಾಗಗಳನ್ನು ಮನಃಕ್ಲೇಶವಿಲ್ಲದೆ ಬಿಟ್ಟರೂ, ಆತನು ಆಗಾಗ್ಗೆ ಧರ್ಮಸಂಕಟಕ್ಕೆ ಸಿಕ್ಕದೆ ಇರಲಾರನು. ಯಾವ ಸುಂದರವಾದ ಪ್ರಕರಣವನ್ನು ಉಳಿಸಿಕೊಳ್ಳಲಿ, ಈ ಭಾವವನ್ನೂ ಚಮತ್ಕಾರವನ್ನೂ ಹೇಗೆ ಬಿಡಲಿ, ಎಂದು ಆತನು ತನ್ನೊಡನೆಯೇ ಹೋರಾಡದೆ ಇರನು. ತನ್ನ ಸಂಸ್ಕಾರವನ್ನೂ ಅಭಿರುಚಿಯನ್ನೂ ಪ್ರಮಾಣವಾಗಿಟ್ಟುಕೊಂಡರೂ, ತನ್ನ ಸಂಗ್ರಹ ಬಹುಜನಸಮ್ಮತವಾಗಬೇಕೆನ್ನುವುದನ್ನು ಮರೆಯನು. ಕೊನೆಗೆ ಸಹೃದಯರ ಕರುಣೆಗೆ ಸಂಗ್ರಹಕಾರನು ಶರಣನು.

ರಾಘವಾಂಕನು ಹೊಸಗನ್ನಡದಲ್ಲಿ ಬರೆದಿರುವ ಕವಿಗಳಲ್ಲಿ ಮೊದಲನೆಯವನು; ನಮ್ಮ ಉತ್ತಮಕವಿಗಳಲ್ಲಿ ಒಬ್ಬನು. ಹರಿಶ್ಚಂದ್ರನ ಕಥೆ ಭಾರತದ ಕಥೆಗಳಲ್ಲಿ ಪ್ರಸಿದ್ಧವಾದ, ಉಚ್ಚಧ್ಯೇಯದಿಂದ ಪೂರಿತವಾದ ಕಥೆ. ಪೀಠಿಕೆ

ಯಲ್ಲಿ ಶ್ರುತಿಯಲ್ಲಿಯೂ, ಪುರಾಣಗಳಲ್ಲಿಯೂ, ಇತಿಹಾಸಗಳಲ್ಲಿಯೂ ಈ ಕಥೆ ಹೇಗೆ ಹೇಗೆ ಕಾಣಿಸುತ್ತದೆ ಎಂಬುದನ್ನು ತೋರಿಸಿರುತ್ತದೆ. ತಕ್ಕಮಟ್ಟಿಗೆ ಕಾವ್ಯವಿಮರ್ಶೆಯನ್ನೂ ಮಾಡಿರುತ್ತದೆ.

ಭಗವತ್ಕೃಪೆಯಿಂದಲೂ, ಕನ್ನಡಿಗರ ಸೌಹಾರ್ದ ಸಹಕಾರಗಳಿಂದಲೂ ಈ ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ ಬೆಳೆಯುತ್ತಾ ಬರಲಿ ಎಂದು ಪ್ರಾರ್ಥನೆ.

ಬೆಂಗಳೂರು,
೧೩—೬—೩೧.

ಬಿ. ಎಂ. ಶ್ರೀಕಂಠಯ್ಯ,
ಸಮಿತಿಯ ಅಧ್ಯಕ್ಷ ಮತ್ತು ಪ್ರಧಾನ ಸಂಪಾದಕ.

*　　*　　*　　*

ಐದನೆಯ ಮುದ್ರಣ

ನಾಲ್ಕನೆಯ ಮುದ್ರಣದ ಪ್ರತಿಗಳು ಮುಗಿದುಹೋದ್ದರಿಂದ ಈ ಐದನೆಯ ಮುದ್ರಣವನ್ನು ಮಾಡಿಸಲಾಗಿದೆ. ಪೀಠಿಕೆ, ಗ್ರಂಥಪಾಠ, ಶಬ್ದಕೋಶಗಳಲ್ಲಿ ಕೆಲವು ಸಣ್ಣ ಬದಲಾವಣೆಗಳನ್ನು ಮಾಡಿದೆ.

ಮೈಸೂರು
೧-೧೨-೧೯೪೯

ಎ. ಆರ್. ಕೃ.

ವಿಷಯ ಸೂಚಿಕೆ

ವಿಷಯ	ಪುಟ
ಮುನ್ನುಡಿ	iii
ಪೀಠಿಕೆ	vii
ಹರಿಶ್ಚಂದ್ರಕಾವ್ಯ ಸಂಗ್ರಹ —	
೧. ಕಥಾರಂಭ	೧
೨. ವಸಿಷ್ಠ ವಿಶ್ವಾಮಿತ್ರರ ವಿವಾದ	೭
೩. ಮೃಗಯಾಪ್ರಸಂಗ	೧೪
೪. ವಿಶ್ವಾಮಿತ್ರಾಶ್ರಮ ಪ್ರವೇಶ	೨೭
೫. ರಾಜ್ಯಸರ್ವಸ್ವದಾನ	೪೩
೬. ರಾಜ್ಯಸಮರ್ಪಣ	೫೭
೭. ಪತ್ನೀಪುತ್ರವಿಕ್ರಯ, ಆತ್ಮವಿಕ್ರಯ	೬೬
೮. ರೋಹಿತಾಶ್ವನ ಮರಣ, ಚಂದ್ರಮತಿಯ ದುಃಖ	೮೪
೯. ವಿಶ್ವೇಶ್ವರಸಾಕ್ಷಾತ್ಕಾರ	೧೦೫
ಶಬ್ದಕೋಶ	೧೧೩

ಪೀಠಿಕೆ

ಕವಿ ಮತ್ತು ಕಾಲ

ಹರಿಶ್ಚಂದ್ರಕಾವ್ಯವನ್ನು ಬರೆದ ಕವಿ ರಾಘವಾಂಕ. ಸಿದ್ಧರಾಮಪುರಾಣ, ಸೋಮನಾಥ ಚರಿತೆ, ವೀರೇಶ ಚರಿತೆ, ಶರಭ ಚಾರಿತ್ರ, ಹರಿಹರ ಮಹತ್ವ— ಇವು ಈತನ ಇತರ ಗ್ರಂಥಗಳು. ಇವುಗಳಲ್ಲಿ ಈಗ ಮೊದಲಿನ ನಾಲ್ಕು ಸಿಕ್ಕಿ ಅಚ್ಚಾಗಿವೆ ; ಮಿಕ್ಕ ಎರಡು ಇನ್ನೂ ದೊರೆತಿಲ್ಲ.

ಈತನ ಕಾಲವು ಹನ್ನೆರಡನೆಯ ಶತಮಾನದ ಉತ್ತರಾರ್ಧ (ಸು. ೧೧೬೫) ಎಂದು ರಾ. ನರಸಿಂಹಾಚಾರ್ಯರೂ, ಹದಿಮೂರನೆಯ ಶತಮಾನದ ಕೊನೆ (ಸು. ೧೨೫೦) ಎಂದೂ ರೆ|| ಕಿಟ್ಟೆಲ್, ಡಾ|| ವೆಂಕಟಸುಬ್ಬಯ್ಯನವರು ಮುಂತಾದವರೂ ಅಭಿಪ್ರಾಯಪಡುತ್ತಾರೆ.

ರಾಘವಾಂಕನ ಕಾಲ ದೇಶ ವರ್ತಮಾನಗಳನ್ನು ಸುಮಾರಾಗಿ ಊಹಿಸಲು ಸಹಕಾರಿಗಳಾದ ಕೆಲವು ಸಂಗತಿಗಳು ಅವನ ಗ್ರಂಥಗಳಿಂದ ತಿಳಿದುಬರುತ್ತವೆ. ಅವು ಯಾವುವೆಂದರೆ :—

ಈತನು ಹಂಪೆಯಲ್ಲಿ ಹುಟ್ಟಿ ಬೆಳೆದು ವಿರೂಪಾಕ್ಷನ ಭಕ್ತನಾಗಿದ್ದನು. ಹಂಪೆಯ ಶಂಕರಪ್ರಭು, ಹಂಪೆಯ ಮಾದಿರಾಜ, ಹಂಪೆಯ ಮಹಾದೇವ, ಹಂಪೆಯ ಹರೀಶ್ವರ — ಇದು ಗುರುಪರಂಪರೆ. ತಾನು ಹರೀಶ್ವರನ 'ವರಸುತ' ಎಂದರೆ ಶಿಷ್ಯ[1]. ಉದ್ಭಟ, ಮಯೂರ, ಕಾಳಿದಾಸ, ಹಲಾಯುಧ, ಕೇಶಿರಾಜ, ಮಲುಹಣ, ಬಾಣ, ಭೋಜ, ಭಲ್ಲಟ, ಭಾರವಿ—ಇವರು ಸ್ತುತ್ಯರಾದ ಹಿಂದಿನ ಶೈವ ಕವಿಗಳು. (ಹರಿಶ್ಚಂದ್ರಕಾವ್ಯ.)

ಸಿದ್ಧರಾಮನು ಸೊನ್ನಲಿಗೆಯಲ್ಲಿ ಕೆರೆಯನ್ನು ಕಟ್ಟಿಸಿ ಶಿವಪೂಜೆ ಪುರಸ್ಕಾರ ಗಳನ್ನು ಮಾಡುತ್ತಿದ್ದಾಗ ಬಿಜ್ಜಳನು ವೀರಜಗದೇವನಿಂದ ಹತನಾದನು.

---

[1] 'ಹಂಪೆಯ ಮಹಾದೇವನಾತ್ಮಜ' (ಹರಿಶ್ಚಂದ್ರಕಾವ್ಯ, I, ೧೩) ಎಂದೂ ಹೇಳಿ ಕೊಂಡಿದ್ದಾನೆ. ಇಲ್ಲಿ 'ಆತ್ಮಜ' ಎಂಬ ಶಬ್ದವನ್ನು 'ಹೊಟ್ಟೆಯಲ್ಲಿ ಹುಟ್ಟಿದ ಮಗ' ಎಂಬ ಅರ್ಥದಲ್ಲಿ ಉಪಯೋಗಿಸಿರುವಂತೆ ತೋರುತ್ತದೆ.

ಬಿಜ್ಜಳನ ತಮ್ಮನಾದ ಕರ್ಣದೇವನು ತನಗೆ ಕಲ್ಯಾಣದಲ್ಲಿ ಪಟ್ಟಕಟ್ಟಬೇಕೆಂದು ಸಿದ್ಧರಾಮನಿಗೆ ಹೇಳಿಕಳುಹಿಸಿದನು. ಆದರೆ ಸಿದ್ಧರಾಮನು ಅದಕ್ಕೆ ಒಪ್ಪಲಿಲ್ಲ. ಅಲ್ಲಮ(ಪ್ರಭುದೇವ)ನು ಸಿದ್ಧರಾಮನನ್ನು ಕಂಡು ಅವನಿಗೆ ಸಿದ್ಧರ ಚರಿತ್ರೆಗಳನ್ನು ಹೇಳಿಹೋದನು.—(ಸಿದ್ಧರಾಮ ಪುರಾಣ.)

ಸೋಮನಾಥ ಚರಿತ್ರೆಯಲ್ಲಿಯೂ ಸ್ವಲ್ಪ ಹೆಚ್ಚು ಕಡಮೆ ಹರಿಶ್ಚಂದ್ರಕಾವ್ಯದ ಪೀಠಿಕೆಯಲ್ಲಿ ಬರುವ ಸಂಗತಿಗಳೇ ಇವೆ. ಕಥಾನಾಯಕನಾದ ಆದಯ್ಯನು ಹುಲಿಗೆರೆಗೆ ಹೋದಾಗ ಅಲ್ಲಿ ಚಂದ್ರಾದಿತ್ಯನೆಂಬ ರಾಜನಿದ್ದಂತೆ ಹೇಳಿದೆ. ಆದರೆ ಈ ಚಂದ್ರಾದಿತ್ಯನಾರೆಂಬುದು ಗೊತ್ತಿಲ್ಲ. ಕರ್ಣಾಟಕದ ಪ್ರಾಚೀನ ಚರಿತ್ರೆಯಲ್ಲಿ ಇಬ್ಬರು ಚಂದ್ರಾದಿತ್ಯರು ತಿಳಿದುಬಂದಿದ್ದಾರೆ; ಒಬ್ಬನು ಇಮ್ಮಡಿ ಪುಲಿಕೇಶಿಯ ಹಿರಿಯಮಗ (೭ನೆಯ ಶತ.). ಇನ್ನೊಬ್ಬನು ಕರಹಾಡ ರಾಜನಾದ ಇಮ್ಮಡಿ ಜತಿಗನ ಮಗ (ಸು. ೧೦೫೦). ಆದಯ್ಯನು ಸುಮಾರು ೧೧೫೦ರಲ್ಲಿ ಜೀವಿಸಿದ್ದನೆಂಬುದನ್ನು ಒಪ್ಪಿಕೊಂಡರೆ (ಕವಿಚರಿತೆ, I, ಪುಟ ೨೦೩) ಮೇಲೆ ಕಂಡ ಚಂದ್ರಾದಿತ್ಯರಲ್ಲಿ ಯಾರೂ ಆಗ ಇರಲಿಲ್ಲವೆಂಬುದು ಸ್ಪಷ್ಟವಾಗಿದೆ.

ಮೇಲೆ ನಿರ್ದಿಷ್ಟರಾದ ವ್ಯಕ್ತಿಗಳಲ್ಲಿ ಹರೀಶ್ವರನು 'ಗಿರಿಜಾಕಲ್ಯಾಣ' ಮುಂತಾದ ಕಾವ್ಯಗಳ ಕರ್ತೃ; ರಾಘವಾಂಕನ ಸೋದರಮಾವ ಮತ್ತು ಗುರು. ಆದರೆ ಹರೀಶ್ವರನ ಕಾಲವೂ ರಾಘವಾಂಕನ ಕಾಲದಷ್ಟೇ ಅನಿಶ್ಚಿತವಾಗಿದೆ. ಪೂರ್ವಕವಿಗಳಲ್ಲಿ ಕೇಶಿರಾಜ ಹೊರತು ಮಿಕ್ಕವರೆಲ್ಲರೂ ಸಂಸ್ಕೃತ ಸಾಹಿತ್ಯಚರಿತ್ರೆಯಲ್ಲಿ ಪರಿಚಿತರಾದವರು. ಇಲ್ಲಿ ಉಕ್ತರಾಗಿರುವವರೂ ಅವರೇ ಆಗಿರಬೇಕು.[2] ಇವರೆಲ್ಲರೂ ಹನ್ನೆರಡನೆಯ ಶತಮಾನಕ್ಕಿಂತ ಹಿಂದೆ ಇದ್ದವರು.

---

[2] 'ಇವರಲ್ಲಿ ಕಾಳಿದಾಸ ಮಯೂರ ಬಾಣರು ಕಂಧಾರದ ನಂದಭೂಪನ ಸಭೆಯಲ್ಲಿದ್ದಂತೆಯೂ, ಕಾಳಿದಾಸನು ಶಿವನ ಚರಣಕ್ಕೆ ಕಣ್ಣನ್ನರ್ಪಿಸಿ ಮರಳಿ ಪಡೆದಂತೆಯೂ, ಮಯೂರನು ಸೂರ್ಯನಿಂದ ಹೋಗದ ಕುಷ್ಠವನ್ನು ಶಿವನಿಂದ ನೀಗಿ ನಿರ್ಮಲ ತನುವನ್ನು ಪಡೆದಂತೆಯೂ, ಬಾಣನು ತನ್ನ ಕೈಕಾಲುಗಳನ್ನು ಕತ್ತರಿಸಿಕೊಂಡು ಶಿವನನ್ನು ಸ್ತುತಿಸಿ ಮರಳಿ ಪಡೆದಂತೆಯೂ, ಭೋಜನು ಶಿವಕಾವ್ಯವನ್ನು ಬರೆಯಲು ಶಿವನು ಮೆಚ್ಚಿ ಕೈಲಾಸಕ್ಕೆ ಕರೆದುಕೊಂಡು ಹೋದಂತೆಯೂ ವೀರಶೈವ ಗ್ರಂಥಗಳಲ್ಲಿ ಹೇಳಿದೆ....' (ಕವಿಚರಿತೆ, I, ೨೨೨-೨೩.)

ಇನ್ನು ಸಿದ್ಧರಾಮನ ಕಾಲವೂ ಸರಿಯಾಗಿ ಗೊತ್ತಿಲ್ಲ. (ಸುಮಾರು ೧೧೬೦ ಎಂಬುದು ಕವಿಚರಿತಕಾರರ ಅಭಿಪ್ರಾಯ—ಕವಿಚರಿತೆ, I, ಪುಟ ೧೮೩.) ಕಲ್ಯಾಣದ ಬಿಜ್ಜಳನು ಸಿದ್ಧರಾಮನ ಕಾಲದಲ್ಲಿ ಗತಿಸಿದನೆಂದು ಸಿದ್ಧರಾಮ ಪುರಾಣದಲ್ಲಿ ಉಕ್ತವಾಗಿರುವುದರಿಂದ ಇದನ್ನು ಬರೆದ ರಾಘವಾಂಕನು ಕ್ರಿ.ಶ. ೧೧೫೬—೧೧೬೭ರಲ್ಲಿ ಆಳುತ್ತಿದ್ದ ಬಿಜ್ಜಳನಿಗಿಂತ ಒಂದೆರಡು ತಲೆ ಯಾದರೂ ಈಚೆ ಇದ್ದಿರಬೇಕು. ಏಕೆಂದರೆ, ಬಿಜ್ಜಳನು ಸತ್ತಮೇಲೆ ಸಿದ್ಧ ರಾಮನು ಬಯಲಾದದ್ದು. ಸಿದ್ಧರಾಮನು ಬಯಲಾದಮೇಲೆ ರಾಘವಾಂಕನು ಅವನ ಪುರಾಣವನ್ನು ಬರೆದದ್ದು. "ಸೋಮನಾಥ ಚರಿತೆ" ಯೂ ಹೀಗೆಯೇ ಆದಯ್ಯನ ಕಾಲಾನಂತರ ಬರೆದದ್ದು. ಆದಯ್ಯನ ವಚನಗಳನ್ನು ನೋಡಿದರೆ, (ಶಿವಾನುಭವ, ಸಂಪುಟ ೬, ಸಂಚಿಕೆ ೩; "ಆದಯ್ಯನ ವಚನಗಳು" ಪುಟಗಳು ೧೬-೧೭ ಮತ್ತು 'ಪ್ರಸ್ತಾವನೆ' ಪುಟ ೫) ಅವನು ಬಸವಣ್ಣನವರ ಕಾಲಕ್ಕಿಂತ ಈಚೆಗೆ ಇದ್ದನೆಂದು ಊಹಿಸಬೇಕಾಗುತ್ತದೆ. ಆದ್ದರಿಂದ ರಾಘವಾಂಕನು ಸುಮಾರು ಕ್ರಿ.ಶ. ೧೨೦೦ರ ಮೇಲೆ ಇದ್ದಿರಬೇಕೆಂದು ಸ್ಥೂಲವಾಗಿ ಹೇಳಬಹುದು.

ಸುಮಾರು ೧೨೬೩ರಲ್ಲಿ ರಚಿತವಾದ ಮಲ್ಲಿಕಾರ್ಜುನನ 'ಸೂಕ್ತಿ ಸುಧಾರ್ಣವ'ದಲ್ಲಿ ಹರೀಶ್ವರನ 'ಗಿರಿಜಾಕಲ್ಯಾಣ'ದಿಂದ ಪದ್ಯಗಳು ಉದ್ಧೃತ ವಾಗಿರುವುದರಿಂದ ಹರೀಶ್ವರನು ಆ ಕಾಲದಲ್ಲಿ ಅಥವಾ ಅದಕ್ಕಿಂತ ಹಿಂದೆ ಇದ್ದನೆಂದು ಹೇಳಬಹುದು. ರಾಘವಾಂಕನು ಅವನಿಗಿಂತ ಸ್ವಲ್ಪ ಕಿರಿಯವ ನಾಗಿರಬೇಕು.

ಈತನ ವಿಷಯವಾಗಿ ರಾಘವಾಂಕ ಚಾರಿತ್ರ (ಕ್ರಿ.ಶ. ೧೬೫೦), ಚನ್ನ ಬಸವ ಪುರಾಣ (೧೫೮೪), ಭೈರವೇಶ್ವರಕಾವ್ಯದ ಕಥಾಸೂತ್ರ ರತ್ನಾಕರ (೧೬೭೨), ಗುರುರಾಜ ಚಾರಿತ್ರ (೧೬೫೦)—ಇವುಗಳಿಂದ ಈ ವಿಷಯಗಳು ತಿಳಿಯುತ್ತವೆ[3] :—

ರಾಘವಾಂಕ ಚಾರಿತ್ರ:—'ಈತನು ಕುಂತಳ ದೇಶದಲ್ಲಿ ತುಂಗಭದ್ರಾತೀರ ದಲ್ಲಿರುವ ಪಂಪಾಪುರದಲ್ಲಿ ಹುಟ್ಟಿದನು. ಇವನ ತಂದೆ ಮಹಾದೇವಭಟ್ಟ;

[3] ಕವಿಚರಿತೆ, I, ೨೩೫-೨೩೬.

ತಾಯಿ ರುದ್ರಾಣಿ; ಸೋದರಮಾವ ಮತ್ತು ಗುರು ಹಂಪೆಯ ಹರೀಶ್ವರ. ಈತನು ತನಗೆ ಕವಿತಾಶಕ್ತಿಯುಂಟಾದಮೇಲೆ ಪಂಪಾಪುರದ ರಾಜನಾದ ದೇವರಾಜನ ಸಭೆಯಲ್ಲಿ ವಿದ್ವಾಂಸರೆಲ್ಲರೂ ಮೆಚ್ಚುವಂತೆ ಹರಿಶ್ಚಂದ್ರಕಾವ್ಯವನ್ನು ರಚಿಸಿ ಓದಿದನು. ಹೀಗೆ ನರಸ್ತುತಿ ಮಾಡಿದ ತಪ್ಪಿತಕ್ಕೆ ಹರೀಶ್ವರನು ಹಲ್ಲುಗಳನ್ನು ಮುರಿಯಲು ಹರೀಶ್ವರನ ಇಷ್ಟಾನುಸಾರ ಸೋಮನಾಥ ಚರಿತೆಯೇ ಮುಂತಾದ ಗ್ರಂಥಗಳನ್ನು ಬರೆಯಲು ಹಲ್ಲುಗಳನ್ನು ಮರಳಿ ಪಡೆದನು. ತರುವಾಯ ನರಸಿಂಹ ಬಲ್ಲಾಳನ ಮಂತ್ರಿಯಾದ ಕೆರೆಯ ಪದ್ಮರಸನನ್ನು ನೋಡುವುದಕ್ಕಾಗಿ ಹೊಯ್ಸಳನಗರಕ್ಕೆ ಹೋದನು. ಅಲ್ಲಿಂದ ಮರಳಿ ಪಂಪೆಗೆ ಬಂದು ಓರುಗಲ್ಲಿನ ರಾಜನಾದ ರುದ್ರಪ್ರತಾಪನ ಸಭೆಯಲ್ಲಿ ಏಕ ದ್ವಿ ತ್ರಿ ಸಂಧಿಗ್ರಾಹಿಗಳೆಂಬ ಕುಕವಿಗಳಿದ್ದಾರೆಂದು ಕೇಳಿ ಅಲ್ಲಿಗೆ ಹೋಗಿ ಷಟ್ಪದೀ ರೂಪವಾದ ವೀರೇಶ್ವರ ಚರಿತೆಯೆಂಬ ಗ್ರಂಥವನ್ನು ಬರೆದು ರಾಜನ ಸಭೆಯಲ್ಲಿ ಓದಿ ಕುಕವಿಪರವಾದಿಗಳನ್ನು ಜಯಿಸಿ ಹಂಪೆಗೆ ಬಂದು ಹರೀಶ್ವರನ ಆಜ್ಞಾನುಸಾರವಾಗಿ ಬೇಲೂರಿಗೆ ಹೋಗಿ ಅಲ್ಲಿ ಬಯಲಾದನು. ಈತನಿಗೆ ಹಿಂದೆ ಷಟ್ಪದಿಗಳಲ್ಲಿ ಆರೂ ಗ್ರಂಥವನ್ನು ಬರೆದಿರಲಿಲ್ಲ; ಈತನೇ ಅವುಗಳನ್ನು ನಿರ್ಮಿಸಿದವನು.'

ಚೆನ್ನಬಸವ ಪುರಾಣ :—

"ವರಹರೀಶ್ವರನ ಸೋದರದಳಿಯನುಭಯ ಕವಿ
ಶರಭಭೇರುಂಡನೆಂದೆಂಬ ನಾನಾಪರಿಯ
ಬಿರುದಾಂತ ಕವಿರಾಘವಾಂಕನಿರಲೋರುಗಲ್ಲೆಂಬ ಪಟ್ಟಣಕೆ ಪೋಗಿ|
ಪರವಾದಿಗಳನಲ್ಲಿ ಗೆಲಿಮ ವೀರೇಶನಿಂ
ದರಿದೆನಿಪ ಪದಕಮಂ ಪಡೆದು ವೇಲಾಪುರಿಗೆ
ಮರಳಿ ಬಂದಲ್ಲಿ ದೇಹವನುಳಿದು ವರಸಮಾಧಿಯೊಳಿರದೆ ಬಯಲಪ್ಪನು||"

ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರ:—

'ಪ್ರತಾಪರುದ್ರನ ಸಭೆಯಲ್ಲಿ ಏಕದಂಡಿ, ದ್ವಿದಂಡಿ, ತ್ರಿದಂಡಿ ಯೆಂಬ ಮೂವರು ವೈಷ್ಣವಕವಿಗಳು ಸಕಲ ವಿದ್ವಾಂಸರು ಮಾಡಿದ ಪದ್ಯವಂ ಮೂಱುವೇಳೆ ಓದಿಸಿ ಆ ಪದ್ಯವ ಪಾಠಮಾಡಿ ನನ್ನ ಪದ್ಯವ ನೀನೆಲ್ಲಿ ಕಲಿತೆ ಎಂದು ಕವಿಗಳನ್ನು ರಾಜನ ಸಭೆಯಲ್ಲಿ ಮನ್ನಣೆಯಿಲ್ಲದಂತೆ ಸೋಲಿಸುತ್ತಿರಲು,

ರಾಘವಾಂಕನು ಆ ವಾರ್ತೆಯಂ ಕೇಳಿ ಕವಿಮುಖಕವಾಟವೆಂಬ ಪದ್ಯ ಶಾಸ್ತ್ರವಂ ರಚಿಸಿ ಓರುಗಲ್ಲಿಗೆ ಹೋಗಿ ಆ ಏಕ ದ್ವಿ ತ್ರಿ ದಂಡಿಗಳನ್ನು ಸೋಲಿಸಿ ರಾಜನಿಂದ ಮನ್ನಣೆಯನ್ನು ಹೊಂದಿದನು. ಉಭಯಕವಿಶರಭಭೇರುಂಡ ರಾಘವಾಂಕ ಪಂಡಿತ ಎಂಬ ಶಿವಕವೀಶ್ವರನ ಕವಿತ್ವದಲ್ಲಿ ತಪ್ಪಿಲ್ಲವೆಂದು ಸಮಸ್ತ ಸಮಯದ ಕವಿಗಳೆಲ್ಲಾ ಕೀರ್ತಿಸಿದರು.'

ಗುರುರಾಜ ಚಾರಿತ್ರ:—

'ಕವಿಕಮಲಮಾರ್ತಾಂಡ ರಾಘವಾಂಕಂ ಪಂಪಾವಿರೂಪಾಕ್ಷನನು ಸ್ತುತಿಸಿ ಕಂಕಣಕಿರೀಟಾದಿಗಳನನುನಯದಿ ಪಡೆದು ಉಭಯಕವಿಶರಭ ಭೇರುಂಡನೆಂಬ ಪೆಂಡೆಯವ ಧರಿಸಿ ಹರಿಶ್ಚಂದ್ರನ ಕಾವ್ಯವ ಮುಱಿದು ಸೋಮ ನಾಥನ ಕಾವ್ಯವ ಪೇಟಿ ಕುಮಾರವ್ಯಾಸನ ಗೆಲಿದು ಓರುಂಗಲ್ಲಿಗೈದುತ್ತ ಸುಮನಸನ ಲೀಲೆಯಿಂ ಗಂಧರ್ವಲೋಕಕ್ಕೆ ಕಳುಹಿ ವೀರೇಶನಾಲಯಕೆ ಹೋಗಿ ದೇಗುಲದ ಹಿಂದೆ ಕುಳಿತು ಭಕ್ತಿಯಿಂದ ಮಿಾಸಲುಗವಿತೆಯೆಂಬ ಪ್ರಬಂಧಮಂ ರಾಗದಿಂದೊರೆದು ದೇಗುಲವನಭಿಮುಖಗೈದು ವೀರಭದ್ರನಂ ರಂಗಸ್ಥಲಕೆ ಬರಿಸಿ ರುದ್ರಪ್ರತಾಪನಿಂ ಪೂಜೆವಡೆದನು.'

ಈ ಗ್ರಂಥಗಳನ್ನು ನಂಬುವುದಾದರೆ, ರಾಘವಾಂಕ, ಪಂಪಾಪುರದ ದೇವ ರಾಜ, ನರಸಿಂಹ ಬಲ್ಲಾಳ, ಓರುಗಲ್ಲಿನ ರುದ್ರಪ್ರತಾಪ ಇವರೆಲ್ಲರೂ ಸಮಕಾ ಲಿಕರಾಗುತ್ತಾರೆ. ಇದು ಸಂಭವವಾಗಬೇಕಾದರೆ ರಾಘವಾಂಕನು ಕ್ರಿ. ಶ. ಸುಮಾರು ೧೨೮೦-೯೦ರಲ್ಲಿ ಇದ್ದಿರಬೇಕೆಂದು ರೆ. ಕಿಟ್ಟೆಲ್ ಮತ್ತು ಡಾ|| ವೆಂಕಟಸುಬ್ಬಯ್ಯನವರೂ, ಸುಮಾರು ೧೧೬೫ರಲ್ಲಿ ಇದ್ದಿರಬೇಕೆಂದು ರಾ. ನರಸಿಂಹಾಚಾರ್ಯರೂ ಅಭಿಪ್ರಾಯಪಡುತ್ತಾರೆ.

ನರಸಿಂಹ ಬಲ್ಲಾಳನು ೧ನೆಯ ನರಸಿಂಹ ಹೊಯ್ಸಳ (೧೧೫೬-೧೧೭೧), ರುದ್ರಪ್ರತಾಪನು ೧೧೬೨ರಲ್ಲಿ ಇದ್ದ ರುದ್ರದೇವ, ದೇವರಾಜನು ಯಾರೋ ಗೊತ್ತಿಲ್ಲ—ಎಂಬುದು ರಾ. ನರಸಿಂಹಾಚಾರ್ಯರ ಹೇಳಿಕೆ. ಆದರೆ ಈ ನರ ಸಿಂಹ ಬಲ್ಲಾಳನು (ಮೂರನೆಯ ನರಸಿಂಹ ಹೊಯ್ಸಳನ ಮಗನಾದ) ಮೂರನೆಯ ಬಲ್ಲಾಳ (೧೨೯೧-೧೩೪೨), ರುದ್ರಪ್ರತಾಪನು ಈ ಮೂರನೆಯ

ಬಲ್ಲಾಳನ ಸಮಕಾಲಿಕನಾದ ಓರುಗಲ್ಲಿನ ಪ್ರತಾಪರುದ್ರ, ಪಂಪಾಪುರದಲ್ಲಿ ದೇವರಾಜನೆಂಬ ಒಬ್ಬ ಸಣ್ಣ ರಾಜನಿದ್ದಿರಬಹುದು—ಎಂಬುದು ಡಾ|| ವೆಂಕಟ ಸುಬ್ಬಯ್ಯನವರ ಮತ.

ಮೇಲೆ, ಅಂತರಪ್ರಮಾಣ ಮುಂತಾದ ಕಾರಣಗಳಿಂದ ರಾಘವಾಂಕನು ಕ್ರಿ. ಶ. ೧೨೦೦ ರ ಮೇಲೆ ಇದ್ದಿರಬಹುದೆಂದು ಮಾಡಿರುವ ಊಹೆಗೆ ಡಾ|| ವೆಂಕಟಸುಬ್ಬಯ್ಯನವರ ಮತವು ಉಪಷ್ಟಂಭಕವಾಗುತ್ತದೆ.

ವಸ್ತುತಃ ರಾಘವಾಂಕನ ಕಾಲವಾದ ೩೦೦-೪೦೦ ವರ್ಷಗಳಮೇಲೆ ಬರೆದ 'ರಾಘವಾಂಕ ಚಾರಿತ್ರ' ಮುಂತಾದ ಗ್ರಂಥಗಳ ಹೇಳಿಕೆಗೆ ಎಷ್ಟು ಬೆಲೆ ಕೊಡಬೇಕೆಂದು ನಿರ್ಧರಿಸುವುದು ಕಷ್ಟ. ಅವೇನು ಚರಿತ್ರೆಗಳೆಂದು ಬರೆದ ಗ್ರಂಥಗಳಲ್ಲ. ಜನಜನಿತವಾಗಿ ತಿಳಿಯಬಂದ ಸಂಗತಿಗಳು ಕಾವ್ಯದಲ್ಲಿ ಪ್ರತಿಪಾದಿತವಾದಾಗ ಒಂದು ಕಾಲದಿಂದ ಮತ್ತೊಂದು ಕಾಲಕ್ಕೆ ಬಣ್ಣವೇರಿ ಬದಲಾಯಿಸುತ್ತ ಹೋಗುವುದು ಸ್ವಭಾವ.

ಆದ್ದರಿಂದಲೇ ಈ ಗ್ರಂಥಗಳಲ್ಲಿ ಚರಿತ್ರಕಾರರಿಗೆ ಸಮ್ಮತವಲ್ಲದ ಸಂಗತಿಗಳೂ, ಪರಸ್ಪರ ವಿರೋಧಗಳೂ ಕಂಡುಬರುತ್ತವೆ. ('ಕೆಲವು ಕನ್ನಡ ಕವಿಗಳ ಜೀವನಕಾಲವಿಚಾರ,' ಪುಟಗಳು ೨೭೧-೭೩ನ್ನು ನೋಡಿ.)

ಆದ್ದರಿಂದ ರಾಘವಾಂಕನು ಸುಮಾರು ಕ್ರಿ. ಶ. ೧೨೫೦ರಲ್ಲಿ ಇದ್ದಿರಬಹುದೆಂದು ಸ್ಥೂಲವಾಗಿ ಹೇಳಬಹುದು.[4]

---

4 'ಸೂಕ್ತಿಸುಧಾರ್ಣವ'ದಲ್ಲಿ ಹರಿಶ್ಚಂದ್ರಕಾವ್ಯದಿಂದ ಪದ್ಯಗಳು ಉದ್ಧೃತವಾಗಿಲ್ಲವಾದ್ದರಿಂದ ಆಗಿನ ಕಾಲಕ್ಕೆ (ಕ್ರಿ.ಶ. ೧೨೬೩) ಹರಿಶ್ಚಂದ್ರಕಾವ್ಯವು ಇನ್ನೂ ರಚಿತವಾಗಿದ್ದಿರಲಾರದೆಂದು ಡಾ|| ವೆಂಕಟಸುಬ್ಬಯ್ಯನವರು ಹೇಳುತ್ತಾರೆ. ಇದು ಅಷ್ಟೇನೂ ತೃಪ್ತಿಕರವಾದ ಕಾರಣವಲ್ಲ. ಷಟ್ಪದಿಕಾವ್ಯಕ್ಕೆ ಆಗ ಇನ್ನೂ ಚಂಪೂಗ್ರಂಥಕ್ಕೆ ಇದ್ದ ಗೌರವವು ಇಲ್ಲದೆ ಅದನ್ನು ಮಲ್ಲಿಕಾರ್ಜುನನು ಬಿಟ್ಟಿದ್ದರೂ ಬಿಟ್ಟಿರಬಹುದು. ಹರೀಶ್ವರನ ರಗಳೆಯಿಂದ ಉದ್ಧಾರಮಾಡದಿರುವುದಕ್ಕೂ ಇದೇ ಕಾರಣವನ್ನು ಹೇಳಬೇಕಾಗುತ್ತದೆ. ಅಲ್ಲದೆ ಸೂಕ್ತಿಸುಧಾರ್ಣವದಲ್ಲಿ ಈಚೆಗೆ ಕೆಲವು ಪದ್ಯಗಳು ಸೇರಿವೆಯೆಂದು ಹೇಳಲು ಆಧಾರವಿದೆ. ಆದ್ದರಿಂದ ಈ ಗ್ರಂಥದ ಸಹಾಯವೊಂದರಿಂದಲೇ ಕಾಲನಿರ್ಧಾರಮಾಡುವುದು ನಿರ್ವಿವಾದವಾಗಲಾರದು.

ಮತ

ಈತನು ಶಿವಭಕ್ತನಾದ ಕವಿ. 'ಮಹಾಲಿಂಗಭಕ್ತರ ಭಕ್ತ.' ಇದು ಈತನು ಬರೆದಿರುವ ಗ್ರಂಥಗಳ ಸ್ವರೂಪ, ವಿಷಯಗಳು, ಶಿವಶೈವಪಕ್ಷಪಾತ ಇವುಗಳಿಂದಲೇ ಗೊತ್ತಾಗುತ್ತದೆ. ಹರಿಶ್ಚಂದ್ರಕಾವ್ಯವನ್ನು ಬರೆದಾಗ ರಾಘವಾಂಕನು ನರಸ್ತುತಿಮಾಡಿದನೆಂದು ಅವನ ಮಾವನಾದ ಹರಿಹರನು ಅವನ ಹಲ್ಲುಮುರಿದು 'ಸೋಮನಾಥ ಚರಿತೆ' ಮುಂತಾದ ಶೈವಕಾವ್ಯಗಳನ್ನು ಬರೆದ ಮೇಲೆ ಅವುಗಳನ್ನು ಹಿಂತಿರುಗಿ ಕೊಟ್ಟನೆಂದು ಕಥೆಯಿದೆ. ಇದನ್ನು ನಂಬುವುದು ಕಷ್ಟ; ಏಕೆಂದರೆ ಹರಿಶ್ಚಂದ್ರಕಾವ್ಯದಲ್ಲಿ ಹರಿಶ್ಚಂದ್ರನು ಶಿವನ ಭಕ್ತನೆಂದೇ ವರ್ಣಿತನಾಗಿದ್ದಾನೆ. ಶೈವ ಕವಿಗಳಿಗೆ ಶಿವನ ಚರಿತೆ ಎಷ್ಟು ಪೂಜ್ಯವೋ ಶಿವಶರಣರ ಚರಿತೆಯೂ ಅಷ್ಟೇ ಪೂಜ್ಯವಾದದ್ದು. ಅಲ್ಲದೆ ಹರಿಶ್ಚಂದ್ರಕಾವ್ಯಕ್ಕೆ 'ಒಡೆಯನಮಳ ಪಂಪಾ ವಿರೂಪಾಕ್ಷ' (೧-೩); ಹರಿಶ್ಚಂದ್ರನಲ್ಲ. 'ರಾಘವಾಂಕನು ಶರಣರ ಚಾರಿತ್ರ ಪಂಚಕಾವ್ಯವಂ ಪೇಟಿದನು' (ಕವಿಚರಿತೆ, I, ಪುಟ ೨೩೫) ಎಂದು ಪ್ರವಾದವಿದೆ. ಈ ಪಂಚ'ಚಾರಿತ್ರ'ಗಳಲ್ಲಿ ಹರಿಶ್ಚಂದ್ರಕಾವ್ಯವೂ ಒಂದಾಗಿರಬಹುದು. ಏಕೆಂದರೆ ಕೆಲವುಕಡೆ ಇದಕ್ಕೆ 'ಹರಿಶ್ಚಂದ್ರ ಚರಿತೆ' ಎಂಬ ಹೆಸರೂ ಕಂಡುಬರುತ್ತದೆ. ಕವಿಯೂ 'ಕೃತಿಗೆ ನಾಮಂ ಹರಿಶ್ಚಂದ್ರ ಚಾರಿತ್ರ' ಎಂದು ಹೇಳಿದ್ದಾನೆ (೧-೩).

ಸಾಮಾನ್ಯವಾಗಿ ವೀರಶೈವಕವಿಗಳು ತಮ್ಮ ಗ್ರಂಥಾದಿಯಲ್ಲಿ ಬಸವ ಚೆನ್ನಬಸವಾದಿಗಳನ್ನು ಸ್ತುತಿಸುವುದುಂಟು. ಹರಿಹರನಾಗಲಿ ರಾಘವಾಂಕನಾಗಲಿ ಇವರನ್ನು ಸ್ತುತಿಸಿಲ್ಲ. ಇದಕ್ಕೆ ಏನು ಕಾರಣವೋ ನಿರ್ಧರವಾಗಿ ಹೇಳಲಾಗುವುದಿಲ್ಲ. ಹರಿಹರಾದಿಗಳು ಬಸವ ಚೆನ್ನಬಸವರಿಗಿಂತ ಹಿಂದೆ ಇದ್ದರೂ ಇದ್ದಿರಬಹುದೆಂದು ಕಾವ್ಯಕಲಾನಿಧಿಯ ಸಂಪಾದಕರು ಅಭಿಪ್ರಾಯಪಡುತ್ತಾರೆ.[5] ಆದರೆ ಇವರೆಲ್ಲರೂ ಒಂದುವೇಳೆ ಸ್ವಲ್ಪ ಹೆಚ್ಚು ಕಡಮೆ ಸಮಕಾಲಿಕರೆಂದಾದರೂ ಹೇಳಬಹುದಲ್ಲದೆ ಹರಿಹರಾದಿಗಳು ಮುಂಚೆ ಇದ್ದರು ಎಂದು ಹೇಳುವುದು ಕಷ್ಟ. ಹರಿಹರ ರಾಘವಾಂಕರು ವೀರಶೈವರೇ ಆದರೂ ಬಸವೇಶ್ವರನ ಮತಾನುಯಾಯಿಗಳಲ್ಲದಿರಬಹುದೆಂಬುದು ಮತ್ತೆ ಕೆಲವರ ಮತ.

[5] ಹರಿಶ್ಚಂದ್ರಕಾವ್ಯದ (೧೯೦೯) ಭೂಮಿಕೆ, ಪುಟ ೪.

ಆದರೆ ಹರಿಹರನು 'ಶರಣರ ರಗಳೆ'ಯಲ್ಲಿ ಬಸವೇಶ್ವರನನ್ನು ಶರಣನೆಂದು ಗಣಿಸಿ ಅವನ ಚರಿತ್ರೆಯನ್ನು ಬರೆದಿರುವಂತಿದೆ.[6] ಇದರಿಂದ ಹರಿಹರ ರಾಘವಾಂಕರಿಗೆ ಬಸವೇಶ್ವರನಲ್ಲಿ ಪೂಜ್ಯಭಾವವಿತ್ತೆಂದೇನೋ ಹೇಳಬಹುದು.[7]

ಗ್ರಂಥಗಳು

ರಾಘವಾಂಕನ ಗ್ರಂಥಗಳಲ್ಲಿ 'ಹರಿಶ್ಚಂದ್ರಕಾವ್ಯ,' 'ವೀರೇಶಚರಿತೆ,' 'ಸಿದ್ಧರಾಮ ಪುರಾಣ,' 'ಸೋಮನಾಥ ಚರಿತ್ರೆ' ಇವು ನಾಲ್ಕು ಮಾತ್ರ ಸಿಕ್ಕಿ ಅಚ್ಚಾಗಿವೆಯೆಂದೂ 'ಶರಭ ಚಾರಿತ್ರ,' 'ಹರಿಹರ ಮಹತ್ವ' ಇವು ಸಿಕ್ಕಿಲ್ಲವೆಂದೂ ಹೇಳಿದೆಯಷ್ಟೆ. "ಸಿದ್ಧನಂಜೇಶನ 'ರಾಘವಾಂಕ ಚಾರಿತ್ರ'ದಿಂದ... 'ಶರಭಚಾರಿತ್ರ'ದಲ್ಲಿ ಹಿರಣ್ಯಕಶಿಪುವಿನ ರಕ್ತಪಾನದಿಂದ ಮತ್ತನಾದ ನರಸಿಂಹನನ್ನು ವೀರಭದ್ರನು ಶರಭಾಕಾರದಿಂದ ಶಿಕ್ಷಿಸಿದ ಕಥೆಯೂ, 'ಹರಿಹರ ಮಹತ್ವ'ದಲ್ಲಿ ಹಂಪೆಯ ಹರೀಶ್ವರನ ಮಾಹಾತ್ಮ್ಯವೂ ವರ್ಣಿತವಾಗಿರುವಂತೆ ತಿಳಿಯಬರುತ್ತದೆ."[8]

ವೀರೇಶ ಚರಿತೆ

ವೀರಭದ್ರನು ದಕ್ಷಾಧ್ವರವನ್ನು ನಾಶಮಾಡಿದ ಕಥೆಯನ್ನು ರಾಘವಾಂಕ ಈ ಕಾವ್ಯದಲ್ಲಿ ಹೇಳಿದ್ದಾನೆ. ಈ ಚಿಕ್ಕ ಕಾವ್ಯದಲ್ಲಿ ಇರುವುದು ಎರಡೇ ಸಂಧಿಗಳು; ಒಟ್ಟು ೧೨೭ ಪದ್ಯಗಳು. ಇದು ರಾಘವಾಂಕನ 'ಮೀಸಲುಗವಿತೆ'. ಈ ಕೃತಿಗೆ ಪತಿ ಓರುಂಗಲ್ಲಿನ ವಿಶ್ವೇಶ್ವರನೆಂದು ಕವಿಯೇ ಹೇಳಿರುವುದರಿಂದ ಈಚಿನ ವೀರಶೈವ ಗ್ರಂಥಗಳಲ್ಲಿ ರಾಘವಾಂಕ ಓರುಗಲ್ಲಿಗೆ ಹೋಗಿ ಅಲ್ಲಿದ್ದ ಕುಕವಿಗಳನ್ನು ಸೋಲಿಸಿದನೆಂದಿರುವ ಕಥೆಯಲ್ಲಿ ಸತ್ಯಾಂಶವಿರುವಂತೆ

---

[6] 'ಬಸವರಾಜದೇವರ ರಗಳೆ'ಯನ್ನು ನೋಡಿ.

[7] ಹರಿಹರ ರಾಘವಾಂಕರು ಹಿಂದಿನಿಂದ ಬಂದ ಜಾತಿ ಮತ ಕುಲಾಚಾರಗಳಿಗೆ ಮರ್ಯಾದೆಯನ್ನು ಕೊಟ್ಟು, ಶೈವಾಗಮಾನುಸಾರವಾಗಿ ಕರ್ಮಾಚರಣೆ ಮಾಡಿಕೊಂಡು ಬರುತ್ತಿದ್ದ ಶೈವರೆಂದೂ, ಬಸವ ಸಿದ್ಧರಾಮ ಅಲ್ಲಮಾದಿಗಳು ಕರ್ಮ ಜಾತಿ ಮತಾಗಮಗಳ ಬಂಧನವನ್ನು ನೀಗಿಕೊಂಡು ಶಿವಾನುಭವ ಸತ್ವಶುದ್ಧಿಗಳಿಗೆ ಪ್ರಾಶಸ್ತ್ಯಕೊಡುತ್ತಿದ್ದ ಸಿದ್ಧಪುರುಷರೆಂದೂ ಅವರ ಗ್ರಂಥಗಳಿಂದ ಊಹಿಸಬಹುದಾಗಿದೆ.

[8] ಕವಿಚರಿತೆ, I, ಪು. ೨೮೪.

ಊಹಿಸಬಹುದು. ಈ ಕಾವ್ಯದಲ್ಲಿರುವ ಷಟ್ಪದಿಯ ರಚನೆಯನ್ನು ತಿಳಿಸುವುದಕ್ಕಾಗಿ ಇಲ್ಲಿ ಒಂದು ಪದ್ಯವನ್ನು ಕೊಟ್ಟಿದೆ:—

ಪರಿಕಿಪೊಡೀ ಕೃತಿಗಾವುದು ಮೊದಲೆನೆ ಹಳಚುವ
ತೆರೆಯೊಳು ತಿರುಗುವ ಕರಿಮಕರಂಗಳ ಪುಚ್ಛೋ
ತ್ಕರಹತಿಯಿಂ ಚೆಲ್ಲಿದ ಮಣಿಗಳ ಬೆಳಗಿಂ ಶ್ವೇತದ್ವೀಪವನಣಕಿಸುತ |
ಶರನಿಧಿಯೊಪ್ಪುವುದಂತಾ ಶರನಿಧಿಪರಿವೃತ
ಧರೆಯೊಪ್ಪುವುದಂತಾ ಧರೆಯ ಶಿರೋಮಣಿವೋಲ್
ಸುರಗಿರಿಯೊಪ್ಪುವುದಂತಾ ಸುರಗಿರಿಯುತ್ತರಭಾಗವನೇಂ ಬಣ್ಣಿಪೆನು || (೧-೧೦)

ವಾರ್ಧಕ ಷಟ್ಪದಿಯಂತೆಯೇ ಇದರ ಪ್ರತಿಪಾದದಲ್ಲಿಯೂ ಮಾತ್ರಾಸಂಖ್ಯೆಯಿದೆ. ಆದರೆ ಇಲ್ಲಿ ಐದು ಮಾತ್ರೆಗಳ ಗಣಗಳಿಗೆ ಬದಲಾಗಿ ನಾಲ್ಕು ಮಾತ್ರೆಗಳ ಗಣಗಳು ಉಪಯುಕ್ತವಾಗಿವೆ. ೧, ೨, ೪, ೫ ನೆಯ ಪಾದಗಳಲ್ಲಿ ೪ ಮಾತ್ರೆಗಳ ೫ ಗಣಗಳೂ, ೩, ೬ ನೆಯ ಪಾದಗಳಲ್ಲಿ ೪ ಮಾತ್ರೆಗಳ ೮ ಗಣಗಳೂ ಇವೆ. ಒಂದು ಪ್ರತಿಯಲ್ಲಿ ಇದನ್ನು ‘ಉದ್ದಂಡಷಟ್ಪದಿ’ ಎಂದು ಕರೆದಿದೆಯಂತೆ (ವೀರೇಶ ಚರಿತೆಯ ಮುನ್ನುಡಿ ಪುಟ, ೩.)

ಸಿದ್ಧರಾಮ ಪುರಾಣ

ಸಿದ್ಧರಾಮ ಪುರಾಣದಲ್ಲಿರುವ ವಿಷಯವನ್ನು ಇಲ್ಲಿ ಸಂಗ್ರಹಿಸಿದೆ:—

ಸೊನ್ನಲಿಗೆಯಲ್ಲಿ[೧] ನನ್ನಪ್ಪನೆಂಬ ಪ್ರಭುವು ಚಾಮಲದೇವಿಯೆಂಬ ಅರಸಿಯೊಡನೆ ಆಳುತಿದ್ದನು (III, ೩೦). ಆಗ ಆ ಊರಿನಲ್ಲಿದ್ದ ಮುದ್ದಯ್ಯ ಸುಗ್ಗವ್ವೆ ಎಂಬವರಿಗೆ ‘ದೇಹವಿಕಾರ ವಿಷಯಂಗಳಳಿದ ಬಳಿಕ’ ಮುಪ್ಪಿನಲ್ಲಿ ಶಿವಾಂಶಸಂಭೂತನಾದ ಸಿದ್ಧರಾಮನು ಹುಟ್ಟಿದನು. ಇವನಿಗೆ ತಾಯಿತಂದೆಗಳು ಧೂಳಿಮಾಕಾಳಯ್ಯನೆಂದು ತಮ್ಮ ಮನೆದೇವರ ಹೆಸರಿಟ್ಟಿದ್ದರು. ಜಡಭರತನಾಗಿದ್ದ ಈ ಮಗನನ್ನು ಮುದ್ದಯ್ಯನು ದನಕಾಯುವುದಕ್ಕೆ ಹಾಕಿದ್ದನು. ಅಲ್ಲಿ ಲಿಂಗಾರ್ಚನೆ ಮಾಡುತ್ತಿರಲು ಸಿದ್ಧರಾಮನಿಗೆ ಒಂದು ದಿನ ಶಿವದರ್ಶನವಾಯಿತು. ತನಗೆ ದರ್ಶನವಿತ್ತವನು ಶ್ರೀಶೈಲದಲ್ಲಿರುವ ಮಲ್ಲಿನಾಥನೆಂದು ಕೇಳಿ ಸಿದ್ಧರಾಮನು ಅಲ್ಲಿಗೆ ಯಾತ್ರಿಕರೊಡನೆ ಹೊರಟುಹೋದನು. ಹುಡು

---

[೧] ‘ಸುವರ್ಣವಲ್ಲಿ’ (I, ೧೩): ಈಗಿನ ಸೋಲಾಪುರ.

ಗನು ಎಂದಿನಂತೆ ಮನೆಗೆ ಬಾರದ್ದರಿಂದ ಅವನ ಅಣ್ಣನಾದ ಬೊಮ್ಮಯ್ಯನು ಹುಡುಕಿಕೊಂಡು ಬಂದು, ಮಲ್ಲಿಕಾರ್ಜುನನ ದರ್ಶನಮಾಡಿ ಶಿವಮಯನಾಗಿದ್ದ ತಮ್ಮನನ್ನು ಊರಿಗೆ ಕರೆದುಕೊಂಡು ಬಂದನು.

ಅನಂತರ ಸಿದ್ಧರಾಮನು ತಾಯಿತಂದೆಗಳಿಗೂ ಅಣ್ಣನಿಗೂ ಶಿವದೀಕ್ಷೆಯನ್ನು ಕೊಟ್ಟು, ಶಿವಾಲಯಗಳನ್ನು ಕಟ್ಟಿಸಿ ಮಲ್ಲಿಕಾರ್ಜುನನನ್ನು ಪ್ರತಿಷ್ಠೆಮಾಡಿ, ಕೆರೆಯನ್ನು ಕಟ್ಟಿಸಿ ಅನೇಕ ಪವಾಡಗಳನ್ನು ಮಾಡಿದನು.

ಈ ಮಧ್ಯೆ ವೀರನಾದ ಜಗದೇವನಿಂದ ಬಿಜ್ಜಳರಾಯನು ಅಳಿದುಹೋದನು. ಬಿಜ್ಜಳನ ತಮ್ಮನಾದ ಕರ್ಣದೇವನು ತನಗೆ ಸಿದ್ಧರಾಮನು ಪಟ್ಟಕಟ್ಟಬೇಕೆಂದು ಪದೇ ಪದೇ ಹೇಳಿಕಳುಹಿಸಿದನು.[10] ಆದರೆ "ಹರ ಮುನ್ನ ಹರಸಿ ಕಟ್ಟಿದ ಲಿಖಿತಪಟ್ಟಮಂ ಪರಿಹರಿಸಿ ಮತ್ತೊಂದು ಮಾಡುವೀ ಸಾಮರ್ಥ್ಯ ....ನರರಿಗಳವಲ್ಲ" (IX, ೨೦) ಎಂದು ಸಿದ್ಧರಾಮನು ಒಪ್ಪಲಿಲ್ಲ.

ಸಿದ್ಧರಾಮನ ಮಾಹಾತ್ಮ್ಯವನ್ನು ಕೇಳಿ ನಾನಾ ದೇಶಗಳಿಂದ ಜನರು ಬರುತ್ತ ತಮ್ಮ ರೋಗಾದಿ ಉಪದ್ರವಗಳನ್ನು ಕಳೆದುಕೊಳ್ಳುತ್ತಿದ್ದರು. ಆಗ ಅಲ್ಲಮನೂ ಅವನ ಹತ್ತಿರಕ್ಕೆ ಬಂದು 'ನೆರೆಯವರಿಗತ್ತು ಕಣ್ಣು ಹೋಹಂದ ನಿಮಗೆ' ಎಂದು ಆಕ್ಷೇಪಿಸಿದನು. ಸಿದ್ಧರಾಮನು 'ಸಾಕಾರನಿಷ್ಠೆ ಭೂತಂಗಳೊಳಗನುಕಂಪೆ ತಾನೆ ಪರಬೊಮ್ಮ'ವೆಂದು ಸಮಾಧಾನಮಾಡಿ ತನ್ನ ಕೆಲಸದಲ್ಲೇ ನಿರತನಾಗಿದ್ದನು. ಅಲ್ಲಮನು ಸಂತೋಷಪಟ್ಟು ಕದಳಿಕಾವನದ ಕಡೆಗೆ ಹೊರಟುಹೋದನು.

---

[10] ಸೃಷ್ಟಿಯೆಲ್ಲವನಾಳ್ವಸ್ಥಿರಪಟ್ಟವಂ ತನಗೆ| ಕಟ್ಟುವಡೆ ಸಿದ್ಧರಾಮನು ನಾಥನಾಥನೆಂ| ದಟ್ಟಿದಂ | ಕರ್ಣದೇವಂ ಸುಖಾಸನವನಾಳ್ಕುದುರೆಯುಂ ಮಂತ್ರಿಯೊಡನೆ || IX, ೧.

ದೇವ ನೀನೊಲಿದು ಬಂದಿಹೆಯೆಂದು ಪುಸಿವರೇ | ಜೀವಕ್ಕೆ ತಡೆಯಾಯ್ತು ಕರ್ನದೇವಂ ನಿಮ್ಮ| ನಾವಗಂ ಬಿಜಯಗೈಸಿಯೆ ತರಲಿಕಟ್ಟಿದನು ಬರಬೇಹುದೂಲ್ಲೆ ವೆನಲು || ಸಾವೆನೆಂದನು ಗೈಯೆ ಬೇಡಬೇಡವೂ ಅಣ್ಣ| ನಾವೇನು ಬಲ್ಲೆವೈ ಮಲ್ಲಿಕಾರ್ಜುನ ತನ್ನ| ಠಾವಿಂದ ತೆರಳುವಡೆ ಯೆನ್ನಿಚ್ಛೆಯೇ .... IX, ೧೧.

..ಎಲ್ಲವನು ಬಿನ್ನೈಸಿ ಪಟ್ಟಾದೇಶ ನಿರ್ಧಾರವ|| ಸೋದಿಸಿಂದೇ ಪೋಗಿ ನಾಳೆ ಬಹುದೆನಲವರು | ಮೇದಿನಿಯ ನಾಣ್ಣುಡಿಯು ವಾರಣಾಸಿಯ ಬಿಟ್ಟ | ಪೋದರೆಂಬುವುದು ಯೆಮಗಾಯ್ತೆಂದು ಹರುಷಮಿಗಿಲಾಪುರಕ್ಕೈತಂದರು || IX. ೧೬.

ಇದಾದ ಕೆಲವು ದಿನಗಳ ಮೇಲೆ ಸಿದ್ಧರಾಮನು ಹಾವಿನಹಾಳ ಕಲ್ಲಯ್ಯ ಮುಂತಾದ ಗುಡ್ಡರನ್ನು ಕರೆದು ಉಪದೇಶವಮಾಡಿ ಕೆರೆಯಮಧ್ಯದಲ್ಲಿ ಕಟ್ಟಿಸಿದ್ದ ಮಂದಿರದಲ್ಲಿ ಸೇರಿ ಬಯಲಾದನು.

ಸೋಮನಾಥ ಚರಿತೆ

ಸೋಮನಾಥ ಚರಿತೆಯ ಕಥೆ ಸಂಕ್ಷೇಪವಾಗಿ ಹೀಗಿದೆ:—

ಪುಲಿಗೆರೆಯಲ್ಲಿ ಜೈನರು ಹೆಚ್ಚಿ ಅಲ್ಲಿಯ ಶಿವಾಲಯದ ಕದವನ್ನು ಹಾಕಿ, 'ಭೋಗವ ಕಡಿಸಿ ಸದೆಸೊಪ್ಪನೊಟ್ಟಿ ತೀರ್ಥವ ಹೂಳಿ ದುರ್ನೀತಿಯಲಿ ನಡೆಯುತಿಹರು' ಎಂದು ನಾರದನು ಶಿವಸಭೆಯಲ್ಲಿ ಹೇಳಲು, ಅದನ್ನು ಕೇಳಿ ಶಿವನು ತನ್ನ ಹಿಂದೆ ನಿಂತಿದ್ದ ಆದಿಗಣನಾಥನನ್ನು ಅಲ್ಲಿಗೆ ಹೋಗುವಂತೆ ಕಳುಹಿಸಿದನು. ಅವನು ಅದರಂತೆ ಪಶ್ಚಿಮಸಮುದ್ರತೀರದಲ್ಲಿದ್ದ ಸೌರಾಷ್ಟ್ರಪುರದಲ್ಲಿ ಹರದತ್ತ ಪುಣ್ಯವತಿಯೆಂಬವರ ಹೊಟ್ಟೆಯಲ್ಲಿ ಹುಟ್ಟಿದನು. ಪ್ರಾಯಸಮರ್ಥನಾದ ಮೇಲೆ ಅವನು ಒಂದು ದಿನ ತೆಂಕನಾಡಿಗೆ ವ್ಯಾಪಾರಕ್ಕೆಂದು ಹೊರಟು 'ಚಂದ್ರಾದಿತ್ಯಚಕ್ರೇಶ'ನಿದ್ದ ಹುಲಿಗೆರೆಗೆ ಬಂದನು. ಅಲ್ಲಿ ಇಳಿದುಕೊಳ್ಳುವುದಕ್ಕೆ ಭಕ್ತರ (ಎಂದರೆ ಶೈವರ) ಮನೆಯೊಂದೂ ಇರಲಿಲ್ಲ. ಆದರೆ ಬಸದಿಗಳ ಮಧ್ಯೆ ಒಂದು ಶಿವಾಲಯವಿತ್ತು; ಅಲ್ಲಿಗೆ ಹೋದನು.

ಆ ಊರಿನಲ್ಲಿ ಒಂದು ಸಾಯಂಕಾಲ ತಿರುಗಾಡುತ್ತ ಪದ್ಮಾವತಿ ಎಂಬಾಕೆಯನ್ನು ಕಂಡು ಆಕೆಯಲ್ಲಿ ಅನುರಕ್ತನಾಗಿ ಆಕೆಯ ಮನೆಯಲ್ಲಿಯೇ ಒಂದೆರಡು ತಿಂಗಳು ಇದ್ದುಬಿಟ್ಟನು. ಪ್ರಣಯಭರವು ಸ್ವಲ್ಪ ಕಡಿಮೆಯಾದ ಮೇಲೆ ಆಕೆ ಯಾರು, ಏನು, ಎಂದು ವಿಚಾರಿಸಲು ಆಕೆ ತಾನು ಪಾರಿಸಶೆಟ್ಟಿಯ ಒಬ್ಬಳೇ ಮಗಳು, ತನ್ನದು ಜೈನಮತ ಎಂದಳು. ಇದನ್ನು ಕೇಳಿ ತಾನು 'ಭವಿಯನ್ನು ಕೂಡಿದ್ದು ತಪ್ಪೆಂದು ಕೊರಗಿ ಆದಯ್ಯನು ಊರಿಗೆ ಹೋಗುತ್ತೇನೆಂದು ನೆವ ಹಾಕಿಕೊಂಡು ಹೊರಟನು. ಆಕೆ ಬಿಡಲಿಲ್ಲ. ಕೊನೆಗೆ ಆಕೆಯು ಹೋಜೇಶ್ವರದ ಹಿರಿಯ ಆಚಾರ್ಯರಿಂದ ಶಿವದೀಕ್ಷೆ ತೆಗೆದುಕೊಂಡಳು. ಅವಳ ತಂದೆ ಇದನ್ನು ಕೇಳಿ ಮಗಳ ಮೇಲೆ ಕೋಪಿಸಿಕೊಂಡನು. ಆಕೆಯು 'ನೀನಾರು ನಾನಾರು? ಸರ್ವಸ್ವವೆನಗೆನ್ನಿನಿಯನಲ್ಲದಿಲ್ಲೆಂದು ನಿರ್ದಾಕ್ಷಿಣ್ಯದಿಂ ತಂದೆಯಂ ಜರಿದಳು.' ಕೊನೆಗೆ ತಂದೆಯು ಸಮಾಧಾನಮಾಡಿಕೊಂಡು, ಇದ್ದ ಒಬ್ಬ ಮಗಳು ಕೈಬಿಟ್ಟು

ಹೋದಾಳೆಂದು, ಯಾವ ದೇವರನ್ನಾದರೂ ಪೂಜಿಸಿಕೊ, ಎಲ್ಲಿಯಾದರೂ ತಣ್ಣಗಿದ್ದರೆ ಸಾಕು ಎಂದು ಸುಮ್ಮನಾದನು,

ಒಂದು ದಿನ ಆದಯ್ಯನು ಉದ್ಯಾನವನದಲ್ಲಿ ಸಂಚರಿಸುತ್ತಿರಲು, ಅಲ್ಲಿ ಕೆರೆಯ ಕಟ್ಟೆಯ ಮೇಲೆ ಐದು ಜನ ಶಿವಭಕ್ತರು ಬಂದರು. ಅವರು, ತಾವು ಸೇತುಯಾತ್ರೆಯಿಂದ ಬರುತ್ತ ಐದು ಉಪವಾಸಮಾಡಿಕೊಂಡು ಬಂದ ರೆಂದೂ, ತಮ್ಮನ್ನು ಇಲ್ಲಿ ಯಾರೂ ಕೇಳದ್ದರಿಂದ ಈ ಹುಲಿಗೆರೆಯು ಹುಲಿ ಯೂರಾಯಿತೆಂದೂ ಹೇಳಿದರು. ಇದನ್ನು ಕೇಳಿ ಆದಯ್ಯನು ತನ್ನ ಸ್ನೇಹಿತ ರಿಬ್ಬರನ್ನು ಅವರ ಹತ್ತಿರ ಕೂರಿಸಿ ತಾನು ಮನೆಗೆ ಬಂದು ಹೆಂಡತಿಗೆ ಈ ವೃತ್ತಾಂತವನ್ನು ತಿಳಿಸಿ ಎಲ್ಲರಿಗೂ ಅಡಿಗೆಮಾಡುವಂತೆ ಹೇಳಿ, ತಾನು ಬಿಟ್ಟಿದ್ದ ಶಿವಭಕ್ತರನ್ನು ಕರೆತರುವುದಕ್ಕೆ ಹೋದನು.

ಇತ್ತ ಕೊಪ್ಪಣದ ಕಡೆಯಿಂದ ಕೆಲವು ಮಲಧಾರಿಗಳಾದ ಶ್ರಮಣರು ಬರಲು ಅವರನ್ನು ಪಾರಿಸಶೆಟ್ಟಿಯು ತಮ್ಮ ಮನೆಗೆ ಚರಿಗೆಗೆಂದು ಕರೆದು ಕೊಂಡು ಬಂದನು. ಮನೆಯಲ್ಲಿ ಮಾಡಿದ್ದ ಅಡಿಗೆಯು ಮುಗಿದುಹೋಗಿದ್ದದ್ದ ರಿಂದ, ಅವನೂ ಅವನ ಹೆಂಡತಿಯೂ ತನ್ನ ಮಗಳು ಶಿವಭಕ್ತರಿಗೆಂದು ಮಾಡಿಟ್ಟಿದ್ದ ಅಡಿಗೆಯನ್ನು (ಅದಕ್ಕೆ ಬದಲಾಗಿ ಅಕ್ಕಿ ಕೊಡುತ್ತೇವೆಂದು ಹೇಳಿ) ಬಲವಂತವಾಗಿ ತಂದುಬಿಟ್ಟರು. ಶಿವಭಕ್ತರು ಬಂದಾಗ ಪದ್ಮಾವತಿಯು ತಿರುಗಿ ಅಡಿಗೆಯ ಪ್ರಯತ್ನಮಾಡಬೇಕಾಯಿತು. ಆದರೆ ಆಗಲೆ ಕತ್ತಲೆ ಯಾಗುತ್ತ ಬಂದದ್ದರಿಂದ ಅವರು ರಾತ್ರಿಯೂಟಕ್ಕೆ ಒಪ್ಪಲಿಲ್ಲ. ಆದ್ದರಿಂದ ಆದಯ್ಯನು ಅವರಿಗೆ ಹಣ್ಣುಹಂಪಲುಗಳನ್ನು ತಂದುಕೊಟ್ಟು ಫಲಾಹಾರ ಮಾಡಿಸಿದನು.

ಈ ಅವಾಂತರದಿಂದ ಅವನಿಗೆ ಅಸಮಾಧಾನವಾಗಿ ಊಟ ಬೇಕಾಗಲಿಲ್ಲ. ಹೆಂಡತಿ ಅತ್ತೆ ಮಾವ ಎಷ್ಟೆಷ್ಟೋ ಸಮಾಧಾನ ಹೇಳಿದರೂ ಅವನು ಊಟಕ್ಕೆ ಏಳಲಿಲ್ಲ. ಕೊನೆಗೆ ಸೆಟ್ಟಿಗೆ ಸಿಟ್ಟುಬಂದು 'ಇವನೇನು ತಮ್ಮ ದೇವರನ್ನು ತಂದು ನಮ್ಮ ದೊಡ್ಡ ಸುರಹೊನ್ನೆಯ ಬಸದಿಯಲ್ಲಿ ಪ್ರತಿಷ್ಠಿಸಿ ಜೈನಕುಲವನ್ನು ಹಾಳು ಮಾಡಿದ ಹೊರತು ಊಟಮಾಡುವುದಿಲ್ಲವೇನೋ!'— ಎಂದು ಮೂದಲಿಸಿದನು. ಈ ಮಾತು ಕೇಳಿ ಸಿಟ್ಟುಗೊಂಡು ಆದಯ್ಯನು

ಒಂದು ತಿಂಗಳೊಳಗಾಗಿ ಸೋಮಯ್ಯನನ್ನು ತಂದಿಟ್ಟೇ ಊಟಮಾಡುತ್ತೇನೆಂದು ಹಟ ಕಟ್ಟಿಕೊಂಡು ತನ್ನ ಊರ ಕಡೆ ಹೊರಟನು. ಪದ್ಮಾವತಿಯೂ ತನ್ನ ಗಂಡನು ಹಿಂತಿರುಗಿ ಬರುವವರೆಗೆ ತನ್ನ ತಾಯಿತಂದೆಗಳನ್ನು ಮಾತಾಡಿಸುವುದಿಲ್ಲವೆಂದು ಹಟ ಹಿಡಿದಳು.

ಇತ್ತ ಆದಯ್ಯನು ಊರಕಡೆ ಹೊರಟು ಕಾಡಿನಲ್ಲಿ 'ಉರಿವುರಿವ ಬಿಸಿಲೊಳಗೆ ಬಳಲಿ ಬೆಂಡಾಗಿ' ಇಪ್ಪತ್ತೆಂಟು ದಿನದಮೇಲೆ ಸೋಮನಾಥನನ್ನು ಕಂಡನು. ಅವನು ಭಕ್ತನ ಮೇಲೆ ಕರುಣೆತೋರಿ ಆದಯ್ಯನನ್ನು ಪುಲಿಗೆರೆಯಲ್ಲಿ ಕರೆದುತಂದು ಬಿಟ್ಟು ತಾನು ಬಸದಿಯಲ್ಲಿ ಸೇರಿ ಬಾಗಿಲು ಹಾಕಿಕೊಂಡನು. ಮರುದಿನ ಬೆಳಗ್ಗೆ ಶ್ರಮಣರು ಯಾರು ಬಂದು ತೆಗೆದರೂ ಬಾಗಿಲು ಬರದು; ಹಾರೆ ಮುಂಡಿಗೆಗಳೆಲ್ಲಾ ನಿರುಪಯೋಗವಾದುವು; ಪಟ್ಟದಾನೆಯಿಂದ ಕದವನ್ನು ತಳ್ಳಿಸಿದರೂ ಅದು ಅಲ್ಲಾಡಲಿಲ್ಲ. ಕೊನೆಗೆ ಆದಯ್ಯನು ಬಂದು ಶಿವನನ್ನು ಸ್ತುತಿಸಲು, ಬಾಗಿಲು ತೆರೆಯಿತು. ಆದರೆ, ಒಳಗೆ ಅರುಹಮೂರ್ತಿಯೊಡೆದು ಶಿವಮೂರ್ತಿ ಮೂಡಿತ್ತು. ಇದನ್ನು ನೋಡಿ, ಪುಲಿಗೆರೆಯ ಜೈನರೆಲ್ಲರೂ ಚಂದ್ರಾದಿತ್ಯನನ್ನು ಮುಂದುಮಾಡಿಕೊಂಡು ಆದಯ್ಯನ ಮೇಲೆ ಬಿದ್ದರು. ಆದಯ್ಯನಿಗೆ ನಂದಿಯ ಸಹಾಯ ದೊರೆತು ಜೈನರೆಲ್ಲರೂ ಸೋತರು. ಚಂದ್ರಾದಿತ್ಯನು ಕಾಡಿಗೆ ಓಡಿಹೋದನು. ಅನಂತರ ಆದಯ್ಯನು ತನ್ನ ತಾಯಿತಂದೆ ಅತ್ತೆಮಾವಂದಿರನ್ನು ಊರಲ್ಲಿ ಮುಖ್ಯರನ್ನಾಗಿ ಮಾಡಿ ನಿಲ್ಲಿಸಿ ತಾನು ಪದ್ಮಾವತಿಯೊಡನೆ ಸೋಮನಾಥನ ಬಲದ ಕಂಬದಲ್ಲಿ ಐಕ್ಯವಾದನು.[11]

---

[11] ಹರಿಹರನೂ ಆದಯ್ಯನ ಚರಿತ್ರೆಯನ್ನು 'ರಗಳೆ'ಯ ರೂಪವಾಗಿ ಬರೆದಿರುವಂತಿದೆ. (ಶಿವಾನುಭವ, ಸಂಪುಟ ೮, ಸಂಚಿಕೆ ೩) ಇದರ ಪ್ರಕಾರ, ಆದಯ್ಯನು ಹುಟ್ಟಿದ್ದು ಶಿವಪುರದಲ್ಲಿ; ಅವನ ತಾಯಿತಂದೆಗಳು 'ಶಿವಭಕ್ತೆ' ಮತ್ತು 'ಶಿವಭಕ್ತ.' ಅವನ ಮಾವನು ಪಾರಿಷ ಪಂಡಿತ; ಆದಯ್ಯನು ಪುಲಿಗೆರೆಗೆ ಹೋದಾಗ ಅವನು ಸುರಹೊನ್ನೆಯ ಬಸದಿಯಲ್ಲಿ ಪೂಜಾರಿಯಾಗಿದ್ದನು. ಸೋಮನಾಥನನ್ನು ತಂದಿರಿಸಿದ ಮೇಲೆ ಆದಯ್ಯನು ಪುಷ್ಪಕವಿಮಾನದಲ್ಲಿ ಕೈಲಾಸಕ್ಕೆ ಹೋದನು. ಒಟ್ಟಿನ ಮೇಲೆ ಈ ಗ್ರಂಥದಲ್ಲಿ ಸೋಮನಾಥ ಚರಿತೆಗಿಂತ ಸ್ವಮತಾಭಿಮಾನವೂ ಪರಮತದೂಷಣವೂ ಹೆಚ್ಚಾಗಿ ಕಾಣುತ್ತವೆ. ಕಾವ್ಯಗುಣಗಳೇನು ಹೆಚ್ಚಾಗಿಲ್ಲ.

ಈ ಗ್ರಂಥಗಳಲ್ಲಿ ಸೋಮನಾಥ ಚರಿತೆಗಿಂತಲೂ ಸಿದ್ಧರಾಮ ಪುರಾಣದ ವಿಷಯವು ಹೆಚ್ಚು ಗಂಭೀರವಾಗಿದೆ; ಗುರುಭಕ್ತಿ ಗೌರವಗಳಿಂದ ಕೂಡಿದೆ; ಇದರಲ್ಲಿ ಕೀಳುಭಾಷೆಗಳಿಗಾಗಲಿ, ಸಡಿಲವಾದ ಸಂಗತಿಗಳಿಗಾಗಲಿ, ಮತ ವೈಷಮ್ಯ ಪ್ರದರ್ಶನಕ್ಕಾಗಲಿ ಅವಕಾಶವಿಲ್ಲ. ಅತಿಶಯೋಕ್ತಿ ಹೆಚ್ಚಾಗಿಲ್ಲ. ಇದರ ನಾಯಕನು ಘುಟಿಕೆ, ಮೂಲಿಕೆ, ಅಂಜನ, ವಾದ, ವಶ್ಯ, ಕಾಲ ವಂಚನ, ಮಾರಣ, ಪರಕಾಯಪ್ರವೇಶ ಮುಂತಾದವುಗಳನ್ನು ಬಯಸುವ "ವಿಕಾರಿ ಸಿದ್ಧ"ನಲ್ಲ. ಈ ಚರಿತ್ರೆಯಲ್ಲಿ ಸಿದ್ಧರು, ಸಾಧುಗಳು, ಅವತಾರ ಪುರುಷರು ಎಂದು ಗಣ್ಯರಾದವರ ಜೀವನಗಳಿಂದ ಸಾಮಾನ್ಯವಾಗಿ ಜನರು ಮೆಚ್ಚಿ ಆರಿಸಿಕೊಂಡು ಪ್ರತಿಪಾದಿಸುವಂಥ ಸಂಗತಿಗಳೇ ಇವೆ. ಇಂಥ ಚರಿತ್ರೆಗಳು ಬರುಬರುತ್ತ ಮಹತ್ವದಿಂದ ಕೂಡಿಕೊಂಡು ಅದ್ಭುತಗಳ ಬೀಡಾಗುವುವೆಂಬುದು ತಿಳಿದ ವಿಷಯ; ಈ ದೃಷ್ಟಿಯಿಂದ ಪರಿಶೀಲಿಸಿದರೆ ಈ ಕಾವ್ಯವು ಇನ್ನೂ ಸಿದ್ಧರಾಮನು ಮುಕ್ತನಾದ ಹೊಸದರಲ್ಲಿಯೇ ಬರೆದಂತೆ ತೋರುತ್ತದೆ[12].

'ಸೋಮನಾಥ ಚರಿತೆ'ಯು ನಿಜವಾಗಿ ನೋಡಲು 'ಆದಯ್ಯನ ಚರಿತೆ.' ಇದರಲ್ಲಿ ಕವಿಸಮಯವನ್ನನುಸರಿಸಿ ಪುರವರ್ಣನೆ, ವನವರ್ಣನೆ, ಸ್ತ್ರೀವರ್ಣನೆ ಮುಂತಾದ ವಿಸ್ತಾರವಾದ ವರ್ಣನೆಗಳಿವೆ. ಆದಯ್ಯನು ಅವತಾರಪುರುಷ, ಶಿವಭಕ್ತ ಎಂದು ವರ್ಣಿತನಾಗಿದ್ದರೂ, ಸೋಮಯ್ಯ ಸೋಮಯ್ಯನೆನ್ನುತ್ತ ಸೋಮನಾಥನ ಸ್ತುತಿಮಾಡಿದ್ದರೂ, ಅವನಲ್ಲಿ ಸಿದ್ಧರಾಮನ ಘನತೆ ಗುರುತ್ವಗಳಿಲ್ಲ; ಸಿದ್ಧರಾಮನ ಸ್ವಾರ್ಥತ್ಯಾಗ, ಪರೋಪಕಾರಬುದ್ಧಿ, ಪಾರಲೌಕಿಕ

---

[12] ಈ ಗ್ರಂಥದ ಕೊನೆಯಲ್ಲಿ ಸಿದ್ಧರಾಮನು ಮೃತನಾದನೆಂದು ಸ್ಪಷ್ಟವಾಗಿ ಹೇಳಿಲ್ಲ. 'ಅರರೆ ತನುವೆರಸಿ . . . ಎಲ್ಲ ಧರೆಯುಬ್ಬಿಯಲಿಂತು ಸೊನ್ನಲಿಗೆಯಲಿ ನಲಿವುತಿಹ ಸಿರಿಯಾಣ್ಮ . . .' (1, ೨) ಎಂಬ ಪೀಠಿಕಾ ಭಾಗವನ್ನು ನೋಡಿದರೆ ಸಿದ್ಧರಾಮನು ಬದುಕಿದ್ದಾಗಲೇ ಈ ಗ್ರಂಥವು ರಚಿತವಾಯಿತೋ ಎಂಬ ಸಂದೇಹ ಬರುತ್ತದೆ. 'ಸಿದ್ಧರಾಮನು ಸತ್ತಿಲ್ಲ, ಜೀವಂತನಾಗಿ ಸಮಾಧಿಯಲ್ಲಿ ನೆಲಸಿದ್ದಾನೆ'—ಎಂದು ಜನರು ನಂಬಿದ್ದರೂ ಇದ್ದಿರಬಹುದು.

ಇದರ ಆದಿಯಲ್ಲಿ ವಿರೂಪಾಕ್ಷಸ್ತುತಿಯಿಲ್ಲ; ಪೀಠಿಕೆಯು ಸೂಕ್ಷ್ಮವಾಗಿದೆ; ಗ್ರಂಥವು ಸರಳವಾಗಿದೆ; ಷಟ್ಪದಿಯ ರಚನೆಯಲ್ಲಿ ಅಷ್ಟೊಂದು ನಯವಿಲ್ಲ, ಓಟವಿಲ್ಲ. ಆದ್ದರಿಂದ ಇದೇ ರಾಘವಾಂಕನ ಮೊದಲನೆಯ ಕಾವ್ಯವಾಗಿದ್ದರೂ ಇರಬಹುದು ಎನ್ನಿಸುತ್ತದೆ.

ವಿಚಾರ, ನಿತ್ಯಾನಿತ್ಯವಿವೇಕ ಮುಂತಾದ ಮಹಾಪುರುಷಗುಣಗಳು ಕಂಡು ಬರುವುದಿಲ್ಲ. ಅವನಲ್ಲಿ ಆ ಪೂಜ್ಯಭಾವವುಂಟಾಗುವುದಿಲ್ಲ.

ಹರಿಶ್ಚಂದ್ರಕಾವ್ಯ

ಸಿದ್ಧರಾಮಪುರಾಣ, ಸೋಮನಾಥಚರಿತೆ ಇವೆರಡಕ್ಕಿಂತಲೂ ಹರಿಶ್ಚಂದ್ರಕಾವ್ಯದಲ್ಲಿ ಮತಾಂಶಗಳು ವಿರಳವಾಗಿಯೂ, ಕಾವ್ಯಾಂಶಗಳು ನಿಬಿಡವಾಗಿಯೂ ಇವೆ. ಹರಿಶ್ಚಂದ್ರನು ಶಿವಭಕ್ತ, ಸತ್ಯವ್ರತ ಎಂದು ವರ್ಣಿತನಾಗಿದ್ದರೂ ಅವನು ಸಿದ್ಧರಾಮ ಆದಯ್ಯರಂತೆ ಶೈವಧರ್ಮೋದ್ಧಾರಕ್ಕಾಗಿಯೇ ಜನಿಸಿದವನು, ಜೀವಿಸಿದವನು—ಎಂಬ ಭಾವವುಂಟಾಗುವುದಿಲ್ಲ. ಅವನು ಶಿವಸಂಕಲ್ಪದಿಂದಲೋ ಪ್ರಸಾದದಿಂದಲೋ ಹುಟ್ಟಿದ ಗಣೇಶ್ವರನಲ್ಲ, ಪವಾಡಪುರುಷನಲ್ಲ. ಆದ್ದರಿಂದಲೇ ಅವನು ನರಮನುಷ್ಯನೆಂದು ಗಣ್ಯನಾಗಿದ್ದಿರಬಹುದು. ಆದರೆ ಈ ಗ್ರಂಥದಲ್ಲಿ ರಸಾಲಂಕಾರಾದಿ ಕಾವ್ಯಲಕ್ಷಣಗಳೂ ಪ್ರೌಢಿಮೆಯೂ ಹೆಚ್ಚಾಗಿವೆ.

ಗ್ರಂಥಾರಂಭದಲ್ಲಿ ಬರುವ ಮಂಗಳಪದ್ಯವು ಬಹು ಸುಂದರವಾಗಿಯೂ, ಸುಲಭವಾಗಿಯೂ, ಗಂಭೀರವಾಗಿಯೂ ಅರ್ಥಪುಷ್ಟಿಯುಳ್ಳದ್ದಾಗಿಯೂ ಇದೆ.—ಜಗತ್ತಿನಲ್ಲಿರುವ ಸೊಬಗು ಶಾಂತಿ ಚಾತುರ್ಯ ಪ್ರತಾಪ ಭೋಗ ರೂಪ ಗಾಂಭೀರ್ಯ ತೇಜಸ್ಸು ಇವೆಲ್ಲಾ, ಗುರುವಿನಿಂದ ಶಿಷ್ಯನಿಗೆ ವಿದ್ಯೆ ಬಂದಂತೆ, ವಿರೂಪಾಕ್ಷನಿಂದ ಪ್ರಪಂಚಕ್ಕೆ ಬಂದಿವೆಯೆಂದು ಬಹು ಉದಾತ್ತವೂ ಉದಾರವೂ ಮನೋಹರವೂ ಆದ ಸೂಚನೆ ಇದೆ. ಇದನ್ನು ಓದಿದಾಗ

> ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವ ವಾ |
> ತತ್ತದೇವಾವಗಚ್ಛ ತ್ವಂ ಮಮ ತೇಜೋಂಶಸಂಭವಂ ||

ಎಂಬ ಗೀತಾ ಶ್ಲೋಕವು ಜ್ಞಾಪಕಕ್ಕೆ ಬರುತ್ತದೆ.

ವಿರೂಪಾಕ್ಷಸ್ತುತಿಯಾದಮೇಲೆ, ಕವಿಯು ಪಂಪಾಂಬಿಕೆಯನ್ನೂ ಗುರುಹಿರಿಯರನ್ನೂ ಪೂರ್ವ ಕವಿಗಳನ್ನೂ ಸ್ಮರಿಸಿ 'ಕಥಾಬೀಜ'ವನ್ನು ತಿಳಿಸುತ್ತಾನೆ:—

ವಸುಧಾಧಿಪತಿ ಹರಿಶ್ಚಂದ್ರ ಘನಸತ್ಯನೆಂ
ದೊಸೆದು ವಾಸಿಷ್ಠನಿಂದ್ರಂಗೆನಲು ಕೌಶಿಕಂ
ಹುಸಿಮಾಳ್ಪೆನೆಂದು ಭಾಷೆಯನಿತ್ತು ಧರೆಗೆ ಬಂದವನಿಪನ ಸತಿಪುತ್ರರ|
ಅಸುವಂತ್ಯವೆನೆ ನಿಗ್ರಹಂಮಾಡೆ ತಪ್ಪದಿರೆ
ಶಶಿಮೌಳಿ ಶ್ರೀವಿಶ್ವನಾಥ ಭೂಪಂಗೆ ಕರು
ಣಿಸಿ ಸಕಲಸಾಮ್ರಾಜ್ಯವಿತ್ತಾತನಂ ಮೆಱೆದ ಕೃತಿ ಪುಣ್ಯದಾಕೃತಿಯಿದು|| (೧-೪)

ಇದು 'ಶಿವಭಕ್ತಿವಲ್ಲರಿಯ ಹೊಸ ಬಿತ್ತು.' 'ಜಡಮತಿಯೊಳೀಶನಂ ಬಣ್ಣಿಸಿದನಿವನೆಂದು' ಯಾರಾದರೂ ನಿಂದಿಸಿಯಾರು! ಆದರೆ 'ಗುಡ್ಡಿ ಪಶು ಕುಡೆ ಕಱೆದ ಹಾಲು ಕಹಿಯಪ್ಪುದೇ?' ನಿಂದಿಸುವವರು ನಿಂದಿಸಲಿ; ಅವರ ಗೋಜಿಗೆ ಹೋಗುವುದು ಕೊಳಕು ಬಟ್ಟೆಯನ್ನು ಒಗೆಯುವಂಥ ಕೆಲಸ; ಇಷ್ಟರ ಮೇಲೆ ದೋಷಗಳಿದ್ದರೆತಾನೇ ಏನು? 'ನಡೆವರೆಡಹದೆ ಕುಳಿತರೆಡ ಹುವರೆ?' ಆದ್ದರಿಂದ ತಪ್ಪಿದ್ದರೆ, ಶಿವಾರ್ಚಕರು 'ಸಸಿನೆಮಾಡುವುದು, ತಿದ್ದುವುದು, ಕೊಂಡಾಡಿ ಲಾಲಿಸಿ ಕೇಳ್ವುದು.' ಮತ್ತು ಕವಿ ಗಮಕಿ ವಾದಿ ವಾಗ್ಮಿರಸಾವೇಶಿಗಳು ತಲೆದೂಗಿಬಿಟ್ಟರೆ ಸರಿ; 'ವ್ಯಾಕರಣ ಪರಿಣತನಲಂಕಾರ ಪರಿಚಿತನನೇಕರಸನಿಪುಣನಭಿಧಾನಪ್ರವೀಣನೆಲ್ಲಾ ಕಳಾಕುಶಲನೆನಿಪ' ಕವೀಶ ನಿದ್ದರೂ ಅವನ ಕಾವ್ಯವನ್ನು ಕೇಳುವವರಿಲ್ಲದಿದ್ದರೆ ಏನು ಪ್ರಯೋಜನ? ಅವರು ಹೊಗಳದೆ ದುರ್ಜನರು ಹೊಗಳಿದರೇನು ತೆಗಳಿದರೇನು? ರೋಗಿ ಹಳಿದಡೆ ಹಾಲು ಹುಳಿಯಪ್ಪುದೇ? ಪರೋಕ್ತಿಗಳ ಅರ್ಥವನ್ನು ಕದಿಯುವುದು ಉಗುಳಿದ ತಂಬುಲಕ್ಕೂ ಉಟ್ಟುಕಳೆದ ಮೈಲಿಗೆಗೂ ಕೈನೀಡುವಂಥ ಕೆಲಸ (ಹರಿಶ್ಚಂದ್ರಕಾವ್ಯ, 1,೧೯-೩೮)—ಎಂದು ಕವಿಕಾವ್ಯ ವಿಚಾರವಾಗಿ ತನ್ನ ಅಭಿಪ್ರಾಯವನ್ನು ತಿಳಿಸಿ ಅನಂತರ ಕಾವ್ಯವನ್ನು ಆರಂಭಿಸುತ್ತಾನೆ.

ಸಂಪ್ರದಾಯದಂತೆ, ಮೊದಲು ಸಮುದ್ರದ ವರ್ಣನೆ ಬರುತ್ತದೆ; ಆದರೆ ಕವಿಯು ಇದನ್ನು ಲಂಬಿಸದೆ, ಇಷ್ಟೊಂದು ಪದ್ಯದಲ್ಲಿ ಮೇರುವಿನ ದಕ್ಷಿಣಕ್ಕೆ ಲಾಳದೇಶವಿತ್ತೆಂದೂ ಅದಕ್ಕೆ ಅಯೋಧ್ಯೆ ರಾಜಧಾನಿಯಾಗಿತ್ತೆಂದೂ ಹೇಳಿ ಬಿಡುತ್ತಾನೆ. ಅಲ್ಲಿ ಹರಿಶ್ಚಂದ್ರನು ಚಂದ್ರಮತಿ ಎಂಬ ಹೆಂಡತಿಯೊಡನೆಯೂ ರೋಹಿತಾಶ್ವನೆಂಬ ಮಗನಿಂದಲೂ ಕೂಡಿ ರಾಜ್ಯವಾಳುತ್ತಿದ್ದನು.

ಇತ್ತ, ದೇವೇಂದ್ರನ ಸಭೆಯಲ್ಲಿ, ಭೂಲೋಕದೊಳಗೆ ಸತ್ಯವಂತರಾದ ರಾಜರು ಯಾರು ಎಂದು ಪ್ರಶ್ನೆ ಹುಟ್ಟಿ ವಸಿಷ್ಠನು ಹರಿಶ್ಚಂದ್ರನ ಹೆಸರು ಹೇಳುವನು; ವಿಶ್ವಾಮಿತ್ರನು ವಿರೋಧಿಸುವನು. ಅವರ ಸಂಭಾಷಣೆಯು ಸ್ವಾರಸ್ಯವಾಗಿದೆ. ವಿಶ್ವಾಮಿತ್ರನ ಮಾತಿನಲ್ಲಿ ಕ್ಷಾತ್ರವೂ ವಸಿಷ್ಠನ ಮಾತಿನಲ್ಲಿ ಸ್ಥೈರ್ಯವೂ ಹೇಗೆ ಕಂಡುಬರುವುವು ನೋಡಿ :—

ವಿಶ್ವಾ.—'ಇನಿತು ಮುಳಿಸಾವುದು! ಹರಿಶ್ಚಂದ್ರಭೂಭುಜನ ಮಸೆಗೀಗಳಿಂತು ನೀ ಹೋಗಿ ಕೌಶಿಕನು ನೆಟ್ಟನೆ ನಿನ್ನನಂತಿಂತು ಕೆಡಿಸಿದಪ; ನೀನಾವ ಪರಿಯಲೆಚ್ಚತ್ತಿರೆಂದು ನೆನಸಿಕೊಂಡು ಹೋಗು.'

ವಸಿ.—'ಆನಾಡುವವನೆ ಹೇಳು!'

ವಿಶ್ವಾ.—'ಎನ್ನ ಗಾಸಿಗಾಱದೆ ನೃಪಂ ಹುಸಿನುಡಿಯೆ ಮುಸಿತನವನೀಡಾಡಿ ಹೋಹಂತಿರಾದಪುದು. ಹೋಗಿ ನೀಂ ಹೇಳು!'

ವಸಿ.—'ತರಣಿ ತೇಜಂಗಿಡದಿರು, ಅಗ್ನಿ ಬಿಸುಪಾಱದಿರು, ಸರಸಿರುಹಸ್ವೈರಿ ತಂಪಂ ಬಿಡದಿರು, ಎಲೆ ಮಂದರವೆ ಚಲಿಸದಿರು ಎಂದು ಬೋಧಿಸಲ ದೇಕೆ? ನಿಜವಳಿವವೇ ಸುಮ್ಮನಿರಲು?'

ವಿಶ್ವಾ.—'ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೇ? . . . ಕವಿದು ಹೆಗ್ಗಡಲುಕ್ಕಿ ಜಗವ ಮೊಗೆವಡೆ ಮೆಳೆಗಳಡ್ಡಬಹವೇ? ಮುನಿಪ ನಿನ್ನ ಬಡ ಬೋಧೆಗೀಧೆಗಳು ರಕ್ಷಿಸುವುವಲ್ಲ; ನೀ ಹೇಳದಿರ್ದಡೆ ಮದನ ಹರನಾಣೆ, ಹೋಗು! . . . .'

ವಸಿ.—'ಕುಲವ ನಾಲಗೆಯಱುಹಿತೆಂಬ ನಾಣ್ನುಡಿಗಿಂದು ನೆಲೆಯಾಯ್ತುಲಾ! ಬ್ರಹ್ಮಋಷಿಯಾದಡೊಳಗು ನಿರ್ಮಳವಪ್ಪುದಯ್ಯ! ನೀಂ ರಾಜರ್ಷಿ; ಕೋಪಿಸದೆ ಧಟ್ಟಿಸದೆ ಕೆಡೆನುಡಿಯದೆ ನಿಲಲೆಂತು ಬಲ್ಲೆ! . . . .'

'ಕೋಣಗಳ ಹೋರಾಟ, ಗಿಡಕ್ಕೆ ಮೃತ್ಯು' ಎಂಬಂತೆ ವಸಿಷ್ಠ ವಿಶ್ವಾಮಿತ್ರರ ಹೋರಾಟ ಹರಿಶ್ಚಂದ್ರನನ್ನು ಕಷ್ಟಕ್ಕೆ ಗುರಿಮಾಡಿತು. ವಿಶ್ವಾಮಿತ್ರನು 'ನಿಜವೈರದಂತಸ್ಥವನ್ನಱಿಯದ ಮುನಿಗಳ ಕರೆದು' ಅವರ ಪ್ರೇರಣೆಯಿಂದ ಹರಿಶ್ಚಂದ್ರನು ಸುವರ್ಣಯಾಗವನ್ನು ಮಾಡುವಂತೆ ಏರ್ಪಡಿಸಿ, ಯಾರು ಏನು ಕೇಳಿದರೂ ದಾನಮಾಡುತ್ತೇನೆಂಬ ಹರಿಶ್ಚಂದ್ರನ ಪ್ರತಿಜ್ಞೆಯನ್ನು

ಭಂಗಪಡಿಸುತ್ತೇನೆಂದು ಎಷ್ಟೋ ಉತ್ಸಾಹದಿಂದ ಬಂದು, 'ಪಿರಿಯ ಕರಿಯಂ ಮೆಟ್ಟಿ ಕವಡೆಯಂ ಮಿಡಿಡಡೆನಿತುದ್ದಕ್ಕೆ ಹೋಹುದದಱ ಸರಿಯೆಸಿಸಿ ಸುರಿದ ಹೊಸ ಹೊನ್ನರಾಸಿಯ ನೀವುದರಸ!' ಎಂದನು. ಹರಿಶ್ಚಂದ ಸಿಗೆ ಲಕ್ಷ್ಮೀ ಪ್ರಸಾದ ಚೆನ್ನಾಗಿತ್ತು. ಆದ್ದರಿಂದ, ಹಿಂದುಮುಂದು ನೋಡದೆ 'ಹಸಾದಂ, ಕೊಟ್ಟೆನು; ಅದನೀಗಲೇ ಇರದುಯ್ವುದು!' ಎಂದನು. ಮುನಿಯ ಮುಖವು ಮಂಕಾಯಿತು. 'ನಿನ್ನ ಮೇಲೆ ಇರಲಿ; ಬೇಕಾದಾಗ ತರಿಸಿಕೊಳ್ಳುತ್ತೇನೆ' ಎಂದು ಹೇಳಿ ಹೊರಟುಹೋದನು.

ಹೀಗೆ ವಿಶ್ವಾಮಿತ್ರನ ಸೋಲಿಗೆ ಮೊದಲಾಯಿತು. ಆದರೆ ಸೋತಷ್ಟೂ ಕೋಪ ಹೆಚ್ಚಿತು; ಆದ್ದರಿಂದ ನಾನಾ ಮೃಗಪಕ್ಷಿಗಳನ್ನು ಸೃಷ್ಟಿಸಿ ಅವುಗಳನ್ನು ಹರಿಶ್ಚಂದ್ರನ ದೇಶದ ಮೇಲೆ ಬಿಟ್ಟನು. ಅವು ಬೆಳೆಗಳನ್ನು ಹಾಳು ಮಾಡುತ್ತ ಬಂದುವು. 'ಖಗಮೃಗದ ಕಾಟದಿಂದ ಧರೆಯೊಳಗೆ ಬಿತ್ತಿಲ್ಲ ಬೆಳೆಯಿಲ್ಲ ನೀರಿಲ್ಲ' ಎಂದು ಪ್ರಜೆಗಳೆಲ್ಲರೂ ಹಾಹಾಕಾರ ಪಡುವಂತಾಯಿತು. ಅವುಗಳ ಕಾಟವನ್ನು ಪರಿಹರಿಸಲು ಹರಿಶ್ಚಂದ್ರನು ಬೇಟೆಗೆ ಹೊರಟು ಮೃಗಗಳನ್ನು ಅಟ್ಟಿಕೊಂಡು ಬರುತ್ತ ವಸಿಷ್ಠನಿದ್ದೆಡೆಗೆ ಬಂದನು. (ವಸಿಷ್ಠಾಶ್ರಮವು ತನ್ನ ಹಂಪೆಯಲ್ಲಿತ್ತೆಂಬುದು ಕವಿಯ ಅಭಿಮಾನಪೂರ್ವಕವಾದ ಉತ್ಪ್ರೇಕ್ಷೆ!) ವಸಿಷ್ಠನಿಗೆ ತನ್ನ ಪ್ರಿಯಶಿಷ್ಯನನ್ನು ಕಂಡು ಧರ್ಮಸಂಕಟ ಒದಗಿತು. 'ವಿಷಮ ವಿಶ್ವಾಮಿತ್ರಮುನಿ ಮುಸಿದು ತಪ್ಪ ಸಾಧಿಸುವ, ನೀನಱಿದಿರೆಂದಱುಪಬೇಕು; ಅಱುಪಿದಡೆ ಪಿಸುಣತ್ವ; ಅಱುಪದಿರ್ದಡೆ ನೃಪನ ಕೇಡ ನಾನೋತುಪೇಕ್ಷಿಸಿದಾತನು; ಗಸಣಿಯಾಯ್ತು; ಏಗೆಯ್ವೆನು—ಎಂದು ಮನದೊಳಗೆ ಚಿಂತಿಸಿ' ಕೊನೆಗೆ 'ಪೇಳದಂತೆ ಪೇಳ್ದಪೆನೆಂದು' ನೆನೆದು 'ಎನ್ನ ನೊಲುವೊಡೆ ಕುಲಾಚಾರಮಂ ಬಿಡದಿರ್ಪಡೆ ಉನ್ನತಿಕೆ ಬೇಹಡೆ ಉತ್ತಮ ಕೀರ್ತಿ ಕೆಡದಿಹಡೆ, ನನ್ನಿಯುಳಿವಡೆ, ಮಗನೆ ಹೋಗದಿರು ಮಱೆದು ವಿಶ್ವಾಮಿತ್ರನಾಶ್ರಮಕ್ಕೆ; ಗನ್ನದಿಂ ಮಱಿಹಿಕ್ಕಿ ಕೊಂಡೊಯ್ದು ಬಳಿಕ ಮುನಿ ಬನ್ನಬಡಿಸಿಯೆ ಕಾಡಿದಪನಱಿದಿರು . . . . . .' ಎಂದು ಎಚ್ಚರಿಕೆ ಕೊಟ್ಟನು.

ಆದರೆ ವಿಧಿಯು ಹರಿಶ್ಚಂದ್ರನನ್ನು ಅಲ್ಲಿಗೇ ಎಳೆದುಕೊಂಡುಹೋಯಿತು. ಅವನು ಒಂದು ಕಾಡುಹಂದಿಯನ್ನು ಬೆನ್ನಟ್ಟಿ ಅರಿಯದೆ ವಿಶ್ವಾಮಿತ್ರನ

ಆಶ್ರಮಕ್ಕೇ ಹೋದನು. ಬೇಟೆಯ ಆಯಾಸವೊಂದು ಕಡೆ, ಗುರ್ವಾಜ್ಞೆಗೆ ವಿರುದ್ಧವಾಗಿ ವಿಶ್ವಾಮಿತ್ರನೆಡೆಗೆ ಬಂದೆನೆಂಬ ಅಂಜಿಕೆಯೊಂದು ಕಡೆ; ದುಸ್ಸ್ವಪ್ನ ದೌರ್ಮನಸ್ಯಗಳ ಕಳವಳ ಒಂದು ಕಡೆ; ಈ ಸ್ಥಿತಿಯಲ್ಲಿ ವಿಶ್ವಾಮಿತ್ರನ 'ಹೊಲೆ' ಯಾದ 'ಕೋಪ ಬದ್ಧದ್ವೇಷ ಅನಿಮಿತ್ತವೈರ'ಗಳಿಂದ ಹುಟ್ಟಿದ ಇಬ್ಬರು ಸ್ತ್ರೀಯರು ಬಂದು ಗಾನಮಾಡಿ ಅವನ 'ದುಗುಡವನ್ನು ರಾಗರಸ ಲಹರಿಯಿಂದ ತೊಳೆದರು.' ಅವನು ಅದಕ್ಕೆ ಸಂತೋಷಪಟ್ಟು ತನ್ನ ಸರ್ವಾಭರಣವನ್ನೂ ಕೊಟ್ಟನು. ಅವರು ಬಂದಿದ್ದದ್ದು ಸಂಪಾದನೆಗಲ್ಲ, ವ್ಯಾಜ್ಯಕ್ಕೆ; ಆದ್ದರಿಂದ ಅಷ್ಟಕ್ಕೆ ಒಪ್ಪಲಿಲ್ಲ. ಇಲ್ಲಿ ಹರಿಶ್ಚಂದ್ರನ ಸೌಮ್ಯಗುಣವನ್ನೂ ಗಾಯಕಿಯರ ವಕ್ರ ಸ್ವಭಾವವನ್ನೂ ಕವಿ ಚೆನ್ನಾಗಿ ಚಿತ್ರಿಸಿದ್ದಾನೆ. ಅವರ ಸಂಭಾಷಣೆಯು ರಸವತ್ತಾಗಿದೆ:—

ಗಾಯಕಿಯರು—'ಬಡತನದ ಹೊತ್ತಿನಲ್ಲಿ ಆಸೆ ದೊರಕಿ ಫಲವೇನು? ನೀರಡಸಿರ್ದ ಹೊತ್ತಿನಲ್ಲಿ ಆಜ್ಯ ದೊರಕಿ ಫಲವೇನು? . . . ಕಡುವಿಸಿಲು ಹೊಡೆದು ಬೆಂಡಾಗಿ ಬೀಳ್ವೆಮಗೆ ನೀನೊಲಿದು ಮಣಿದೊಡಿಗೆಗಳನಿತ್ತು ಫಲವೇನು ಭೂಪಾಲ! . . . ಸುಡುಸುಡನೆ ಸುಡುವ ಬಿಱುಬಿಸಿಲ ಸೆಕೆಯುಸುರ ಬಿಸಿ ಹೊಡೆದುದು; ಉರಿಹತ್ತಿ ಬಾಯ್‌ಬತ್ತಿ ಡಗೆಸುತ್ತಿ ಸಾವಡಸುತಿದೆ! ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು!'

ಹರಿಶ್ಚಂದ್ರ—'ರವಿಕುಲದ ಪೀಳಿಗೆಯೊಳೊಗೆದ ರಾಯರ್ಗೆ ಪಟ್ಟವ ಕಟ್ಟು ವಂದಿದಿಲ್ಲದಡರಸುತನ ಸಲ್ಲದವನಿಯೊಳು; ಯುದ್ಧರಂಗದೊಳಿದಂ ಕಂಡ ಹಗೆಗಳು ನಿಲ್ಲರು; ಇದಱ ಕೆಳಗೆ ಕವಿವ ನೆಳಲೊಳಗಾವನಿರ್ದನಾತಂಗೆ ತಾಂ ತವಿಲೆಡರು ಬಡತನಂ ರೋಗವಪಕೀರ್ತಿ ಪರಿಭವ ಭಯಂ ಹರೆವುದು; ಇದನಱಿದಱಿದು ಸತ್ತಿಗೆಯ ಕೊಡಬಹುದೆ?'

ಹೀಗೆಯೇ ಬಹುವಾಗಿ ವಾದವಿವಾದಗಳು ನಡೆದುವು. ಆದರೆ ಹರಿಶ್ಚಂದ್ರನು ತನ್ನ ಶ್ವೇತಚ್ಛತ್ರವನ್ನು ಕೊಡಲೊಪ್ಪಲಿಲ್ಲ. ಅವಿವೇಕಕ್ಕೆ ಹೊರಟಿರುವವರಿಗೆ ಅಲ್ಲದ್ದಾವುದು ಸಲ್ಲದ್ದಾವುದು? ಅವರು 'ಛತ್ರವಿಲ್ಲದಿದ್ದರೆ ಹೋಗಲಿ, ನಮ್ಮನ್ನು ಮದುವೆಮಾಡಿಕೊ!' ಎಂದು 'ಅಳವಳಿದು ಬಾಯ್ಬಿಟ್ಟು ಕೈಮುಗಿದು' ಕೇಳಿಕೊಂಡರು.

ಹರಿಶ್ಚಂದ್ರ—'ಸೂರ್ಯಕುಲದ ರಾಯರ್ಗೆ ವಂಶದೊಳು ಕೀರ್ತಿಯೊಳು ಭುಜಬಲದೊಳೊರೆದೊರೆಯೆನಿಸಿ ಕನ್ನಿಕೆಯರಂ ಕೊಡುವ ಭೂಪರಿಲ್ಲಿಂದುತನಕ; ಹೊಲತಿಯರು ಬಂದಾವು ಸತಿಯರಾದಪ್ಪೆವೆಂಬುಲಿಹವೆಂಬುದು ಬಂದ ಕಾಲಗುಣವೋ ಸಿಂದ ನೆಲದ ಗುಣವೋ!'

ಗಾಯಕಿಯರು—'ಪಾವನ ಕ್ಷೀರಮಂ ಕೊಡುವ ಕೆಚ್ಚಲ ಮಾಂಸವಾವಲೇಸು? ಮಧುವನೊಸೆದೀವ ನೊಳವಾವ ಲೇಸು? ಅಧಿಕ ಕಸ್ತೂರಿಯಂ ಕೊಡುವ ಮೃಗನಾಭಿ ತಾನಾವ ಲೇಸು? ದೇವರಿಗೆ ಸಲ್ಲವೇ? ಉತ್ತಮಗುಣಂಗಳಿರ್ದಾವ ಕುಂದಂ ಕಳೆಯಲಾಱವವನೀಶ? ಇಂದೆಮ್ಮ ರೂಪು ಜವ್ವನವಿರಲು ಕುಲದ ಮಾತೇಕೆ?'

ಹ.—'ಅಕ್ಕಕ್ಕ; ಬಚ್ಚಲುದಕಂ ತಿಳಿದಡಾರ ಮಿಾಹಕ್ಕೆ ಯೋಗ್ಯಂ? ನಾಯ್ಗೆ ಹಾಲುಳ್ಳಡಾವನೂಟಕ್ಕೆ ಯೋಗ್ಯಂ? . . . . ಮಿಕ್ಕ ಹೊಲತಿಯರು ನೀವೆನೆ ನಿಮ್ಮ ಜವ್ವನದ ಸೊಕ್ಕು ರೂಪಿನ ಗಾಡಿ ಜಾಣತನದೊಪ್ಪವೇತಕ್ಕೆ ಯೋಗ್ಯಂ? ಶಿವಶಿವಾ! ಈ ಮಾತು ತಾ ಹೊಲೆ!!'[13]

ಗಾ.—'ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ, ಮಾತಾಡಿ ನುಡಿಸಿದ ಬಾಯ್ಗೆ ಹೊಲೆಯಿಲ್ಲ, ರೂಪ ಸೆಱೆ ನೋಡಿದ ವಿಲೋಚನಕೆ ಹೊಲೆಯಿಲ್ಲ, ಮೆಯ್ನುಡಿಗಳಿಂ ಸುಳಿವ ತಂಗಾಳಿಯಿಂ ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ ನಾಡೆ ಹೊಲೆಯಿಲ್ಲ, ಸೋಂಕಿಂಗೆ ಹೊಲೆಯುಂಟಾಯ್ತೆ! ಪಂಚೇಂದ್ರಿಯಂಗಳೊಳು ನಾಲ್ಕಧಮ, ಒಂದಧಿಕವೇ?'

ಹ.—'ಕೆಂಡವನು ಮುಟ್ಟಿದಡೆ ಬೇವಂತೆ, ಕೇಳ್ದಡಂ ಕಂಡು ವಾಸಿಸಿದಡಂ ಬೆಂದವೇ? ಕಾಳುಗೆಡೆಯದೆ ಹೋಗಿ!'

ಗಾ.—'ಶಾಪದಿಂದೆಮಗಾದ ದುಷ್ಕುಲಂ ನಿನ್ನಯ ಸಂಗದಿಂ ಶುದ್ಧಮಪ್ಪುದೆಂಬಾಪೇಕ್ಷೆಯಿಂ ಬಂದೆವು.'

ಹ.—'ನಿಮಗೋಸುಗೆನ್ನ ಕುಲಮಂ ಕೆಡಿಪೆನೆ?'

---

13 'ಕುಲವಿಲ್ಲದ ರೂಪು ಎಲ್ಲಿದ್ದರೇನು? ಬಚ್ಚಲ ನೀರು ತಿಳಿದಲ್ಲಿ ಫಲವೇನು?'—**ಬಸವೇಶ್ವರ ವಚನ.**

ಗಾ.—'ಪಾಪಿಗಳ ಪಾಪಮಂ ತೊಳೆವ ಗಂಗೆಗೆ ಪಾಪಲೇಪವುಂಟಾಯ್ತೆ?'

ಹ.—'ಕೊಡವಾಲ ಕೆಡಿಸುವಡಾವುಲ್ಲವೆನಿತಾಗಬೇಕು?'

ಗಾ.—'ಮಾತಿಂಗೆ ಮಾತುಗೊಡಲರಿದು; ನಿನ್ನಯ ಸುತಖ್ಯಾತಿಗದಟಿಂಗೆ
ಸುರುಚಿರಗುಣವ್ರಾತಕ್ಕೆ ಹರೆಯಕ್ಕೆ ಗರುವಿಕೆಗೆ ಮನಸಂದು ಮತಿಗೆಟ್ಟು
ಮರುಳಾದೆವು; ನಿನ್ನಯ ಬೆನ್ನ ಬಿಡೆವು.'

ಹ.—'ಬಳಿವಿಡಿದು ಬಂದು ಮಾಡುವುದೇನು?'

ಗಾ.—'ಎಳಸಿ ಮೆಚ್ಚಿಸಿ ಮರುಳ್ಗೊಳಿಸಿ ಮತ್ತೊಲ್ಲನವನಿಪನೆಂದು ಮೊಱೆ
ಯಿಡುತ್ತ ಇಳೆಯೊಳಗೆ ಸಾಱುತ್ತ ದೂಱುತ್ತ ಬಪ್ಪೆವು.'

ಇನ್ನು ಹರಿಶ್ಚಂದ್ರನಿಗೆ ತಡೆಯಲಾಗಲಿಲ್ಲ. ಅವನ ತಾಳ್ಮೆಯೂ ಹೋಯಿತು. ಹೆಂಗಸರೆಂದು ಹೇಸದೆ ಅವರನ್ನು ಚಮ್ಮಟಿಗೆಯಿಂದ ಹೊಯ್ದು ಓಡಿಸಿದನು.

ವಿಶ್ವಾಮಿತ್ರನು ಇದನ್ನು ತಿಳಿದು ತನ್ನ ಮನೋರಥವು ಕೈಗೂಡಿತೆಂದು ಮನಸ್ಸಿನಲ್ಲಿ ಉತ್ಸಾಹಗೊಳ್ಳುತ್ತ, ಹೊರಗೆ ಕೋಪವನ್ನು ತೋರಿಸುತ್ತ ಬಂದು ಹರಿಶ್ಚಂದ್ರನು ತನ್ನ ತಪೋವನಕ್ಕೆ ಪ್ರವೇಶಮಾಡಿದ್ದು ಮೊದಲುಮಾಡಿ ಕೊಂಡು ಗಾಯಕಿಯರನ್ನು ಹೊಡೆದದ್ದರವರೆಗೆ ಅವನ ಮೇಲೆ ನಾನಾ ತಪ್ಪುಗಳನ್ನು ಹೊರಿಸಿ ಕೊನೆಗೆ ಅವರನ್ನು ಮದುವೆಯಾದರೆ ಎಲ್ಲಾ ನಿರೋಧ ವನ್ನೂ ಬಿಡುವೆನೆಂದನು. ಹರಿಶ್ಚಂದ್ರನು ಏನು ಹೇಳಿದರೂ ಅದಕ್ಕೆ ಒಪ್ಪದೆ 'ಎಡೆಬಿಡದೆ ಬೇಡಿ ಕಾಡುವಿರಾದರೆ ಸರ್ವರಾಜ್ಯವನ್ನಾದರೂ ಕೊಟ್ಟೇನು, ಇದಕ್ಕೆ ಒಪ್ಪಲಾರೆ' ಎಂದನು.

ವಿಶ್ವಾಮಿತ್ರನು ಆ ಮಾತನ್ನೇ ಹಿಡಿದುಕೊಂಡು ಅವನಿಂದ ರಾಜ್ಯವನ್ನು ಕಸಿದುಕೊಂಡನು. ತೊಟ್ಟ ಆಭರಣಗಳನ್ನೂ ಉಟ್ಟ ಬಟ್ಟೆಯನ್ನೂ ಸಹ ಬಿಡಲಿಲ್ಲ. ಉಟ್ಟ ಬಟ್ಟೆಯನ್ನು ಕೊಡುವುದು ಹೇಗೆಂದು ಹರಿಶ್ಚಂದ್ರನು ತಲೆವಾಗಿ ನಿಂತಿರಲು ವಿಶ್ವಾಮಿತ್ರನು 'ಅವನಿಪರು ಮರುಳರೆಂಬುದು ತಪ್ಪದು. ಇದಕ್ಕುಪಾಯವ ಕಾಣ್ಬುದರಿದೆ? ನಾ ತೋಱುದಪೆ' ಎಂದು 'ತನ್ನವನೊಬ್ಬನುಟ್ಟ ಹಣ್ಣುಱುವೆ ಸೀರೆಯನೀಸಿಕೊಂಡು ನಾಲ್ಕಾಗಿ ಸೀಳಿ ಕೊಟ್ಟನು.' ಆದರೆ ಸುಲಿಗೆ ಇಷ್ಟಕ್ಕೇ ನಿಲ್ಲಲಿಲ್ಲ; ಹೇರನ್ನು ಒಪ್ಪಿಸಿದ್ದರೂ

ಸುಂಕ ಕೇಳುವವನಂತೆ ವಿಶ್ವಾಮಿತ್ರನು ತನಗೆ ಹೊಡಲು ಕೊಟ್ಟ ದಕ್ಷಿಣೆ ಯೆಲ್ಲಿ ಎಂದನು. ಅದನ್ನು ಸಂಪಾದಿಸಿ ಕೊಡುತ್ತೇನೆಂದು ಒಂದು ಗಡುವನ್ನು ಮಾಡಿಕೊಂಡು ಹರಿಶ್ಚಂದ್ರನು ರಾಜಧಾನಿಗೆ ಬಂದು ತನ್ನ ರಾಜ್ಯವನ್ನು ಕ್ರಮವಾಗಿ ಒಪ್ಪಿಸಿಕೊಟ್ಟು ಕಾಶಿಗೆ ಹೊರಡಲನುವಾದನು. ಅವನಲ್ಲಿ ಪ್ರೀತಿಯಿದ್ದ ಪುರಜನರ ಮತ್ತು ಪ್ರಜೆಗಳ ಗೋಳು ಹೇಳತೀರದು. ವಿಶ್ವಾಮಿತ್ರನು ಆಗ ಮತ್ತೊಂದು ಸಾರಿ 'ಈ ಕಟಕ ಈ ಕೋಟೆ ಈ ಕರಿಗಳೀ ತುರಗವೀರಥಗಳೀಪರಿಜನ ಈ ಕೋಶವೀಕಾಂತೆ ಈ ಕುವರನೀಮಂತ್ರಿ ಈ ಕಾಮಿನೀಜನಂ ಮಱುಗದುತ್ತರಸಾಗಜೇಕಾಪಡೆನ್ನ ಮಕ್ಕಳ ಮದುವೆಯಾಗು' ಎಂದು ಹೇಳಿ ಚಪಲಗೊಳಿಸಿ ನೋಡಿದನು. ಆದರೆ ಹರಿಶ್ಚಂದ್ರನ ಮನಸ್ಸು ನಿರ್ಧರವಾಗಿ ಹೋಗಿತ್ತು. ಅದು ಈ ಯಾವ ಸುಖದುಃಖಕ್ಕೂ ಸಗ್ಗು ವಂತಿರಲಿಲ್ಲ. ಅವನ ಈ ಧೈರ್ಯ ಸ್ಥೈರ್ಯ ನಿಷ್ಠೆ ಕ್ಷಮೆ ಶಾಂತಿ ದಾಂತಿ ಗಳನ್ನೂ, ವಿಶ್ವಾಮಿತ್ರನ ಕುಹಕ ಕಾಠಿಣ್ಯ ಕಿರುಕುಳ ಕುಟಿಲತೆಗಳನ್ನೂ ಕವಿ ಮನಕರಗುವಂತೆ ಚಿತ್ರಿಸಿದ್ದಾನೆ.

ಹರಿಶ್ಚಂದ್ರನ ವೈರಾಗ್ಯವು ಅವನ ಪ್ರಜೆಗಳಿಗಿರಲಿಲ್ಲ. ಅವರು ವಿಶ್ವಾಮಿತ್ರ ನನ್ನು 'ಪಾಪಿ, ನಿಷ್ಕರುಣಿ, ನಿರ್ದಯ, ಮೂರ್ಖ, ನೀಚ, ನೀರಸ, ನಿರ್ಗುಣ, ... ಎಮ್ಮೊಡಲೊಳಳ್ಳಿಱಿವಿಪ್ರತಿಪ್ಪಳಲ ಜೇಗೆಯ ಬೆಂಕಿಯುರಿ ನಿನ್ನನಿಱಿಯದೇ' ಎಂದು ಮುಂತಾಗಿ ಬಯ್ಯುತ್ತಿದ್ದರು. ಆದರೆ ಹರಿಶ್ಚಂದ್ರನು 'ನಿಮ್ಮನು ಜಱಿದು ಮಾಱುತ್ತರಂಗೊಟ್ಟು ಕಟ್ಟು ನುಡಿದು ನಿಂದೆಗೆಯ್ದನ್ಯಾಯ ಪಾಪಿ ಚಾಂಡಾಲ ನೆನ್ನಿಂದಧಮರಾರಯ್ಯ, ಸರ್ವಾಪರಾಧಿಯಾಂ, ತಂದೆ, ಕರುಣಂಗೆಡದಿರೆಂದು ಮುನಿಯಂ' ಬೇಡಿಕೊಳ್ಳುತ್ತಿದ್ದನು.

ಇಲ್ಲಿಗೆ ಹರಿಶ್ಚಂದ್ರನ ಗ್ರಹಚಾರದಲ್ಲಿ ಒಂದು ಘಟ್ಟ ಮುಗಿಯಿತು. ಆದರೆ ಮುಂದೆ ದಾನಕ್ಕಿಂತ ದಕ್ಷಿಣೆಯೇ ಕಷ್ಟವಾಯಿತು. ಸಾಲಗಾರನಿಗಿಂತ ನಕ್ಷತ್ರಕನೇ ಬಲವಾದನು. ವಿಶ್ವಾಮಿತ್ರನು ಕಣ್ಣೆದುರಿಗೆ ಇದ್ದಾಗ ಆದ ಹಿಂಸೆಗಿಂತ ಹಿಂದೆ ಇದ್ದಾಗ ಆದ ಹಿಂಸೆಯೇ ಘೋರವಾಯಿತು.

ನಕ್ಷತ್ರಕನು ಸ್ವಭಾವತಃ 'ಹುಸಿಯಸೂಯಾನೀಚವೃತ್ತಿ ನಿರ್ದಾಕ್ಷಿಣ್ಯ ನಿಷ್ಕರುಣ ನೀತಿಗಳಲ್ಲಿ ಹೆಸರುಳ್ಳ ಹಿರಿಯ.' ಸಾಲದುದಕ್ಕೆ ವಿಶ್ವಾಮಿತ್ರನು ಅವನಿಗೆ

'ಕೊಡುವೊಡವೆ ಒರಲಿ ಬಾರದೆ ಕೆಡಲಿ, ಕಾನನದ ನಡುವೆ ತಗಹಿನಲಿರಿಸಿ ಕೆಲವುದಿನ ಉಪವಾಸಬಡಿಸಿರ್ದು ಕೆಲವುದಿನ ದೇಹವನುವಲ್ಲೆಂದು ನೆವವ್ರೊಡ್ಡಿ ಕೆಲವು ದಿವಸ ನಡೆವಾಗ ದಾರಿದಪ್ಪಿಸಿ ತಿರಿಪಿ ಕೆಲವುದಿನ ಪಡಿಯ ಬೀಯ ಕ್ಕಾಣೆಯಿಟ್ಟಿಂತು ಕೆಲವುದಿನ ಕೆಡಿಸಿ ನುಡಿದವಧಿಯಾಯ್ತೆಂದು ಧರೆಯಱಿಯೆ ನೃಪನಂ ಹುಸಿಕನೆನಿಸು' ಎಂದು ಹೇಳಿಕೊಟ್ಟನು. ಅವನ ಕಾಟದಲ್ಲಿ ಕುಸುಮ ಸುಕುಮಾರರಾದ ಹೆಂಡತಿ ಮಕ್ಕಳು ಕಾಡುದಾರಿಯಲ್ಲಿ ನಡೆಯಲಾರದೆ ಪಟ್ಟ ಸಂಕಟವೂ ಎಲ್ಲಿಯೋ ಹೋಯಿತು. ಚಂದ್ರ ಸೂರ್ಯರೂ ಮರುಗಿದರು; ಆದರೆ ಕೌಶಿಕನು ಮರುಗಲಿಲ್ಲ. ಅವನ ಪ್ರೇರಣೆಯಿಂದ ಘೋರಕಾನನದಲ್ಲಿ ಕಾಳಗತ್ತಲೆ ಕವಿದು ಕಡಲಿಟ್ಟು ಮಡುಗಟ್ಟಿತು. ಹಾವು, ಚೇಳು, ಹುಲಿ, ಕರಡಿ, ಭೂತ, ಭೇತಾಳಗಳು ಸುತ್ತಿಮುತ್ತಿ ಬೊಬ್ಬಿಟ್ಟು ಝುಂಕಿಸಿದುವು. ದಾವಾಗ್ನಿ ಮುತ್ತಿಕೊಂಡಿತು. ಆದರೆ 'ಉತ್ತಮರ ಮುಂದಾವ ಠಕ್ಕಿರಲಾಪುದು?' ಇದೆಲ್ಲವನ್ನೂ ಕಳೆದು ಗಂಗಾದರ್ಶನ ಮಾಡಿ ಹರಿಶ್ಚಂದ್ರನು ಕಾಶೀ ಕ್ಷೇತ್ರವನ್ನು ಸೇರಿದನು. ಕೈಕೊಂಡಿದ್ದ ಅವಧಿ ತೀರುತ್ತ ಬಂತು. ಆದರೆ ಸಂಪಾದನೆಗೆ ಮಾತ್ರ ಯಾವ ಮಾರ್ಗವೂ ಇರಲಿಲ್ಲ. 'ಭಿಕ್ಷಬೇಡುವುದು ಕ್ಷತ್ರಿಯ ಧರ್ಮಕ್ಕೆ ವಿರುದ್ಧ; ಒಂದುಪಕ್ಷ ನಾಚಿಕೆ ಬಿಟ್ಟು ಬೇಡಿದರೂ ಕೊಡುವ ದಾತನಿಲ್ಲ; ಕೃಷಿಯಿಂದ ಸಂಪಾದಿಸೋಣವೆಂದರೆ ಭೂಮಿ ಇಲ್ಲ ಕಾಲವಿಲ್ಲ. ಇನ್ನೇನು ನನ್ನ ಸತ್ಯ ಇವೊತ್ತು ಸೂಱೆಹೋಯ್ತು' ಎಂದು ಸ್ವಲ್ಪ ದಿನದ ಕೆಳಗೆ ಚಕ್ರವರ್ತಿಯಾಗಿದ್ದವನು ದಿಕ್ಕು ತೋರದೆ ಮುಖ ವನ್ನು ಕೈಯಿಂದ ಮುಚ್ಚಿಕೊಂಡು ಕುಳಿತುಬಿಟ್ಟನು. ಆ ಸಮಯದಲ್ಲಿ, ಪತಿಯು 'ಚಿಂತಾಗ್ನಿಯುರಿಯು ಹೊಯ್ಲಿಂ ಕರಗಿಹೋಗದಿರನೆಂದು' ಚಂದ್ರ ಮತಿಯೇ ಮುಂದೆ ಬಂದು, ಇರುವ ಎರಡು ಜಾವದಲ್ಲಿ ತಿದ್ದುವ ಬುದ್ಧಿ ಯನ್ನು ಕಾಣಬೇಕಲ್ಲದೆ ಮೂಗುವಟ್ಟಿರ್ದೊಡೇನಹುದೆಂದು ಉತ್ಸಾಹಗೊಳಿಸಿ, ಏನು ಮಾಡೋಣವೆಂದು ಕೇಳಿದ ಪತಿಪ್ರಶ್ನೆಗೆ ತನ್ನನ್ನೂ ಮಗನನ್ನೂ ಮಾರಿ ಸಾಲದ ಹೊರೆಯನ್ನು ಸ್ವಲ್ಪ ತೀರಿಸಿಕೊಂಡು ಮಿಕ್ಕುದಕ್ಕೆ ಮತ್ತೇನಾದರೂ ಉಪಾಯವನ್ನು ಮಾಡಬೇಕೆಂದು ಸಲಹೆ ಕೊಟ್ಟಳು. ಹರಿಶ್ಚಂದ್ರನು ಇದಕ್ಕೆ ಸುಮ್ಮನೆ ಒಪ್ಪಿಯಾನೇ? ಆದರೆ ಚಂದ್ರಮತಿ

ಬಿಡಲಿಲ್ಲ. 'ಎಲೆ ಮರುಳೆ, ಸರ್ವಕ್ಕೆ ಮೊದಲು ಸತಿಸುತರು ತನ್ನ ಒಡಲು ಕಡೆ. . . .' ಎಂದು ವಾದಿಸಿದಳು. ಹರಿಶ್ಚಂದ್ರನು ವಿಧಿಯಿಲ್ಲದೆ ಒಪ್ಪಿ, ಹೆಂಡತಿ ಮಕ್ಕಳ ತಲೆಯ ಮೇಲೆ ಹುಲ್ಲುಕಡ್ಡಿಯನ್ನಿಟ್ಟು ಅವರನ್ನು ಮಾರುತ್ತೇನೆಂದು ಸಾರುತ್ತ ಬಂದನು. ಇವರನ್ನು ಕೊಳ್ಳುವವರು ಯಾರು ಬರಬೇಕು? ಪೀಡೆಯನ್ನು ತಂದೊಡ್ಡಿದ ವಿಶ್ವಾಮಿತ್ರನೇ ಅದರ ನಿವಾರಣೆಗೂ ಬರಬೇಕಾಯಿತು. ಅವನ ಆಜ್ಞೆಯಿಂದ ಅಗ್ನಿಯು ವಿಪ್ರನಾಗಿ ಬಂದು ಅವರಿಬ್ಬರನ್ನೂ ಕೊಂಡುಕೊಂಡನು; ನೆಟ್ಟನೆ ಕೊಂಡುಕೊಂಡುಬಿಟ್ಟನೇ? 'ಹುಡುಗ ಚಿಕ್ಕವನು, ಈಕೆ ಮುದುಕಿ: ಇವರನ್ನೇನುಮಾಡಿಕೊಳ್ಳಲಿ?' ಎಂದು ಚೌಕಾಶಿಮಾಡಿದನು. 'ಬೆಲೆ ಹೇಳು; ನನಗೆ ಸರಿಹೋದರೆ ಇನ್ನೆಂಟು ದಿನಕ್ಕೆ ಕೊಡುತ್ತೇನೆ' ಎಂದನು. ಕೊನೆಗೆ ಅಂದೇ ಹಣಕೊಟ್ಟು ಕೊಂಡುಕೊಂಡು ಹರಿಶ್ಚಂದ್ರನೆದುರಿಗೇ ಅವರನ್ನು 'ಕೆಡೆಯೊದೆದು ನೂಕಿ ನಿಜಗೇಹಕ್ಕೆ ಜಱೆವುತ್ತ ಕೊಂಡೊಯ್ದನು.' ಯುದ್ಧಕ್ಕೆ ಬಂದರೆ 'ಲೋಕದರಸುಗಳ ಸಪ್ತಾಂಗಮಂ ಕೊಂಬ' ಹರಿಶ್ಚಂದ್ರನು 'ಬಡಮುನಿಯ ನುಡಿಯ ತೊಡಕಿನ ಬೆಡಗಿನಿಂದ' ಸೋತು ರಾಜ್ಯವನ್ನೂ ಹೆಂಡತಿ ಮಕ್ಕಳನ್ನೂ ಕಳೆದುಕೊಂಡನು. ಆದರೂ ಋಣ ಹರಿಯಲಿಲ್ಲ. ಅವರನ್ನು ಮಾರಿ ಸಂಪಾದಿಸಿದ್ದು 'ಬತ್ತಾಯ'ಕ್ಕೆ ಸರಿಹೋಯಿತು. ಇನ್ನು ಉಳಿದವನು ತಾನೊಬ್ಬನು; ತನ್ನನ್ನೂ ಮಾರಿಕೊಳ್ಳಲನುವಾದನು. ತನ್ನ ಮಾತಿಗೆ ತಾನೇ ಕಟ್ಟುಬಿದ್ದು 'ಕೌಶಿಕಮುನೀಶ್ವರ ಮೊದಲನಾಮಿಕರೆ ಕಡೆ ಸಮಸ್ತರ ಮನಕ್ಕೆ ಸತ್ಯನೆನಿಸುವೆನೆಂದು' ವೀರಬಾಹುವಿಗೆ ತನ್ನನ್ನು ಮಾರಿಕೊಂಡು ಅವಧಿಗೆ ಇನ್ನೆರಡು ಗಳಿಗೆ ಇರುವ ಹಾಗೇ ಋಣಮುಕ್ತನಾದನು. 'ಹೇಳಿದ್ದನ್ನು ಮಾಡುತ್ತೇನೆಂದು' ಒಪ್ಪಿಕೊಂಡಿದ್ದುದರಿಂದ ವೀರಬಾಹುವಿನ ಪಾದಸೇವೆ ಮಾಡಿ, ಅವನಿಂದ ಸಣ್ಣ ಮಾತುಗಳನ್ನು ಕೇಳಿ, ರಾಜಬೀದಿಯಲ್ಲಿ 'ಹೆಸರ ಹೇಳುತ್ತ ಮೆಯ್ಗುಱುಹ ತೋಱುಸುತ ಪುರದೊಳಗೆಯ್ದೆ ಜನವಱಿಯೆ ಹಱೆಯ ಮೊಳಗಿಸುತ ಮೆಱೆಯುತ್ತ' ಸುಡುಗಾಡಿಗೆ ಹೋದನು. ಅಲ್ಲಿ 'ಹೆಣನ ತಲೆಯಕ್ಕಿ, ನೆಲದೆಱೆಯ ಹಾಗ, ಶವದುಡಿಗೆ' ಇವುಗಳನ್ನು ತೆಗೆದುಕೊಳ್ಳುವುದೇ ಇವನ ಘನಕಾರ್ಯ! ಆಡಿದ ಮಾತು ಹೋಗುವುದೆಂದು ಇದೊಂದಕ್ಕೂ ಅವನು

ಹಿಂದೆಗೆಯಲಿಲ್ಲ; ಸಂಕೋಚಪಟ್ಟುಕೊಳ್ಳಲಿಲ್ಲ. ಹರಿಶ್ಚಂದ್ರನು ತನ್ನ ಕೈಮಾರಿದನೆಂದು ವಿಶ್ವಾಮಿತ್ರನು ಯಮನನ್ನು ವೀರಬಾಹುವಾಗುವಂತೆ ಹೇಳಿಕಳುಹಿಸಿ ಅವನ ಜಾತ್ಯಭಿಮಾನ ಆತ್ಮಗೌರವಗಳನ್ನು ಅಲ್ಲಾಡಿಸಿ ನೋಡಿದನು. ಆದರೆ ಸತ್ಯವೇ ಪರಮಧರ್ಮವೆಂದಿದ್ದ ಹರಿಶ್ಚಂದ್ರನು ಆ ಪರಮಧರ್ಮಕ್ಕೆ ಇತರ ಧರ್ಮಗಳನ್ನು ಶರಣಾಗೊಳಿಸಿ ಜಯಶೀಲನಾಗಿ 'ಸತ್ಯಸಂಪನ್ನ'ನೆನಿಸಿದನು.

ಇತ್ತಲಾಗಿ ಚಂದ್ರಮತಿಯ ಗ್ರಹಚಾರವು ಕ್ರೂರತರವಾಯಿತು.

ಒಡೆಯನತಿಕೋಪಿ ಹೆಂಡತಿ ಮಹಾಮೂರ್ಖೆ ಮಗ
ಕಡುಧೂರ್ತ ಸೊಸೆಯೊದಡಧಿಕನಿಷ್ಠುರೆ ಮನೆಯ
ನಡೆವವರು ದುರ್ಜನರು ನೆರೆಮನೆಯವರು ಮಿಥ್ಯವಾದಿಗಳು ಪಶುಗಳಗಡು|
ಅಡಿಗಡಿಗೆ ಕೋಪಿಸುವ ಸಾಯೆ ಸದೆಬಡಿವ ಕಾ
ಳ್ಗಡೆವ ಕರಕರಿಪ ಸೆಣಸುವ ತಪ್ಪ ಸಾಧಿಸುವ
ಕೆಡೆಯೊದೆವ ಮಾರಿಗಾಣದೆ ಸತ್ತು ಹುಟ್ಟುತಿಹರವನಿಪನ ಸತಿಪುತ್ರರು || (೮-೨)

ಆಕೆಯು ಇಂಥವರ ಮಧ್ಯದಲ್ಲಿದ್ದುಕೊಂಡು, ಭತ್ತಕುಟ್ಟಿ, ನೀರುಹೊತ್ತು, ಹಾಕಿದ್ದನ್ನು ತಿಂದುಕೊಂಡಿರಬೇಕಾಗಿತ್ತು. ಇಷ್ಟು ಸಾಲದೆಂದು ಒಂದು ದಿನ ರೋಹಿತಾಶ್ವನು ಹುಲ್ಲು ಹುಳ್ಳಿಗಳನ್ನು ತರಲು ಕಾಡಿಗೆ ಹೋಗಿದ್ದಾಗ ಅಲ್ಲಿ ಒಂದು ಹುತ್ತದಮೇಲೆ ಹುಲುಸಾಗಿ ಬೆಳೆದಿದ್ದ ಹುಲ್ಲನ್ನು ನೋಡಿ 'ಮನವುಬ್ಬಿ ನಾನಿದನೆಲ್ಲಮಂ ಗಳಗಳನೆ ಕೊಯ್ದು ಕೊಂಡೊಯ್ದುತ್ತಡೆನ್ನೊಡೆಯ ಮುಳಿಯದಿಹನೆಂಬಾಸೆಯಿಂ' (ಪಾಪ! ಆ ಹುಡುಗನಿಗೂ ಒಡೆಯನ ಕಾಟ! ಅವನ ಕೋಪದಿಂದ ಪಾರಾಗಬೇಕೆಂಬ ಪ್ರಯತ್ನ!) ಹೋಗಿ, ಹಾವು ಕಚ್ಚಿ ಸತ್ತು ಹೋದನು. ಪತಿಯ ಸತ್ಯವೇ ಕಾಪಾಡುವುದೆಂದು ಇದ್ದ ಸತಿಗೆ ಪುತ್ರಶೋಕ ಬೇರೆ ಒದಗಿತು. 'ಅವಳ ರನ್ನಕನ್ನಡಿ' ಸಿಡಿದುಹೋಯಿತು. ಆ ವರ್ತಮಾನವು ತಿಳಿದಾಗ ಅರ್ಧರಾತ್ರಿಯ ಸಮಯ; ನೀನೇ ಎನ್ನುವರಿಲ್ಲ. ಆಗ ಅವಳು ಯಜಮಾನನ ಕಾಲಮೇಲೆ ಬಿದ್ದು ತನ್ನ ಮಗ ಹಾವು ಕಚ್ಚಿ ಸತ್ತನೆಂದು ಹೇಳಲು ಅವನು 'ಲೇಸಾಯ್ತು; ಮಡಿದರೆ ಮಡಿದಂ' ಎಂದುಬಿಟ್ಟನು.

ಚಂದ್ರಮತಿ—'ಬಂಟರನು ಕೊಟ್ಟರಸಿಸೈ ತಂದೆ!'

ಯಜಮಾನ—'ನಡುವಿರುಳು ಬಂಟರುಂಟೇ? ನಿದ್ದೆಗೈಯಬೇಕೇಳು ಕಾಡದಿರು.'

ಚಂದ್ರ.—'ನರಿಗಳೆಳೆಯದ ಮುನ್ನ ದಹಿಸಬೇಡವೆ ತಂದೆ? ಕರುಣಿಸು'
ಯಜ.—'ದುರ್ಮರಣವಟ್ಟ ಶೂದ್ರನನು ಸಂಸ್ಕರಿಸುವವರಾವಲ್ಲ.'
ಚಂದ್ರ.—'ಆನಾದಡಂ ಹೋಗಿ ಕಂಡು ಮಗನ ಉರಿಗಿತ್ತು ಒಪ್ಪಿಸೇ?'
ಯಜ.—'ಕೆಲಸಮಂ ಬಿಟ್ಟುಹರಿಯದಿರ್ದುಡನೈದೆ ಗೆಯ್ದು ಹೋಗು!'

ಚಕ್ರವರ್ತಿನಿಯಾಗಿದ್ದವಳಿಗೆ ಎಂಥ ಗತಿ! ತನ್ನ ಮಗನ ಶವವನ್ನು ಒಪ್ಪ ಮಾಡುವುದಕ್ಕೂ ಸ್ವಾತಂತ್ರ್ಯವಿಲ್ಲ! ತನ್ನ ಕಷ್ಟಕಾಲದಲ್ಲಿ ಏಕಾವಲಂಬನ ವಾಗಿದ್ದ ಪ್ರಿಯಪುತ್ರನನ್ನು ಕಳೆದುಕೊಂಡು ಇರುವುದು ಹೇಗೆ? ಆಗಲೂ ತನ್ನ ಚಿಂತೆಗಿಂತ ಹೆಚ್ಚಾಗಿ, ಹರಿಶ್ಚಂದ್ರನ ಚಿಂತೆ.—

'ಅತಿಲಜ್ಜೆಗೆಟ್ಟನ್ಯರಾಳಾಗಿ ದುಡಿದು ಥಾ
ವತಿಗೊಂಡು ಧನವನಾರ್ಜಿಸಿ ಹರಿಶ್ಚಂದ್ರ ಭೂ
ಪತಿ ನಮ್ಮ ಬಿಡಿಸುವಾರ್ತದ ಮೋಹದಿಂ ಹಸಿವು ನಿದ್ದೆಯಂ ತೊಱೆದು ಬಂದು|
ಸುತನ ಕರೆಯೆಂದಡೇನೆಂಬೆನಾವುದ ತೋಱಿ
ಪತಿಯ ಮಱುಕವನು ಮಱೆಯಿಸುವೆನು. . . .||'

ಎಂಬ ಕೊರಗು. ಕೊನೆಗೆ ತಾನು ಎತ್ತಿ ಆಡಿಸಿದ ಭುಜದಮೇಲೆ ಹೆಣವನ್ನು ಹಾಕಿಕೊಂಡು, ಪುತ್ರಶೋಕಗ್ರಹಾವಿಷ್ಟಳಾಗಿ ದಾರಿಯ ಕಲ್ಲುಮುಳ್ಳುಗಳ ಮೇಲೂ ಜ್ಞಾನವಿಲ್ಲದೆ ಶ್ಮಶಾನಕ್ಕೆ ಬಂದಳು. ಹರಿಶ್ಚಂದ್ರನೂ ಸತ್ತ ಮಗನನ್ನು ನೋಡಿ ಬಹುವಾಗಿ ಶೋಕಿಸಿದನು. ಮಗ ಸತ್ತನೆಂದು ದುಃಖವಲ್ಲ; 'ಅರಿ ರಾಯರೊಳು ಕಾದಿ ಮಡಿದಾತನಲ್ಲ. . . . ಬಡ ಹಾವುಕಚ್ಚಿ ಮುನಿವರಿಗೆ ನಗೆಗೆಡೆಯಾಗಿ ನಿಷ್ಕಾರಣಂ ಮಡಿವರೇ!. . . .' ಎಂದು. ತಾಯಿತಂದೆಗಳ ಗೋಳಾಟದಲ್ಲಿ ಬೆಳಗಾಗುತ್ತ ಬರಲು, ಚಂದ್ರಮತಿಯೇ ಅದನ್ನು ತಿಳಿಸಿ ಮುಂದೇನು ಗತಿಯೆಂದು ಕೇಳಿದಳು. ಅವನು 'ತೆಱೆಯನಿಕ್ಕದೆ ಸುಡಲ್ಬಾರದು. ಉಳ್ಳೊಡೆ ಸುಡಲ್ಬಹುದು; ಇಲ್ಲದೊಡೆ ನಿನ್ನೊಡೆಯನಂ ಬೇಡಿ ತಾ; ತಾರದಿರೆ ಸುಡಲ್‌ಬೇಡ' ಎಂದು ಖಂಡಿತವಾಗಿ ಹೇಳಿಬಿಟ್ಟನು. ಅದರಂತೆ ಅವಳು ಊರಿಗೆ ಹಿಂದಿರುಗಿ ಬರುತ್ತಿರಲು ದಾರಿಯಲ್ಲಿ ಯಾರೋ ಘಾತುಕರು ಕಾಶೀ ರಾಜನ ಕುಮಾರನನ್ನು ಕೊಲ್ಲುತ್ತಿದ್ದರು. ಆ ಹುಡುಗನ ಕಿರಿಚಲನ್ನು ಕೇಳಿ ತನ್ನ ಮಗನದೆಂದು ಭ್ರಾಂತಿಪಟ್ಟು ಅಲ್ಲಿಗೆ ಹೋಗಲು ಇವಳೇ ಹತ್ಯಕಾರಿ

ಎಂಬ ದೂರು ಹೊತ್ತು ಶಿಕ್ಷೆ ಪಡೆಯಬೇಕಾಯಿತು. ಈ ಅವಸ್ಥೆಯಲ್ಲಿ ನಿಜ ಹೇಳಿ ಬದುಕಿರಲು ಪ್ರಯತ್ನ ಪಡುವುದಕ್ಕಿಂತ ಸುಳ್ಳು ಹೇಳಿ ಅಪವಾದ ಹೊತ್ತು ಸಾಯುವುದೇ ಮೇಲೆಂದು, ಅವಳು ತಾನೇ ಕೊಲೆಮಾಡಿದೆನೆಂದಳು. ಅವಳನ್ನು ಸಂಹರಿಸುವ ಭಾರವು ವೀರಬಾಹುವಿನಿಂದ ಅವನ ಸೇವಕನಾದ ಹರಿಶ್ಚಂದ್ರನಿಗೆ ಬಂತು. ಅಪರಾಧಮಾಡಿ ತಪ್ಪಿಸಿಕೊಂಡವರುಂಟು; ಅಪರಾಧಕ್ಕೆ ಶಿಕ್ಷೆ ಯಾದವರುಂಟು; ಆದರೆ ಯಾವ ಅಪರಾಧವೂ ಇಲ್ಲದೆ ಧರ್ಮಮೂರ್ತಿ ಗಳಾಗಿದ್ದ ಇಂಥ ಗಂಡಹೆಂಡರಿಗೆ ಹೀಗೆ ಕಷ್ಟಪರಂಪರೆಗಳು ಬಂದು, ಅವು ಇಷ್ಟು ಘೋರರೂಪಿನಲ್ಲಿ ಪರಿಣಾಮಗೊಳ್ಳುವ ಕಥೆಯು ಪ್ರಪಂಚದ ಮತ್ತಾವ ಸಾಹಿತ್ಯದಲ್ಲಿಯೂ ಇರಲಾರದು! ಚಂದ್ರಮತಿಯು 'ಕಲಿ ಹರಿಶ್ಚಂದ್ರರಾಯಂ ಸತ್ಯವೆರಸಿ ಬಾಳಲಿ, ಮಗಂ ಮುಕ್ತನಾಗಲಿ, ರಾಜ್ಯದೊಡೆಯ ವಿಶ್ವಾಮಿತ್ರ ನಿತ್ಯನಾಗಲಿ, ಹರಕೆ, ಹೊಡೆಯೆಂದಳು.' ಹರಿಶ್ಚಂದ್ರನು 'ಹರಕೆಯಂ ಕೇಳಿ ಹವ್ವನೆ ಹಾರಿ . . . . ಪತಿಯಾಜ್ಞೆಯುಳಿದಡೆ ಸಾಕೆನುತ' ಸತಿಯ ತಲೆಯ ಮೇಲೆ ಕತ್ತಿಯನ್ನು ಇಳಿಸಿದನು. ಆದರೆ ಆಕೆಯ ಕೊರಳ ಪ್ರದೇಶದಿಂದ ವಿಶ್ವನಾಥನು ಮೈದೋರಿ ಹರಿಶ್ಚಂದ್ರನನ್ನು ಅಪ್ಪಿಕೊಂಡು,

> ಘನಸತ್ಯವೇ ಜೀವವೆಂದಿರ್ದ ನಿನ್ನ ಹೊಲೆ
> ಯನ ಸೇವೆ ಗುರುಸೇವೆ ಹೊತ್ತ ಹೊಲೆವೇಷ ಪಾ
> ವನಪುಣ್ಯವೇಷ ಸುಡುಗಾಡ ರಕ್ಷಿಸುವಿರವು ತಾ ಯಜ್ಞರಕ್ಷೆಯಿರವು |
> ಅನುದಿನಂ ಭುಂಜಿಸಿದ ಶವದ ಶಿರದಕ್ಕಿಯ
> ಲ್ಲನಪೇಯ ಚಾಂದ್ರಾಯಣಂ ಪುತ್ರನಳಿವು ಜ
> ನ್ಮನಿಕಾಯದಳಿವಂಗನಾಹನನ ಮಾಯಾಹನನವಂಜಬೇಡ . . . ||

ಎಂದು ಸಂತೈಸಿದನು. ವಸಿಷ್ಠ ವಿಶ್ವಾಮಿತ್ರರೂ ಬಂದರು. ವಿಶ್ವಾಮಿತ್ರನು ತಾನು ಎಷ್ಟೋ ವರ್ಷ ಮಾಡಿದ ತಪಸ್ಸಿನಲ್ಲಿ ಅರ್ಧವನ್ನು ಹರಿಶ್ಚಂದ್ರನಿಗಾಗಿ ಧಾರೆಯೆರೆದು, ಅವನ ಸತಿಸುತರನ್ನು ಜೊತೆಗೊಳಿಸಿ ಅಯೋಧ್ಯೆಯಲ್ಲಿ ಪಟ್ಟ ಕಟ್ಟಿದನು. ಹೀಗೆ ಹರಿಶ್ಚಂದ್ರನು "ಹರನೆಂಬುದೇ ಸತ್ಯ; ಸತ್ಯವೆಂಬುದು ಹರನು, ಎರಡಿಲ್ಲ" ಎಂಬ ಶ್ರುತಿತತ್ವವನ್ನು ಸಾರಿದನು.

ಹರಿಶ್ಚಂದ್ರೋಪಾಖ್ಯಾನದ ಇತಿಹಾಸ

ಹರಿಶ್ಚಂದ್ರೋಪಾಖ್ಯಾನವು ವೇದ ಪುರಾಣ ಸಾಹಿತ್ಯಗಳಲ್ಲಿ ಪ್ರಸಿದ್ಧವಾದ ಪುರಾತನ ಕಥೆಯಾಗಿದೆ. ಆದರೆ, ವೈದಿಕ ಗ್ರಂಥಗಳಲ್ಲಿ ಮುಖ್ಯವಾಗಿ ಈ ಕಥೆಯ ಯಾಜ್ಞಿಕಾಂಶವೂ ಪೌರಾಣಿಕ ಗ್ರಂಥಗಲ್ಲಿ ಐತಿಹಾಸಿಕಾಂಶವೂ ಸಾಹಿತ್ಯ ಗ್ರಂಥಗಳಲ್ಲಿ ಧಾರ್ಮಿಕಾಂಶವೂ ಪ್ರತಿಪಾದಿತವಾಗಿವೆಯೆಂದು ಹೇಳಬಹುದು. ಇವೆಲ್ಲವೂ ಆಮೂಲಾಗ್ರವಾಗಿ ಅಖಂಡವಾಗಿ, ವಿಸ್ತಾರವಾಗಿ, ಯಾವ ಒಂದು ಕಡೆಯಲ್ಲಿಯೂ ದೊರೆಯುವುದಿಲ್ಲ.

ಹರಿಶ್ಚಂದ್ರನ ವೃತ್ತಾಂತ ಬರುವ ವೈದಿಕ ಗ್ರಂಥಗಳು ಮುಖ್ಯವಾಗಿ ಮೂರು :—

೧. ಐತರೇಯ ಬ್ರಾಹ್ಮಣ (ಪಂಚಿಕಾ ೭, ಅಧ್ಯಾಯ ೩.)

೨. ಸಾಂಖ್ಯಾಯನ ಶ್ರೌತಸೂತ್ರ (೧೫ ; ೧೭-೨೫.)

೩. ವೇದಾರ್ಥ ದೀಪಿಕಾ (ಋಗ್ವೇದ ಭಾಗ, ೧-೨೪.)

ಇವು ಪುರಾಣಗಳಿಗಿಂತಲೂ ಪ್ರಾಚೀನಗಳು. ಆದರೂ ಇವುಗಳಲ್ಲಿ ಬರುವ ಹರಿಶ್ಚಂದ್ರಕಥಾಂಶಗಳಿಗಿಂತ ಹಿಂದಿನ ವೃತ್ತಾಂತವನ್ನು, ಎಂದರೆ ಹರಿಶ್ಚಂದ್ರನ ತಂದೆತಾತಂದಿರ ಕಥೆಯನ್ನೂ, ವಸಿಷ್ಠ ವಿಶ್ವಾಮಿತ್ರರಿಗೆ ಬೆಳೆದುಬಂದ ವೈಷಮ್ಯವನ್ನೂ, ಪುರಾಣಗಳೇ ತಿಳಿಸುವುದರಿಂದ ಅವುಗಳ ವಿಷಯವನ್ನು ಮೊದಲು ತೆಗೆದುಕೊಂಡಿದೆ.

ಪುರಾಣಗಳನ್ನು ಮುಖ್ಯವಾಗಿ ಪ್ರಾಚೀನ ಅರ್ವಾಚೀನ ಎಂದು ಎರಡು ಭಾಗ ಮಾಡಬಹುದು.[14] ಪ್ರಾಚೀನವಾದ ವಾಯು ಬ್ರಹ್ಮಾಂಡ ಬ್ರಹ್ಮ ಪುರಾಣ ಹರಿವಂಶಗಳಲ್ಲಿ ಈ ಕಥೆಯು ವಿಸ್ತಾರವಾಗಿಯೂ, ಲಿಂಗ ಶಿವಪುರಾಣಗಳಲ್ಲಿ ಸಂಕ್ಷಿಪ್ತವಾಗಿಯೂ ಬಂದಿದೆ. ಇವುಗಳೆಲ್ಲಕ್ಕೂ ಸಮ್ಮತವಾದ ಪಾಠದಿಂದ ಫಲಿಸುವ ಕಥೆಯನ್ನು ಹೀಗೆ ಹೇಳಬಹುದು :—(ಅನುಬಂಧ I ನ್ನು ನೋಡಿ.)

---

[14] ಬ್ರಹ್ಮಾಂಡ ವಾಯು ಮಾತ್ಸ್ಯ ಪುರಾಣಗಳು ಪ್ರಾಚೀನತಮಗಳು ; ಬ್ರಹ್ಮವೈವರ್ತ ಶೈವ ವಾಮನ ಭಾಗವತ ಪುರಾಣಗಳು ಈಚಿನವು ; ಮಿಕ್ಕವು ಈ ಎರಡು ಗುಂಪುಗಳಿಗೂ ಮಧ್ಯೆ ಬರುತ್ತವೆ ; ಇವುಗಳಲ್ಲಿ ಮಾರ್ಕಂಡೇಯ ಬ್ರಹ್ಮ ಪುರಾಣಗಳು ಮೊದಲು ಬರುತ್ತವೆಂದು ಹೇಳಬಹುದು. ಪದ್ಮ ಪುರಾಣದ ಬಹುಭಾಗವು ಅರ್ವಾಚೀನ.—ಎನ್‌ಸೈಕ್ಲೋಪೀಡಿಯ ಆಫ್ ರಿಲಿಜನ್ ಅಂಡ್ ಎಥಿಕ್ಸ್, ಸಂಪುಟ ೧೦, ಪುಟ ೪೫೫.

ಅಯೋಧ್ಯೆಯ ರಾಜನಾದ ತ್ರಯ್ಯಾರುಣನಿಗೆ ಸತ್ಯವ್ರತನೆಂಬ ಮಗ ನಿದ್ದನು. ಅವನು, ಅಯೋಧ್ಯಾಪುರವಾಸಿಯೊಬ್ಬನ ಮನೆಯಲ್ಲಿ ಮದುವೆ ನಡೆಯುತ್ತಿರಲು, ಕಾಮಮೋಹಗಳಿಂದ ಪ್ರೇರಿತನಾಗಿ ಆ ಮದುವೆಯ ಹುಡುಗಿಯನ್ನು ಎತ್ತಿಕೊಂಡು ಹೊರಟುಹೋದನು. ತಂದೆಗೆ ಸಿಟ್ಟುಬಂದು ಈ ಅಧರ್ಮಾಚರಣೆ ಮಾಡಿದ ಮಗನನ್ನು ತ್ಯಾಗಮಾಡಿ, ಊರ ಹೊರಗೆ ಚಂಡಾಲರ ಜೊತೆಯಲ್ಲಿರುವಂತೆ ನೇಮಿಸಿದನು. ವಸಿಷ್ಠನು ಇದಕ್ಕೆ ಅಡ್ಡಿ ಮಾಡಲಿಲ್ಲ. ಇದಾದ ಕೆಲವು ಕಾಲದಮೇಲೆ ತ್ರಯ್ಯಾರುಣನು ಕಾಡಿಗೆ ಹೊರಟುಹೋದನು. ಅವನ ದೇಶದಲ್ಲಿ ಆ ಅಧರ್ಮದ ಫಲವಾಗಿ ದ್ವಾದಶ ವಾರ್ಷಿಕ ಕ್ಷಾಮವು ಪ್ರಾಪ್ತವಾಯಿತು.

ಇತ್ತ ವಿಶ್ವಾಮಿತ್ರನು ತಪಶ್ಚರ್ಯೆಗಾಗಿ ಹೊರಟು ತನ್ನ ಹೆಂಡತಿ ಮಕ್ಕಳನ್ನು ಅಯೋಧ್ಯೆಯ ಪ್ರಾಂತದಲ್ಲಿ ಬಿಟ್ಟಿದ್ದನು.[15] ಕ್ಷಾಮಕಾಲದಲ್ಲಿ ಹೊಟ್ಟೆಗಿಲ್ಲದೆ ವಿಶ್ವಾಮಿತ್ರನ ಹೆಂಡತಿಯು ತನ್ನ ಮಗ ಗಾಲವನನ್ನು ಮಾರು ವುದಕ್ಕೆ ತಂದಳು; ಮಿಕ್ಕವರಾದರೂ ಜೀವ ಹಿಡಿದುಕೊಂಡಿರಲಿ ಎಂಬುದು ಅವಳ ಆಸೆ. ಅದನ್ನು ಕಂಡು ಸತ್ಯವ್ರತನು ಅನುಕಂಪೆಯಿಂದಲೂ, ವಿಶ್ವಾಮಿತ್ರನನ್ನು ಸಂತೋಷಪಡಿಸುವುದಕ್ಕೋಸ್ಕರವೂ, ಗಾಲವನನ್ನು ಕರೆದುಕೊಂಡು ಬಂದು ವಿಶ್ವಾಮಿತ್ರನ ಸಂಸಾರವನ್ನು ತಾನೇ ರಕ್ಷಣ ಮಾಡುತ್ತಿದ್ದನು. ಮೃಗಗಳನ್ನು ಬೇಟೆಯಾಡಿ ತಂದು ಎಲ್ಲರಿಗೂ ಹೊಟ್ಟೆಗೆ ಹಾಕುತ್ತ ತಂದೆಯ ಆಜ್ಞೆಯಂತೆ ಹನ್ನೆರಡು ವರ್ಷ ದೀಕ್ಷೆಯಲ್ಲಿದ್ದನು.

ಅಯೋಧ್ಯೆಯನ್ನೂ ದೇಶಕೋಶ ಅಂತಃಪುರಗಳನ್ನೂ ವಸಿಷ್ಠನೇ ಕಾಪಾಡುತ್ತಿದ್ದನು. ಆದರೆ ಸತ್ಯವ್ರತನಿಗೆ ದಿನದಿನಕ್ಕೆ ವಸಿಷ್ಠನಮೇಲೆ ಕೋಪ ಹೆಚ್ಚಾಯಿತು. 'ಸಪ್ತಪದಿಯಾಗುವುದಕ್ಕಿಂತ ಮುಂಚೆ ಪಾಣಿಗ್ರಹಣ ಹೇಗೆ ಸಿದ್ಧವಾಗುತ್ತದೆ? ಈ ಧರ್ಮಸೂಕ್ಷ್ಮವನ್ನು ವಸಿಷ್ಠನಿಗೆ ಹೇಳಿಕೊಡಬೇಕೆ?

---

15 ಈತನು ಕನ್ಯಾಕುಬ್ಜದ ರಾಜನಾದ ಗಾಧಿಯ ಮಗ. (ಗಾಧಿಯ ತಂದೆ ಕುಶಿಕ, ತಾಯಿ ಪುರುಕುತ್ಸಿ—ಅಯೋಧ್ಯೆಯ ದೊರೆಯಾಗಿದ್ದ ಪುರುಕುತ್ಸರಾಜನ ಮನೆತನದಲ್ಲಿ ಹುಟ್ಟಿದವಳು.) ವಿಶ್ವಾಮಿತ್ರನಿಗೆ ಮೊದಲಿದ್ದ ಹೆಸರು ವಿಶ್ವರಥ. ತಪಶ್ಚರ್ಯೆಯಿಂದ ಬ್ರಹ್ಮರ್ಷಿಯಾಗಿ ಆತನು ವಿಶ್ವಾಮಿತ್ರನೆಂಬ ಹೆಸರನ್ನು ಪಡೆದನು.

ಅವನು ಮನಸ್ಸುಮಾಡಿದ್ದರೆ ನನ್ನನ್ನು ಬಿಡಿಸಿಕೊಳ್ಳಬಹುದಾಗಿತ್ತು. ಆದರೆ ಏನು ಕಾರಣದಿಂದಲೋ ಅವನು ನನ್ನನ್ನು ಬಿಡಿಸಿಕೊಳ್ಳಲಿಲ್ಲ' ಎಂದು ಸತ್ಯವ್ರತನಿಗೆ ಸಿಟ್ಟು. 'ತಂದೆಗೆ ಕೋಪವನ್ನುಂಟುಮಾಡಿದ ಆ ತಪ್ಪಿಗಾಗಿ ಈ ದ್ವಾದಶ ವಾರ್ಷಿಕ ಕ್ಷಾಮ ಬಂದಿದೆ. ಈ ಕಾಲದಲ್ಲಿ ದೀಕ್ಷೆಯಲ್ಲಿದ್ದು ಕಷ್ಟಪಟ್ಟರೆ ದೋಷ ನಿವಾರಣೆಯಾಗುತ್ತದೆ. ಆಮೇಲೆ (ಅವನಿಗೋ ಅವನ ಮಗನಿಗೋ) ಪಟ್ಟಾಭಿಷೇಕ ಮಾಡೋಣ' ಎಂದು ವಸಿಷ್ಠನು ಯೋಚಿಸಿದ್ದನು. ಅದು ಸತ್ಯವ್ರತನಿಗೆ ತಿಳಿಯದು. ಅಂತು ಹನ್ನೆರಡು ವರ್ಷ ವ್ರತದಲ್ಲಿರುತ್ತ, ಒಂದು ದಿನ ಮತ್ತಾವ ಮಾಂಸವೂ ದೊರಕದೆ ಹೋಗಲು ಸತ್ಯವ್ರತನು, ಕೋಪ ಮೋಹ ಆಯಾಸ ಹಸಿವು ಇವುಗಳಿಂದ ಪೀಡಿತನಾಗಿ, ದಸ್ಯುಧರ್ಮವನ್ನು ಅನುಸರಿಸಿ, ವಸಿಷ್ಠನ ಗೋವನ್ನು ಹಿಡಿದು ಕೊಂದು ತಾನೂ ವಿಶ್ವಾಮಿತ್ರನ ಕುಟುಂಬದವರೂ ಹೊಟ್ಟೆತುಂಬಿಕೊಂಡರು. ಇದನ್ನು ಕೇಳಿ ವಸಿಷ್ಠನು ಕೋಪಗೊಂಡು ಸತ್ಯವ್ರತನನ್ನು 'ತ್ರಿಶಂಕು'ವೆಂದು ಕರೆದನು. (ತ್ರಿಶಂಕು=ಮೂರು ಪಾಪಗಳನ್ನು ಮಾಡಿದವನು.)

ವಿಶ್ವಾಮಿತ್ರನು ತನ್ನ ತಪಸ್ಸನ್ನು ಮುಗಿಸಿಕೊಂಡು ಬಂದು ಸತ್ಯವ್ರತನು ಮಾಡಿದ ಉಪಕಾರಕ್ಕೆ ಸಂತೋಷಪಟ್ಟು ಅವನನ್ನು ರಾಜ್ಯದಲ್ಲಿ ಪ್ರತಿಷ್ಠಿಸಿ ವಸಿಷ್ಠನ ಎದುರಿಗೇ ಅವನಿಂದ ಯಾಗಮಾಡಿಸಿ ಅವನನ್ನು ಸ್ವರ್ಗಕ್ಕೆ ಏರಿಸಿದನು. (ಹರಿಶ್ಚಂದ್ರಕಾವ್ಯ, VIII. ೩೯.)

ಈ ತ್ರಿಶಂಕುವಿನ ಮಗನೇ ಹರಿಶ್ಚಂದ್ರ; ಅವನ ಮಗ ರೋಹಿತ.

ರೋಹಿತನು ಹುಟ್ಟಿ ಬೆಳೆದ ವಿವರವನ್ನು ಐತರೇಯ ಬ್ರಾಹ್ಮಣದಿಂದ[16] ತಿಳಿಯಬಹುದು. ಅಲ್ಲಿನ ವೃತ್ತಾಂತವು, ಸಂಕ್ಷೇಪವಾಗಿ, ಹೀಗಿದೆ.—(ಅನುಬಂಧ II ನ್ನು ನೋಡಿ).

[17]ಹರಿಶ್ಚಂದ್ರನಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಅವನು, ನಾರದರ ಮಾತಿನಂತೆ, ವರುಣನನ್ನು ಪ್ರಾರ್ಥಿಸಿ ತನಗೆ ಗಂಡುಮಗುವಾದರೆ ಅದನ್ನು

---

[16] ಐತರೇಯ ಬ್ರಾಹ್ಮಣಕ್ಕೂ ಸಾಂಖ್ಯಾಯನ ಶ್ರೌತಸೂತ್ರಕ್ಕೂ (Max Müller *History of Ancient Sanskrit Literature*—Appendix) ಈ ಭಾಗದಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಇವೆರಡರ ವೃತ್ತಾಂತವನ್ನೇ ವೇದಾರ್ಥದೀಪಿಕೆಯು ಸಂಕ್ಷೇಪವಾಗಿ ಹೇಳಿದೆ.

[17] ಐತರೇಯ ಬ್ರಾಹ್ಮಣ, ಪಂಚಿಕಾ vii, ಅಧ್ಯಾಯ ೩ ; ಹ. ಕಾ. ಸಂಗ್ರಹ, ೩, ೭-೮.

ವರುಣನಿಗೆ ಬಲಿಕೊಡುವುದಾಗಿ ಹರಕೆ ಕಟ್ಟಿಕೊಂಡನು. ಮಗುವಾಯಿತು. ಅವನಿಗೆ ರೋಹಿತನೆಂಬ ಹೆಸರಿಟ್ಟರು. ಆದರೆ, ಕೂಡಲೆ ಅವನನ್ನು ಹರಕೆಯಂತೆ ಬಲಿಕೊಡಲಿಲ್ಲ. ಹತ್ತುದಿನ ಕಳೆಯಲಿ, ಹಲ್ಲು ಹುಟ್ಟಲಿ, ಹಲ್ಲು ಬೀಳಲಿ, ಬಿದ್ದ ಹಲ್ಲು ತಿರುಗಿ ಹುಟ್ಟಲಿ, ಅವನು ಬಿಲ್ಲನ್ನು ಹಿಡಿಯುವಂತಾಗಲಿ ಎಂದು ಕಾಲಕಳೆದನು. ಇಷ್ಟು ದೊಡ್ಡವನಾದಮೇಲೆ ಅವನನ್ನು ಹರಿಶ್ಚಂದ್ರನು ಬಲಿಕೊಡಬೇಕೆನ್ನಲು ರೋಹಿತನು ಒಪ್ಪದೆ ಕಾಡಿಗೆ ಓಡಿಹೋದನು.[18] ಆದ್ದರಿಂದ ವರುಣನು ಹರಿಶ್ಚಂದ್ರನನ್ನೇ ಹಿಡಿದುಕೊಂಡನು. ಅವನಿಗೆ ಜಲೋದರ ರೋಗ ಬಂತು.

ಇತ್ತ ರೋಹಿತನು ಕಾಡಿನಲ್ಲಿ ಅಲೆಯುತ್ತ ಒಂದು ವರ್ಷವಾದಮೇಲೆ ತಮ್ಮ ತಂದೆಗೆ ರೋಗ ಬಂದ ಸಂಗತಿಯನ್ನು ತಿಳಿದು ಊರಿಗೆ ಹೊರಟನು. ಆದರೆ ಇಂದ್ರನು ಅವನನ್ನು ಕಂಡು ಇನ್ನೂ ಸಂಚಾರದಲ್ಲಿರುವಂತೆ ಪ್ರೇರಿಸಿದನು. ಮತ್ತೊಂದು ವರ್ಷದಮೇಲೆ ತಿರುಗಿ ಊರಿನ ಕಡೆಗೆ ಹೊರಡಲು ಮತ್ತೆ ಹಾಗೇ ಆಯಿತು. ಹೀಗೆ ಕಾಡಿನಲ್ಲಿ ಆರು ವರ್ಷ ಅಲೆಯುತ್ತಿದ್ದು, ಆಮೇಲೆ ಅಜೀಗರ್ತನೆಂಬ[19] ಋಷಿಯನ್ನು ಕಂಡನು. ಅವನಿಗೆ ಶುನಃಪುಚ್ಛ, ಶುನಶ್ಶೇಪ, ಶುನೋಲಾಂಗೂಲ ಎಂಬ ಮೂವರು ಮಕ್ಕಳಿದ್ದರು. ಅವರಲ್ಲಿ ಒಬ್ಬನನ್ನು ತನಗೆ ಮಾರಬೇಕೆಂದೂ ಪ್ರತಿಯಾಗಿ ತಾನು ನೂರು ಹಸುಗಳನ್ನು ಕೊಡುವೆನೆಂದೂ ರೋಹಿತನು ಕೇಳಿದನು. ಹಿರಿಯ ಮಗನನ್ನು ಕೊಡಲು ತಂದೆ ಒಪ್ಪಲಿಲ್ಲ; ಕಿರಿಯ ಮಗನನ್ನು ಕೊಡಲು ತಾಯಿ ಒಪ್ಪಲಿಲ್ಲ. ಉಳಿದವನು ನಿರ್ಭಾಗ್ಯ ಶುನಶ್ಶೇಪ. ಅವನನ್ನು ನೂರು ಹಸುಗಳಿಗೆ ಕೊಂಡು ತಂದು ರೋಹಿತನು ತನ್ನ ಬದಲಾಗಿ ತನ್ನ ತಂದೆಗೆ ಕೊಟ್ಟನು. ವರುಣನೂ ಒಪ್ಪಿಕೊಂಡನು. ಆಗ ನಡೆದ ಯಾಗದಲ್ಲಿ ಶುನಶ್ಶೇಪನೇ ಪಶುವಾದನು. ಈ ಯಾಗದಲ್ಲಿ ವಿಶ್ವಾಮಿತ್ರನು ಹೋತೃವೂ, ಜಮದಗ್ನಿಯು ಅಧ್ವರ್ಯುವೂ,

---

[18] ಹರಿಶ್ಚಂದ್ರನೇ ಕಾಡಿನಲ್ಲಿ ಮಗನನ್ನು ಬಚ್ಚಿಟ್ಟನೆಂದು ಹರಿಶ್ಚಂದ್ರಕಾವ್ಯದಲ್ಲಿ ಹೇಳಿದೆ.

[19] ರಾಮಾಯಣದಲ್ಲಿ 'ಋಚೀಕ' ಎಂದಿದೆ. ಋಚೀಕ ಎಂಬ ಶಬ್ದವು ಪ್ರಾಕೃತದಲ್ಲಿ 'ಅಜೀಗ' ಎಂದಾಗುತ್ತದೆ. ಆದ್ದರಿಂದ ಇವೆರಡು ಹೆಸರುಗಳೂ ಒಂದೇ ಆಗಿರಬಹುದು.

ಆಯಾಸ್ಯನು ಉದ್ಗಾತೃವೂ, ವಸಿಷ್ಠನು ಬ್ರಹ್ಮನೂ ಆಗಿದ್ದರು. ಆದರೆ ಪಶುವಾದ ಶುನಶ್ಶೇಪನನ್ನು ಯೂಪಸ್ತಂಬಕ್ಕೆ ಬಂಧಿಸಲು ಯಾರೂ ಒಪ್ಪಲಿಲ್ಲ. ಆದ್ದರಿಂದ ಅವನನ್ನು ಮಾರಿದ ತಂದೆಯೇ ಇನ್ನೊಂದು ನೂರು ಹಸುಗಳನ್ನು ಕೊಟ್ಟರೆ ತಾನು ಬಂಧಿಸುವುದಾಗಿ ಮುಂದೆ ಬಂದನು. ಅವನನ್ನು ಕೊಲ್ಲುವುದಕ್ಕೂ ಹೀಗೇ ಆಯಿತು. ಮತ್ತೊಂದು ನೂರು ಹಸುಗಳನ್ನು ತೆಗೆದುಕೊಂಡು ಅಜೀಗರ್ತನೇ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನು ಕೊಲ್ಲುವುದಾಗಿ ಒಪ್ಪಿಕೊಂಡು, ಕತ್ತಿಯನ್ನು ಹರಿತಮಾಡಿ ಮುಂದುವರಿದನು. ಆಗ ಶುನಶ್ಶೇಪನು ಪ್ರಜಾಪತಿ, ಅಗ್ನಿ, ಸವಿತೃ, ವರುಣ, ವಿಶ್ವೇದೇವತೆಗಳು, ಇಂದ್ರ, ಉಷಸ್ಸು—ಈ ದೇವತೆಗಳನ್ನು ಪ್ರಾರ್ಥಿಸಿದನು. ಹೀಗೆ ಸ್ತೋತ್ರ ಮಾಡುತ್ತ ಮಾಡುತ್ತ ಒಂದು ಕಡೆ ಅವನ ಕಟ್ಟುಗಳೂ ಸಡಿಲಿದುವು, ಮತ್ತೊಂದು ಕಡೆ ಹರಿಶ್ಚಂದ್ರನ ಹೊಟ್ಟೆಯೂ ತೆಳ್ಳಗಾಗುತ್ತ ಬಂದು ರೋಗವಾಸಿಯಾಯಿತು.

ಯಾಗ ಮುಗಿದು ಅವಭೃಥಸ್ನಾನವಾದಮೇಲೆ ಶುನಶ್ಶೇಪನು ವಿಶ್ವಾಮಿತ್ರನ ತೊಡೆಯ ಮೇಲೆ ಹೋಗಿ ಕುಳಿತುಬಿಟ್ಟನು. ಅದನ್ನು ನೋಡಿ ಅಜೀಗರ್ತನು ತನ್ನ ಮಗನನ್ನು ಕಳುಹಿಸಿಕೊಡಿರೆಂದು ವಿಶ್ವಾಮಿತ್ರನನ್ನು ಕೇಳಿದನು. ಆದರೆ ವಿಶ್ವಾಮಿತ್ರನು ಒಪ್ಪಲಿಲ್ಲ. "ದೇವತೆಗಳು ಇವನನ್ನು ನನಗೆ ಕೊಟ್ಟಿದ್ದಾರೆ; ಇವನು ನನ್ನ ಮಗ 'ದೇವರಾತ'" ಎಂದು ಉತ್ತರ ಕೊಟ್ಟನು. ಶುನಶ್ಶೇಪನು 'ಕತ್ತಿ ಹಿಡಿದು, ಶೂದ್ರನೂ ಮಾಡದ ಕೆಲಸವನ್ನು ಮಾಡಲು ಹೊರಟಿದ್ದೀಯೆ; ನನಗಿಂತ ಮುನ್ನೂರು ಹಸುಗಳೇ ನಿನಗೆ ಹೆಚ್ಚಾದುವಲ್ಲವೆ?' ಎಂದು ಮೂದಲಿಸಿದನು. ಆಗ ತಂದೆಯು ತಾನು ಮಾಡಿದ ಪಾಪಕರ್ಮಕ್ಕೆ ಅನುತಾಪಪಟ್ಟು 'ನೂರು ಹಸುಗಳನ್ನು ಕೊಟ್ಟು ಬಿಡುತ್ತೇನೆ, ಬಾ' ಎಂದು ಮಗನನ್ನು ಕೇಳಿಕೊಂಡನು. ಆದರೆ ಶುನಶ್ಶೇಪನು ಒಪ್ಪದೆ 'ಒಂದು ಸಾರಿ ಪಾಪಕಾರ್ಯಮಾಡಿದವನು ಮತ್ತೊಂದು ಸಾರಿಯೂ ಮಾಡಬಹುದು' ಎಂದು ಆಕ್ಷೇಪಿಸಿದನು. ವಿಶ್ವಾಮಿತ್ರನೂ ಅವನ ಮಾತನ್ನು ಅನುಮೋದಿಸಿ 'ನಿನ್ನನ್ನು ಕೊಲ್ಲುವುದಕ್ಕೆ ಬಂದಾಗ ಅವನು ಎಷ್ಟು ಭಯಂಕರನಾಗಿದ್ದನಪ್ಪ! ಪುನಃ ಅವನ ಮಗನಾಗಬೇಡ ಕಂಡೆಯಾ! ನಮ್ಮ

ವಂಶಕ್ಕೆ ಬಂದುಬಿಡು ; ನನ್ನ ಹಿರಿಯ ಮಗನಾಗು ' ಎಂದು, ತನಗೆ ನೂರು ಜನ ಮಕ್ಕಳಿದ್ದರೂ, ಅವನನ್ನು ಅವರೆಲ್ಲರಿಗೂ ಜ್ಯೇಷ್ಠನಾಗಿ ಪರಿಗ್ರಹಿಸಿದನು.[20]

ಈ ಶುನಶ್ಶೇಪನ ನರಮೇಧವು ನಡೆದಮೇಲೆ ಹರಿಶ್ಚಂದ್ರನು ರಾಜಸೂಯ ಯಾಗಮಾಡಿ ವಿಶ್ವಾಮಿತ್ರನ ಕೈಗೆ ಸಿಕ್ಕಿ ನರಳಿದನೆಂದು ತೋರುತ್ತದೆ.[21] ಈ ಭಾಗವು, ಎಂದರೆ ಹರಿಶ್ಚಂದ್ರನು ಸತ್ಯಕ್ಕಾಗಿ ದೇಶಕೋಶಗಳನ್ನು ಕಳೆದುಕೊಂಡು ಕಾಶಿಗೆ ಹೋಗಿ ಕಷ್ಟಪಟ್ಟದ್ದು ಮೇಲೆ ಹೇಳಿದ ವಾಯುಪುರಾಣ ಮುಂತಾದವುಗಳಲ್ಲಿ ಕಂಡುಬರುವುದಿಲ್ಲ. ಅವುಗಳಿಗಿಂತ ಈಚಿನವುಗಳೆನಿಸಿದ ಕೆಲವು ಪುರಾಣಗಳಲ್ಲಿಯೂ ಚಂಡಕೌಶಿಕ ಮುಂತಾದ ಕೆಲವು ಸಾಹಿತ್ಯದ ಗ್ರಂಥಗಳಲ್ಲಿಯೂ ಪ್ರತಿಪಾದಿತವಾಗಿದೆ. ಈಚಿನ ಪುರಾಣಗಳಲ್ಲಿ, ಈ ದೃಷ್ಟಿಯಿಂದ ಮಾರ್ಕಂಡೇಯ ಪುರಾಣ ದೇವೀಭಾಗವತಗಳು ಮುಖ್ಯವಾಗಿವೆ. ದೇವೀಭಾಗವತದಲ್ಲಿ[22] ದೇವೀ ಪ್ರಾಶಸ್ತ್ಯವನ್ನು ಹೇಳುವ ಭಾಗವನ್ನು ಬಿಟ್ಟರೆ ಬಹುಮಟ್ಟಿಗೆ ಹರಿಶ್ಚಂದ್ರೋಪಾಖ್ಯಾನವು, ಅದರಲ್ಲಿಯೂ ಮಾರ್ಕಂಡೇಯದಲ್ಲಿಯೂ ಒಂದೇ ಎಂದು ಹೇಳಬಹುದು. ಇವೆರಡರಲ್ಲಿಯೂ ಹೋಲತಿಯಿರುವ ವೃತ್ತಾಂತವಿಲ್ಲ. ದೇವೀಭಾಗವತದಲ್ಲಿ ವಿಶ್ವಾಮಿತ್ರನು ವಶಮಾಡಿಕೊಳ್ಳ

---

[20] ಈ ಭಾಗವು ಸ್ವಲ್ಪ ಈಚಿನದೆಂದು ಡಾ || ಕೀತ್ ಅವರು ಅಭಿಪ್ರಾಯಪಡುತ್ತಾರೆ. (ಇಂಗ್ಲೆಂಡಿನ ರಾಯಲ್ ಏಷಿಯಾಟಿಕ್ ಸೊಸೈಟಿ ಪತ್ರಿಕೆ, ೧೯೧೧, ಪುಟ ೯೮೮.) ಆದರೆ ಪುರಾಣಗಳಿಗಿಂತಲೂ ಹಳೆಯದಾಗಿರಬೇಕೆಂಬುದು ಅದರ ಭಾಷೆಯಿಂದಲೇ ಗೊತ್ತಾಗುತ್ತದೆ.

[21] ಐತರೇಯ ಬ್ರಾಹ್ಮಣದ ಪ್ರಕಾರ ರೋಹಿತಾಶ್ವನು ಕಾಡಿನಿಂದ ಹಿಂತಿರುಗಿ ಮನೆಗೆ ಬಂದಾಗ ಅವನಿಗೆ ಹದಿನೆಂಟು ಇಪ್ಪತ್ತು ವರ್ಷವಾದರೂ ಆಗಿರಬೇಕು. ಆದರೆ ಕಾವ್ಯದಲ್ಲಿ, ಹರಿಶ್ಚಂದ್ರನು ರಾಜ್ಯವನ್ನು ಬಿಟ್ಟು ಕಾಶಿಗೆ ಹೋದಾಗ ಚಿಕ್ಕ ಹುಡುಗನಂತೆ ವರ್ಣಿತನಾಗಿದ್ದಾನೆ. ಈ ಅಂಶಗಳಿಗೆ ಸಾಮಂಜಸ್ಯವನ್ನು ಕಲ್ಪಿಸುವುದು ಕಷ್ಟ.

[22] ಶ್ರೀಮದ್ಭಾಗವತ ನವಮಸ್ಕಂಧ (ಏಳನೆಯ ಅಧ್ಯಾಯ)ದಲ್ಲಿಯೂ ದೇವೀಭಾಗವತ (ಏಳನೆಯ ಸ್ಕಂಧ)ದಲ್ಲಿಯೂ ತ್ರಯ್ಯಾರುಣನ ವೃತ್ತಾಂತದಿಂದ ಮೊದಲು ಮಾಡಿಕೊಂಡು ಹರಿಶ್ಚಂದ್ರನಿಗೆ ಸಂಬಂಧಪಟ್ಟ ಕಥಾಂಶಗಳೆಲ್ಲಾ ಸಂಕ್ಷಿಪ್ತವಾಗಿ ಬಂದಿವೆ. ಶ್ರೀಮದ್ಭಾಗವತದಲ್ಲಿ ಹರಿಶ್ಚಂದ್ರನು ಸತ್ಯಕ್ಕಾಗಿ ಪಟ್ಟ ಶ್ರಮದ ವಿಸ್ತೃತವಿವರಣೆಯಿಲ್ಲ. ಅದು ಎರಡು ಮೂರು ವಾಕ್ಯಗಳಲ್ಲಿ ಮುಗಿದುಹೋಗಿದೆ.

ಬೇಕೆಂದಿದ್ದ ಒಬ್ಬ ಸ್ತ್ರೀಯೂ, ಮಾರ್ಕಂಡೇಯದಲ್ಲಿ ಮೂವರು ವಿದ್ಯಾಧಿ ದೇವತೆಗಳೂ ಬರುತ್ತಾರೆ. (ಕೃಷ್ಣರಾಜ ವಾಣೀವಿಲಾಸ) ಭಾರತದ ಕನ್ನಡ ಟೀಕಿನಲ್ಲಿ ವನಪರ್ವದೊಳಗೆ ರಾಮೋಪಾಖ್ಯಾನಕ್ಕೂ ಸಾವಿತ್ರಿಯ ಉಪಾಖ್ಯಾನಕ್ಕೂ ಮಧ್ಯೆ ಹರಿಶ್ಚಂದ್ರನ ಉಪಾಖ್ಯಾನವು ವಿಸ್ತಾರವಾಗಿ ಪ್ರತಿಪಾದಿತವಾಗಿದೆ. ಆದರೆ ಸಂಸ್ಕೃತಭಾರತದ ಉತ್ತರ ದಕ್ಷಿಣ ಪಾಠವೊಂದರಲ್ಲೂ ಇದು ಈ ಭಾಗದಲ್ಲಿ ದೊರೆಯದಿರುವುದರಿಂದಲೂ ನಳೋಪಾಖ್ಯಾನದ ಮಧ್ಯೆ ಕೇವಲ ಸಂಕ್ಷಿಪ್ತವಾಗಿ ದೊರೆಯುವುದರಿಂದಲೂ ಟೀಕಿನಲ್ಲಿ ಕಂಡುಬರುವ ಈ ಕಥೆಯು ಪ್ರಕ್ಷಿಪ್ತವೆಂದು ಹೇಳಬೇಕು. ಆದರೂ ರಾಘವಾಂಕನ ಹರಿಶ್ಚಂದ್ರಕಾವ್ಯಕ್ಕೆ ಗ್ರಂಥಸ್ಥವೋ ಕಂಠಸ್ಥವೋ ಆಗಿದ್ದ ಇಂಥ ಒಂದು ವಿಸ್ತೃತಪಾಠವೇ ಮೂಲವಾಗಿರುವಂತೆ ತೋರುತ್ತದೆ.[28]

ಮೇಲಿನ ವೈದಿಕ ಪೌರಾಣಿಕ ಗ್ರಂಥಗಳನ್ನು ನೋಡಿದರೆ ಹರಿಶ್ಚಂದ್ರನು, ಐತರೇಯ ಬ್ರಾಹ್ಮಣದ ಕಥೆಯಂತೆ, ಸತ್ಯಸಂಧನೇನಲ್ಲ; ಮಗನ ಮೇಲಣ ಅಭಿಮಾನದಿಂದ ವರುಣನನ್ನು ಮೋಸಗೊಳಿಸಲೆಳಸಿ, ರೋಗತಂದುಕೊಂಡು, ಜೀವಕ್ಕೆ ಜೀವ ಕೊಡುವುದಕ್ಕೆ ಹೋಗಿ, ಕೊನೆಗೆ ಯಾವ ನಷ್ಟಕ್ಕೂ ಗುರಿಯಾಗದೆ ಗುರುಹಿರಿಯರ ಪ್ರಭಾವದಿಂದಲೂ, ದೇವತೆಗಳ ಕೃಪೆಯಿಂದಲೂ, ತನ್ನನ್ನೂ ಮಗನನ್ನೂ ಉಳಿಸಿಕೊಂಡವನು. (ಇದು ಹರಿಶ್ಚಂದ್ರಕಾವ್ಯದಲ್ಲಿಯೂ ಆನುಷಂಗಿಕವಾಗಿ ಬಂದಿದೆ.—ಸಂಗ್ರಹ, ಅಧ್ಯಾಯ ೨, ಪದ್ಯ ೭-೮ ; ಅಧ್ಯಾಯ ೮, ಪದ್ಯ ೪೨) ಪ್ರಾಚೀನ ಪುರಾಣಗಳಲ್ಲಿ 'ಸತ್ಯವ್ರತ'ನು ಹರಿಶ್ಚಂದ್ರನಲ್ಲ ಅವನ ತಂದೆ; ಹರಿಶ್ಚಂದ್ರನ ಪ್ರಸಿದ್ಧಿಯೆಲ್ಲಾ ಅವನು ಮಾಡಿದ ರಾಜಸೂಯ ಯಾಗಕ್ಕೆ, (ಮಹಾಭಾರತ, ಸಭಾ. XII, ೧೦-೨೫). ಅವನ

[28] ಇದು ಯಾವುದೆಂದು ನಿರ್ಧರವಾಗಿ ಗೊತ್ತಾಗುವಂತಿಲ್ಲ. ಯಾವುದಾದರೂ ಒಂದು ಶೈವಪುರಾಣವಾಗಿರಬಹುದೆಂದು ಊಹಿಸುವುದು ಸ್ವಾಭಾವಿಕವಾಗಿದೆ. ಆದರೆ ಶಿವಪುರಾಣದಲ್ಲಿ ಈ ಭಾಗದ ವಿಸ್ತಾರವಿಲ್ಲ. ಸ್ಕಾಂದ ಪುರಾಣಾಂತರ್ಗತವೆಂದು ಹೇಳಿಕೊಳ್ಳುವ ಒಂದು ಸಂಸ್ಕೃತ "ಹರಿಶ್ಚಂದ್ರೋಪಾಖ್ಯಾನ"ವೇ (ಸತ್ಸಂಪ್ರದಾಯ ಕಳಾನಿಧಿ ಮುದ್ರಾಕ್ಷರಶಾಲಾ, ಬೆಂಗಳೂರು, ೧೮೮೩) ಈ ಭಾಗವನ್ನು ಬಹುವಾಗಿ—ಅರವತ್ತು ಅಧ್ಯಾಯಗಳಲ್ಲಿ—ವಿಸ್ತರಿಸಿರುವ ಗ್ರಂಥ. ಆದರೆ ನಾವು ನೋಡಿರುವ ಸ್ಕಾಂದ ಪುರಾಣದಲ್ಲಿ (ವೆಂಕಟೇಶ್ವರ ಪ್ರೆಸ್, ಬೊಂಬಾಯಿ) ಇದು ಅಂತರ್ಗತವಾಗಿ ದೊರೆಯುವುದಿಲ್ಲ.

ಸತ್ಯಸಂಧತೆಯು ಪ್ರಕಾಶಕ್ಕೆ ಬಂದಿರುವುದು ಮಾರ್ಕಂಡೇಯ ಮುಂತಾದ ಈಚಿನ ಪುರಾಣಗಳಲ್ಲಿ; ಮತ್ತು ವಿಶ್ವಾಮಿತ್ರನ ಮೂಲಕ. ಆದ್ದರಿಂದ ಇವುಗಳ ಆಧಾರದ ಮೇಲೆ ಹುಟ್ಟಿದ ಸಾಹಿತ್ಯ ಗ್ರಂಥಗಳಲ್ಲಿ ಹರಿಶ್ಚಂದ್ರ, ಅವನ ಸತ್ಯ, ಅದನ್ನು ಉಳಿಸಿಕೊಳ್ಳುವುದಕ್ಕೆ ಹೋಗಿ ಅವನು ಪಟ್ಟ ಕಷ್ಟ, ಆ ಕಷ್ಟಗಳಿಗೆ ಕಾರಣನಾದ ವಿಶ್ವಾಮಿತ್ರ, ಅವುಗಳಿಗೆ ಮೂಲವಾದ ಅವನ ಕೋಪ ಮುಂತಾದವುಗಳಿಗೆ ಪ್ರಾಧಾನ್ಯವಿದೆ. ಹರಿಶ್ಚಂದ್ರನ ಸತ್ಯಸಂಧತೆಯ ಘನತೆ ಪರಿಮಾಣಗಳನ್ನು ಉಜ್ಜ್ವಲಮಾಡಿ ತೋರಿಸಬೇಕೆಂಬ ಉತ್ಸಾಹಕ್ಕೆ ಅನುರೂಪವಾಗಿ ಕಥಾವಿಸ್ತಾರ, ಹರಿಶ್ಚಂದ್ರನ ಕಷ್ಟ, ವಿಶ್ವಾಮಿತ್ರನ ಕ್ರೌರ್ಯ ಮುಂತಾದವು ಬೆಳೆಯುತ್ತ ಹೋಗಿವೆ. ಹರಿಶ್ಚಂದ್ರನು ರಾಜ್ಯವನ್ನು ಬಿಟ್ಟು, ವಿಶ್ವಾಮಿತ್ರನಿಗೆ ಕೊಡುತ್ತೇನೆಂದು ಒಪ್ಪಿದ ದಕ್ಷಿಣೆಯ ಸಂಪಾದನೆಗೋಸ್ಕರ ಕಾಶಿಗೆ ಹೋಗಿ ಅಲ್ಲಿ ತನ್ನ ಹೆಂಡತಿ ಮಕ್ಕಳನ್ನು ಒಬ್ಬ ಬ್ರಾಹ್ಮಣನಿಗೆ ಮಾರಿ ತನ್ನನ್ನು ಒಬ್ಬ ಚಂಡಾಲನಿಗೆ ಮಾರಿಕೊಂಡು ಕೊನೆಗೆ ಶ್ಮಶಾನದಲ್ಲಿ ಹೆಂಡತಿ ಮಕ್ಕಳೊಡನೆ ಸೇರಿದ್ದು ಎಲ್ಲಾ ಗ್ರಂಥಗಳಿಗೂ ಸಾಮಾನ್ಯಾಂಶವಾದರೂ, ವಿಶ್ವಾಮಿತ್ರನ ಕ್ರೌರ್ಯವನ್ನೂ ಹರಿಶ್ಚಂದ್ರನ ಕಷ್ಟವನ್ನೂ ವ್ಯಕ್ತಗೊಳಿಸುವ ಇತರ ಸಂಗತಿಗಳು ಮಾರ್ಕಂಡೇಯ ಪುರಾಣದಿಂದ ಹರಿಶ್ಚಂದ್ರ ಕಾವ್ಯದವರೆಗೆ, ಹರಿಶ್ಚಂದ್ರನ ಜಲೋದರದಂತೆಯೇ ಕ್ರಮಕ್ರಮವಾಗಿ ಬೃಹದಾಕಾರವನ್ನು ತಾಳಿಕೊಂಡು ಬಂದಿವೆ. ಹೀಗೆ ಮಾರ್ಕಂಡೇಯ ಪುರಾಣದಲ್ಲಿ ರಾಜಸೂಯ ಯಾಗದ ಭೂರಿದಕ್ಷಿಣೆಯಾಗಿದ್ದದ್ದು, ಚಂಡಕೌಶಿಕದಲ್ಲಿ ಲಕ್ಷವರಹವಾಗಿ, ಹರಿಶ್ಚಂದ್ರಕಾವ್ಯದಲ್ಲಿ ಆನೆಯ ಮೇಲೆ ನಿಂತು ಕವಡೆ ಚಿಮ್ಮಿದರೆ ಆಗುವಷ್ಟು ಎತ್ತರದ ಧನರಾಶಿಯಾಗಿದೆ. ದೇವೀಭಾಗವತದಲ್ಲಿ ವಿಶ್ವಾಮಿತ್ರನಿಂದ ಕಾಮಿತಳಾಗಿದ್ದ ಒಬ್ಬಳು ಸುಂದರಿಯು[24] ಮಾರ್ಕಂಡೇಯದಲ್ಲಿಯೂ ಚಂಡಕೌಶಿಕ

---

[24] ನಾರ್ಯುವಾಚ—

ರಾಜನ್ ಮಾಂ ಬಾಧತೇತ್ಯರ್ಥಂ ವಿಶ್ವಾಮಿತ್ರೋ ಮಹಾಮುನಿಃ |
ತಪಃ ಕರೋತಿ ಯದ್ಘೋರಂ ಮದರ್ಥಂ ಕೌಶಿಕೋ ವನೇ ||
ತೇನಾಹಂ ದುಃಖಿತಾ ರಾಜನ್ ವಿಷಯೇ ತವ ಸುವ್ರತ |
ವಿದ್ಧಿ ಮಾಂ ಕಮನಾಂ ಕಾಂತಾಂ ಪೀಡಿತಾಂ ಮುನಿನಾ ಭೃಶಂ ||

(ದೇವೀಭಾಗವತ, ಸ್ಕಂಧ VII, ಅಧ್ಯಾಯ ೧೮, ಶ್ಲೋ. ೭-೮)

ದಲ್ಲಿಯೂ ವಿದ್ಯಾಧಿದೇವತೆಗಳಾಗಿ ಹರಿಶ್ಚಂದ್ರನಿಂದ ಬಿಡಿಸಲ್ಪಟ್ಟು, ಈ ಕಾವ್ಯದಲ್ಲಿ 'ಗಾಣರಾಣಿ' ಯರಾದ ಹೊಲತಿಯರಾಗಿ ಹರಿಶ್ಚಂದ್ರನನ್ನು ಪೀಡಿಸುತ್ತಾರೆ; ಕೌಶಿಕನಿಗೆ ಸಹಾಯಕನಾಗಿ ಅವನಿಗಿಂತ ಕ್ರೂರನಾದ ಒಬ್ಬ ಶಿಷ್ಯ ಹುಟ್ಟಿಕೊಳ್ಳುತ್ತಾನೆ; ಚಂದ್ರಮತೀ ರೋಹಿತಾಶ್ವರನ್ನು ಕೊಂಡುಕೊಳ್ಳುವವನು ಮೊದಲು ಬ್ರಾಹ್ಮಣವೇಷದ ವಿಶ್ವಾಮಿತ್ರ; ಆಮೇಲೆ ಒಬ್ಬ ದಯಾವಂತನಾದ ಬ್ರಾಹ್ಮಣ; ಅವನು ಕ್ರಮೇಣ 'ಅತಿಕೋಪಿ'ಯಾಗಿ ಪರಿಣಮಿಸಿ, ಅವನ ಸುತ್ತ ಅವನಿಗೆ ಅನುರೂಪವಾದ ಒಂದು ನಿಷ್ಠುರ ಪ್ರಪಂಚವೇ ಏರ್ಪಡುತ್ತದೆ. (ಹ. ಕಾ. ಸಂಗ್ರಹ, ೮-೨). ಕಾಶೀರಾಜನೂ ಅವನ ಮಗನೂ ನಿರ್ಮಿತರಾಗಿ ಪುತ್ರಶೋಕಸಂತಪ್ತೆಯಾದ ನಿರ್ಭಾಗ್ಯ ಚಂದ್ರಮತಿಯ ಮೇಲೆ ಶಿಶುಹತ್ಯೆಯ ದೋಷ ಹೊತ್ತು ಶ್ಮಶಾನದಲ್ಲಿ ಅವಳ ಗಂಡನಿಂದಲೇ ತಲೆ ಹೊಡಿಸುವ ಘೋರಸನ್ನಿವೇಶವು ಬರುತ್ತದೆ. (ಮಾರ್ಕಂಡೇಯ ದೇವೀಭಾಗವತಗಳಲ್ಲಿ ತಾಯಿತಂದೆಗಳು ಮಗನ ಶವದೊಡನೆ ಅಗ್ನಿಪ್ರವೇಶ ಮಾಡಬೇಕೆಂದು ಪ್ರಯತ್ನಪಡುವಾಗ ದೇವತೆಗಳು ಪ್ರತ್ಯಕ್ಷರಾಗಿ ಅವರನ್ನು ತಡೆಯುವರು.) ಇವೆಲ್ಲಕ್ಕಿಂತಲೂ ಮುಖ್ಯವಾದದ್ದು ವಿಶ್ವಾಮಿತ್ರ ಪಾತ್ರ ಪರಿವರ್ತನ. ಐತರೇಯ ಬ್ರಾಹ್ಮಣದಲ್ಲಿ ಕೌಶಿಕನು ಕಾರುಣ್ಯಮೂರ್ತಿ. ಅವನ ಸಹಾಯದಿಂದಲೇ ಶುನಶ್ಯೇಪನಿಗೆ ಆಶ್ರಯ ದೊರೆತದ್ದು. (ಅವನು ಆ ಹುಡುಗನಿಗೆ ಸೋದರಮಾವನೋ ಸೋದರಜ್ಜನೋ ಇರಬಹುದು; ಆದರೂ ಅವನ ಕರುಣವು ಕೇವಲ ಬಂಧುಪಕ್ಷಪಾತವಲ್ಲ.) ಇಂಥ ರಾಜರ್ಷಿಯು, ಬ್ರಹ್ಮರ್ಷಿಯು, ಈ ಕಥೆಯ ಚರಮಾವತಾರದಲ್ಲಿ ರಾಕ್ಷಸಮೂರ್ತಿಯಾಗಿದ್ದಾನೆ. ಅವನ ಪ್ರಚಂಡ ಕೋಪದ ಮುಂದೆ ನಿಲ್ಲತಕ್ಕವರಿಲ್ಲ. ಅವನು ಕೇಳುವ ದಕ್ಷಿಣೆಗೆ ಮಿತಿಯಿಲ್ಲ, ಕೊಡುವ ಕಾಟಕ್ಕೆ ಕೊನೆಯಿಲ್ಲ. ಇದರಲ್ಲಿ ಅವನ ಉದ್ದೇಶವು ಒಳ್ಳೆಯದಾಗಿದ್ದಿತೆಂದೂ ಅವನು 'ಲೋಕದ ಕಣ್ಗೆ ಕಡುಮುಳಿದರಂತೆ ತೋಱಿಸಿ ಸತ್ಯಶುದ್ಧವಪ್ಪನ್ನೆಗಂ ಕಾಡಿ ನೋಡಿ ಕಡೆಯೊಳು ಹರಿಶ್ಚಂದ್ರರಾಯಂಗೆ ಗಣವೆರಸಿ ಮೃಡನನೆಳತಂದಿತ್ತು ಕೀರ್ತಿಯಂ ಮೂಜಗದ ಕಡೆಗೆ ಹರಹಿದ'ನೆಂದೂ (೯—೧೧) ಹೇಳಿರುವುದೇನೋ ನಿಜ. ಆದರೆ ಹರಿಶ್ಚಂದ್ರನ ಸತ್ಯಸೌಜನ್ಯಗಳನ್ನು ಮೆಚ್ಚಿ, ಅವನಿಗೂ ಅವನ ಮೂಲಕ ಲೋಕಕ್ಕೂ

ಉಪಕಾರಮಾಡಬೇಕೆನ್ನುವ ಶುಭೋದ್ದೇಶವು ಕೊನೆಯವರೆಗೂ ಎಲ್ಲಿಯೂ ಸೂಚಿತವಾಗುವುದಿಲ್ಲ; ಈ ಉದ್ದೇಶವೇ ಮೊದಲಿನಿಂದಲೂ ಇರುವ ಪಕ್ಷಕ್ಕೆ ವಸಿಷ್ಠರೊಡನೆ ಇದಕ್ಕಾಗಿ ಹೂಡಿದ ವಾಜ್ಯವು ಬರಿಯ ನಟನೆಯಾಗಿ, ಪಾಠಕರ ದೃಷ್ಟಿಯಿಂದಲಾದರೂ ಹರಿಶ್ಚಂದ್ರನ ಕಷ್ಟದ ತೀಕ್ಷ್ಣತೆಯು ಕಡಮೆಯಾಗಿ, ಈ ಕಥೆಯು ಕರುಣರಸದ ಬಣ್ಣವು ಕುಂದುತ್ತದೆ. ಗ್ರಂಥದ ಆಧಾರದ ಮೇಲೆ ಹೇಳುವುದಾದರೆ ವಿಶ್ವಾಮಿತ್ರನ ಕ್ಷಾತ್ರಗುಣ, ವಸಿಷ್ಠನ ಮೇಲಣ ವೈರ, ಹಟ ಇವೇ ಆತನು ಹರಿಶ್ಚಂದ್ರನಿಗೆ ಕೊಟ್ಟ ಕಾಟಕ್ಕೆ ಕಾರಣವೆಂದು ತೋರುತ್ತದೆ. 'ತೀವಿಮೊಡ್ಡೋಲಗದ ನಡುವೆ ತನ್ನಂ ಮೊದಲೊಳೋವಿ ನುಡಿಸದ ಕೋಪ ಒಂದು, ಆ ವಸಿಷ್ಠಮುನಿ ಯಾವುದಂ ಪೇಳ್ದಡದನಲ್ಲೆಂಬ ಭಾಷೆ ಎರಡು, ಅಖಿಳಜೀವಾವಳಿಯಲಿ ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ ಭಾವ' ಮೂರು, ಇವಿಷ್ಟೂ ವಿಶ್ವಾಮಿತ್ರನಲ್ಲಿ ಮುಪ್ಪುರಿಗೊಂಡು ಕುಡಿವರಿದು ಕಡುಕೋಪವಾವರಿಸಿ, ವ್ಯಾಜ್ಯಕ್ಕೆ ಆರಂಭವಾಗಿ ವಸಿಷ್ಠನು ತನ್ನನ್ನು 'ರಾಜಋಷಿಯೆಂದು ಕೆಟ್ಟಾಡಿತಕ್ಕಾ ಹರಿಶ್ಚಂದ್ರನನಸತ್ಯನಂ ಮಾಡಿಸುವೆ'ನೆಂದು ವಿಶ್ವಾಮಿತ್ರನು ಪ್ರತಿಜ್ಞೆಮಾಡಿದನು. ಅವನ ಈ ಪ್ರತಿಜ್ಞೆಯು ಹರಿಶ್ಚಂದ್ರನ ಸತ್ಯಭಂಗವಷ್ಟರಲ್ಲಿಯೇ ಮುಗಿಯುವಂತಿಲ್ಲ; ಅವನ ಜಾತ್ಯಭಿಮಾನವನ್ನು ಪುಡಿಗುಟ್ಟಲು ಅವನನ್ನು ಚಂಡಾಲ ಸ್ತ್ರೀಯರಿಗೆ ಗಂಟುಹಾಕಬೇಕೆಂದೂ, ಚಂಡಾಲನಿಗೆ ದಾಸನಾಗಿ ಮಾಡಬೇಕೆಂದೂ ಅವನು ವಿಶ್ವಪ್ರಯತ್ನ ಮಾಡುವನು; ಕೆಲವು ಸನ್ನಿವೇಶಗಳಲ್ಲಿ, ಹರಿಶ್ಚಂದ್ರನು ಸುಳ್ಳು ಹೇಳದಿದ್ದರೆ ಹೋಗಲಿ, ಹೊಲತಿಯರನ್ನು ಮದುವೆಮಾಡಿಕೊಂಡುಬಿಡಲಿ ಎಂದು ವಿಶ್ವಾಮಿತ್ರನಿಗೆ ತವಕವಿರುವಂತೆ ತೋರುತ್ತದೆ. ಸತ್ಯದ ಘನತೆಯನ್ನು ಲೋಕಕ್ಕೆ ಎತ್ತಿತೋರಿಸುವ ಸದುದ್ದೇಶದಿಂದಾಗಲಿ ವಸಿಷ್ಠನ ಮೇಲಣ ಹಟಕೋಪಗಳಿಂದಾಗಲಿ, ಹರಿಶ್ಚಂದ್ರನಿಂದ ಆಡಿದ ಮಾತನ್ನು ತಪ್ಪಿಸಬೇಕೆಂಬ ಪ್ರಯತ್ನದಲ್ಲಿ ಈ ಚಂಡಾಲ ವೃತ್ತಾಂತಕ್ಕೆ ಔಚಿತ್ಯವಾಗಲಿ ಆವಶ್ಯಕತೆಯಾಗಲಿ ಇಲ್ಲ. ಹರಿಶ್ಚಂದ್ರನ ಕಥೆಯಲ್ಲಿ ಬರುವ ಈ ಭಾಗಕ್ಕೆ ಅರ್ಥವೇನಿದ್ದೀತು ಎಂಬುದು ಹಿಂದೆ ಹೇಳಿದ (ಪುಟ xxxv—xxxvi) ಪ್ರಾಚೀನ

ಪುರಾಣ ಕಥೆಯನ್ನು ತಾತ್ತ್ವಿಕ ದೃಷ್ಟಿಯಿಂದ ಪರಿಶೀಲಿಸಿದರೆ ತಿಳಿಯುಬಹುದು. ಆಗ ಫಲಿತವಾಗುವುದೇನೆಂದರೆ[25] :—

ಹರಿಶ್ಚಂದ್ರನ ಕಥೆಯಲ್ಲಿ ಚರಿತ್ರೆ

ವಸಿಷ್ಠ ವಿಶ್ವಾಮಿತ್ರರು ಪ್ರಾಚೀನ ಭರತ ಖಂಡದ ಚರಿತ್ರೆಯಲ್ಲಿದ್ದ ಇಬ್ಬರು ಪ್ರಬಲರಾದ ರಾಜನಿರ್ಮಾಣಕರು. ವಸಿಷ್ಠನು[26] ತ್ರಯ್ಯಾರುಣನಲ್ಲಿ ಮಂತ್ರಿಯಾಗಿದ್ದು ಸತ್ಯವ್ರತ ತ್ರಿಶಂಕುವು ರಾಜ್ಯಭ್ರಷ್ಟನಾದಮೇಲೆ ತಾನು ಹನ್ನೆರಡು ವರ್ಷ ರಾಜ್ಯಸೂತ್ರಗಳನ್ನು ಧರಿಸಿದ್ದನು. ಆಮೇಲೆ ವಿಶ್ವಾಮಿತ್ರನು ಪ್ರಬಲನಾಗಿ ತ್ರಿಶಂಕುವನ್ನೂ ಅವನ ಕಾಲಾನಂತರ ಹರಿಶ್ಚಂದ್ರನನ್ನೂ[27] ರಾಜ್ಯದಲ್ಲಿ

---

[25] ಪುರಾಣದೊಳಗೆ ಪ್ರಾಚೀನ ಚರಿತ್ರೆ ಅಡಗಿದೆಯೆಂದು ಈಗ ಪಾಶ್ಚಾತ್ಯ ವಿದ್ವಾಂಸರೂ ಒಪ್ಪಿಕೊಳ್ಳುತ್ತಿದ್ದಾರೆ. ಅವುಗಳನ್ನು ಈ ದೃಷ್ಟಿಯಿಂದ ಪರಿಶೀಲಿಸಿರುವವರಲ್ಲಿ ಎಫ್. ಇ ಪಾರ್ಗಿಟರ್ ಎಂಬವರು ಮುಖ್ಯರು. ಅವರು ತಮ್ಮ *Ancient Indian Historical Tradition* ಎಂಬ ಗ್ರಂಥದಲ್ಲಿಯೂ ಇಂಗ್ಲೆಂಡಿನ ರಾಯಲ್ ಏಷಿಯಾಟಿಕ್ ಸೊಸೈಟಿ ಪತ್ರಿಕೆಗೆ ತಾವು ಬರೆದ ಎರಡು ಲೇಖನಗಳಲ್ಲಿಯೂ (೧೯೧೩, ೧೯೧೭) ಈ ಉಪಾಖ್ಯಾನವನ್ನು ಚರಿತ್ರ ದೃಷ್ಟಿಯಿಂದ ವಿಮರ್ಶೆಮಾಡಿದ್ದಾರೆ.

[26] ವಸಿಷ್ಠ ಎಂಬುದು ಕುಲದ ಹೆಸರು. (ವಂಶಪಾರಂಪರ್ಯವಾಗಿ ಸೂರ್ಯವಂಶದ ರಾಜರಿಗೆಲ್ಲಾ ಒಬ್ಬನೇ ಪುರೋಹಿತನಾಗಿರಲಾರನು) ಹರಿಶ್ಚಂದ್ರನ ಕಾಲದಲ್ಲಿದ್ದ ವಸಿಷ್ಠನಿಗೆ ದೇವರಾಜ ಅಥವಾ 'ದೇವರಾಜ ವಸಿಷ್ಠ' ಎಂದು ಹೆಸರು.

ಅವರ್ಷತಿ ಚ ಪರ್ಜನ್ಯೇ ಸರ್ವಭೂತಾನಿ ದೇವರಾಟ್ |
ವಸಿಷ್ಠೋ ಜೀವಯಾಮಾಸ ಯೇನ ಯಾತೋಽಕ್ಷಯಂ ಜಗತ್ ||
(ಮಹಾಭಾರತ, xii, ಅಧ್ಯಾಯ ೧೩೭, ಶ್ಲೋ. ೬೨೫.)

'ದೇವರಾಜ' ಎಂದರೆ 'ಇಂದ್ರ' ಎಂದೂ ಅರ್ಥ. ಇದು ಬೆರೆತುಹೋಗಿ, ವಿಶ್ವಾಮಿತ್ರನ ತಪಸ್ಸಿನಲ್ಲಿ 'ಇಂದ್ರ'ನೊಡನೆ ಸ್ಪರ್ಧೆ, 'ಇಂದ್ರ' ಸಭೆಯಲ್ಲಿ ಹರಿಶ್ಚಂದ್ರನ ಸತ್ಯವಿಚಾರ, 'ಇಂದ್ರ'ನು ಬ್ರಾಹ್ಮಣನಾಗಿ ರೋಹಿತನನ್ನು ಊರಿಗೆ ಹೋಗಬೇಡ ಕಾಡಿನಲ್ಲಿ ತಿರುಗುತ್ತಿರು ಎಂದು ವಾರಣಮಾಡುವುದು—ಮುಂತಾದ ಪರಿವರ್ತನವಾಗಿದೆ ಎಂದು ಊಹಿಸಲ್ಪಟ್ಟಿದೆ—ಪಾರ್ಗಿಟರ್.

[27] ಐತರೇಯ ಬ್ರಾಹ್ಮಣದ ಪ್ರಕಾರ ಇವನ ಪೂರ್ತಿಯಾದ ಹೆಸರು "ಹರಿಶ್ಚಂದ್ರ ವೈಧಸ ಐಕ್ಷ್ವಾಕು." ಇಲ್ಲಿ 'ವೈದಸ' ಎಂದರೆ—'ವೈವಸ್ವತ' ಎಂಬಂತೆ—ಸೂರ್ಯವಂಶದಲ್ಲಿ ಹುಟ್ಟಿದವನು ಎಂದು ಅರ್ಥವಿರುವಹಾಗೆ ಕಾಣುತ್ತದೆ. ಇವನ ಕಾಲ ಸುಮಾರು ಕ್ರಿ.ಪೂ. ೨೦೦೦ ಇದ್ದಿರಬಹುದು.

ಸ್ಥಾಪಿಸಿದನು. ತ್ರಿಶಂಕುವು ವ್ರತಾಚರಣೆಯಲ್ಲಿದ್ದಾಗ ಹರಿಶ್ಚಂದ್ರನು ಚಿಕ್ಕ ವಯಸ್ಸಿನವನಾಗಿದ್ದು ಹನ್ನೆರಡು ವರ್ಷ ವಸಿಷ್ಠರ ಶಿಕ್ಷಣದಲ್ಲಿದ್ದದ್ದರಿಂದ ಅವನು ಪಟ್ಟಕ್ಕೆ ಬಂದಮೇಲೆ ಪುನಃ ವಸಿಷ್ಠರು ಪ್ರಾಬಲ್ಯಕ್ಕೆ ಬಂದು ವಿಶ್ವಾಮಿತ್ರನು ಹುಟ್ಟುಬ್ರಾಹ್ಮಣನಲ್ಲವೆಂದೋ, ಮತ್ತಾವ ಕಾರಣದಿಂದಲೋ ರಾಜಸೂಯಯಾಗದಲ್ಲಿ ದಕ್ಷಿಣೆ ಲಭಿಸದೆ ತೇಜೋವಧೆಯಾಗಿ ತಪಶ್ಚರ್ಯೆಗೆಂದು ಕಾಡಿಗೆ ಹೊರಟುಹೋದನು. ಅಲ್ಲಿಂದ ಮುಂದೆ ಹರಿಶ್ಚಂದ್ರನ ಮೇಲೆ ದ್ವೇಷ ಹುಟ್ಟಿ ವಿಶ್ವಾಮಿತ್ರನು ಅವನಿಗೆ ಕಿರುಕುಳ ಕೊಟ್ಟ ಹಾಗೆ ಕಾಣುತ್ತದೆ. "ನನ್ನ ಕಡೆಯ ರಾಜನಾದ 'ಸತ್ಯವ್ರತ' ತ್ರಿಶಂಕುವನ್ನು ಚಂಡಾಲನನ್ನಾಗಿಯೂ, ದೇಶಭ್ರಷ್ಟನನ್ನಾಗಿಯೂ ಮಾಡಿದ್ದಕ್ಕೆ ಪ್ರತಿಯಾಗಿ ನಿನ್ನ ಕಡೆಯ ರಾಜನಾದ ಹರಿಶ್ಚಂದ್ರನನ್ನು 'ಅಸತ್ಯವ್ರತ'ನನ್ನಾಗಿಯೂ ರಾಜ್ಯ ಕಳೆದುಕೊಂಡು ದೇಶಭ್ರಷ್ಟನೂ ಚಂಡಾಲನೂ ಆಗುವಂತೆಯೂ ಮಾಡುತ್ತೇನೆ" ಎಂದು ವಿಶ್ವಾಮಿತ್ರನು ವಸಿಷ್ಠನಮೇಲೆ ಹಟ ತೊಟ್ಟಿರಬೇಕು. ಆದ್ದರಿಂದ ವಸಿಷ್ಠನು ತಪಸ್ಸಿಗೆ ಹೋಗಿದ್ದ ಕಾಲವನ್ನು ಕಾದುಕೊಂಡಿದ್ದು ಆಗ (ಮಾರ್ಕಂಡೇಯ ಪುರಾಣ, ಅಧ್ಯಾಯ ೯; ಹರಿಶ್ಚಂದ್ರಕಾವ್ಯ ಸಂಗ್ರಹ, ೩–೫) ಮಾಡಿದ ಪ್ರಯತ್ನದಿಂದ ರಾಜ್ಯವು ಹರಿಶ್ಚಂದ್ರನ ಕೈತಪ್ಪಿ ಕೆಲವು ಕಾಲ, ಹಿಂದೆ ವಸಿಷ್ಠರ ಕೈಯಲ್ಲಿದ್ದಂತೆ, ವಿಶ್ವಾಮಿತ್ರರ ಕೈಯಲ್ಲಿದ್ದು, ಕೊನೆಗೆ ಸರ್ವಸಮ್ಮತಿಯಿಂದ ಹರಿಶ್ಚಂದ್ರನಿಗೋ ರೋಹಿತಾಶ್ವನಿಗೋ ಬಂತೆಂದು ಊಹಿಸಬಹುದು.

ಇದನ್ನು ಒಪ್ಪಿದರೆ, ಹರಿಶ್ಚಂದ್ರನಿಂದ ಸುಳ್ಳು ಹೇಳಿಸಬೇಕೆಂದೂ, ಅವನಿಗೆ ಚಂಡಾಲ ಸಹವಾಸ ಮಾಡಿಸಬೇಕೆಂದೂ ವಿಶ್ವಾಮಿತ್ರನು ತೊಟ್ಟ ಹಟವು ನೈಸರ್ಗಿಕವಾಗಿ ಕಾಣುತ್ತದೆ.

ವರ್ಣನೆ

ರಾಘವಾಂಕನು ತತ್ತ್ವವಿವೇಚನೆಮಾಡಿ ಚರಿತ್ರೆ ಬರೆಯಲು ಹೊರಟವನಲ್ಲ; ತನ್ನ ಕಾಲದಲ್ಲಿದ್ದ ಪೌರಾಣಿಕ ಕಥೆಯನ್ನು ತೆಗೆದುಕೊಂಡು ಅದನ್ನು ಕಾವ್ಯವಾಗಿ ಬರೆದವನು. ಆದ್ದರಿಂದ ಅವನ ಗ್ರಂಥದಲ್ಲಿ ಪೌರಾಣಿಕ ಕಥಾಂಶಗಳ ಪರಿಪಾಕವೂ ಅದಕ್ಕೆ ಕಾವ್ಯದ ಮೆರುಗೂ ಕಂಡುಬರುತ್ತವೆ. ರಸವತ್ತಾದ

ಕಥನಕ್ರಮ, ಸ್ಫುಟವಾದ ಪಾತ್ರಪ್ರದರ್ಶನ, ನೈಸರ್ಗಿಕವಾದ ಸಂಭಾಷಣೆಗಳು, ಭಾವಪ್ರಪಂಚ ಬಾಹ್ಯಪ್ರಪಂಚಗಳ ಖಚಿವಾದ ವರ್ಣನೆಗಳು, ಜೀವನ ವಿಮರ್ಶೆ, ಭಾಷೆ, ಶೈಲಿ ಇವುಗಳಲ್ಲಿ ಒಂದು ಅತಿಶಯವೂ ವ್ಯಕ್ತಿತ್ವವೂ ಕಂಡುಬರುತ್ತವೆ. ಕಥನರೀತಿ ಪಾತ್ರಪ್ರದರ್ಶನಕ್ರಮ ಸಂಭಾಷಣೆಗಳ ಸ್ವರೂಪಗಳನ್ನು ಈ ಹಿಂದೆಯೇ ವಿವರಿಸಿದೆ. ಇಲ್ಲಿ ವರ್ಣನೆಯ ರೀತಿಯನ್ನು ಒಂದೆರಡು ಉದಾಹರಣೆಗಳಿಂದ ವಿವರಿಸಬಹುದು.

ಇದು ವಸಿಷ್ಠರ ವರ್ಣನೆ:—

ತಿಳಿಗೊಳನ ಬಳಸಿ ನಳನಳಿಸಿ ಬೆಳೆದೆಳಮಾವು
ಗಳ ತಳದ ಮಲ್ಲಿಕಾಮಂಟಪದ ತಣ್ಣೆಳಲ
ತೆಳುಗಾಳಿಯೊಳು ಪುಣ್ಯವಪ್ಪ ಪುಳಿನಸ್ಥಳದ ಮೇಲಶೋಕೆಯ ತರುವಿನ |
ತಳಿರ ತೊಂಗಲ ಗದ್ದುಗೆಯೊಳೋಲಗಂಗೊಟ್ಟು
ಬಳಸಿ ಹಿಂದೆಡಬಲದೊಳಿಪ್ಪ ಮುನಿಗಳ ಕೂಡೆ
ನಲವಿನಿಂ ನುಡಿವ ಪಶುಪತಿಯಂತಿರಿರ್ದ ಮುನಿನಾಥ ಕಣ್ಗೆಸೆದಿರ್ದನು ||

(ಹ.ಕಾ. ಸಂಗ್ರಹ, ೩-೩೧)

ಇದರಲ್ಲಿ ವಸಿಷ್ಠರ ಸಾತ್ವಿಕ ವೃತ್ತಿಯೂ ಶಾಂತಿಪ್ರೀತಿಗಳೂ ಅವಕ್ಕೆ ತಕ್ಕ ಮೃದುವಾದ ತಂಪಾದ ಬಾಹ್ಯಸನ್ನಿವೇಶವೂ ಉಚಿತವಾದ ಲಲಿತ ಪದ ಪುಂಜಗಳಿಂದಲೇ ಚಿತ್ರಿತವಾಗಿವೆ.

ಇದು ಬೆಂಕಿಗೆ ಸಿಕ್ಕಿ ಸಾಯುವವರ ವರ್ಣನೆ:—

ಕಡಗಿ ಕರ್ಬೊಗೆ ಸುತ್ತಿ ದಳ್ಳುರಿಗಳಲೆದು ಕೆಂ
ಗಿಡಿಗೆದಱಿ ಕೆಂಡಂಗಳಡಸಿ ಸುಡೆ ಮಿಡುಮಿಡನೆ
ಮಿಡುಕಿ ಬಾಯ್ಬಿಟ್ಟೊಱಲಿ ಕೆಡೆದೊಡಲು ಮಡಿದು
ಕೈಕಾಲ್ ಬೆಂದು ಸುಕ್ಕಿ ಸುಗಿದು . . .|| (ಹ.ಕಾ. ಸಂಗ್ರಹ, ೭-೬)

ಇದು ಕಾಳ್ಗಿಚ್ಚಿನ ಮತ್ತು ಅದಕ್ಕೆ ಸಿಕ್ಕಿದವರ ಹಲವು ಅವಸ್ಥೆಗಳನ್ನು, ಕರುಣಭಯಾನಕಗಳಿಗೆ ಉಚಿತವಾದ ಶಬ್ದಗಳಿಂದ ವಿವರಿಸುವುದಾಗಿದೆ.

ಅರ್ಥಕ್ಕೆ ಅನುರೂಪವಾದ ಶಬ್ದಾಕ್ಷರಪ್ರಯೋಗವು ಸಾಹಿತ್ಯದಲ್ಲಿ ಒಂದು ಗುಣವೆಂದು ಎಲ್ಲರೂ ಒಪ್ಪಿದ್ದಾರೆ. ಈ ಗುಣವು ಗಂಗಾನದಿಯ ವರ್ಣನೆಯಲ್ಲಿ ಚೆನ್ನಾಗಿ ಕಂಡುಬರುತ್ತದೆ.—

ಘುಳುಘುಳಿಸಿ ಕವಿವ ತೆರೆಗಳು ಹಳಚಿ ಕುದಿದು ಬೊ
ಬ್ಬುಳಿಗುಡಲು ಮರಳಿ ಮೆಱಿಹಂ ಮೆಱೆದು ಮುರಿದಿಳಿದು
ಪೊಳೆವ ಸುಳಿಗಳ ಬಳಗವುಂ ಬಳಸಿ ಘೋರ್ಗರೆದು ಬೊಬ್ಬಿಡುವ ತಳ್ಳಿವೊನಲಿಂ।
ಸೆಳೆದು ಕೈಯಿಂ ಹೊಯ್ಲ ಹೋರಟೆಯೊಳುಕ್ಕಿ ಮು
ಮ್ಮುಳಿಪ ನೊರೆ ಬುದುಬುದವನೊಡೆಗಲಸಿ ಕದಡಿ ಕ
ಜ್ಜಳವಟ್ಟ ಲಹರಿಗಳ ಲಗ್ಗೆಯಿಂದೆಸೆವ ನದಿಯೊಚ್ಚವನದೇವೊಗಳ್ವೆನು।

(ಹರಿಶ್ಚಂದ್ರಕಾವ್ಯ, X. ೩೯)

ಇದರಲ್ಲಿರುವ ಮಾತುಗಳೆಲ್ಲ ನೀರು ನೊರೆ ಅಲೆ ಸುಳಿ ಸೆಳವು ಹೊಳವು ಹೊನಲುಗಳನ್ನು ಪ್ರತಿಬಿಂಬಿಸುವಂತಿವೆ.

ಪಿಡಿದ ಸಂಬಳಿಗೋಲು ಕಾರೊಡಲು ಕೆಂಗಣ್ಣು
ಕುಡಿದು ಕೊಬ್ಬಿದ ಬಸುಱು ದಡದಡಿಸಿ ತರಹರಿಸು
ವಡಿಯ ಕೆದಱಿದ ತಲೆಯನಡಸಿ ಸುತ್ತಿದ ಮುಪ್ಪುರಿಯ ಬಾರಿ ಕಷ್ಣಣಿಗೆಯ।
ಬಿಡದೆ ಥಟ್ಟನೆ ತೇಗಿ ನೆರವಿಯಿಂ ಬಯ್ವ. . . .॥

ಎಂಬ ಪದ್ಯವು (೭—೩೧) ನಾಲ್ಕೈದು ಸಾಲಿನಲ್ಲಿ "ಜಱುಸುಡಿಯ ಕಲಿ ವೀರಬಾಹುಕನ" ಘೋರಚಿತ್ರವನ್ನು ಕಣ್ಣಿಗೆ ಕಟ್ಟುತ್ತದೆ.

ಅರಿರಾಯರೊಳು ಕಾದಿ ಮಡಿದಾತನಲ್ಲ ಮುನಿ
ವರರ ಯಾಗವ ಕಾದು ಮಡಿದಾತನಲ್ಲ ದೇ
ವರಿಗೆ ಹಿತವಾಗಿ ಮಡಿದವನಲ್ಲ ಮಾಂಸದಾನವ ಬೇಡಿದರ್ಗೊಡಲನು।
ಅರಿದರಿದು ಕೊಟ್ಟು ಮಡಿದವನಲ್ಲ ಹುಳ್ಳಿಯಂ
ತರಹೋಗಿ ಕಾಡೊಳಗೆ ಬಡಹಾವು ಕಚ್ಚಿ ಮುನಿ
ವರಿಗೆ ನಗೆಗೆಡೆಯಾಗಿ ನಿಷ್ಕಾರಣಂ ಮಡಿವರೇ . . .॥

ಎಂಬುದು ಧೀರೋದಾತ್ತ ಕ್ಷತ್ರಿಯನ ಮನೋಭಾವವನ್ನು ನೈಸರ್ಗಿಕವಾಗಿ ವರ್ಣಿಸುತ್ತದೆ.

ವಿಸ್ತಾರವಾದ ವರ್ಣನೆಗಳಲ್ಲಿ ಬೇಟೆ ಮತ್ತು ಚಂದ್ರಮತಿಯ ಗೋಳಾಟಗಳನ್ನು ಹೇಳಬಹುದು. ಈ ವಿಧವಾದ ವರ್ಣನೆಗಳು ಈಚಿನ ಜಯನೃಪಕಾವ್ಯ, ಚೆನ್ನಬಸವಪುರಾಣ, ಜೈಮಿನಿಭಾರತ ಇವುಗಳಲ್ಲಿಯೂ ಕಂಡುಬರುತ್ತವೆ. ವರ್ಣನೆಗಳಲ್ಲಿ ಹೇಗೋ, ಅಲಂಕಾರ ಕವಿಸಮಯ ಚಮತ್ಕಾರಗಳಲ್ಲಿ

ಯೂ[28] ಹಾಗೇ ರಾಘವಾಂಕನು ತನ್ನ ತರುವಾಯ ಬಂದ ಷಟ್ಪದಿಕರ್ತರಿಗೆ ಮಾರ್ಗದರ್ಶಕನಾದನೆಂದು ತೋರುತ್ತದೆ.

ನೀತಿ

ಪ್ರಾಚೀನಕವಿಗಳು ಸಾಮಾನ್ಯವಾಗಿ ಕಾವ್ಯರಮಣೀಯತೆಯೊಂದನ್ನೇ, ನೀತಿವಿರಹಿತವಾದ ರಸಪುಷ್ಟಿಯೊಂದನ್ನೇ, ತಮ್ಮ ದೃಷ್ಟಿಯಲ್ಲಿಟ್ಟುಕೊಂಡು ಕಾವ್ಯ ಬರೆಯಲು ಹೊರಡುವವರಲ್ಲ; ಜೀವನದಲ್ಲಿ ಹೇಗೋ ಕಾವ್ಯದಲ್ಲಿಯೂ ಹಾಗೇ ಶ್ರೇಯಃಕಾಂಕ್ಷಿಗಳು; ಶ್ರೇಯಸ್ಸಿಗೆ ಅವಿರುದ್ಧವಲ್ಲದ ಸೌಖ್ಯವನ್ನು ಬಯಸತಕ್ಕವರು, ಧರ್ಮಾನುಗತವಾದ ಆನಂದವನ್ನು ಬೋಧಿಸತಕ್ಕವರು. ಆದ್ದರಿಂದಲೇ ರಾಘವಾಂಕನು, ಶಿವಭಕ್ತನೂ ಸತ್ಯಸಂಧನೂ ಆದ ಹರಿಶ್ಚಂದ್ರನ ಕಥೆಯನ್ನು ತನ್ನ ಕಾವ್ಯಕ್ಕೆ ವಸ್ತುವಾಗಿ ತೆಗೆದುಕೊಂಡಿದ್ದಾನೆ. ಆದರೂ 'ತುದಿಮೊದಲ್ವನಕ ಹೇಳಿದ ಕಾವ್ಯರಸಫಲಂಗಳನು ಸವಿಸುವುದು' ಅವನ ಮುಖ್ಯ ಉದ್ದೇಶವೇ ಹೊರತು ಧರ್ಮೋಪದೇಶಗಳನ್ನು ಕೊಡುವುದಲ್ಲ; ಆದ್ದರಿಂದಲೇ ಗ್ರಂಥದ ಮಧ್ಯೆ, ಅವಕಾಶವಿರುವ ಕಡೆಯಲ್ಲಿಯೂ ಕೂಡ, ಎಲ್ಲಿಯೂ ಪುರಾಣ ಕಾವ್ಯಗಳಲ್ಲಿ ಕಂಡುಬರುವಂತೆ ವಿಸ್ತಾರವಾದ ಧರ್ಮೋಪನ್ಯಾಸಗಳಿಲ್ಲ. ಅವೆಲ್ಲದರ ಸಾರವಾಗಿ ಅವನು ಸತ್ಯದ ಮಹಿಮೆಯನ್ನು ಎತ್ತಿ ಹಿಡಿದಿದ್ದಾನೆ. ಸತ್ಯವು ಪರಮಾತ್ಮಸ್ವರೂಪ; 'ಹರನೆಂಬುದೇ ಸತ್ಯ, ಸತ್ಯವೆಂಬುದು ಹರನು' ಎಂದು ಶ್ರುತಿ ಸಾರುತ್ತದೆ; ಆ ವಾಕ್ಯವನ್ನು 'ನಿರುತ ಮಾಡಿದ ವೇದಪ್ರಮಾಣ ಪುರುಷ' ಹರಿಶ್ಚಂದ್ರ. ಸತ್ಯ ದಾನ ಶಾಂತಿ ಕ್ಷಮೆ ಮುಂತಾದ ಗುಣಗಳಿಂದ ತುಂಬಿದ ಆತನ ಪುಣ್ಯಕಥೆಯನ್ನು ಕೇಳಿ

---

[28] ೧. ಶಬರ ಜಾಲಮಂ ಖಗಹೃದಯ ಶೂಲಮಂ ಮೃಗದ ಕಡೆಗಾಲಮಂ (೩—೧೪)

೨. ಹೆಂದದಾನಂದದಿಂ ಬಂದು ವಂದಿಸಿ ಮುಂದೆ ನಿಂದೆಂದಿನಂದದಿಂದಿಂದು ಮುದದಿಂದ (೩—೨೭)

೩. ಗರಳಗೊರಳವನರಳ ಸರಳಂಗೆ ಮುನಿವಂತೆ ಯಿರುಳ ತಿರುಳಿನ ಹೊರಳಿಗಾ ತರಣಿ ಕೆರಳ್ವಂತೆ . . . (೪—೧೦)

೪. ನವಭಂಗ ಭರಿತೆಯಾಗಿಯು ನತರ ಜನನಭಂಗವನಳಿವಳತ್ಯಧೋಗಮನೆಯಾಗಿಯು ನೋಂಕಿದವರನತ್ಯೂರ್ಧ್ವಗಮನಂ ಮಾಳ್ಪಳ್.

(ಹರಿಶ್ಚಂದ್ರಕಾವ್ಯ. X. ೩೧) ಇತ್ಯಾದಿ.

'ಆತನ ಪೊಗಳ್ದು ಜನ ಬದುಕಬೇಕೆಂಬುದು' ಅವನ ಆಶಯ. ಸತ್ಯವು ಧರ್ಮದ ಸಾರ; ಅದರಿಂದ ಇಹವೂ ಉಂಟು ಪರವೂ ಉಂಟು; ಹುಸಿಯೇ ಹೊಲೆ; 'ಅತಿಹುಸಿದನತಿಹೊಲೆಯು, ಹುಸಿಯದಿಹ ಹೊಲೆಯನುತ್ತಮಯತಿ ವರಂ.[29] ಹುಸಿದು ಮಾಡುವ ಮಹಾಯಜ್ಞಶತವೈದೆ ಪಂಚಪಾತಕ, ಸತ್ಯವೆರಸಿದನ್ಯಾಯವದು ಲಿಂಗಾರ್ಚನೆ; ಶ್ರುತಿಮತವಿದು' ಎಂದು ಪಾರ್ವತೀ ಪತಿಯ ಬಾಯಲ್ಲಿ ಹೇಳಿಸಿದ್ದಾನೆ. 'ಅನೃತವಱಿಯದ ಹೊಲೆಯನಂ ನೆನೆಯೆ ಪುಣ್ಯಂ.' ಸತ್ಯವಿಲ್ಲದೆ ಕುಲಾಚಾರವು ಸದಾಚಾರವಲ್ಲ. 'ಘನ ಸತ್ಯವೇ ಜೀವವೆಂದಿರ್ದ ಹೊಲೆಯನ ಸೇವೆ ಗುರುಸೇವೆ, ಹೊಲೆವೇಷ ಪಾವನ ಪುಣ್ಯವೇಷ . . .' ಎಂಥ ಉತ್ತಮಕುಲದಲ್ಲಿ ಹುಟ್ಟಿದರೂ ತ್ರಿಶಂಕುವಿನಂತೆ 'ಅವಗುಣಂಗಳ ಸಂಗದಿಂ ಕುಲಂ ಹಸಗೆಟ್ಟು' ಚಂಡಾಲನಾಗಬಹುದು. ಅವನ ಹೊಟ್ಟೆಯಲ್ಲಿ ಹುಟ್ಟಿದವನಾದರೂ ಹರಿಶ್ಚಂದ್ರನಂಥವನು ಗುಣಸಾಹಚರ್ಯದಿಂದ, ಕೆಚ್ಚಲ ಮಾಂಸದ ಮೂಲಕ ಬಂದ ಹಾಲಿನ ಹಾಗೂ, ಜೇನುಸೊಣದ ಮೂಲಕ ಬಂದ ಮಧುವಿನಹಾಗೂ, ಸರ್ವಗ್ರಾಹ್ಯನೂ ಪೂಜ್ಯನೂ ಆಗುತ್ತಾನೆ. ಆದ್ದರಿಂದ ಗುಣದಮುಂದೆ ಜಾತಿಕುಲಗಳಲ್ಲ. ಬ್ರಹ್ಮಋಷಿಯಾಗಬೇಕಾದರೆ ಒಳಗೆ ನಿರ್ಮಲವಾಗಬೇಕು; ಶಾಂತಿ ದಾಂತಿಗಳು ಬೇಕು.[30] ಅದಿಲ್ಲದೆ ಅತಿ ಕೋಪಾದಿಗಳಿದ್ದರೆ ಅವೇ 'ಮುನಿಗೆ ಹೊಲೆ.' ಇದು ಪ್ರಸಂಗ ಬಂದಾಗ ಅಲ್ಲಲ್ಲಿ ಹರಿಶ್ಚಂದ್ರಕಾವ್ಯವು ಮಾಡಿರುವ ಗುಣಕರ್ಮ ಜಾತಿ ಕುಲಾದಿಗಳ ಪರಿಶೀಲನೆ. ಇದು ಸರ್ವಸಮ್ಮತವೂ ಉದಾರವೂ ಆದ ಅಭಿಪ್ರಾಯವಾಗಿದೆ. ರಾಘವಾಂಕನು ಬಸವಣ್ಣನವರ ಪಂಥಕ್ಕೆ ಸೇರಿದ್ದನೋ ಬಿಟ್ಟಿದ್ದನೋ,[31] ಅಂತಶ್ಶುದ್ಧಿ ಸತ್ಯಸದಾಚಾರಾದಿಗಳನ್ನು

---

[29] ಈ ಸಂದರ್ಭದಲ್ಲಿ 'ಹಿರಿಯ ಮಾಹೇಶ್ವರ'ನಾದ ಕಂಬಳಿಯ ನಾಗಿದೇವನ ವೃತ್ತಾಂತವು ಜ್ಞಾಪಕಕ್ಕೆ ಬರುತ್ತದೆ. (ಬಸವರಾಜದೇವರ ರಗಳೆ. ಪುಟ ೬೭; ಬಸವ ಪುರಾಣ, ಸಂಧಿ ೫೫.) 'ಕಂಬಳಿ' ಎಂಬುದಕ್ಕೆ 'ಸಂಬೊಳಿ' ಎಂದು ಪಾಠಾಂತರವಿದೆ.

[30] ವಸಿಷ್ಠನ ಗುಣಗಳನ್ನು ಹೋಲಿಸಿ :—ನೀತಿ, ಶಾಂತಿ, ಭೂತದಯೆ, ಸ್ವಾತಂತ್ರ್ಯವೃತ್ತಿ ಇತ್ಯಾದಿ. (ಹ. ಕಾ. ಸಂಗ್ರಹ ೪—೩೨)

[31] If they (ಹರೀಶ್ವರ, ರಾಘವಾಂಕ, ಕೆರೆಯ ಪದ್ಮರಸ) wrote in the reign of Narasimha I (1141-1173), they must belong to about that time (1165);

ಅವರ ಉಪದೇಶಗಳಿಂದ ಉಜ್ಜ್ವಲಮಾಡಿಕೊಂಡನೋ ಬಿಟ್ಟನೋ ಈಗ ನಿರ್ಧರಮಾಡಿ ಹೇಳುವುದು ಸಾಧ್ಯವಲ್ಲದಿದ್ದರೂ, ಪೂರ್ವೋಕ್ತ ಗುಣಕರ್ಮ ಪರಿಶೀಲನೆಯಿಂದ, ಅವನು ಎಚಾರಪರಿಪುಷ್ಟಿತವಾಗಿದ್ದ, ಸತ್ಯಧರ್ಮಗಳ ತಿರುಳನ್ನು ಕಾಣಬೇಕೆಂದಿದ್ದ ಸಿದ್ಧರಾಮ ಅಲ್ಲಮ ಬಸವೇಶ್ವರ ಮುಂತಾದ ಧರ್ಮಜ್ಯೋತಿಗಳ ಕಾಲದಲ್ಲಿ, ಜಾತಿಕುಲಗಳನ್ನು ಆತ್ಮಗುಣಗಳ ದೃಷ್ಟಿಯಿಂದ ತೀರ್ಮಾನಮಾಡಬೇಕೆಂಬ ಆ ಕಾಲದ ಉದಾರ ವಾತಾವರಣದಲ್ಲಿ ಇದ್ದನೆಂದು ಹೇಳಬಹುದು.

ತಾವು ಸರಿಯೆಂದು ನಂಬಿದ ಅಭಿಪ್ರಾಯವನ್ನು ಮನೋವಾಕ್ಕಾಯಗಳಿಂದ ಸಾಧಿಸುತ್ತ, ತಮ್ಮ ಧ್ಯೇಯಸಾಧನೆಗಾಗಿ ಪಡಬಾರದ ಕಷ್ಟಗಳನ್ನೆಲ್ಲಾ ಪಟ್ಟು, ಕೊನೆಗೆ ಜೀವವನ್ನೂ ಕೊಟ್ಟವರು ಚರಿತ್ರೆಗೆ ಅಪರಿಚಿತರಲ್ಲ. ಹರಿಶ್ಚಂದ್ರನು ಅಂಥವನೊಬ್ಬ ಮಹಾಪುರುಷ. ಅವನು ಕೇವಲ ಕವಿಕಲ್ಪನೆ, ಐಹಿಹಾಸಿಕ ವ್ಯಕ್ತಿಯೇನಲ್ಲ, ಎಂದುಕೊಂಡರೂ ಅವನ ಧ್ಯೇಯ ಅವನ ಆದರ್ಶ ಇವು ಕುಸಿಯುವ ಹಾಗಿಲ್ಲ. ಒಂದು ಸತ್ಕಾರ್ಯವನ್ನು ಹಿಡಿದರೆ, ಅದು ಎಷ್ಟು ಉತ್ತಮವಾಗಿರಲಿ, ಅದನ್ನು ಕೈಕೊಂಡವನು ಎಷ್ಟು ಒಳ್ಳೆಯವನಾಗಿರಲಿ, ಅದನ್ನು ಸಾಧಿಸಬೇಕಾದರೆ ಕಷ್ಟಗಳು ಒದಗಬಹುದು. 'ಶ್ರೇಯಾಂಸಿ ಬಹು ವಿಘ್ನಾನಿ.' ಕಷ್ಟ ಯಾರಿಗೂ ತಪ್ಪದು. ಅದು ನಮ್ಮ ದುಷ್ಕರ್ಮದಿಂದ ಬರುತ್ತದೆಯೋ, ವಿಧಿಯಿಂದ ಒದಗುತ್ತದೆಯೋ, ಅಂತು ಕಷ್ಟ ಬರುತ್ತದೆ: ಅನಿರೀಕ್ಷಿತವಾಗಿ ಬರುತ್ತದೆ. ಅದು ಬಂದಾಗ ನಿರಾಶೆಗೂ ಚಾಪಲ್ಯಕ್ಕೂ ಒಳಗಾಗದೆ ಧರ್ಮದಲ್ಲಿದ್ದರೆ, ಬೆಟ್ಟದಹಾಗೆ ಕವಿದದ್ದು ಮಂಜಿನಹಾಗೆ ಕರಗಿಹೋಗುತ್ತದೆ. ಆ ಕಷ್ಟದಿಂದ ಒರುವ ಶಿಕ್ಷಣಾನುಭವದಲ್ಲಿ ಮನುಷ್ಯನು ತನ್ನ ಲೋಪದೋಷಗಳನ್ನು ಕಳೆದುಕೊಂಡು ಪುಟಕ್ಕೆ ಹಾಕಿ ತೆಗೆದ ಚಿನ್ನದಂತಾಗುತ್ತಾನೆ. ಹರಿಶ್ಚಂದ್ರನ ಕಥೆಯು ಇದಕ್ಕೆ ಒಂದು ಉತ್ತಮವಾದ ಉದಾಹರಣೆ.

---

but then they could scarcely have received their inspiration from Basava, and their works must be evidence of a general revival of Saivism, of which Basava's work was only a part. It would be otherwise if they lived under Narasimha II (1220-35) or Narsimha III (1254-1291)—*A History of Kanarese Literature* by E. P. Rice, pp. 43-44.

ಶೈಲಿ

ಹರಿಶ್ಚಂದ್ರಕಾವ್ಯದ ಪ್ರೌಢಿಮೆಯನ್ನೂ ಅಲಂಕಾರಚಮತ್ಕಾರಗಳನ್ನೂ ನೋಡಿದರೆ, ರಾಘವಾಂಕನು ಉಪಯೋಗಿಸಿರುವ ಸಂಸ್ಕೃತ ಪದಗಳು ಬಹು ಸುಲಭವಾದವು ಮತ್ತು ಕೇವಲ ಸ್ವಲ್ಪ ಎಂದು ಹೇಳಬಹುದು. ಇಂಥ ಸಂದರ್ಭಗಳಲ್ಲಿ ಲಕ್ಷ್ಮೀಶ ಮುಂತಾದವರು ಹೆಚ್ಚು ಕಠಿಣವಾದ ಮತ್ತು ಅನೇಕ ಸಂಸ್ಕೃತ ಶಬ್ದಗಳನ್ನು ಉಪಯೋಗಿಸಿರುವುದರಿಂದ ಅವರ ಗ್ರಂಥಗಳು ಇಷ್ಟು ಸುಲಭಗ್ರಾಹ್ಯವಾಗಿಲ್ಲ. ರಾಘವಾಂಕನಿಗೆ ಸಂಸ್ಕೃತದ ಮೇಲೆ ದ್ವೇಷವಿತ್ತೆಂದಾಗಲಿ, ಕನ್ನಡದಮೇಲೆ ಅತಿಯಾದ ಮಮತೆಯಿತ್ತೆಂದಾಗಲಿ ಹೇಳುವುದಿಲ್ಲ; ಆಗಿನ ಕಾಲದಲ್ಲೇ ಮತವಿಚಾರಗಳೂ ಸಾಹಿತ್ಯವೂ ಜನಸಾಮಾನ್ಯದಲ್ಲಿ ಒಳಹೊಕ್ಕು ಅವರಿಗೆ ಸುಗಮವಾದ ರೂಪದಲ್ಲಿ ಪ್ರವಹಿಸುತ್ತಿದ್ದುವು. ಇದು ಸ್ಪಷ್ಟವಾಗಿಯೂ ವಿಶೇಷವಾಗಿಯೂ ಕಂಡುಬರುವುದು ಆಗಿನ ಕಾಲದ 'ವಚನ'ಗಳಲ್ಲಿ.

ರಾಘವಾಂಕನ ಮೂರು ಕಾವ್ಯಗಳು ವಾರ್ಧಕಷಟ್ಪದಿಯಲ್ಲಿವೆ. 'ಅನುಭವ ಶಿಖಾಮಣಿ'ಯನ್ನು (೧೭೭೮) ಬರೆದ ನಾರಸಿಂಹನು ತನ್ನ ಗ್ರಂಥವನ್ನು ರಾಘವಾಂಕನ ಶರಷಟ್ಪದಿರೂಪವಾದ ಗ್ರಂಥದ ಆಧಾರದ ಮೇಲೆ ಬರೆದುದಾಗಿ ಹೇಳುತ್ತಾನೆ.[32] ಆದ್ದರಿಂದ ರಾಘವಾಂಕನು ಮಿಕ್ಕಾದ ಷಟ್ಪದಿಗಳಲ್ಲಿ ಗ್ರಂಥಗಳನ್ನು ಬರೆದಿದ್ದರೂ ಬರೆದಿರಬಹುದು. ಅಂತು ವಾರ್ಧಕಷಟ್ಪದಿಯನ್ನು ಬರೆಯುವುದರಲ್ಲಿ ಅವನು ಪಳಗಿದ ಕೈ ಎಂದು ಹೇಳಬಹುದು. ಪ್ರಾಸಕ್ಕೋಸ್ಕರವಾಗಲಿ, ಪಾದಪೂರಣಕ್ಕಾಗಲಿ ಅವನು ಎಲ್ಲಿಯೂ ಕಷ್ಟಪಟ್ಟಿರುವಂತೆ ತೋರುವುದಿಲ್ಲ. ಮಾತುಗಳ ಹೊಂದಿಕೆಯೂ ಜೋಡಣೆಯೂ ತುಂಬ ಚೆನ್ನಾಗಿವೆ.

ಷಟ್ಪದಿಯು ಅಚ್ಚ ಕನ್ನಡ ವೃತ್ತ—ಎಂದರೆ ಸಂಸ್ಕೃತದಿಂದ ತೆಗೆದುಕೊಂಡದ್ದಲ್ಲ. ರಾಘವಾಂಕನು ಇದನ್ನು ಹಿಡಿದಿರುವುದೂ ಆಗಿನ ಕಾಲದಸಾಹಿತ್ಯದ—ವಿಶೇಷವಾಗಿ ವೀರಶೈವ ಸಾಹಿತ್ಯದ—ಸರಳತೆಯನ್ನೂ ಜನಪ್ರಿಯತೆಯನ್ನೂ ತೋರಿಸುತ್ತದೆ ಎಂದು ಹೇಳಬಹುದು. ಇವೊತ್ತಿಗೂ ಜನಪ್ರಿಯವಾದ

[32] ಕವಿಚರಿತೆ, I, ಪು. ೨೪೪. ವೀರೇಶ ಚರಿತೆಯು 'ಉದ್ದಂಡ ಷಟ್ಪದಿ'ಯಲ್ಲಿದೆ.

ಎಷ್ಟೋ ಹಾಡುಗಳೂ ಪದಗಳೂ ಯಕ್ಷಗಾನಗಳೂ ಷಟ್ಪದಿ, ಸಾಂಗತ್ಯ, ಚೌಪದಿ, ತ್ರಿಪದಿ ಮುಂತಾದ ಕನ್ನಡ ವೃತ್ತಗಳಲ್ಲಿಯೇ ಇವೆ.

ರಾಘವಾಂಕನಿಗಿಂತ ಹಿಂದೆ ಬರೆದ ಷಟ್ಪದಿಗ್ರಂಥಗಳು ದೊರೆತಿಲ್ಲ. ಅದು ವರೆಗೆ ಆದ್ಯಂತವಾಗಿ ಅಚ್ಚ ಕನ್ನಡದ ವೃತ್ತಗಳನ್ನೇ ಉಪಯೋಗಿಸಿ ಪ್ರೌಢ ಕಾವ್ಯಗಳನ್ನು ಬರೆಯುತ್ತಿರಲಿಲ್ಲವೆಂದು ತೋರುತ್ತದೆ. ಚಂಪೂಕಾವ್ಯಗಳಿಗಿದ್ದ ವಿದ್ವದ್ಗೌರವವು ಅವಕ್ಕೆ ಇನ್ನೂ ಬಂದಿದ್ದಿರಲಾರದು. ಆದ್ದರಿಂದ ಹರೀಶ್ವರನು 'ರಗಳೆಯ ಕವಿ' ಎಂದು ಹಾಸ್ಯಕ್ಕೆ ಗುರಿಯಾಗಿದ್ದರೂ ಇದ್ದಿರಬಹುದು. ಅವನು 'ವಸ್ತುಕ,' 'ವರ್ಣಕ' ಈ ಎರಡು ವಿಧವಾದ ಕಾವ್ಯವನ್ನೂ ಬರೆದು ಪ್ರಸಿದ್ಧನಾದನು. ರಾಘವಾಂಕನು 'ಉಭಯಕವಿಕಮಲರವಿ'ಯಾದ ಪಂಡಿತನಾಗಿದ್ದರೂ, ಸಂಸ್ಕೃತ ಶಬ್ದಸಂಪತ್ತಿನಲ್ಲಿ ಹರೀಶ್ವರನಿಗೇನೂ ಕಡಮೆ ಯಲ್ಲದವನಾಗಿದ್ದರೂ, ತನ್ನ ಗ್ರಂಥಗಳನ್ನೆಲ್ಲಾ ಷಟ್ಪದಿಯಲ್ಲಿ 'ವರ್ಣಕ' ಕಾವ್ಯವಾಗಿ ಬರೆದಿರುವಂತೆ ತೋರುತ್ತದೆ. ಅವನು ಕನ್ನಡಿಗರಲ್ಲಿ ಬಳಕೆಯಾಗಿ ರುವ ಮಾತು ಕಥೆ, ಸಾಮತಿ, ಸಾದೃಶ್ಯಗಳನ್ನು ವಿಶೇಷವಾಗಿ ಉಪಯೋ ಗಿಸುತ್ತಾನೆ.[33] ಆದರೂ ಅವನಲ್ಲಿ ಚಂಪೂಕಾರರ ಮಾತಿನ ಬಿಗಿಯೂ ಸೌಷ್ಠವ ನಿಷ್ಕೃಷ್ಟತೆಗಳೂ ಕಂಡುಬರುತ್ತವೆಯೇ ಹೊರತು ಷಟ್ಪದಿಕಾರರ ಶೈಲಿಯಲ್ಲಿ ಪರಿಚಿತವಾದ ವಿಶೃಂಖಲತೆಯೂ ಸ್ವಾಚ್ಛಂದ್ಯವೂ ಕಂಡುಬರುವುದಿಲ್ಲ.

ರಾಘವಾಂಕನು ಷಟ್ಪದಿಯಲ್ಲಿಯೇ ತನ್ನ ಗ್ರಂಥಗಳನ್ನೆಲ್ಲಾ ಬರೆದು ಅವುಗಳಿಗೆ ಹೆಚ್ಚು ಪ್ರಾಶಸ್ತ್ಯ ಪ್ರಸಾರಗಳನ್ನು ತಂದದ್ದರಿಂದ 'ಈತನೇ ಅವುಗಳನ್ನು ನಿರ್ಮಿಸಿದನು' ಎಂದು ಪ್ರತೀತಿ ಬಂದಿರುವಂತೆ ಕಾಣುತ್ತದೆ. ಆದರೆ ರಾಘವಾಂಕನು ಷಟ್ಪದಿಯನ್ನು 'ನಿರ್ಮಿಸಿದ'ನೆಂದು ಹೇಳುವುದಕ್ಕೆ ಸರಿಯಾದ ಆಧಾರವಿಲ್ಲ. ಸಾಂಗತ್ಯ, ತ್ರಿಪದಿ, ಚೌಪದಿ ಮುಂತಾದವುಗಳಂತೆ ಷಟ್ಪದಿಯೂ ಅಚ್ಚಗನ್ನಡದ ಹಾಡುವೃತ್ತವಾಗಿದ್ದು ಬಹಳ ಹಿಂದಿನಿಂದಲೂ

---

[33] ತೂಕದ ಕೋಲ ತೊಲೆಯಾದಳು (೮-೩೮), ಸೀಗೆಯೊಳಗಣ ಬಾಳೆಯಾದುದು (೮-೧೦), ಕಡುಹಸಿದು ಕಸುಗಾಯನಗಿದ ಗಿಳಿಗಳ ಬಳಗದಂತೆ (೬-೩), ಹೇಱಿನೊಪ್ಪಿಸಿ ದವಂಗೆಲ್ಲಿಯದು ಸುಂಕ ? (೫-೭೮), ತುಂಬಿದ ಬಂಡಿಗೆ ಮೊಱಂ ದಿಮ್ಮಿತೇ ? (ಹ. ಕಾ., ೮-೨೬), ನಾಡ ಮದ್ದಂ ತಿಂದು ಕುತ್ತ ಕೆಡದಿರಬಹುದೆ ? (೭-೩೭).

ಕನ್ನಡಿಗರಲ್ಲಿ ರೂಢವಾಗಿದ್ದಂತೆ ತೋರುತ್ತದೆ. ಆದರೆ ಅದು ರಾಘವಾಂಕನ ಕಾಲದವರೆಗೆ, ವಿಶೇಷವಾಗಿ ಪ್ರೌಢಕಾವ್ಯದಲ್ಲಿ, ಪ್ರಚಾರಕ್ಕೆ ಬಂದಿರಲಾರದು. ಈ ಕಾಲಕ್ಕೆ ಹಿಂದೆ ಇರುವ ಚಂಪೂಗ್ರಂಥ ಪ್ರಚುರತೆಯನ್ನು ನೋಡಿದರೆ ಹೀಗೆನ್ನಿಸುತ್ತದೆ. ಅಂಥ ಷಟ್ಪದಿಗ್ರಂಥಗಳಿದ್ದರೆ ಅವು ಇದುವರೆಗೆ ಸಿಕ್ಕಿಲ್ಲ.

ಷಟ್ಪದಿಯು ರಾಘವಾಂಕನ ಕಾಲಕ್ಕಿಂತ ಹಿಂದೆಯೇ ಕನ್ನಡದಲ್ಲಿ ಹುಟ್ಟಿ ಬೆಳೆದಿತ್ತು ಎಂಬುದಕ್ಕೆ ನಾಗವರ್ಮನ ಛಂದೋಂಬುಧಿಯೇ (ಸು. ೯೯೦) ಸಾಕ್ಷಿಯಾಗಿದೆ. ಆದರಲ್ಲಿ ಅವನು—

ಮದನವತಿಯಕ್ಕರಂ ಚೌ
ಪದಿ ಗೀತಿಕೆ ಯೇಳೆ ತಿವದಿಯುತ್ಸಾಹಂ ಷ|
ಟ್ಪದಿಯಕ್ಕರಿಕೆ ಕರಂ ಚೆ
ಲ್ವೊದವಿದ ಛಂದೋವತಂಸಮಬ್ಜದಳಾಕ್ಷೀ ||

ಎಂದು ಕನ್ನಡವೃತ್ತಗಳ ಹೆಸರನ್ನೆಲ್ಲಾ ಹೇಳಿ ಅವುಗಳಿಗೆ ಲಕ್ಷಣವನ್ನೂ ಉದಾಹರಣೆಗಳನ್ನೂ ಕೊಟ್ಟಿದ್ದಾನೆ. ಈ ಪದ್ಯವು ಪ್ರಕ್ಷಿಪ್ತವೆಂದು ಹೇಳಲು ಸರಿಯಾದ ಪ್ರಮಾಣವಿಲ್ಲ. ನಾಗವರ್ಮನ ಕಾಲಕ್ಕೆ ಇದ್ದದ್ದು ಶರಷಟ್ಪದಿಯೊಂದೇ ಎಂದೂ, ಮೇಲಣ ಪದ್ಯದಲ್ಲಿ 'ಷಟ್ಪದಿ' ಎಂದರೆ ಶರಷಟ್ಪದಿಯೆಂದೇ ಅರ್ಥವೆಂದೂ, ಕೆಲವರು ಅಭಿಪ್ರಾಯಪಡುತ್ತಾರೆ. (ಕರ್ಣಾಟಕ ಕಾವ್ಯಕಲಾನಿಧಿಯಲ್ಲಿ ಪ್ರಕಾಶಿತವಾದ 'ಛಂದೋಂಬುಧಿ'ಯ ಟಿಪ್ಪಣಿ, ಪುಟ ೩೩.) ಇದೂ, ಮಿಕ್ಕ ಷಟ್ಪದಿಗಳಿದ್ದಿದ್ದರೆ ಅವೂ, ಆಗ ಎಷ್ಟರ ಮಟ್ಟಿಗೆ ಪ್ರೌಢಕವಿಗಳಿಂದ ಸಾಹಿತ್ಯದಲ್ಲಿ ಪ್ರಯುಕ್ತವಾಗಿ, ಲಕ್ಷಣ ಗ್ರಂಥಕಾರರಿಂದ ಪರಿಗೃಹೀತವಾಗಿದ್ದುವೋ ತಿಳಿಯದು. ಗ್ರಂಥಸ್ಥವಾಗಿರುವ ಪ್ರಯೋಗಗಳನ್ನೇ ಉದಹರಿಸುವುದು ಲಾಕ್ಷಣಿಕರ ಪದ್ಧತಿ. ಆದ್ದರಿಂದ ಮಿಕ್ಕ ಷಟ್ಪದಿಗಳು ನಾಗವರ್ಮನಿಗಿಂತ ಹಿಂದೆ ಹಾಡುಹಸೆಗಳಲ್ಲಿ ಮಾತ್ರ ಇದ್ದಿರಬಹುದು; ಅಥವಾ ಹನ್ನೆರಡು ಹದಿಮೂರನೆಯ ಶತಮಾನಗಳಲ್ಲಿ 'ವರ್ಣಕ' ಕಾವ್ಯಗಳು ಪ್ರಚಾರಕ್ಕೆ ಬಂದ ಹಾಗೆಲ್ಲಾ ಹುಟ್ಟಿ ಬೆಳೆದು ಬಂದಿದ್ದರೂ ಬಂದಿರಬಹುದು. ಹೀಗೆ ಅವು ಹುಟ್ಟಿ ಬೆಳೆಯುವುದಕ್ಕೆ ಆಗ ಕೆಲವು ಅನುಕೂಲ್ಯಗಳೂ ಇದ್ದುವು. ಶರಷಟ್ಪದಿಯ ಮೇಲ್ಪಂಕ್ತಿ ಇತ್ತು; ಸಣ್ಣ ಪಾದದ ಒಂದೂವರೆಯಷ್ಟನ್ನೂ

ಒಂದು ಗುರುವನ್ನೂ ಸೇರಿಸಿ ಒಂದು ದೊಡ್ಡ ಪಾದವನ್ನು ಮಾಡುವ ಪದ್ಧತಿ ಕಂದದಲ್ಲಿ ಇತ್ತು; ಪ್ರತಿಪಾದಕ್ಕೂ ನಾಲ್ಕು ನಾಲ್ಕು ಮಾತ್ರಾಗಣಗಳನ್ನು ಉಪಯೋಗಿಸಿ ರಚಿತವಾದ ರಗಳೆಗಳಿದ್ದುವು; ಪಾದಕ್ಕೆ ಇಪ್ಪತ್ತು ಮಾತ್ರೆಗಳುಳ್ಳ ಇಂಥ ಲಲಿತರಗಳೆಯನ್ನು ಹರಿಹರನು 'ಬಸವರಾಜ ದೇವರ ರಗಳೆ' ಯಲ್ಲಿ ಆಗಲೇ ಪೂರ್ಣಸ್ಥಲಗಳಲ್ಲಿ ಧಾರಾಳವಾಗಿ ಉಪಯೋಗಿಸಿದ್ದನು. ಇದಕ್ಕೂ ವಾರ್ಧಕಷಟ್ಪದಿಗೂ ಬಹಳ ದೂರವಿಲ್ಲ. (ಇದೇ ಈಗ ಅಂತ್ಯಪ್ರಾಸವಿಲ್ಲದೆ 'ಸರಳರಗಳೆ'ಯೆಂದು 'ಯಮುನ ಸೋಲು', 'ನಾಗರಿಕ' ಮುಂತಾದ ಕಾವ್ಯಗಳಲ್ಲಿ ಉಪಯೋಗಿಸಲ್ಪಡುತ್ತಿದೆ.) ಹರಿಹರನು ಟಕಾರಪ್ರಯೋಗದಲ್ಲಿ ಧೈರ್ಯಮಾಡಿದಂತೆ ಛಂದೋಮಾರ್ಗದಲ್ಲಿಯೂ ಧೈರ್ಯಮಾಡಿ, ಹಿಂದೆ ಪ್ರಾಸಂಗಿಕವಾಗಿ ಉಪಯೋಗದಲ್ಲಿದ್ದ ರಗಳೆಗೆ ಪ್ರಾಧಾನ್ಯವನ್ನು ಕೊಟ್ಟ ಮೇಲೆ, ಅವನ ಶಿಷ್ಯನಾದ ರಾಘವಾಂಕನು ಅಲ್ಲಿಂದ ಮುಂದಕ್ಕೆ ಮತ್ತೊಂದು ಹೆಜ್ಜೆಯಿಟ್ಟು ವಾರ್ಧಕಷಟ್ಪದಿಯನ್ನು ಕಲ್ಪಿಸಿಕೊಂಡಿದ್ದರೂ ಕಲ್ಪಿಸಿಕೊಂಡಿರಬಹುದು. (ಒಂದೊಂದು ಪದ್ಯದಿಂದ ಆಯಾ ಸಂಧಿಯ ಕಥಾಸಾರಾಂಶವನ್ನು ತಿಳಿಸುವ ಪದ್ಧತಿಯನ್ನೂ ಹರಿಹರನು ತನ್ನ ರಗಳೆಯ ಕಾವ್ಯದಲ್ಲಿ ಆಗಲೇ ತಂದಿದ್ದನು.) ಆದರೆ 'ಹರಿಶ್ಚಂದ್ರಕಾವ್ಯ'ದ ವಾರ್ಧಕಷಟ್ಪದಿಯು ಅನುಭವವಿಲ್ಲದವನ ಕೈಗೆ ಸಿಕ್ಕಿದ ಹೊಸ ಪ್ರಯೋಗವೆನಿಸುವುದಿಲ್ಲ. ಇದಿಷ್ಟರಿಂದಲೇ ಅವನ ಹಿಂದೆ ಇದು ಉಪಯೋಗದಲ್ಲಿತ್ತೆಂದು ಹೇಳಲೂ ಆಗದು. ಏಕೆಂದರೆ ಛಂದಸ್ಸಿನ ತಾನವನ್ನೂ ಧಾಟಿಯನ್ನೂ ಮನಗಂಡ ಭಾಷಾನಿಪುಣನು ಯಾವ ಹೊಸ ವೃತ್ತವನ್ನಾದರೂ ಹಳೆಯದರಷ್ಟೇ ಚೆನ್ನಾಗಿ ಬರೆಯುವನು.

ಹೀಗೆ ರಾಘವಾಂಕನು ಷಟ್ಪದಿನಿರ್ಮಾಪಕನೆಂದು ಹೇಳಲಾರದಿದ್ದರೂ ಷಟ್ಪದಿಸಂಪ್ರದಾಯ ಸ್ಥಾಪಕನೆಂದು ಹೇಳಬಹುದು. ಚಂಪೂಸಂಪ್ರದಾಯಕ್ಕೆ ಪಂಪಾದಿಯಾದ ಜೈನಕವಿಗಳು ಹೇಗೆ ಸ್ಥಾಪಕರಾದರೋ ಹಾಗೇ ಷಟ್ಪದಿ ಸಂಪ್ರದಾಯಕ್ಕೆ, ಅದರಲ್ಲಿಯೂ ವಾರ್ಧಕಷಟ್ಪದಿಯ ಸಂಪ್ರದಾಯಕ್ಕೆ, ರಾಘವಾಂಕಾದಿಯಾದ ವೀರಶೈವ ಕವಿಗಳು ಸ್ಥಾಪಕರಾದರೆಂದು ಹೇಳಬಹುದು. ಆದ್ದರಿಂದಲೇ ಇಲ್ಲಿಂದ ಮುಂದೆ ಬಂದ ಚೆನ್ನಬಸವಪುರಾಣ, ಜೈಮಿನಿ ಭಾರತ ಮುಂತಾದ ಪ್ರಸಿದ್ಧ ವಾರ್ಧಕ ಷಟ್ಪದಿಗ್ರಂಥಗಳೆಲ್ಲಾ ಭಾಷೆ,

ಶೈಲಿ, ವರ್ಣನೆ, ಅಲಂಕಾರ, ಚಮತ್ಕಾರಗಳಲ್ಲಿ 'ಹರಿಶ್ಚಂದ್ರಚರಿತ್ರೆ'ಯನ್ನೇ ಹೋಲುತ್ತವೆ. ಚಂಪುಗಳ ಭಾಷೆ ಓಜಸ್ವಿಯಾದ ಸಂಸ್ಕೃತವನ್ನೂ ಬಿಕ್ಕಟ್ಟಾದ ಹಳಗನ್ನಡವನ್ನೂ ಬೆರಸಿ ಎರಕಹೊಯ್ದಂತಿರುತ್ತದೆ. ಷಟ್ಪದಿಗಳಲ್ಲಿ ಈ ಶೈಲಿ ಅಲ್ಲಲ್ಲಿ ಬಂದರೂ ಒಟ್ಟಿನ ಮೇಲೆ ಅರಳಿದ ಹೂಗೊಂಚಲಿನಲ್ಲಿರುವ ವಿಕಾಸ ಲಘುತ್ವ ಮೃದುತ್ವಗಳೇ ಹೆಚ್ಚು. ಇದನ್ನು ಪಡೆಯಲು ಷಟ್ಪದಿಕರ್ತರು ಹಳಗನ್ನಡದಿಂದ ಮೊದಲುಮಾಡಿಕೊಂಡು ಹೊಸಗನ್ನಡದವರೆಗೆ ಪ್ರತಿಯೊಂದು ಕಾಲದ ರೂಪಗಳನ್ನೂ ಉಪಯೋಗಿಸುತ್ತಾರೆ. ಈ ಭಾಷಾಪದ್ಧತಿಯು 'ಹರಿಶ್ಚಂದ್ರಕಾವ್ಯ'ದಲ್ಲಿಯೇ ಕಂಡುಬರುತ್ತದೆ. ರಾಘವಾಂಕನು ತನ್ನ ಗುರುವನ್ನನುಸರಿಸಿ, (ಗಿರಿಜಾಕಲ್ಯಾಣ, I, ೩೨) ಟ ಳ ಭೇದವನ್ನು ಬಿಟ್ಟಿದ್ದಾನೆ. ಪ್ರಾಸಸ್ಥಾನಗಳಲ್ಲಿ ಇವು ಬೆರೆದೇ ಬರುತ್ತವೆ. ಹರಿಶ್ಚಂದ್ರ (ಪುಟ ೨), ದೈವವ (೨), ಮಧ್ಯದೊಳು (೩), ದೇವರು (೧೦೮), ಕಣ್ಣಾಲಿ (೯೨), ಸಾವಡಂ (೨), ಇರ್ದನು (೫), ಕಲಿತಂ(೬), ಕಾಣೆ (೯), ಸಾಧಿಸುವ (೨೫), ಹೇಳಿಗೆ (೪), ಬಿದ್ದು (೩೦), ಒಮ್ಮೆ (೫), ಕಲು (೭), ಹೊದ್ದು (೮), ಬಪ್ಪ (೧೦೧), ಇಹ (೯೯), ಮುಂತಾದ ಶಬ್ದರೂಪಗಳನ್ನೂ ಅಂಥವು ಎಷ್ಟು ಹೆಚ್ಚಾಗಿ ಬರುತ್ತವೆಂಬುದನ್ನೂ ನೋಡಿದರೆ ರಾಘವಾಂಕನು ಹಳಗನ್ನಡದ ರೂಪಗಳ ಜೊತೆಗೆ ನಡುಗನ್ನಡ ಹೊಸಗನ್ನಡ ರೂಪಗಳನ್ನು ವಿಶೇಷವಾಗಿ ಉಪಯೋಗಿಸುತ್ತಾನೆಂಬುದು ಗೊತ್ತಾಗುತ್ತದೆ. ಪ್ರೌಢಕವಿಗಳು ಹೀಗೆ ಹೊಸ ರೂಪಗಳು, ಹೊಸ ಪ್ರಯೋಗಗಳು, ಹೊಸ ರೂಢಿಗಳು ಮುಂತಾದವುಗಳನ್ನು ಹೆಚ್ಚು ಸ್ವಾತಂತ್ರ್ಯದಿಂದ ಪ್ರಚಾರಕ್ಕೆ ತಂದ ಹಾಗೆಲ್ಲಾ ಭಾಷೆಯು ಚಿಗುರಿ ಹಬ್ಬಿ ಬೆಳೆಯುತ್ತದೆ. ಷಟ್ಪದಿಕಾರರಿಗೆ ಇದಕ್ಕಾಗಿ ಬರುವ ಕೀರ್ತಿಯಲ್ಲಿ ಒಂದು ದೊಡ್ಡ ಭಾಗವು ಈ ಸಂಪ್ರದಾಯಕ್ಕೆ ಮೂಲಕರ್ತರಲ್ಲಿ ಒಬ್ಬನಾದ ರಾಘವಾಂಕನಿಗೆ ಸಲ್ಲತಕ್ಕದ್ದಾಗಿದೆ.

ಉಪಸಂಹಾರ

ಹರಿಶ್ಚಂದ್ರನ ಕಥೆ ಬಹಳ ಹಳೆಯದಾದರೂ ರಾಘವಾಂಕನಿಗಿಂತ ಹಿಂದೆ ಈ ವಿಷಯವನ್ನು ಪ್ರತಿಪಾದಿಸಿ ಬರೆದ ಸಂಸ್ಕೃತ ಕನ್ನಡ ಕಾವ್ಯಗಳು ಬಹು

ಅಪರೂಪ; ಅವನಿಗಿಂತ ಹಿಂದೆ ಕನ್ನಡದಲ್ಲಿ ಬರೆದವರು ಪ್ರಾಯಿಕವಾಗಿ ಜೈನರು; ಅವರು ತೀರ್ಥಂಕರಪುರಾಣಗಳನ್ನೇ ವಿಶೇಷವಾಗಿ ಬರೆದರು; ಸಂಸ್ಕೃತ ಸಾಹಿತ್ಯದಲ್ಲಿಯೂ ಈ ಕಥೆಯುಳ್ಳ ಪ್ರಸಿದ್ಧ ಕಾವ್ಯವೆಂದರೆ 'ಚಂಡಕೌಶಿಕನಾಟಕ' (೧೦ನೆಯ ಶತಮಾನ) ಒಂದೇ. ಇದು ಕಥೆಯಲ್ಲಿ ಮಾರ್ಕಂಡೇಯ ಪುರಾಣವನ್ನು ಹೋಲುತ್ತದೆ; ಇಲ್ಲಿ ವಸಿಷ್ಠ ವಿಶ್ವಾಮಿತ್ರರ ವ್ಯಾಜ್ಯವಿಲ್ಲ. 'ದುರ್ವಿಲಂಘ್ಯವಾದ ಪೂರ್ವಕರ್ಮ ಪರಿಪಾಕ'ದಿಂದ ಹರಿಶ್ಚಂದ್ರನಿಗೆ ಕಷ್ಟ ಪ್ರಾಪ್ತವಾಗುತ್ತದೆಂದೂ ಪ್ರಚಂಡಕೋಪಿಯಾದ ವಿಶ್ವಾಮಿತ್ರನು ಅದಕ್ಕೆ ನಿಮಿತ್ತಮಾತ್ರನಾಗುತ್ತಾನೆಂದೂ ಸೂಚಿತವಾಗಿದೆ. ಅದನ್ನು ಓದುತ್ತ ಓದುತ್ತ, ಈ ಅವನ ಮುಂಗೋಪವೇ ಅವನ ಜೀವಮಾನದ ಸೋಲಿಗೆಲ್ಲಾ ಕಾರಣವೆನ್ನಿಸುತ್ತದೆ. ಒಟ್ಟಿನಮೇಲೆ ಆ ನಾಟಕದಲ್ಲಿ 'ಚಂಡ ಕೌಶಿಕ'ನಿಗೇ ಪ್ರಾಶಸ್ತ್ಯ. ಹರಿಶ್ಚಂದ್ರನ ಸತ್ಯ ಧರ್ಮ ಶೀಲಗಳು ಆಶ್ಚರ್ಯ ಕರವಾಗಿ ಅವನಲ್ಲಿ ಗೌರವವನ್ನುಂಟುಮಾಡುವಂತಿದ್ದರೂ ಅಂಥ ಧರ್ಮವಂತ ನನ್ನೂ ಕೈಯಲ್ಲಿ ಹಿಡಿದು ಹಿಸುಕಿಬಿಡುವಂತಿರುವ ವಿಧಿರೂಪನಾದ ಆ 'ಚಂಡ ಕೌಶಿಕ'ನನ್ನು ಚಿತ್ರಿಸಬೇಕೆಂಬುದು ಕವಿಯ ಆಶಯ. ಅಂತು ಕೌಶಿಕನ ದೃಷ್ಟಿಯಿಂದ ನೋಡಲಿ, ಹರಿಶ್ಚಂದ್ರನ ದೃಷ್ಟಿಯಿಂದ ನೋಡಲಿ, ಈ ಕಥೆಯು ಪಾಶ್ಚಾತ್ಯ ಜಾತಿಯ ರುದ್ರನಾಟಕಕ್ಕೆ ಉತ್ತಮವಾದ ವಸ್ತು. ಶೋಕ ವೀರ ವೈರಾಗ್ಯಗಳನ್ನು ಪ್ರತಿಪಾದಿಸುವುದಕ್ಕೆ ಇದರಲ್ಲಿ ಬೇಕಾದಷ್ಟು ಅವಕಾಶವಿದೆ. ಇಂಥ ಜನರಂಜಕವೂ ಲೋಕಪೂಜ್ಯವೂ ಆದ ಕಥೆಯನ್ನು ತೆಗೆದುಕೊಂಡು, ಅದನ್ನು ವೀರ ಕರುಣ ಪರಿಪೂರ್ಣವಾಗಿ, ಆದರೆ ಸುಗಮವಾದ ಷಟ್ಪದಿ ಕಾವ್ಯವಾಗಿ, ಬರೆದಿರುವ ಕೀರ್ತಿಯು 'ರಾಘವಾಂಕಪಂಡಿತ'ನದು. ಆತನ ಮೇಲ್ಪಂಕ್ತಿಯನ್ನು ಕಥಾನುಸರಣದಲ್ಲಲ್ಲದಿದ್ದರೆ ಕಾವ್ಯಪದ್ಧತಿಯಲ್ಲಾದರೂ ಈಚಿನ ಷಟ್ಪದಿಕಾವ್ಯಕರ್ತರು ಅನುವರ್ತಿಸಿಕೊಂಡುಬಂದಿದ್ದಾರೆ.

ಎ. ಆರ್. ಕೃ.

ಅನುಬಂಧ I

ಸತ್ಯವ್ರತ ತ್ರಿಶಂಕುವಿನ ಕಥೆ

ಹರಿವಂಶ, ಬ್ರಹ್ಮ, ಶಿವ ಪುರಾಣಗಳು	ವಾಯು, ಬ್ರಹ್ಮಾಂಡ, ಲಿಂಗ ಪುರಾಣಗಳು

ತಸ್ಯ ಸತ್ಯವ್ರತೋ ನಾಮ ಕುಮಾರೋಽಭೂನ್ಮಹಾಬಲಃ |

ಪಾಣಿಗ್ರಹಣಮಂತ್ರಾಣಾಂ	ತೇನ ಭಾರ್ಯಾ ವಿದರ್ಭಸ್ಯ
ವಿಘ್ನಂ ಚಕ್ರೇ ಸ ದುರ್ಮತಿಃ ||	ಹೃತಾ ಹತ್ವಾ ದಿವೌಕಸಃ ||
ಯೇನ ಭಾರ್ಯಾ ಹೃತಾ ಪೂರ್ವಂ	ಪಾಣಿಗ್ರಹಣಮಂತ್ರೇಷು
ಕೃತೋದ್ವಾಹಾ ಪರಸ್ಯ ವೈ |	ನಿಷ್ಠಾಮಪ್ರಾಪಿತೇಷ್ವಿಹ |
ಬಾಲ್ಯಾತ್ ಕಾಮಾಚ್ಚ ಮೋಹಾಚ್ಚ	ಕಾಮಾದ್ಬಲಾಚ್ಚ ಮೋಹಾಚ್ಚ
ಸಂಹರ್ಷಾಚ್ಚಾಪಲೇನ ಚ ||	ಸಂಹರ್ಷೇಣ ಬಲೇನ ಚ ||
ಜಹಾರ ಕನ್ಯಾಂ ಕಾಮಾಚ್ಚ	ಭಾವಿನೋಽರ್ಥಸ್ಯ ಚ ಬಲಾತ್
ಕಸ್ಯಚಿತ್ಪುರವಾಸಿನಃ |	ತತ್ಕೃತಂ ತೇನ ಧೀಮತಾ |

ತಮಧರ್ಮೇಣ ಸಂಯುಕ್ತಂ ರಾಜಾ ತ್ರಯ್ಯಾರುಣೋಽತ್ಯಜತ್ ||
ಅಪಧ್ವಂಸೇತಿ ಬಹುಶೋ ವದನ್ ಕ್ರೋಧಸಮನ್ವಿತಃ |
ಪಿತರಂ ಸೋಽಬ್ರವೀತ್ ತ್ಯಕ್ತಃ ಕ್ವ ಗಚ್ಛಾಮೀತಿ ವೈ ಮುಹುಃ ||
ಪಿತಾ ಚೈನಮಥೋವಾಚ ಶ್ವಪಾಕೈಸ್ಸಹ ವರ್ತಯ |
ನಾಹಂ ಪುತ್ರೇಣ ಪುತ್ರಾರ್ಥೀ ತ್ವಯಾದ್ಯ ಕುಲಪಾಂಸನ ||
ಇತ್ಯುಕ್ತಸ್ಸ ನಿರಾಕ್ರಾಮನ್ನಗರಾದ್ವಚನಾತ್ ಪಿತುಃ |
ನ ಚೈನಂ ವಾರಯಾಮಾಸ ವಸಿಷ್ಠೋ ಭಗವಾನ್ ಋಷಿಃ ||
ಸ ತು ಸತ್ಯವ್ರತೋ ಧೀಮಾನ್ ಶ್ವಪಾಕಾವಸಥಾಂತಿಕೇ |
ಪಿತ್ರಾ ತ್ಯಕ್ತೋಽವಸದ್ವೀರಃ ಪಿತಾ ಚಾಸ್ಯ ವನಂ ಯಯೌ ||
ತಸ್ಮಿಂಸ್ತು ವಿಷಯೇ ತಸ್ಯ ನಾವರ್ಷತ್ ಪಾಕಶಾಸನಃ |
ಸಮಾ ದ್ವಾದಶ ಸಂಪೂರ್ಣಾಸ್ತೇನಾಧರ್ಮೇಣ ವೈ ತದಾ ||
ದಾರಾಂಸ್ತು ತಸ್ಯ ವಿಷಯೇ ವಿಶ್ವಾಮಿತ್ರೋ ಮಹಾತಪಾಃ |

ಸಂನ್ಯಸ್ಯ ಸಾಗರಾನೂಪೇ ಚಕಾರ ವಿಪುಲಂ ತಪಃ ||
ತಸ್ಯ ಪತ್ನೀ ಗಳೇ ಬದ್ಧ್ವಾ ಮಧ್ಯಮಂ ಪುತ್ರಮೌರಸಂ |
ಶೇಷಸ್ಯ ಭರಣಾರ್ಥಾಯ ವ್ಯಕ್ರೀಣಾದ್ಗೋಶತೇನ ವೈ || ೨೦
ತಂ ತು ಬದ್ಧಂ ಗಳೇ ದೃಷ್ಟ್ವಾ ವಿಕ್ರಯಾರ್ಥಂ ನರೋತ್ತಮಃ |
ಮಹರ್ಷಿಪುತ್ರಂ ಧರ್ಮಾತ್ಮಾ ಮೋಕ್ಷಯಾಮಾಸ ಸುವ್ರತಃ ||
ಸತ್ಯವ್ರತೋ ಮಹಾಬಾಹುರ್ಭರಣಂ ತಸ್ಯ ಚಾಕರೋತ್ |
ವಿಶ್ವಾಮಿತ್ರಸ್ಯ ತುಷ್ಟ್ಯರ್ಥಂ ಅನುಕಂಪಾರ್ಥಮೇವ ಚ ||
ಸೋಽಭವದ್ಗಾಲವೋ ನಾಮ ಗಳೇ ಬಂಧಾನ್ಮಹಾತಪಾಃ | ೨೫
ಮಹರ್ಷಿಃ ಕೌಶಿಕೋ ಧೀಮಾಂಸ್ತೇನ ವೀರೇಣ ಮೋಕ್ಷಿತಃ ||
ಸತ್ಯವ್ರತಸ್ತು ಭಕ್ತ್ಯಾ ಚ ಕೃಪಯಾ ಚ ಪ್ರತಿಜ್ಞಯಾ |
ವಿಶ್ವಾಮಿತ್ರಕಳತ್ರಂ ಚ ಬಭಾರ ವಿನಯೇ ಸ್ಥಿತಃ ||
ಹತ್ವಾ ಮೃಗಾನ್ ವರಾಹಾಂಶ್ಚ ಮಹಿಷಾಂಶ್ಚ ವನೇಚರಾನ್ |
ವಿಶ್ವಾಮಿತ್ರಾಶ್ರಮಾಭ್ಯಾಸೇ ತನ್ಮಾಂಸಮನಯತ್ ತತಃ || ೩೦
ಉಪಾಂಶುವ್ರತಮಾಸ್ಥಾಯ ದೀಕ್ಷಾಂ ದ್ವಾದಶವಾರ್ಷಿಕೀಂ |
ಪಿತುರ್ನಿಯೋಗಾದಭಜನ್ನೃಪೇ ತು ವನಮಾಸ್ಥಿತೇ ||
ಅಯೋಧ್ಯಾಂ ಚೈವ ರಾಷ್ಟ್ರಂ ಚ ತಥೈವಾಂತಃಪುರಂ ಮುನಿಃ |
ಯಾಜ್ಯೋಪಾಧ್ಯಾಯಸಂಯೋಗಾತ್ ವಸಿಷ್ಠಃ ಪರ್ಯರಕ್ಷತ ||
ಸತ್ಯವ್ರತಸ್ತು ಬಾಲ್ಯಾತ್ತು ಭಾವಿನೋಽರ್ಥಸ್ಯ ವೈ ಬಲಾತ್ | ೩೫
ವಸಿಷ್ಠೇಽಭ್ಯಧಿಕಂ ಮನ್ಯುಂ ಧಾರಯಾಮಾಸ ನಿತ್ಯದಾ ||
ಪಿತ್ರಾ ಹಿ ತಂ ತದಾ ರಾಷ್ಟ್ರಾತ್ ಪರಿತ್ಯಕ್ತಂ ಸ್ವಮಾತ್ಮಜಂ |
ನ ವಾರಯಾಮಾಸ ಮುನಿರ್ವಸಿಷ್ಠಃ ಕಾರಣೇನ ವೈ ||
ಪಾಣಿಗ್ರಹಣಮಂತ್ರಾಣಾಂ ನಿಷ್ಠಾ ಸ್ಯಾತ್ ಸಪ್ತಮೇ ಪದೇ |
ಜಾನನ್ ಧರ್ಮಾನ್ವಸಿಷ್ಠಸ್ತು | ಜಾನನ್ ಧರ್ಮಾನ್ವಸಿಷ್ಠಸ್ತು
ನ ಮಾಂ ತ್ರಾತೀತಿ ಭೋ ದ್ವಿಜಾಃ | ನ ಚ ಮಂತ್ರಾನಿಹೇಚ್ಛತಿ || ೪೦
ಇತಿ ಸತ್ಯವ್ರತೋ ರೋಷಂ ವಸಿಷ್ಠೇ ಮನಸಾಕರೋತ್ |
ಗುಣಬುದ್ಧ್ಯಾ ತು ಭಗವಾನ್ ವಸಿಷ್ಠಃ ಕೃತವಾಂಸ್ತದಾ ||

ನ ತು ಸತ್ಯವ್ರತಸ್ತಸ್ಯ ತಮುಪಾಂಶುಮಬುಧ್ಯತ।
ತಸ್ಮಿನ್ನಪರಿತೋಷೋ ಯಃ ಪಿತುರಾಸೀನ್ಮಹಾತ್ಮನಃ॥
ತೇನ ದ್ವಾದಶವರ್ಷಾಣಿ ನಾವರ್ಷತ್ ಪಾಕಶಾಸನಃ। ೪೫
ತೇನ ತ್ವಿದಾನೀಂ ವಹತಾ ದೀಕ್ಷಾಂ ತಾಂ ದುರ್ವಹಾಂ ಭುವಿ॥
ಕುಲಸ್ಯ ನಿಷ್ಕೃತಿಸ್ಸ್ವಸ್ಯ ಕೃತಾ ಸಾ ವೈ ಭವೇದಿತಿ।
ನ ತಂ ವಸಿಷ್ಠೋ ಭಗವಾನ್ ಪಿತ್ರಾ ತ್ಯಕ್ತಂ ನ್ಯವಾರಯತ್॥
ಅಭಿಷೇಕ್ಷ್ಯಾಮ್ಯಹಂ ಪುತ್ರಂ
ಅಸ್ಯೇತ್ಯೇವಂಮತಿರ್ಮುನಿಃ।
ಅಭಿಷೇಕ್ಷ್ಯಾಮ್ಯಹಂ ರಾಜ್ಯೇ
ಪಶ್ಚಾದೇನಮಿತಿ ಪ್ರಭುಃ॥
ಸ ತು ದ್ವಾದಶವರ್ಷಾಣಿ ದೀಕ್ಷಾಂ ತಾಮುದ್ವಹನ್ ಬಲೀ॥ ೫೦
ಅವಿದ್ಯಮಾನೇ ಮಾಂಸೇ ತು ವಸಿಷ್ಠಸ್ಯ ಮಹಾತ್ಮನಃ।
ಸರ್ವಕಾಮದುಘಾಂ ದೋಗ್ಧ್ರೀಂ ಸ ದದರ್ಶ ನೃಪಾತ್ಮಜಃ॥
ತಾಂ ವೈ ಕ್ರೋಧಾಚ್ಚ ಮೋಹಾಚ್ಚ ಶ್ರಮಾಚ್ಚೈವ ಕ್ಷುಧಾನ್ವಿತಃ।
ದಸ್ಯುಧರ್ಮಗತೋ ರಾಜಾ ಜಘಾನ ಬಲಿನಾಂ ವರಃ॥
ಸ ತನ್ಮಾಂಸಂ ಸ್ವಯಂ ಚೈವ ವಿಶ್ವಾಮಿತ್ರಸ್ಯ ಚಾತ್ಮಜಾನ್। ೫೫
ಭೋಜಯಾಮಾಸ ತಚ್ಛ್ರುತ್ವಾ ವಸಿಷ್ಠೋಽಪ್ಯಸ್ಯ ಚುಕ್ರುಧೇ॥
ಪ್ರೋವಾಚ ಚೈವ ಭಗವಾನ್ ವಸಿಷ್ಠಸ್ತಂ ನೃಪಾತ್ಮಜಂ।
ಪಾತಯೇಯಮಹಂ ಕ್ರೂರ ತವ ಶಂಕುಂ ಅಯೋಮಯಂ॥
ಯದಿ ತೇ ದ್ವಾವಿಮೌ ಶಂಕೂ
ನ ಸ್ಯಾತಾಂ ವೈ ಕೃತೌ ಪುನಃ।
ಯದಿ ತೇ ತ್ರೀಣಿ ಶಂಕೂನಿ
ನ ಸ್ಯುರ್ಹಿ ಪುರುಷಾಧಮ॥
ಪಿತುಶ್ಚಾಪರಿತೋಷೇಣ ಗುರೋರ್ದೋಗ್ಧ್ರೀವಧೇನ ಚ। ೬೦
ಅಪ್ರೋಕ್ಷಿತೋಪಯೋಗಾಚ್ಚ ತ್ರಿವಿಧಸ್ತೇ ವ್ಯತಿಕ್ರಮಃ॥
ಏವಂ ಸ ತ್ರೀಣಿ ಶಂಕೂನಿ ದೃಷ್ಟ್ವಾ ತಸ್ಯ ಮಹಾತಪಾಃ।
ತ್ರಿಶಂಕುರಿತಿ ಹೋವಾಚ ತ್ರಿಶಂಕುಸ್ತೇನ ಸ ಸ್ಮೃತಃ॥
ವಿಶ್ವಾಮಿತ್ರಸ್ತು ದಾರಾಣಾಂ ಆಗತೋ ಭರಣೇ ಕೃತೇ।
ತತಸ್ತಸ್ಮೈ ವರಂ ಪ್ರಾದಾತ್ ಮುನಿಃ ಪ್ರೀತಸ್ತ್ರಿಶಂಕವೇ॥ ೬೫
ಛಂದ್ಯಮಾನೋವರೇಣಾಥ ವರಂ ವವ್ರೇ ನೃಪಾತ್ಮಜಃ।

ಅನಾವೃಷ್ಟಿಭಯೇ ತಸ್ಮಿನ್ ಗತೇ ದ್ವಾದಶವಾರ್ಷಿಕೇ ||
ಪಿತ್ರ್ಯೇಭಿಷಿಚ್ಯ ರಾಜ್ಯೇ ತು ಯಾಜಯಾಮಾಸ ತಂ ಮುನಿಃ |
ಮಿಷತಾಂ ದೇವತಾನಾಂ ಚ ವಸಿಷ್ಠಸ್ಯ ಚ ಕೌಶಿಕಃ ||
ಸಶರೀರಂ ತದಾ ತಂ ವೈ ದಿವಮಾರೋಪಯತ್ ಪ್ರಭುಃ |
ಮಿಷತಸ್ತು ವಸಿಷ್ಠಸ್ಯ ತದದ್ಭುತಮಿವಾಭವತ್ ||
ಅತ್ರಾಪ್ಯುದಾಹರಂತೀಮೌ ಶ್ಲೋಕೌ ಪೌರಾಣಿಕಾ ಜನಾಃ |
ವಿಶ್ವಾಮಿತ್ರಪ್ರಸಾದೇನ ತ್ರಿಶಂಕುರ್ದಿವಿ ರಾಜತೇ ||
ದೇವೈಸ್ಸಾರ್ಧಂ ಮಹಾತೇಜಾನುಗ್ರಹಾತ್ ತಸ್ಯ ಧೀಮತಃ ||

ಅನುಬಂಧ II

ಶುನಶ್ಶೇಪನ ಕಥೆ

(ಐತರೇಯ ಬ್ರಾಹ್ಮಣ; ಪಂಚಿಕಾ ೭, ಅಧ್ಯಾಯ ೩)

ಖಂಡ ೧

ಹರಿಶ್ಚಂದ್ರೋ ಹ ವೈಧಸ ಐಕ್ಷ್ವಾಕೋ ರಾಜಾಽಪುತ್ರ ಆಸ. ತಸ್ಯ ಹ ಶತಂ ಜಾಯಾ ಬಭೂವುಃ. ತಾಸು ಪುತ್ರಂ ನ ಲೇಭೇ. ತಸ್ಯ ಹ ಪರ್ವತ ನಾರದೌ ಗೃಹ ಊಷತುಃ. ಸ ಹ ನಾರದಂ ಪಪ್ರಚ್ಛ :—

ಯಂ ನ್ವಿಮಂ ಪುತ್ರಮಿಚ್ಛಂತಿ ಯೇ ವಿಜಾನಂತಿ ಯೇ ಚ ನ|
ಕಿಂ ಸ್ವಿತ್ಪುತ್ರೇಣ ವಿಂದತೇ ತನ್ಮ ಆಚಕ್ಷ್ವ ನಾರದ ||

ಇತಿ. ಸ ಏಕಯಾ ಪೃಷ್ಟೋ ದಶಭಿಃ ಪ್ರತ್ಯುವಾಚ :—

ಋಣಮಸ್ಮಿನ್ ಸಂನಯತ್ಯಮೃತತ್ವಂ ಚ ಗಚ್ಛತಿ|
ಪಿತಾ ಪುತ್ರಸ್ಯ ಜಾತಸ್ಯ ಪಶ್ಯೇಚ್ಚೇಜ್ಜೀವತೋ ಮುಖಂ ||
ಯಾವಂತಃ ಪೃಥಿವ್ಯಾಂ ಭೋಗಾ ಯಾವಂತೋ ಜಾತವೇದಸಿ|
ಯಾವಂತೋ ಅಪ್ಸು ಪ್ರಾಣಿನಾಂ ಭೂಯಾನ್ಪುತ್ರೇ ಪಿತುಸ್ತತಃ ||
ಶಶ್ವತ್ಪುತ್ರೇಣ ಪಿತರೋಽತ್ಯಾಯನ್ ಬಹುಲಂ ತಮಃ|
ಆತ್ಮಾ ಹಿ ಜಜ್ಞ ಆತ್ಮನಃ ಸ ಇರಾವತ್ಯತಿತಾರಿಣೀ ||
ಕಿಂ ನು ಮಲಂ ಕಿಮಜಿನಂ ಕಿಮು ಶ್ಮಶ್ರೂಣಿ ಕಿಂ ತಪಃ|
ಪುತ್ರಂ ಬ್ರಹ್ಮಾಣ ಇಚ್ಛಧ್ವಂ ಸ ವೈ ಲೋಕೋಽವದಾವದಃ ||
ಅನ್ನಂ ಹ ಪ್ರಾಣಃ ಶರಣಂ ಹ ವಾಸೋ
ರೂಪಂ ಹಿರಣ್ಯಂ ಪಶವೋ ವಿವಾಹಃ|
ಸಖಾ ಹ ಜಾಯಾ ಕೃಪಣಂ ಹ ದುಹಿತಾ
ಜ್ಯೋತಿರ್ಹ ಪುತ್ರಃ ಪರಮೇ ವ್ಯೋಮನ್ ||
ಪತಿರ್ಜಾಯಾಂ ಪ್ರವಿಶತಿ ಗರ್ಭೋ ಭೂತ್ವಾ ಸ ಮಾತರಂ|
ತಸ್ಯಾಂ ಪುನರ್ನವೋ ಭೂತ್ವಾ ದಶಮೇ ಮಾಸಿ ಜಾಯತೇ ||

ತಜ್ಜಾಯಾ ಜಾಯಾ ಭವತಿ ಯದಸ್ಯಾಂ ಜಾಯತೇ ಪುನಃ |
ಆಭೂತಿರೇಷಾ ಭೂತಿರ್ಬೀಜಮೇತನ್ನಿಧೀಯತೇ ||
ದೇವಾಶ್ಚೈತಾಮೃಷಯಶ್ಚ ತೇಜಃ ಸಮಭರನ್ಮಹತ್ |
ದೇವಾ ಮನುಷ್ಯಾನಬ್ರುವನ್ನೇಷಾ ವೋ ಜನನೀ ಪುನಃ ||
ನಾಪುತ್ರಸ್ಯ ಲೋಕೋಽಸ್ತೀತಿ ತತ್ಸರ್ವೇ ಪಶವೋ ವಿದುಃ |
ತಸ್ಮಾತ್ತು ಪುತ್ರೋ ಮಾತರಂ ಸ್ವಸಾರಂ ಚಾಧಿರೋಹತಿ ||
ಏಷ ಪಂಥಾ ಉರುಗಾಯಃ ಸುಶೇವೋ
ಯಂ ಪುತ್ರಿಣ ಆಕ್ರಮಂತೇ ವಿಶೋಕಾಃ |
ತಂ ಪಶ್ಯಂತಿ ಪಶವೋ ವಯಾಂಸಿ ಚ
ತಸ್ಮಾತ್ತೇ ಮಾತ್ರಾಪಿ ಮಿಥುನೀಭವಂತಿ ||

ಇತಿ ಹಾಸ್ಮಾ ಆಖ್ಯಾಯ.

ಖಂಡ ೨

ಅಥೈನಮುವಾಚ ವರುಣಂ ರಾಜಾನಮುಪಧಾವ ಪುತ್ರೋ ಮೇ ಜಾಯತಾಂ ತೇನ ತ್ವಾ ಯಜಾ ಇತಿ. ತಥೇತಿ ಸ ವರುಣಂ ರಾಜಾನಮುಪಸಸಾರ ಪುತ್ರೋ ಮೇ ಜಾಯತಾಂ ತೇನ ತ್ವಾ ಯಜಾ ಇತಿ, ತಥೇತಿ. ತಸ್ಯ ಹ ಪುತ್ರೋ ಜಜ್ಞೇ ರೋಹಿತೋ ನಾಮ. ತಂ ಹೋವಾಚಾಜನಿ ತೇ ವೈ ಪುತ್ರೋ ಯಜಸ್ವ ಮಾಽನೇನೇತಿ. ಸ ಹೋವಾಚ ಯದಾ ವೈ ಪಶುರ್ನಿರ್ದಶೋಭವತ್ಯಥ ಸ ಮೇಧ್ಯೋ ಭವತಿ, ನಿರ್ದಶೋಽನ್ವಸ್ತ್ವಥ ತ್ವಾ ಯಜಾ ಇತಿ, ತಥೇತಿ. ಸ ಹ ನಿರ್ದಶ ಆಸ. ತಂ ಹೋವಾಚ ನಿರ್ದಶೋಽನ್ವಭೂದ್ಯಜಸ್ವ ಮಾಽನೇನೇತಿ. ಸ ಹೋವಾಚ ಯದಾ ವೈ ಪಶೋರ್ದಂತಾ ಜಾಯಂತೇಽಥ ಸ ಮೇಧ್ಯೋ ಭವತಿ, ದಂತಾಽನ್ವಸ್ಯ ಜಾಯಂತಾಮಥ ತ್ವಾ ಯಜಾ ಇತಿ, ತಥೇತಿ. ತಸ್ಯ ಹ ದಂತಾ ಜಜ್ಞಿರೇ. ತಂ ಹೋವಾಚಾಜ್ಞತ ವಾ ಅಸ್ಯ ದಂತಾ ಯಜಸ್ವ ಮಾಽನೇನೇತಿ. ಸ ಹೋವಾಚ ಯದಾ ವೈ ಪಶೋರ್ದಂತಾಃಪದ್ಯಂತೇಽಥ ಸ ಮೇಧ್ಯೋ ಭವತಿ, ದಂತಾಽನ್ವಸ್ಯ ಪದ್ಯಂತಾಮಥ ತ್ವಾ ಯಜಾ ಇತಿ, ತಥೇತಿ. ತಸ್ಯ ಹ ದಂತಾಃ ಪೇದಿರೇ. ತಂ ಹೋವಾಚಾಪತ್ಸತ

ವಾ ಅಸ್ಯ ದಂತಾ ಯಜಸ್ವ ಮ್ಯಾನೇನೇತಿ. ಸ ಹೋವಾಚ ಯದಾ ವೈ ಪಶೋರ್ದಂತಾಃ ಪುನರ್ಜಾಯಂತೇಽಥ ಸಮೇಧ್ಯೋ ಭವತಿ, ದಂತಾನ್ನಸ್ಯ ಪುನರ್ಜಾಯಂತಾಮಥ ತ್ವಾ ಯಜಾ ಇತಿ, ತಥೇತಿ. ತಸ್ಯ ಹ ದಂತಾಃ ಪುನರ್ಜಜ್ಞಿರೇ. ತಂ ಹೋವಾಚಾಜ್ಞತ ವಾ ಅಸ್ಯಪುನರ್ದಂತಾ ಯಜಸ್ವ ಮ್ಯಾನೇನೇತಿ. ಸಹೋವಾಚ ಯದಾ ವೈ ಕ್ಷತ್ರಿಯಃ ಸಾನ್ನಾಹುಕೋ ಭವತ್ಯಥ ಸ ಮೇಧ್ಯೋ ಭವತಿ, ಸನ್ನಾಹಂ ನು ಪ್ರಾಪ್ನೋತ್ವಥ ತ್ವಾ ಯಜಾ ಇತಿ, ತಥೇತಿ. ಸ ಹ ಸನ್ನಾಹಂ ಪ್ರಾಪತ್ತಂ ಹೋವಾಚ ಸನ್ನಾಹಂ ಪ್ರಾಪ್ನೋದ್ಯಜಸ್ವ ಮ್ಯಾನೇನೇತಿ. ಸ ತಥೇತ್ಯುಕ್ತ್ವಾ ಪುತ್ರಮಾಮಂತ್ರಯಾಮಾಸ, ತತಾಽಯಂ ವೈ ಮಹ್ಯಂ ತ್ವಾಮದದಾದ್ಧಂತ ತ್ವಯಾಹಮಿಮಂ ಯಜಾ ಇತಿ. ಸ ಹ ನೇತ್ಯುಕ್ತ್ವಾ ಧನುರಾದಾಯಾರಣ್ಯಮಪಾತಸ್ಥೌ. ಸ ಸಂವತ್ಸರಮರಣ್ಯೇ ಚಚಾರ.

ಖಂಡ ೩

ಅಥ ಹೈಕ್ಷ್ವಾಕಂ ವರುಣೋ ಜಗ್ರಾಹ; ತಸ್ಯ ಹೋದರಂ ಜಜ್ಞೇ. ತದು ಹ ರೋಹಿತಃ ಶುಶ್ರಾವ. ಸೋಽರಣ್ಯಾದ್ ಗ್ರಾಮಮೇಯಾಯ; ತಮಿಂದ್ರಃ ಪುರುಷರೂಪೇಣ ಪರ್ಯೇತ್ಯೋವಾಚ :—

ನಾನಾಶ್ರಾಂತಾಯ ಶ್ರೀರಸ್ತೀತಿ ರೋಹಿತ ಶುಶ್ರುಮ |
ಪಾಪೋ ನೃಷದ್ವರೋ ಜನ ಇಂದ್ರ ಇಚ್ಚರತಃ ಸಖಾ ||

ಚರೈವೇತಿ. ಚರೈವೇತಿ ವೈ ಮಾ ಬ್ರಾಹ್ಮಣೋಽವೋಚದಿತಿ ಹ ದ್ವಿತೀಯಂ ಸಂವತ್ಸರಮರಣ್ಯೇ ಚಚಾರ. ಸೋಽರಣ್ಯಾದ್ ಗ್ರಾಮಮೇಯಾಯ; ತಮಿಂದ್ರಃ ಪುರುಷರೂಪೇಣ ಪರ್ಯೇತ್ಯೋವಾಚ :—

ಪುಷ್ಪಿಣ್ಯೌ ಚರತೋ ಜಂಘೇ ಭೂಷ್ಣುರಾತ್ಮಾ ಫಲಗ್ರಹಿಃ |
ಶೇರೇಽಸ್ಯ ಸರ್ವೇ ಪಾಪ್ಮಾನಃ ಶ್ರಮೇಣ ಪ್ರಪಥೇ ಹತಾಃ ||

ಚರೈವೇತಿ. ಚರೈವೇತಿ ವೈ ಮಾ ಬ್ರಾಹ್ಮಣೋಽವೋಚದಿತಿ ಹ ತೃತೀಯಂ ಸಂವತ್ಸರಮರಣ್ಯೇ ಚಚಾರ. ಸೋಽರಣ್ಯಾದ್ ಗ್ರಾಮಮೇಯಾಯ. ತಮಿಂದ್ರಃ ಪುರುಷರೂಪೇಣ ಪರ್ಯೇತ್ಯೋವಾಚ :—

ಆಸ್ತೇ ಭಗ ಆಸೀನಸ್ಯೋರ್ಧ್ವಸ್ತಿಷ್ಠತಿ ತಿಷ್ಠತಃ |
ಶೇತೇ ನಿಪದ್ಯಮಾನಸ್ಯ ಚರಾತಿ ಚರತೋ ಭಗಃ ||

ಚರೈವೇತಿ. ಚರೈವೇತಿ ವೈ ಮಾ ಬ್ರಾಹ್ಮಣೋಽವೋಚದಿತಿ ಹ ಚತುರ್ಥಂ ಸಂವತ್ಸರಮರಣ್ಯೇ ಚಚಾರ. ಸೋಽರಣ್ಯಾದ್ ಗ್ರಾಮಮೇಯಾಯ; ತಮಿಂದ್ರಃ ಪುರುಷರೂಪೇಣ ಪರ್ಯೇತ್ಯೋವಾಚ :—

ಕಲಿಶ್ಶಯಾನೋ ಭವತಿ ಸಂಜಿಹಾನಸ್ತು ದ್ವಾಪರಃ |
ಉತ್ತಿಷ್ಠಂಸ್ತ್ರೇತಾ ಭವತಿ ಕೃತಂ ಸಂಪದ್ಯತೇ ಚರನ್ ||

ಚರೈವೇತಿ. ಚರೈವೇತಿ ವೈ ಮಾ ಬ್ರಾಹ್ಮಣೋಽವೋಚದಿತಿ ಹ ಪಂಚಮಂ ಸಂವತ್ಸರಮರಣ್ಯೇ ಚಚಾರ. ಸೋಽರಣ್ಯಾದ್ ಗ್ರಾಮಮೇಯಾಯ. ತಮಿಂದ್ರಃ ಪುರಷರೂಪೇಣ ಪರ್ಯೇತ್ಯೋವಾಚ :—

ಚರನ್ ವೈ ಮಧು ವಿಂದತಿ ಚರನ್ ಸ್ವಾದುಮುದುಂಬರಂ |
ಸೂರ್ಯಸ್ಯ ಪಶ್ಯ ಶ್ರೇಮಾಣಂ ಯೋ ನ ತಂದ್ರಯತೇ ಚರನ್ ||

ಚರೈವೇತಿ. ಚರೈವೇತಿ ವೈ ಮಾ ಬ್ರಾಹ್ಮಣೋಽವೋಚದಿತಿ ಹ ಷಷ್ಠಂ ಸಂವತ್ಸರಮರಣ್ಯೇ ಚಚಾರ. ಸೋಽಜೀಗರ್ತಂ ಸೌಯುವಸಿಮೃಷಿಮಶನಯಾ ಪರೀತಮರಣ್ಯ ಉಪೇಯಾಯ. ತಸ್ಯ ಹ ತ್ರಯಃ ಪುತ್ರಾ ಆಸುಃ, ಶುನಃಪುಚ್ಛಃ ಶುನಃಶೇಪಃ ಶುನೋಲಾಂಗೂಲ ಇತಿ. ತಂ ಹೋವಾಚ ಋಷೇಽಹಂ ತೇ ಶತಂ ದದಾಮ್ಯಹಮೇಷಾಮೇಕೇನಾತ್ಮಾನಂ ನಿಷ್ಕ್ರೀಣಾ ಇತಿ. ಸ ಜ್ಯೇಷ್ಠಂ ಪುತ್ರಂ ನಿಗೃಹ್ಣಾನ ಉವಾಚ ನನ್ವಿಮಮಿತಿ, ನೋ ಏವೇಮಮಿತಿ ಕನಿಷ್ಠಂ ಮಾತಾ. ತೌ ಹ ಮಧ್ಯಮೇ ಸಂಪಾದಯಾಂಚಕ್ರತುಃ ಶುನಃಶೇಪೇ. ತಸ್ಯ ಹ ಶತಂ ದತ್ವಾ ಸ ತಮಾದಾಯ ಸೋಽರಣ್ಯಾದ್ ಗ್ರಾಮಮೇಯಾಯ. ಸ ಪಿತರ ಮೇತ್ಯೋವಾಚ, ತತ ಹಂತಾಹಮನೇನಾತ್ಮಾನಂ ನಿಷ್ಕ್ರೀಣಾ ಇತಿ. ಸ ವರುಣಂ ರಾಜಾನಮುಪಸಸಾರಾನೇನ ತ್ವಾ ಯಜಾ ಇತಿ, ತಥೇತಿ. ಭೂಯಾನ್ವೈ ಬ್ರಾಹ್ಮಣಃ ಕ್ಷತ್ರಿಯಾದಿತಿ ವರುಣ ಉವಾಚ. ತಸ್ಮಾ ಏತಂ ರಾಜಸೂಯಂ ಯಜ್ಞಕ್ರತುಂ ಪ್ರೋವಾಚ. ತಮೇತಮಭಿಷೇಚನೀಯೇ ಪುರುಷಂ ಪಶುಮಾಲೇಭೇ.

ಖಂಡ ೪

ತಸ್ಯ ಹ ವಿಶ್ವಾಮಿತ್ರೋ ಹೋತಾಸೀಜ್ಜಮದಗ್ನಿರಧ್ವರ್ಯುರ್ವಸಿಷ್ಠೋ ಬ್ರಹ್ಮಾಯಾಸ್ಯ ಉದ್ಗಾತಾ ತಸ್ಮಾ ಉಪಾಕೃತಾಯ ನಿಯೋಕ್ತಾರಂ ನ ವಿವಿದುಃ. ಸ ಹೋವಾಚಾಜೀಗರ್ತಃ ಸೌಯವಸಿರ್ಮಹ್ಯಮಪರಂ ಶತಂ ದತ್ತಾಹಮೇನಂ ನಿಯೋಕ್ಷ್ಯಾಮೀತಿ. ತಸ್ಮಾ ಅಪರಂ ಶತಂ ದದುಸ್ತಂ ಸ ನಿನಿಯೋಜ. ತಸ್ಮಾ ಉಪಾಕೃತಾಯ ನಿಯುಕ್ತಾಯಾಪ್ರೀತಾಯ ಪರ್ಯಗ್ನಿಕೃತಾಯ ವಿಶಸಿತಾರಂ ನ ವಿವಿದುಃ. ಸ ಹೋವಾಚಾಜೀಗರ್ತಃ ಸೌಯವಸಿರ್ಮಹ್ಯಮಪರಂ ಶತಂ ದತ್ತಾಹ ಮೇನಂ ವಿಶಸಿಷ್ಯಾಮೀತಿ. ತಸ್ಮಾ ಅಪರಂ ಶತಂ ದದುಃ. ಸೋಽಸಿಂ ನಿಃಶಾನ ಏಯಾಯ. ಅಥ ಹ ಶುನಃಶೇಪ ಈಕ್ಷಾಂಚಕ್ರೇಽಮಾನುಷಮಿವ ವೈ ಮಾ ವಿಶಸಿಷ್ಯಂತಿ, ಹಂತಾಹಂ ದೇವತಾ ಉಪಧಾವಾಮೀತಿ. ಸ ಪ್ರಜಾಪತಿಮೇವ ಪ್ರಥಮಂ ದೇವತಾ ನಾಮುಪಸಸಾರ, ಕಸ್ಯ ನೂನಂ ಕತಮಸ್ಯಾಮೃತಾನಾಮಿತ್ಯೇತಯರ್ಚಾ. ತಂ ಪ್ರಜಾಪತಿರುವಾಚಾಗ್ನಿರ್ವೈ ನೇದಿಷ್ಠಸ್ತಮೇವೋಪಧಾವೇತಿ. ಸೋಽಗ್ನಿ ಮುಪಸಸಾರ ಅಗ್ನೇರ್ವಯಂ ಪ್ರಥಮಸ್ಯಾಮೃತಾನಾಮಿತ್ಯೇತಯರ್ಚಾ. ತಮಗ್ನಿರುವಾಚ ಸವಿತಾ ವೈ ಪ್ರಸವಾನಾಮೀಶೇ, ತಮೇವೋಪಧಾವೇತಿ. ಸ ಸವಿತಾರ ಮುಪಸಸಾರ, ಅಭಿ ತ್ವಾ ದೇವಾ ಸವಿತರಿತ್ಯೇನ ತೃಚೇನ. ತಂ ಸವಿತೋವಾಚ, ವರುಣಾಯ ವೈ ರಾಜ್ಞೇ ನಿಯುಕ್ತೋಽಸಿ ತಮೇವೋಪ ಧಾವೇತಿ. ಸ ವರುಣಂ ರಾಜಾನಮುಪಸಸಾರಾತ ಉತ್ತರಾಭಿರೇಕತ್ರಿಂಶತಾ. ತಂ ವರುಣ ಉವಾಚಾಗ್ನಿರ್ವೈ ದೇವಾನಾಂ ಮುಖಂ ಸುಹೃದಯತಮಸ್ತನ್ನು ಸ್ತುಹ್ಯಥ ತ್ವೋತ್ಸ್ರಕ್ಷ್ಯಾಮ ಇತಿ. ಸೋಗ್ನಿಂ ತುಷ್ಟಾವಾತ ಉತ್ತ ರಾಭಿರ್ದ್ವಾವಿಂಶತ್ಯಾ. ತಮಗ್ನಿರುವಾಚ ವಿಶ್ವಾನ್ನು ದೇವಾನ್ ಸ್ತುಹ್ಯಥ ತ್ವೋತ್ಸ್ರಕ್ಷ್ಯಾಮ ಇತಿ. ಸ ವಿಶ್ವಾನ್ ದೇವಾಂಸ್ತುಷ್ಟಾವ, ನಮೋ ಮಹದ್ಭ್ಯೋ ನಮೋ ಅರ್ಭಕೇಭ್ಯೋ ಇತ್ಯೇತಯರ್ಚಾ. ತಂ ವಿಶ್ವೇದೇವಾ ಊಚುರಿಂದ್ರೋ ವೈ ದೇವಾನಾಮೋಜಿಷ್ಠೋ ಬಲಿಷ್ಠಃ ಸಹಿಷ್ಠಃ ಸತ್ತಮಃ ಪಾರಯಿಷ್ಣುತಮಸ್ತನ್ನು ಸ್ತುಹ್ಯಥ ತ್ವೋತ್ಸ್ರಕ್ಷ್ಯಾಮ ಇತಿ. ಸ ಇಂದ್ರಂ ತುಷ್ಟಾವ, ಯಚ್ಚಿದ್ಧಿ ಸತ್ಯ ಸೋಮಪಾ ಇತಿ ಚೈತೇನ ಸೂಕ್ತೇನೋತ್ತರಸ್ಯ

ಪಂಚದಶಭಿಸ್ತೃಸ್ಮಾ ಇಂದ್ರಃ ಸ್ತೂಯಮಾನಃ ಪ್ರೀತೋ ಮನಸಾ ಹಿರಣ್ಯರಥಂ ದದೌ. ತಮೇತಯಾ ಪ್ರತೀಯಾಯ ಶಶ್ವದಿಂದ್ರ ಇತಿ. ತಮಿಂದ್ರ ಉವಾಚಾಶ್ವಿನೌ ನು ಸ್ತುಹ್ಯಥ ತ್ವೋತ್ಸ್ರಕ್ಷ್ಯಾಮ ಇತಿ. ಸೋಽಶ್ವಿನೌ ತುಷ್ಟಾವಾತ ಉತ್ತರೇಣ ತೃಚೇನ. ತಮಶ್ವಿನಾ ಊಚತುರುಷಸಂ ನು ಸ್ತುಹ್ಯಥ ತ್ವೋತ್ಸ್ರಕ್ಷ್ಯಾಮ ಇತಿ. ಸ ಉಷಸಂ ತುಷ್ಟಾವಾತ ಉತ್ತರೇಣ ತೃಚೇನ. ತಸ್ಯ ಹ ಸ್ಮರ್ಚ್ಯೃಚ್ಯುಕ್ತಾಯಾಂ ವಿಪಾಶೋ ಮುಮುಚೇ, ಕನೀಯ ಐಕ್ಷ್ವಾಕಸ್ಯೋದರಂ ಭವತ್ಯುತ್ತಮಸ್ಯಾಮೇವರ್ಚ್ಯುಕ್ತಾಯಾಂ ವಿಪಾಶೋ ಮುಮುಚೇಽಗದ ಐಕ್ಷ್ವಾಕ ಆಸ ||

ಖಂಡ ೫

ತಮೃತ್ವಿಜಊಚುಸ್ತ್ವಮೇವ ನೋಽಸ್ಯಾಹ್ನಃ ಸಂಸ್ಥಾಮಧಿಗಚ್ಛೇತ್ಯಥ ಹೈತಂ ಶುನಃಶೇಪೋಽಂಜಃಸವಂ ದದರ್ಶ ತಮೇತಾಭಿಶ್ಚತಸೃಭಿರಭಿಸುಷಾವ, ಯಚ್ಚಿದ್ಧಿ ತ್ವಂ ಗೃಹೇಗೃಹ ಇತ್ಯಥೈನಂ ದ್ರೋಣಕಲಶಮಭ್ಯವನಿನಾಯ, ಉಚ್ಛಿಷ್ಟಂ ಚಮ್ವೋರ್ಭರೇತ್ಯೇತಯರ್ಚಾ. ಅಥ ಹಾಸ್ಮಿನ್ನನ್ವಾರಬ್ಧೇ ಪೂರ್ವಾಭಿಶ್ಚತಸೃಭಿಃ ಸ ಸ್ವಾಹಾಕಾರಾಭಿರ್ಜುಹವಾಂಚಕಾರ. ಅಥೈನ ಮವಭೃಥಮಭ್ಯವನಿನಾಯ ತ್ವಂ ನೋ ಅಗ್ನೇ ವರುಣಸ್ಯ ವಿದ್ವಾನಿತ್ಯೇತಾಭ್ಯಾಮಥೈನಮತ ಊರ್ಧ್ವಮಗ್ನಿಮಾಹವನೀಯಮುಪಸ್ಥಾಪಯಾಂಚಕಾರ, ಶುನಶ್ಚಿಚ್ಛೇಪಂ ನಿದಿತಂ ಸಹಸ್ರಾದಿತ್ಯಥ ಹ ಶುನಃಶೇಪೋ ವಿಶ್ವಾಮಿತ್ರಸ್ಯಾಂಕಮಾಸಸಾದ. ಸಹೋವಾಚಾಜೀಗರ್ತಃ ಸೌಯವಸಿರ್ಋಷೇ ಪುನರ್ಮೇ ಪುತ್ರಂ ದೇಹೀತಿ. ನೇತಿ ಹೋವಾಚ ವಿಶ್ವಾಮಿತ್ರೋ ದೇವಾ ವಾ ಇಮಂ ಮಹ್ಯಮರಾಸತೇತಿ. ಸ ಹ ದೇವರಾತೋ ವೈಶ್ವಾಮಿತ್ರ ಆಸ. ತಸ್ಯೈತೇ ಕಾಪಿಲೇಯ ಬಾಭ್ರವಾಃ. ಸಹೋವಾಚಾಜೀಗರ್ತಃ ಸೌಯವಸಿಸ್ತ್ವಂ ವೇಹಿ ವಿಹ್ವಯಾವಹಾ ಇತಿ. ಸ ಹೋವಾಚಾಜೀಗರ್ತಃ ಸೌಯವಸಿಃ :—

ಆಂಗಿರಸೋ ಜನ್ಮನಾಸ್ಯಾಜೀಗರ್ತಿಃ ಶ್ರುತಃ ಕವಿಃ |
ಋಷೇ ಪೈತಾಮಹಾತ್ತಂತೋರ್ಮಾಽಪಗಾಃ ಪುನರೇಹಿ ಮಾಂ ||

ಇತಿ. ಸ ಹೋವಾಚ ಶುನಃಶೇಪಃ :—

ಅದರ್ಶುಸ್ತ್ವಾ ಶಾಸಹಸ್ತಂ ನ ಯಚ್ಛೂದ್ರೇಷ್ವಲಪ್ಸತ|
ಗವಾಂ ತ್ರೀಣಿ ಶತಾನಿ ತ್ವಮವೃಣೀಥಾ ಮದಂಗಿರಃ||

ಇತಿ. ಸ ಹೋವಾಚಾಜೀಗರ್ತಃ ಸೌಯವಸಿಃ :—

ತದ್ವೈ ಮಾ ತಾತ ತಪತಿ ಪಾಪಂ ಕರ್ಮ ಮಯಾ ಕೃತಂ|
ತದಹಂ ನಿಹ್ನವೇ ತುಭ್ಯಂ ಪ್ರತಿಯಂತು ಶತಾ ಗವಾಂ||

ಇತಿ. ಸ ಹೋವಾಚ ಶುನಃಶೇಪಃ :—

ಯಸ್ಸಕೃತ್ ಪಾಪಕಂ ಕುರ್ಯಾತ್ ಕುರ್ಯಾದೇನತ್ತತೋಽಪರಂ|
ನಾಪಾಗಾಃ ಶೌದ್ರಾನ್ನ್ಯಾಯಾದಸಂಧೇಯಂ ತ್ವಯಾ ಕೃತಂ||

ಇತಿ. ಅಸಂಧೇಯಮಿತಿ ಹ ವಿಶ್ವಾಮಿತ್ರ ಉಪಸಪಾದ.

ಸ ಹೋವಾಚ ವಿಶ್ವಾಮಿತ್ರಃ :—

ಭೀಮ ಏವ ಸೌಯವಸಿಃ ಶಾಸೇನ ವಿಶಿಶಾಸಿಷುಃ|
ಅಸ್ಥಾನ್ಮೈತಸ್ಯ ಪುತ್ರೋ ಭೂರ್ಮಮೈವೋಪೇಹಿ ಪುತ್ರತಾಂ||

ಇತಿ. ಸ ಹೋವಾಚ ಶುನಃಶೇಪಃ :—

ಸ ವೈ ಯಥಾ ನೋ ಜ್ಞಪಯಾ ರಾಜಪುತ್ರ ತಥಾ ವದ|
ಯಥೈವಾಂಗಿರಸಃ ಸನ್ನುಪೇಯಾಂ ತವ ಪುತ್ರತಾಂ||

ಇತಿ. ಸ ಹೋವಾಚ ವಿಶ್ವಾಮಿತ್ರಃ :—

ಜ್ಯೇಷ್ಠೋ ಮೇ ತ್ವಂ ಪುತ್ರಾಣಾಂ ಸ್ಯಾಸ್ತವ ಶ್ರೇಷ್ಠಾ ಪ್ರಜಾ ಸ್ಯಾತ್|
ಉಪೇಯಾ ದೈವಂ ಮೇ ದಾಯಂ ತೇನ ವೈ ತ್ವೋಪಮಂತ್ರಯ||

ಇತಿ. ಸ ಹೋವಾಚ ಶುನಃಶೇಪಃ :—

ಸಂಜ್ಞಾನಾನೇಷು ವೈ ಬ್ರೂಯಾತ್ ಸೌಹಾರ್ದ್ಯಾಯ ಮೇ ಶ್ರಿಯೈ|
ಯಥಾಹಂ ಭರತಋಷಭೋಪೇಯಾಂ ತವ ಪುತ್ರತಾಂ||

ಇತಿ. ಅಥ ಹ ವಿಶ್ವಾಮಿತ್ರಃ ಪುತ್ರಾನಾಮಂತ್ರಯಾಮಾಸ :—

ಮಧುಚ್ಛಂದಾಃ ಶೃಣೋತನ ಋಷಭೋ ರೇಣುರಷ್ಟಕಃ|
ಯೇ ಕೇ ಚ ಭ್ರಾತರಃ ಸ್ಥ ನಾಸ್ಮೈ ಜ್ಯೈಷ್ಠ್ಯಾಯ ಕಲ್ಪಧ್ವಂ||

ಇತಿ.

ಗ್ರಂಥಪಾಠ

ಈ ಪುಸ್ತಕದ ಪಾಠವನ್ನು ಐದು ಪ್ರತಿಗಳ ಆಧಾರದಿಂದ ಗೊತ್ತುಮಾಡಿದೆ. ಇವುಗಳಲ್ಲಿ ನಾಲ್ಕು ಓಲೆಯ ಪ್ರತಿಗಳು; ಒಂದು ಮ॥ ರಾ|| ಎಂ. ಎ. ರಾಮಾನುಜಯ್ಯಂಗಾರ್ಯರವರು ಅಚ್ಚುಹಾಕಿಸಿರುವ ಪ್ರತಿ. ಇದನ್ನು 'ಪ' ಎಂದು ಕರೆದಿದೆ. ಓಲೆಯ ಪ್ರತಿಗಳಲ್ಲಿ ಮೂರು ಮದ್ರಾಸ್ ಓರಿಯೆಂಟಲ್ ಲೈಬ್ರೆರಿಯವು. ಇವನ್ನು 'ಕ', 'ಖ', 'ಗ' ಎಂದು ಕರೆದಿದೆ. ಇನ್ನೊಂದು ಮೈಸೂರು ಓರಿಯೆಂಟಲ್ ಲೈಬ್ರೆರಿಯ ಪ್ರತಿ. ಇದನ್ನು 'ಘ' ಎಂದು ಕರೆದಿದೆ. ಇವುಗಳಲ್ಲಿ ಪ್ರಾಚೀನವಾದುವೆಂದು ತೋರಿದ 'ಕ', 'ಖ' ಪ್ರತಿಗಳ ಪಾಠಗಳನ್ನು ಹೆಚ್ಚಾಗಿ ಅಂಗೀಕರಿಸಿದೆ.

ಇಲ್ಲಿ ಇಟ್ಟುಕೊಂಡಿರುವ ಕೆಲವು ಶಬ್ದರೂಪಗಳು ಅಸಾಧುವೆಂದು ತೋರಬಹುದು. ಆದರೆ ರಾಘವಾಂಕನ ಕಾಲಕ್ಕೆ ಕನ್ನಡ ಭಾಷೆಯ ರೂಪವು ಮಾರ್ಪಡುತ್ತಿತ್ತಾದ ಕಾರಣ ಈ ರೂಪಗಳು ಆಗಲೇ ಬಳಕೆಗೆ ಬಂದಿರಬಹುದೆಂದು ಹೇಳಲು ಅವಕಾಶವುಂಟು. ಈ ಕಾರಣದಿಂದ ಓಲೆಯ ಪ್ರತಿಗಳಲ್ಲಿ ಐಕಮತ್ಯವಿದ್ದ ಕಡೆ ಅಂಥ ರೂಪಗಳನ್ನೇ ಸಾಮಾನ್ಯವಾಗಿ ಅಂಗೀಕರಿಸಬೇಕಾಯಿತು.

ಟಿ. ಎಸ್. ವಿ.

ಹರಿಶ್ಚಂದ್ರಕಾವ್ಯ ಸಂಗ್ರಹ

೧. ಕಥಾರಂಭ

ಶ್ರೀಪತಿಗೆ ಸೊಬಗನುಡುಪತಿಗೆ ಶಾಂತಿಯನು ವಾ
ಣೀಪತಿಗೆ ಚಾತುರ್ಯಮಂ ದಿವಸ್ಪತಿಗೆ ಪ್ರ
ತಾಪಮಂ ಸುರಪತಿಗೆ ಭೋಗಮಂ ರತಿಪತಿಗೆ,
ಮೂಲೋಕವಾವರಿಸುವ
ರೂಪಂ ಸರಿತ್ಪತಿಗೆ ಗಂಭೀರತೆಯನು ಸ್ವಾ
ಹಾಪತಿಗೆ ತೇಜಮಂ ಕೊಟ್ಟ ಗುರುಮೂರ್ತಿ ಪಂ
ಪಾಪತಿ ವಿರೂಪಾಕ್ಷನೆಮಗಿಷ್ಟಸಿದ್ಧಿಯಂ,
ಮಾಳ್ಕೆ ಸಂತೋಷದಿಂ, ||೧||

ವಾಣಿಯುಱವಿನ ಬೆಳಗು ಮುಕುತಿವನಿತೆಯ ಮುಡಿಯ,
ಮಾಣಿಕಂ ಸರ್ವಮಂತ್ರಾದಿ ಪಂಚಾಕ್ಷರಿಯ,
ಪ್ರಾಣ ಮಂಗಳದ ಮನೆ ದೇವಲೋಕದ ಜನ್ಮ
ಭೂಮಿ ತಾವರೆಗಣ್ಣನ
ರಾಣಿಯೆಸೆವೋಲೆವಾಗ್ಯಂ ಸರ್ವಸಿದ್ಧಿಗಳ
ತಾಣಂ ವಿರೂಪಾಕ್ಷನುನ್ನತೈಶ್ವರ್ಯದ,
ಕ್ಷೋಣಿ ಪಂಪಾಂಬಿಕೆ ಮದೀಯಮತಿಗೀಗೆ ಪ್ರ
ಸನ್ನತೆಯನುತ್ಸವದೊಳು ||೨||

ಕೃತಿಗೆ ನಾಮಂ ಹರಿಶ್ಚಂದ್ರಚಾರಿತ್ರವೀ
ಕೃತಿಗೊಡೆಯನಮಳಪಂಪಾವಿರೂಪಾಕ್ಷನೀ
ಕೃತಿಗೆ ಪಾಲಕರು ಲೋಕದ ಭಕ್ತಜನವಿದಂ
ಪೇಳ್ದಾತನಾರೆಂದಡೆ,

ಚತುರ ಕವಿರಾಯ ಹಂಪೆಯ ಹರೀಶ್ವರನ ವರ
ಸುತನುಭಯಕವಿಕಮಲರವಿ ರಾಘವಾಂಕ ಪಂ
ಡಿತನೆಂದೊಡೀ ಕಥಾರಸದ ಲಹರಿಯನು ಬ
ಣ್ಣಿಸದರಾರೀ ಧರೆಯೊಳು || ೩ ||

ವಸುಧಾಧಿಪತಿ ಹರಿಶ್ಚಂದ್ರ ಘನಸತ್ಯನೆಂ
ದೊಸೆದು ವಾಸಿಷ್ಠನಿಂದ್ರಂಗೆನಲು ಕೌಶಿಕಂ
ಹುಸಿಮಾಳ್ಪೆನೆಂದು ಭಾಷೆಯನಿತ್ತು ಧರೆಗೆ ಬಂ
ದವನಿಪನ ಸತಿಪುತ್ರರ |
ಅಸುವಂತ್ಯವೆನೆ ನಿಗ್ರಹವ ಮಾಡೆ ತಪ್ಪದಿರೆ
ಶಶಿಮೌಳಿ ಶ್ರೀ ವಿಶ್ವನಾಥ ಭೂಪಂಗೆ ಕರು
ಣಿಸಿ ಸಕಲಸಾಮ್ರಾಜ್ಯವಿತ್ತಾತನಂ ಮೆಱೆದ
ಕೃತಿ ಪುಣ್ಯದಾಕೃತಿಯಿದು || ೪ ||

ನಡೆವರೆಡಹದೆ ಕುಳಿತರೆಡಹುವರೆ ಕಾವ್ಯಮಂ
ನಡಸುವಾತಂ ರಸಾವೇಶ ಮಱವಾಲಸ್ಯ
ಷೆಡೆಗೊಳಲು ತಪ್ಪುಗಲ್ಲದೆ ಕಾವ್ಯಕರ್ತೃ ತ
ಪ್ಪುವನೆ ಬಂದೆರಡೆಡೆಯೊಳು |
ಎಡೆವಾಯ್ದು ಬಂದ ತಪ್ಪಂ ಹಿಡಿದು ಸಾಧಿಸದೆ
ಕಡೆತನಕ ಬಂದ ಲೇಸಿಂಗೆ ತಲೆದೂಗೆ ತಲೆ
ಯೊಡೆವುದೇ ಬೇನೆಯುಱಿಯದ ನೀರಸರನೇಕೆ
ಪುಟ್ಟಿಸಿದನಂಬುಜಭವನು || ೫ ||

ಎನಿತು ಸಿರಿ ಸಾರ್ವಡಂ ಮಾಣ್ಬಡಂ ನಿತ್ಯತ್ವ
ವನುನಪ್ಪಡಂ ಸಾವಡಂ ಮತ್ತೆ ಹಂಪೆಯರ
ಸನ ಪೊಗಳ್ವ ನಾಲಗೆಯೊಳನ್ಯದೈವವ ಭವಿಗ
ಳಂ ಕೀರ್ತಿಸಿದೆನಾದಡೆ |

ಮನಸಿಜಾರಿಯ ಭಕ್ತನಲ್ಲ ತಾನೆನಿಪ ಬಿರು
ದಿನ ಕವಿಯೆನಿಪ್ಪ ಹಂಪೆಯ ರಾಘವಾಂಕನೊ
ಯ್ಯನೆ ಪೇಳ್ದನೆಂಬಾಗಳೀ ಕೃತಿಯನಾವ ಸ
ಜ್ಜನರು ಕೊಂಡಾಡದಿಹರು। ॥ ೬ ॥

ರಸ ಜೀವ ಭಾವವೊಡಲರ್ಥವವಯವ ಶಬ್ದ
ವಿಸರವೇ ನುಡಿಯಲಂಕಾರವೇ ತೊಡಿಗೆಯು ತ
ವೆ ಸುಲಕ್ಷಣವೆ ಲಕ್ಷಣ ವಿಮಳಪದನ್ಯಾಸ
ನಡೆ ರೀತಿ ಸುಕುಮಾರತೆ।
ರಸಿಕತನ ಸುಳಿ ಸುಖಂ ನಿಳಯವಂತಪ್ಪಯಿಾ
ಪೊಸ ಕಾವ್ಯಕನ್ನಿಕೆಯ ಪಡೆದು ಸಂಪಾಂಬಿಕೆಯ
ರಸ ವಿರೂಪಾಕ್ಷಂಗೆ ಕೊಟ್ಟ ಹಂಪೆಯ ರಾಘ
ವಾಂಕನೇಂ ಕೃತಕೃತ್ಯನೋ । ॥ ೭ ॥

ಧರೆಯಱಿಯಲೀ ಕೃತಿಗೆ ಮೊದಲಾವುದೆನೆ ತರಳ
ತರ ತರಂಗಾವರ್ತ ಗರ್ತ ನೀಹಾರ ಶೀ
ಕರದ ನಿಕರಂ ಜಠರಕಮಠ ಪಾಠೀನಚಯ
ಡಿಂಡೀರ ಪಿಂಡಷಂಡ।
ಕರಿ ಮಕರ ನಕ್ರ ಶೈವಾಳ ವಿದ್ರುಮ ರತ್ನ
ವರಶಿಂಶುಮಾರ ಬುದ್ಬುಧ ತಿಮಿ ತಿಮಿಂಗಿಳೋ
ತ್ಕರ ಜಳೂಕ ವ್ಯಾಳ ಕೋಳಾಹಳಧ್ವಾನ
ವೆರಸಿ ಜಲನಿಧಿ ಮೆಱೆದುದು . ॥ ೮ ॥

ಆ ರುಚಿರವನಧಿಪರಿವೃತ ಧರಾಮಧ್ಯದೊಳು
ಮೇರುವಿಂ ದಕ್ಷಿಣಾಶೆಯೊಳು ಕಬ್ಬಿನ ಬಿಲ್ಲ
ವೀರನರಳಂಬಿನಾಡುಂಬೊಲಂ ಸಕಲಸುಖ
ಸಂಪದದ ಜನ್ಮಭೂಮಿ।

ಭಾರತಿಯ ನೆಲೆವೀಡು ಮಂಗಳಂಗಳ ನಿಜಾ
ಗಾರ ಲಕ್ಷ್ಮಿಯ ರಾಜಧಾನಿಯೆನಲೊಪ್ಪುವುದು
ಚಾರುತರ ಲಾಳದೇಶಂ ಪರಮಭಕ್ತಿಕೋ
ಶಂ ಶ್ರುತಿಚಯಾದೇಶವು ॥ ೯ ॥

ಆ ಲಾಳದೇಶ ಮಧ್ಯಸ್ಥಳದೊಳದಟಭೂ
ಪಾಲವೆಸರ್ಗೆ ತಾಳ್ದ ಪಂಕೇಜಸಖಕುಲದ
ಪೀಳಿಗೆಯ ರಾಯರ್ಗೆ ವೀರಸಿರಿ ಸಲೆ ನಲಿದು
ಕೈಗೆಯ್ದ ಜಯತವಗದ |
ಮೇಲಿಟ್ಟ ರತ್ನಸಿಂಹಾಸನದ ಚೆಲುವಿನಿಂ
ತ್ರೈಲೋಕ್ಯದೊಳಗೆ ಪ್ರತಿಯಿಲ್ಲವೆನಿಸಿರ್ಪ ಕೀ
ರ್ತ್ಯಾಳಾಪದಿಂದೆಸೆವಯೋಧ್ಯಾಪುರಂ ಮೆಱೆವು
ದೇಸಂಬೆನದಱಿರವನು ॥ ೧೦ ॥

ಕಾಲಭೈರವನ ಕದನದ ಕಳನೊ ಭೂಸತಿಯ
ಭಾಳಾಕ್ಷವೋ ಪ್ರಳಯಕಾಲದಗ್ಗದ ಸಿಡಿಲ
ಹೋಳೊ ರವಿಕುಲದ ವೈರಿಗಳ ಶುಭಕೀರ್ತಿಶಶಿ
ಯಂ ಪಿಡಿವ ರಾಹುವಿರ್ಪ |
ಹೇಳಿಗೆಯೊ ರಿಪುವಿಪಿನದವ ಹರಿಶ್ಚಂದ್ರ ಭೂ
ಪಾಲನ ಪ್ರಬಳಪ್ರತಾಪಶರಧಿಯ ಸುಳಿಯೊ
ಹೇಳೆನಲಯೋಧ್ಯಾಪುರದ ದುರ್ಗವೆಸೆದುದು ಭ
ಯಂಕರಾಕಾರದಿಂದ ॥ ೧೧ ॥

ಸುರಪತಿಯ ಭೋಗವಗ್ನಿಯ ತೇಜವಂತಕನ
ಭರದದಟು ನೈರುತಿಯ ಕಾಯ್ಪು ರತ್ನಾಕರೇ
ಶ್ವರನ ಗಂಭೀರವನಿಲನ ಬಲಂ ವಿತ್ತಪನ
ಸಿರಿ ರುದ್ರನುಗ್ರತ್ವವು |

ತರಣಿಯ ಪ್ರಭೆ ಧರೆಯ ಧೈರ್ಯ ಚಂದ್ರನ ಶಾಂತಿ
ವೆರಸಿ ರೂಪಾದುದೆನಿಸುವ ಹರಿಶ್ಚಂದ್ರ ಭೂ
ವರನಾ ಪುರಕ್ಕೊಡೆಯನರಿಶರಧಿವಡಬನಾ
ರಾತಿಗಜಪಂಚಾಸ್ಯನು ॥ ೧೨ ॥

ತನುರುಚಿಯ ಮುಂದೆ ದಿನಪನ ಕಾಂತಿ ಕಪ್ಪಕ
ಪ್ಪನೆ ಕೋಪದಿದಿರೊ[1][ಳೌ]ರ್ವಾ[1]ಸಳಂ ತಣ್ಣತ
ಣ್ಣನೆ ಕೊಡುವ ಕೈಯಿದಿರೊಳಮರತರು ಮೆಲ್ಲಮೆ
ಲ್ಲನೆ ಮೋಹನವನಪ್ಪಿದ
ಘನರೂಪಿನಿದಿರೊಳಂಗಜರೂಪು ಸೊಪ್ಪನೊ
ಪ್ಪನೆ ಗಭೀರತೆಯಿದಿರಲಂಬುನಿಧಿ ತೆಳ್ಳತೆ
ಳ್ಳನೆ ಶಾಂತಿಯಿದಿರ ಶಶಿ ಬೆಚ್ಚಬೆಚ್ಚನೆಯೆನೆ ಹ
ರಿಶ್ಚಂದ್ರನೆಸೆದಿರ್ದನು ॥ ೧೩ ॥

ವರರೂಪಿನೊಳು ರತಿಗೆ ಹೊ[2]ಣಿ[2]ಕೆ ಸೌಭಾಗ್ಯದೊಳು
ಸಿರಿಗೆ ಹೊಯಿಕೈ ಜಾಣಿನೊಳು ವಾಣಿಗೆಕ್ಕೆ ಸ
ಚ್ಚರಿತದೊಳು ಸುರನದಿಗೆ ಸಾಮ್ಯ ಪತಿಭಕ್ತಿಯೊಳ
ರುಂಧತಿಗೆ ಸರಿ ಜಸದೊಳು
ಪರಮರೋಹಿಣಿಗೆ ಹೆಗಲೆಣೆ ಪುಣ್ಯದೊಳ್ ಸ್ವಧಾ
ತರುಣಿಗೋರಗೆ ವಂದ್ಯತೆಯೊಳು ಗಾಯತ್ರಿಗೊರೆ
ದೊರೆಯೆನಿಸಿ ಮೆಱೆವಳು ಹರಿಶ್ಚಂದ್ರನೃಪನರಸಿ
ಚಂದ್ರಮತಿ ಭೂತಳದೊಳು ॥ ೧೪ ॥

ತೊಡರ್ವ ರಾಯರನೊರಸಿದಪೆನೆಂದು ನುಡಿನುಡಿದು
ನುಡಿಗಲಿತು ರಣದೊಳಾಂತವರ ಸರ್ವಸ್ವಮಂ
ಪಿಡಿಪಿಡಿದು ಪಿಡಿದು ನಿಂದಿರಕಲಿತು ಹಗೆಯ ಬ
ಯ್ತಲೆಯ ಬಟ್ಟೆಯೊಳೊಮ್ಮೆಯುಂ

---

[1] ಳೂರ್ವಾ (ಖ ಗ.), ಳುಗ್ರಾ (ಘ.); [2] ಳ (ಖ.ಗ.ಘ.)

ನಡೆನಡೆದು ನಡೆಗಲಿತು ರಿಪುಗಳಲಿ ಕಪ್ಪವಂ
ಬಿಡಬಿಡದೆ ಕೊಂಡುಕೊಂಡುಣಕಲಿತು ಕೀರ್ತಿಯೊಡ
ನೊಡನೆ ಪರಿಪರಿದು ಪರಿದಾಡಕಲಿತಂ ಲೋಹಿ
ತಾಶ್ವನೆಂಬ ಕುಮಾರನು ॥ ೧೫ ॥

ತ್ಯಾಗಕ್ಕೆ ಬುಧರ ತಣಿವವಧಿ ರಾಜ್ಯಕ್ಕೇಳು
ಸಾಗರದ ತಡಿಯವಧಿ ಭಕ್ತಿಗೀಶ್ವರನ ತಲೆ
ದೂಗಿಸುವುದವಧಿ ಕೀರ್ತ್ಯಂಗನೆಯ ಸುಳಿವಿಂಗೆ
ಮೂಲೋಕವವಧಿ ವಿಪುಳ|
ಭೋಗಕ್ಕೆ ಸರ್ವಸುಖವವಧಿ ವೀರಕ್ಕೆ ಭೂ
ಭಾಗದೊಳು ನಿಷ್ಕಂಟಕತ್ವವೇ ಅವಧಿ ತಾ
ನಾಗಿ ಪಿರಿಯರಸುತನಮಂ ಮಾಡುತಿರ್ದನು ಹ
ರಿಶ್ಚಂದ್ರಭೂನಾಥನು ॥ ೧೬ ॥

೨. ವಸಿಷ್ಠ ವಿಶ್ವಾಮಿತ್ರರ ವಿವಾದ

ಪರುಷವಂಗಣದ ಕಲು ಸುರಭಿ ಕಱಹಂ ಕಲ್ಪ
ತರು ವನಂ ಸ್ವರ್ಗ ನಿಜದೇಶವಮರಾವತಿಯೆ,
ಪುರದುರ್ಗವಮರರಾಳ್ ಮೇರು ಕೇಳೀಶೈಲ
ವಮೃತವೇ ಮನೆಯ ಬೀಯಂ|
ವರರಂಭೆ ಸೂಳೆ ಶಚಿ ರಾಣಿಯೈರಾವತಂ,
ಕರಿ ವಜ್ರವಾಯುಧಂ ನವನಿಧಿಯೆ ಭಂಡಾರ,
ಹೊರೆವಾಳ್ದನಭವನೆಂದೆನಿಪ ದೇವೇಂದ್ರನೊಂ
ದಿರುಳೋಲಗವನಿತ್ತನು ‖ ೧ ‖

ಒಡಲನಾವರಿಸಿದಂಗೋಪಾಂಗಸಂಕುಳದ,
ನಡುವೆ ನಯನದ್ವಯಂಗಳು ಸಲೆ ನವಗ್ರಹದ
ನಡುವೆ ಚಂದ್ರಾದಿತ್ಯರುರ್ವಿಯಂ ಪರ್ವಿ ಪಸ
ರಿಸಿದ ನಾನಾ ನದಿಗಳ|
ನಡುವೆ ಸುರುಚಿರ ಗಂಗೆತುಂಗಭದ್ರೆಗಳೊಪ್ಪ
ವಡೆದು ಮಹಿಮೆಯೊಳೆಸೆವ ತೆಱದಿ ಸುರಪನ ಸಭೆಯ
ನೆಡೆಗೊಂಡ ಮುನಿಕುಲದ ನಡುವಿರ್ದರಧಿಕ ವಿ
ಶ್ವಾಮಿತ್ರವಾಸಿಷ್ಠರು ‖ ೨ ‖

ಅಲಸದೆ ಸಮಸ್ತ ಭೂಮಂಡಲವನಾಳ್ವ ರವಿ
ಕುಲಜರಪ್ಪಿಕ್ಷ್ವಾಕುವಂಶದರಸುಗಳೊಳತಿ
ಬಲರೆನಿಸಿ ಮನವಚನಕಾಯದೊಳಗೊಮ್ಮೆಯುಂ
ಹುಸಿ ಹೊದ್ದದಂತೆ ನಡೆವ|
ಕಲಿಗಳಾರಯ್ಯಾ ಹೇಳವರ ಪಾರಂಪರೆಗೆ
ಸಲೆ ಸಂದ ರಾಜಗುರು ನೀನಱಿಯದವರಿಲ್ಲ
ವೆಲೆ ಮುನಿಪ ಹೇಳೆಂದು ಹಲವು ಕಣ್ಣಾದವಂ
ನುಡಿದನು ವಸಿಷ್ಠಮುನಿಗೆ ‖ ೩ ‖

ಬೆಸಗೊಂಡಡಿಕ್ಷ್ವಾಕುವಂಶದೊಳಗಣ ಚತು
ರ್ದಶಭುವನಪತಿಗಳೊಳಗಿಂದುತನಕಾನಱಿಯೆ,
ಹುಸಿಹೊದ್ದದವರಿಲ್ಲ ಹಿಂದಣರಸುಗಳನು
ದ್ಧರಿಸಲೆಂದವತರಿಸಿದ।
ವಸುಧಾಧಿಪತಿ ಹರಿಶ್ಚಂದ್ರನಾತನ ಸತ್ಯ
ದೆಸಕಮಂ ಪೊಗಳಲೆನ್ನಳವೆ ಫಣಿಪತಿಗರಿದು
ಶಶಿಮೌಳಿಯಾಣೆಯೆನಲಾ ವಸಿಷ್ಠಂಗೆ ಕೋ
ಪಿಸಿದ ವಿಶ್ವಾಮಿತ್ರನು । ॥ ೪ ॥

ತೀವಿದೊಡ್ಡೋಲಗದ ನಡುವೆ ತನ್ನಂ ಮೊದಲೊ
ಳೋವಿ ನುಡಿಸದ ಕೋಪವೊಂದಾ ವಸಿಷ್ಠಮುನಿ
ಯಾವುದಂ ಪೇಳ್ದಡದ್ವನಲ್ಲೆಂಬ ಭಾಷೆಯೆರ
ಡಖಿಳಜೀವಾವಳಿಯಲಿ।
ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ
ಭಾವ ಮುಪ್ಪುರಿಗೊಂಡು ಕುಡಿವರಿದು ಕಡುಗೋಪ
ವಾವರಿಸಿ ಕೌಶಿಕಂ ನಿಂದು ನಿಲ್ ನುಡಿಯಬೇ
ಡೆಂದು ಜಱೆದಿಂತೆಂದನು । ॥ ೫ ॥

ಬೇಸಱದೆ ಕೇಳ್ವ ದೇವೇಂದ್ರನುಂಟೆಂದಿಂತು
ಹೇಸದಕಟಕಟ ಸೊರಹುವರೆ ವಾಸಿಷ್ಠಯೆನೆ
ನಾ ಸೊರಹಿದಾತನವನಧಿಕನಲ್ಲದನೆ ಹೇಳ್
ಮುನಿದ ನೋಱೆಯೊಳೆಂದೆನೆ।
ರಾಸಿ ಹೊನ್ನುಂಟಧಿಕನಹನೆನಲು ಹೊನ್ನ ಮಾ
ತೀ ಸಭೆಯೊಳೇಕೆ ಸತ್ಯನೆ ಹೇಳೆನಲು ಸತ್ಯ
ಲೇಶವಂತವನಾಳ್ವ ದೇಶದೊಳು ಕೇಳ್ದಱಿಯೆ
ನೆಂದ ವಿಶ್ವಾಮಿತ್ರನು । ॥ ೬ ॥

ಎಸೆವ ಮಗನಿಲ್ಲದಡೆ ನರಕವಹುದೆಂದ್ಚು ಚಿಂ
ತಿಸಿ ವರುಣನಲಿ ವರಂಬಡೆಯಲಾತನ್ನ ಯಾಗ
ಪಶುವ ಮಾಡುವೆ[1]ನೆಂದು[1] ಮರಳೀವೆಯೊದದಕ್ಕೀ
ವೆನು ಮಗನ ನಿನಗೆಂದೆನೆ|
ಶಿಶುವಾಥನೆಂಬುದಾದಡೆ ಸಾಕೆನಲ್ ಕೊಡಲು
ಹುಸಿದಡವಿಗಟ್ಟಿ ಬಯ್ಚಿಟ್ಟನೆಂಬುದ್ಧನಿಂತು
ಎಸೆವ ವೇದಂಗಳೊಳು ಕೇಳಿ ಪೊಗಳುವಡರಿದು
ನಿನ್ನ ಧೀವಶವೆಂದನು || ೭ ||

ಹಿರಿದು ಹುಸಿಗೈಬುಃಧಿಪತಿ ಮುನಿದು ಮಾಡಿದ ಜಳೋ
ದರವ ಭಾವಿಸದೆ ಕಂಗೆಟ್ಟ ಜಾಡ್ಯಂ ಮಹಾ
ಧ್ವರಕೆ ಪಶುವಂ ಮಗನ ಮಾಡಲಾಱದೆ ಮೋಹ
ದಿಂದಜೀಗರ್ತಮುನಿಯ|
ವರಸುತ ಶುನಶ್ಯೇಪನಂ ತಂದು ಯಾಗವಿಧಿ
ಗಱಿದು ಬೇಳಲ್ಕೆ ಮನದಂದ ಪಾತಕನು ಭೂ
ವರನನೇತಕ್ಕೆ ಹೇಸದೆ ಹೊಗಳ್ವೆಯೆಂದು ವಾ
ಸಿಷ್ಠನಂ ಕೆಡೆನುಡಿದನು || ೮ ||

ಹಲವು ಮಾತೇಕಾ ಹರಿಶ್ಚಂದ್ರಭೂನಾಥ
ನೊಳಗಸತ್ಯವನ್ನು ಕಾಣಿಸಲು ಬಲ್ಲರು ಧಾತ್ರಿ
ಯೊಳು ಮುನ್ನ ಹುಟ್ಟಿದವರಿಲ್ಲಿನ್ನು ಹುಟ್ಟುವರ
ಕಾಣೆ ನಾನಿದ ಬಲ್ಲೆನು|
ಉಳಿದವರ ಹವಣಾವುದೆಂದು ವಾಸಿಷ್ಠಮುನಿ
ಕುಲತಿಲಕನೆನಲು ವಿಶ್ವಾಮಿತ್ರ ಮನದೊಳತಿ
ಮುಳಿದು ನಿಲ್ಲಾಡದಿರು ಬಾಯಿ ಹಿರಿದುಂಟೆಂದೆ
ನುತ್ತ ಮತ್ತಿಂತೆಂದನು || ೯ ||

[1] ನಾನು (ಕ. ಗ.)

ವನಧಿಪರಿಯಂತ ಧರೆಗರಸಾತನದಱೊಳಂ,
ಧನವುಳ್ಳ ಶಿಷ್ಯನಾಗಿಹನು ನಿನಗತಿವಿಪುಳ,
ಧನವನಾರಾಧಿಸುವನಂತಲ್ಲದಾತನಾ
ರಯ್ಕೆಯೊಳಗಿರ್ಪೆ ನೀನು।
ಎನಿತನಗ್ಗಳಿಸಿ ಬಣ್ಣಿಸಲೊಪ್ಪದಯ್ಯ ಹೇ
ಳೆನಲು ರಾಜಪ್ರತಿಗ್ರಹದ ಬಲದವನೆ ನಾ
ನೆನೆ ಮುನಿಯಬೇಡಾತ ಹುಸಿದನಾದಡೆ ನಿನ್ನ
ನೇಗೆಯ್ಯಬಹುದೆಂದನು, ॥ ೧೦ ॥

ಶ್ರುತಿ ಮತ ಕುಲಾಚಾರ ಧರ್ಮಮಾರ್ಗಂ ಮಹಾ
ವ್ರತವನುಷ್ಠಾನ ಗುರುವಾಜ್ಞೆ ಲಿಂಗಾರ್ಚನೋ
ನ್ನತತಪಂ ಬ್ರಹ್ಮಕರ್ಮಂ ಬೆಳೆದ ಪುಣ್ಯವೊಳ
ಗಾದವಂ ತೊಱೆದು ಕಳೆದು।
ಸತಿಯನುಳಿದತಿದಿಗಂಬರನಾಗಿ ಮುಕ್ತಕೇ
ಶಿತನಾಗಿ ನರಕಪಾಲದೊಳು ಸುರೆಯೆರೆದು ಕುಡಿ
ಯುತ ತೆಂಕಮುಖನಾಗಿ ಹೋಹೆಂ ಹರಿಶ್ಚಂದ್ರ,
ಮಱೆದು ಹುಸಿಯಂ ನುಡಿದಡೆ । ॥ ೧೧ ॥

ಧರೆ ಗಗನವಡಸಿ ಕಾದುವಡೆಡೆಯುಲಿಹ ಚರಾ
ಚರವೆಲ್ಲಿ ಹೊಗಲಿ ಮುನಿದಖಿಳಮಂ ಸುಟ್ಟೊಸೆದು,
ಮರಳಿ ಹುಟ್ಟಿಸಬಲ್ಲ ಮುನಿಗಳಿಬ್ಬರ [1]ಶಾಂತಿ,
ಸವೆದ[1] ಕದನದ ಮುಖದಲಿ।
ಇರಬಾರದೇಳಬಾರದು ನುಡಿಯಬಾರದಂ,
ತಿರಬಾರದಹುದೆನಲುಬಾರದಲ್ಲೆನಬಾರ
ದೆರಡುಂ ನಿರೋಧದಿಂದೊಡ್ಡೋಲಗಂ ಚಿಂತೆ
ಮುಸುಕಿ ಸ್ತೈವೆಱಗಾದುದು । ॥ ೧೨ ॥

---

[1] ವಾಸಿ ಮೊಳೆತ (ಕ.ಗ.)

ಒಂದಕ್ಕೆ ಹಿತನುಡಿಯೆ ಪಕ್ಷವೆಂದೆರಡುವಂ
ಹಿಂದುಗಳೆದಿರಲುಪೇಕ್ಷಿತನೆಂದು ಜಱೆದಡೆ
ಮ್ಮಿಂದಧಿಕನೇ ಎಂದು ಹೊಗಳ್ದಡುಪಚಾರವೆಂ
ದೆತ್ತಿದಡೆ ಧೂರ್ತನೆಂದು |
ನೊಂದು ಶಾಪವನೀಯದಿರರೆಂದು ಸುರಪನಾ
ನಂದರಸವಱಿತು ಬೆಱಗಿನ ಮೊಗದೊಳಿರಲು ನಾ ನಾರದ
ರಂದ ಧಟ್ಟಿಸುತೆದ್ದು ಕೊಡು ವಸಿಷ್ಠಂಗೆ ಭಾ
ಭಾಷೆಯನು ಕೌಶಿಕ ಎಂದನು ||೧೩||

ಧರೆಯೊಳು ಚತುರ್ಯುಗಂಗಳು ಮರಳಿ ಮರಳಿ ಸಾ
ವಿರ ಬಾರಿ ಬಂದಡಜಗೊಂದು ದಿನವಾ ದಿನದ
ಪರಿ ದಿಸಂ ಮೂವತ್ತು ಬರಲೇಕಮಾಸವಾ
ಮಾಸ ಹನ್ನೆರಡಾಗಲು |
ವರುಷವಾ ವರುಷಶತವೆಂಬುದೀ ಸುರಪತಿಗೆ
ಪರಮಾಯುವೀತನೀರೇಳ್ಭವಂ ಬಪ್ಪನ್ನೆ
ವರ ದೇವಲೋಕಕ್ಕೆ ಬಾರೆಂ ಪ್ರತಿಜ್ಞೆಯೆನ
ಗೆಂದ ವಿಶ್ವಾಮಿತ್ರನು ||೧೪||

ಭಕ್ತಿ ಶಮೆ ದಮೆ ಯೋಗ ಯಾಗ ಶ್ರುತಿಮತಮಯ ವಿ
ರಕ್ತಿ ಘೋರವ್ರತ ತಪೋನಿಷ್ಠೆ ಜಪ ಗುಣಾ
ಸಕ್ತತೆ ಸ್ನಾನ ಮೌನ ಧ್ಯಾನವಾಚಾರ
ಸತ್ಯತಪ ನಿತ್ಯನೇಮ |
ಯುಕ್ತಿ ವೇದಾಗಮಾಭ್ಯಾಸ ಲಿಂಗಾರ್ಚನಾ.
ಸಕ್ತಿಯಿಂ ಬೆಳೆದ ಪುಣ್ಯದೊಳರ್ಧಮಂ ಸುಧಾ
ಭುಕ್ತಱಿಯಲು ಕೊಡುವೆನಾ ಹರಿಶ್ಚಂದ್ರ ಹುಸಿ
ಯಂ ನುಡಿಯದಿರಲೆಂದನು ||೧೫||

ಎಂದು ಭೂವರನಂ ಪರೀಕ್ಷಿಸುವೆಯೆನ್ನ ಮನ
ಬಂದ ದಿನವೆನಿತು ಸೂಳ್ನಾತಸೀ ಧರೆಯೊಳಿ ಬಾರಿ .
ಪ್ಪಂದುತನಕಾವಾವ ಪರಿಯೊಳು ಸಹಸ್ರವಿಧ
ದೊಳು ದಿಟವೆ ದಿಟವೆಂದೆನೆ|
ಹಿಂದುಗಳೆಯಲದೇಕೆ ನಡೆಯೆಸಲು ನೀನಾಡು
ವಂದವನುವಾಗಿರದೆನುತ್ತೆ ಕೌಶಿಕನಣಕ
ದಿಂದಾಡಲೆಮ್ಮ ಕೂಡಿನಿತಣಕವೇಕೆಂದು
ವಾಸಿಷ್ಠಮುನಿ ನುಡಿದನು ||೧೬||

ಇನಿತು ಮುಳಿಸಾವುದು ಹರಿಶ್ಚಂದ್ರಭೂಭುಜನ
ಮನೆಗೀಗಳಿಂತು ನೀ ಹೋಗಿ ಕೌಶಿಕನು ನೆ
ಟ್ಟನೆ ನಿನ್ನ ಸಂತಿಂತು ಕೆಡಿಸಿದಪ ನೀನಾವ
ಪರಿಯಲೆಚ್ಚತ್ತಿರೆಂದು|
ನೆನಸಿಕೊಡು ಹೋಗೆಂದಡಾನಾಡುವವನೆ ಹೇ
ಳೆನಲೆನ್ನ ಗಾಸಿಗಾಱದೆ ನೃಪಂ ಹುಸಿನುಡಿಯೆ,
ಮುನಿತನವನೀಡಾಡಿ ಹೋಹಂತಿರಾದಪುದು,
ಹೋಗಿ ನೀಂ ಹೇಳೆಂದನು ||೧೭||

ತರಣಿ ತೇಜಂಗೆಡದಿರಗ್ನಿ ಬಿಸುಪಾಱದಿರು,
ಸರಸಿರುಹವೈರಿ ತಂಪಂ ಬಿಡದಿರೆಲೆಲೆ ಮಂ
ದರವೆ ಚಲಿಸದಿರೆಂದು ಬೋಧಿಸಲದೇಕೆ ನಿಜ
ವಳಿವವೇ, ಸುಮ್ಮನಿರಲು|
ವರಹರಿಶ್ಚಂದ್ರ ಸತ್ಯಂಗೆಡದಿರೆಂದು ಬೋ
ಧಿಸುವಂತಾಗಿ ಹುಸಿಯುಂಟೆ ಕೊಂಡೆಯವೆನಗೆ,
ಹಿರಿಯತನ ಕೆಟ್ಟಿಂತು ನುಡಿಯಲಹುದೇಯೆಂದು,
ವಾಸಿಷ್ಠಮುನಿ ನುಡಿದನು ||೧೮||

ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೇ ಮುನಿದು
ಪೊಡವಿ ನುಂಗುವಡೆ ಮನೆ [1][ತಾಂ]ಗುವುದೆ ಕಿವಿದು ಹೆ
ಗ್ಗಡಲುಕ್ಕಿ ಜಗವ ಮೊಗೆವಡೆ ಮೆಳೆಗಳಡ್ಡಬಹ
ವೇ ಹೇಳು ಮುನಿಪ ನಿನ್ನ।
ಬಡ ಬೋಧೆಗೀಧೆಗಳು ರಕ್ಷಿಸುವುವಲ್ಲ ನಾಂ
ಕಡುಮುಳಿದ ಬಳಿಕಲೇಗುವವು ನೀ ಹೇಳದಿ
ರ್ದಡೆ ಮದನಹರನಾಣೆ ಹೋಗೆಂದು ಕೌಶಿಕಂ
ಜಱೆದನು ವಸಿಷ್ಠಮುನಿಯ । ॥೧೯॥

ಕುಲವ ನಾಲಗೆಯಱುಹಿತೆಂಬ ನಾಣ್ನುಡಿಗಿಂದು
ನೆಲೆಯಾಯ್ತಲಾ ಬ್ರಹ್ಮಋಷಿಯಾದಡೊಳಗು ನಿ
ರ್ಮಳವಪ್ಪುದಯ್ಯ ನೀಂ ರಾಜರ್ಷಿ ಕೋಪಿಸದೆ
ಧಟ್ಟಿಸದೆ ಕೆಡೆನುಡಿಯದೆ।
ನಿಲಲೆಂತು ಬಲ್ಲೆಯೆನಲೆನ್ನ ನೀನೀಗ ಹೆ
ಪ್ಪಳಿಸದಾಡಿದೆಯೆಂದಡಹುದಹುದು ನಿನ್ನಲಿಹ
ನೆಲೆಯಾಡಿತೆನೆ ಕೌಶಿಕಂ ಕುಪಿತನಾದನದ
ನಾವ ಕವಿ ಬಣ್ಣಿಸುವನು । ॥೨೦॥

ನೋಡು ನೋಡಿಂದೆನ್ನ ರಾಜಋಷಿಯೆಂದು ಕೆ
ಟ್ಟಾಡಿತಕ್ಕಾ ಹರಿಶ್ಚಂದ್ರನನಸತ್ಯನಂ
ಮಾಡಿಸುವೆನಧಿಕಪ್ರತಿಜ್ಞೆಗಳನಾಂತ ನಿ
ನ್ನಂ ವ್ರತಭ್ರಷ್ಟನೆನಿಸಿ।
ಋೋಡಾಡಿ ಕಾಡುವೆನೆನುತ್ತೆದ್ದು ಸಾವನೀ
ಡಾಡಿದವರೊಡೆಯನೋಲಗದಿಂದ ಹೊಱವಂಟ
ನಾಡಂಬರದ ಸಿಡಿಲು ಗಜಱಿ ಗರ್ಜಿಸಿ ಮೇಘ
ದಿಂದ ಪೊಱಮಡುವಂದದಿ । ॥೨೧॥

---

1 ಕೂ (ಗ.ಘ.), ತೂ (ಪ.)

೩. ಮೃಗಯಾಪ್ರಸಂಗ

ಕೋಣನೆರಡುಂ ಹೋರೆಗಿಡುವಿಂಗೆ ಮಿತ್ತೆಂಬ
ಕ್ಷೋಣಿಯಾಡುವ ಗಾದೆಯಂ ದಿಟಂ ಮಾಳ್ಪಂತೆ
ಹೂಣಿಸಿ ವಸಿಷ್ಠಂಗೆ ಕೌಶಿಕಂ ಸುಡಿದ ಪ್ರ
ತಿಜ್ಞೆಯಂ ಗೆಲುವಡಿನ್ನು |
ಜಾಣಿಂ ಹರಿಶ್ಚಂದ್ರರಾಯನುನ್ನತಿಯಳಿವ
ಕಾಣಬೇಕೆಂದಖಿಳಸಾಮರ್ಥ್ಯದ ಕಲಾಪ್ರ
ವೀಣನಂತಸ್ಥದೇಕಾಂತದೊಳ್ ಚಿಂತೆಯಿಂ
ಭ್ರಾಂತಿಯೋಗದೊಳಿರ್ದನು ॥ ೧ ॥

ಧರೆಯೊಳು ಹರಿಶ್ಚಂದ್ರನಂ ಹುಸಿಕನೆಂದೆನಿಪ
ಪರಿಯಾವುದೆಂದು ಚಿಂತಿಸಲೊಂದುಪಾಯವಂ
ಕುರಿಸೆ ಕಂಡುಬ್ಬಿ ಭುಜವೊಯ್ದು ನಿಜವೈರದಂ
ತಸ್ಥವಱಿಯದ ಮುನಿಗಳ |
ಕರೆದು ನೀವಿಂತೀಗ ಹೋಗಿ ಭೂವರನನುಪ
ಚರಿಸಿ ಬೋಧಿಸಿ ಬಹುಸುವರ್ಣಯಾಗವನಾವ
ಪರಿಯೊಳಂ ಮಾಳ್ಪನುವನುಱೆ ಮಾಳ್ಪುದೆಂದು ಕಳು
ಹಿದನು ವಿಶ್ವಾಮಿತ್ರನು ॥ ೨ ॥

ಕೌಶಿಕನ ಕುಟಿಲವಱಿಯದೆ ಹೋಗಿ ಮುನಿಗಳವ
ನೀಶಂಗೆ ಮಂಗಳಾಶೀರ್ವಾದಶೇಷೆಯಂ
ಸೂಸಲೇಂ ಕಾರ್ಯ ಬಿಜಯಂಗೆಯ್ದಿರೆನೆ ಸಕಲ
ವೇದಪೌರಾಣಾಗಮ |
ರಾಶಿಗಳೊಳೊಂದಧಿಕಧರ್ಮವಂ ಕಂಡಱಿಪ
ಲೋಸುಗಂ ಬಂದೆವೆನಲಾವುದೆನೆ ಮಾಳ್ಪ ವಿ
ಶ್ವಾಸಮಂ ನುಡಿಯೆ ಪೇಳ್ದಪೆವು ಮಾಡದಡದಂ
ನುಡಿದು ಫಲವೇನೆಂದರು ॥ ೩ ॥

ಮನವೊಸೆದು ಮಾಡುವಂತಾಗಿ ಗುರುವಾಸಿಷ್ಠ
ಮುನಿಯ ಪದಪಂಕೇಜದಾಣೆ ನೆಟ್ಟನೆ ಪೇಳ್ವೆ
ದೆನೆ ಬಹುಸುವರ್ಣಯಾಗಂ ಯಾಗಕೋಟಾನು
ಕೋಟಿಗಳೊಳಧಿಕಫಲವು
ನಿನಗಲ್ಲದುಳಿದ ಭೂಪರ್ಗಾಗದೆಂದಡದ
ಱನುವಾವುದೆನೆ ನೆರೆದ ಮುನಿಗಳಿಗೆ ದೋಷ ನೆ
ಟ್ಟನೆ ನಿನಗೆ ಬಾರದಂದದಿ ಬೇಡಿದನಿತು ವ
ಸ್ತುವನೀಯಬೇಕೆಂದರು ‖ ೪ ‖

ಆ ವಿಮಳಮುನಿಗಳ ಹಿತೋಪದೇಶವನಾಂತು
ಭೂವರಂ ಸರ್ವಮುನಿವರ್ಗಮಂ ಬರಿಸಿ ನಾ
ನಾವೇದವಿಧಿವಿಹಿತ ಧರ್ಮಾಗಮಾರ್ಥದಿಂ
ಯಾಗಮಂ ಮಾಡಿ ಬಳಿಕ
ಆವಾವ ಮುನಿಗಳಾವಾವ ಧನವಂ ಬೇಡ
ಲೋವಿ ಕೊಟ್ಟುಪಚರಿಸುತಿರೆ ಬಂದ ಸುಜನಮೃಗ
ಧೀವರಂ ಕಪಟವಟು ಕೌಶಿಕಂ ವಾಸಿಷ್ಠ
ಮುನಿ ಹೋದ ಹೊತ್ತನಱಿದು ‖ ೫ ‖

ಹರಿದು ವಿಶ್ವಾಮಿತ್ರಮುನಿಗೆಱಗಿ ಚರಣಸರ
ಸಿರುಹಮಂ ತೊಳೆದು ನೆನೆದರ್ಥಮಂ ಬೆಸಸಿಮೆನೆ
ಪಿರಿಯ ಕರಿಯಂ ಮೆಟ್ಟಿ ಕವಡೆಯಂ ಮಿಡಿದಡೆನಿ
ತುದ್ದಕ್ಕೆ ಹೋಹುದದಱ
ಸರಿಯೆನಿಸಿ ಸುರಿದ ಹೊಸ ಹೊನ್ನ ರಾಸಿಯನೀವು
ದರಸಯೆಂದೆನೆ ಹಸಾದಂ ಕೊಟ್ಟೆನದನೀಗ
ಲಿರದೊಯ್ವುದೆನೆ ನಿನ್ನ ಮೇಲಿರಲಿ ಬೇಹಾಗ
ತರಿಸಿಕೊಂಡಪೆನೆಂದನು ‖ ೬ ‖

ಕೊಂಡ ಹೊಸ ಹೊನ್ನ ರಾಸಿಯನವನಿಪಾಲಕನ ,
ಭಂಡಾರದೊಳಗಿರಿಸಿ ತನ್ನಾಶ್ರಮಕೆ ಮರಳಿ
ಚಂಡಕರನರುಣಕಿರಣಂ ಹೊಗುವ ತಾವೆಲ್ಲ ,
ಮಂ ತೀವಿತವನ ಸತ್ಯ |
ಪಂಡಿತರ ಮುಂದೆ ದೇವೇಂದ್ರನಿದಿರಲಿ ಮುನಿಯ
ಭಂಡಸಂ ಮಾಳ್ಪೆ ಭೂಪತಿಯಲನೃತವನಿಲ್ಲಿ ,
ಕಂಡೆನಾದಡೆ ಕಾಣ್ಬ ತೆಱನಾವುದೆಂದು ಚಿಂ ,
ತಿಸಿದ ವಿಶ್ವಾಮಿತ್ರನು | ||೭||

ಮುಳಿದು ಮೃಗಸಂಕುಳಂಗಳನು ಹುಟ್ಟಿಸಿ ನಾಡ
ಬೆಳೆಗಳಂ ಕೆಡಿಸಿ ಕೇಡಿಂಗೆ ಬೆಂಡಾಗಿ ಜನ
ವಳವಳಿದು ಬಾಯ್ಬಿಟ್ಟು ದೂಱಿದಡೆ ಕೇಳ್ದು ಸೈ
ರಿಸಲಾಱದಾ ಹುಯ್ಯಲ |
ಬಳಿವಿಡಿದು ಬೇಂಟೆಗೆಯ್ತಂದ ಭೂಪಾಲಕನ.
ನೆಳತಟಂಮಾಡಿ ತೆಗೆದೆನ್ನಾಶ್ರಮಕ್ಕೊಯ್ದು ,
ಬಳಿಕ ನೋಡುವೆನವನ ಸತ್ಯಗಿತ್ಯದ ಬಲುಹ
ನೆಂದ ವಿಶ್ವಾಮಿತ್ರನು, ||೮||

ಅನುವುಳ್ಳ ಬುದ್ಧಿಯಂ ಕಂಡೆನೆಂದತಿ ಮೆಚ್ಚಿ ,
ತನಗೆ ತಾ ತೂಪಿಱಿದುಕೊಂಡು ಕಣ್ಮುಚ್ಚುತಂ
ಮನದೊಳುತ್ಪತ್ತಿಮಂತ್ರವ ಮಂತ್ರಿಸಿದ ಜಲವ
ನೊಸೆದು ದೆಸೆದೆಸೆಗೆ ತಳಿದು |
ವಿನಯದಿಂ ನೋಡನೋಡಲ್ಕು ದಿಕ್ಕು ಧರಣಿ ತೆ
ಕ್ಕನೆ ತೀವಿ ನಿಂದ ನಾನಾಪಕ್ಷಿಮೃಗಕುಲಕೆ ,
ಕೊನೆವೆರಳನಲುಗಿ ತಲೆದೂಗಿ ಕೈವೀಸಿದಂ ,
ದೇಶಮಂ ಗೋಳಿಡಿಸಲು | ||೯||

ಮೊಳೆವ ಬೀಜವನು ಕ್ರಿಮಿಕೀಟಕಂಗಳು ಸಸಿಯ
ನೆಳಹುಲ್ಲೆಗಳ್ಳು ಹೊಡೆಯ್ವಸೆಳೆಗಳ್ಳು ಸವಿದಂಟು
ಗಳ[1] ನಾವುಗಳು ತೆನೆಗಳಂ ಗಿಳಿ ನವಿಲು ಕೊಂಚೆ,
ಮೊದಲಾದ ಖಗತತಿಗಳು|
ಉಳಿದ ಬೆಳೆಯಂ ನಕುಲಹೆಗ್ಗಣಂಗಳ್ಳು ಕಾವ ಮುಂಗಸಿ.
ಬಳವಂತರೆಲ್ಲರಂ ಸರ್ಪಸಂತತಿ ತಿಂದು
ತಳಪಟಂ ಮಾಡಿ ನಾಡೆಲ್ಲಮಂ ಗೋಳಿಡಿಸು,
ತಿರ್ದುವೇವಣ್ಣಿಸುವೆನು । ‖ ೧೦ ‖

ಬೆಳೆಯ ದೆಸೆಯಿಂತಾಯ್ತು ಉಳಿದ ತೋಟದ ಗೆಡ್ಡೆ
ಗೆಳಸು ಹಂದಿಗೆ ಹವಣು ಹಣ್ಣು ಕಾಯ್ ಕಬ್ಬುಗಳ
ನಳಿಲು ನಿಲಲೀಯವುದಕದೊಳಾವೆಮೀನ್ ಮೊಸಳೆ
ಗಳ ಭಯಂ ಘನವಾದುದು|
ಎಳಗಱುಗಳಂ ತೋಳನಾಕಳಂ ಹುಲಿ ಮಿಾಱು
ಸುಳಿವವರನಮ್ಮಾ ವೃಕರಡಿಕಾಳ್ಕೋಣಂಗ
ಳುಳಿಯಲೀಯದಿರೆ ನಾಡೆಯ್ದೆ ಬಾಯ್ಬಿಟ್ಟು ದೂ
ಱಲು ಹರಿದರವನಿಪತಿಗೆ, ‖ ೧೧ ‖

ಭೂಸುರರು ಮಂತ್ರಾಕ್ಷತೆಯನಿತ್ತು ಶಿವಭಕ್ತ
ರ್ಶಾಸುರದಿ ಭಸಿತಮಂ ಕೊಟ್ಟುಳಿದ ಜನವೆಲ್ಲ ।
ಲೇಸೆನಿಪ ವಸ್ತುವಂ ಕಾಣಿಕೆಯನಿತ್ತಾಗ,
ಭೂಪ ಚಿತ್ತೈಸು [2][ಯೆ]ಂದು|
ದೇಶದೊಳಗಾದ ಖಗಮೃಗದ ಬಾಧೆಯನು ಧರ
ಣೀಶನೆನಿಸುವ ಹರಿಶ್ಚಂದ್ರರಾಯಂಗೆ ತ
ಮ್ಮಾಸಱಳಿವಂತೆ ಬಿಸ್ನೈಸುತ್ತ ಕೈಮುಗಿಯು ।
ತಿರ್ದರೇವಣ್ಣಿಸುವೆನು । ‖ ೧೨ ‖

---

[1] ನೂಲುಗಳು (ಕ.ಗ.), ನರಿಗಳುಂ (ಪ.) [2] ವೆ (ಸ.)

ಅರಸುಬಾಧೆಗಳಿಲ್ಲ ಬಿಟ್ಟಿಯೂಳಿಗವಿಲ್ಲ,
ಪರನೃಪರ ಭಯವಿಲ್ಲ ಸಾಲದಂಡಲೆಯಿಲ್ಲ,
ನೆರೆಯೂರ ಕದನವಿಲ್ಲೇನೆಂಬೆವದ್ಭುತವ,
ಖಗಮೃಗದ ಕಾಟದಿಂದ|
ಧರೆಯೊಳಗೆ ಬಿತ್ತಿಲ್ಲ ಬೆಳೆಯಿಲ್ಲ ನೀರಿಲ್ಲ,
ತರಹರಿಸಿ ಹದುಳವಿರಲಿಲ್ಲೆಂದು ದುಃಖಮಂ
ಪರಿಹರಿಸಬೇಕು ಚಿತ್ತೈಸು ಬಲ್ಲಹಯೆಂದು,
ಭೂಜನಂ ಮೊಱೆಯಿಟ್ಟುದು। ||೧೩||

ಲೀಲೆಯಿಂದೋಲಗಂಗೊಟ್ಟು ಜಯಲೋಲ ಭೂ
ಪಾಲಕಂ ಕರೆ ಕರೆ ಸಮಸ್ತ ಬೇಂಟೆಯ ಶಬರ,
ಜಾಲಮಂ ಖಗಹೃದಯಶೂಲಮಂ ಮೃಗದ ಕಡೆ
ಗಾಲಮಂ ಬೇಗವೆಂದು|
ಮೇಲೆಮೇಲಾಕ್ರಮಿಸಿ ಕರಸೆ ನಿಟ್ಟಿಸುವ ಕ
ಣ್ಣಾಲಿ ಕತ್ತಲಿಸೆ ಕತ್ತಲೆಯ ತತ್ತಿಗಳಂತೆ
ಹೋಲಿಕೆಗ ಹೊಱಗಾಗೆ ಬರುತಿರ್ದರಮಮ ಕ
ರ್ಕಶಬೇಡವಡೆಯೊಡೆಯರು, ||೧೪||

ಮದಹಸ್ತಿಯಿಱಿದ ಘಾಯಂಗಳ ವರಾಹನೆ,
ತ್ತಿದ [1]ಡೋಱು[1]ಗಳ ಮೃಗಾಧಿಪನುಗಿದು ಬಗಿದು ತೋ
ಡಿದ ಬಾದಣದ ಕರಡಿ ಕಾಱು ಬತ್ತಿದ ತೋಳ,
ಹುಲಿ ಹೊಯ್ದು ಜರಿದ ಹೆಗಲ|
ಪದದಿ ಕೋಣಂ ಹೊಯಿದ ಹೋರ ಭೇರುಂಡನೆಱ
ಗಿದ ಗಂಟುಗಳ ಕಡವೆ ತುಳಿದ ಹಜ್ಜೆಗಳ ಚಿ
ಹ್ನದ ಬೇಡನಾಯಕರು ನೆರೆದರು ಹರಿಶ್ಚಂದ್ರ
ಭೂನಾಥನೋಲಗದೊಳು। ||೧೫||

[1] ದೋಣಿ (ಖ.ಗ.ಘ)

ಕಡವೆಗತ್ಯಾಸ್ವಾದಿಯೆಂಬ ಉಡುವೊಲಗಳಿಗೆ
ದಡಿವ್ರೊಯ್ಲನೆಂಬ ಕರಡಿಯ ಗಂಡನೆಂಬ ಬಿ
ಟ್ಟಡೆ ತೋಳಜಜ್ಝಾರನೆಂಬ ನರಿದ್ಧಿನಿಹಿಯೆಂ
[ದೆಂ]ಬ ಕುನ್ನಿಗಳನಾಯ್ದು |
ಗಡಣದಿಂ ಬೇಡವಡೆಯೊಡೆಯರೆಲ್ಲರು ನೆರೆದು
ಪೊಡವಿಪತಿಯಾ ಹರಿಶ್ಚಂದ್ರರಾಯನ ಮುಂದೆ
ನಡೆ ಜೀಯ ತಡವೇಕೆ ಕಣ್ಗೆ ಹಬ್ಬವ ಮಾಡು
ವೆಡೆಯ ತೋಱುವೆವೆಂದರು || ೧೬ ||

ಸೇನೆ ನೆರೆಯಿತ್ತು ರಿಪುಕುಮುದಮಾರ್ತಾಂಡ ಪು
ಣ್ಯಾನೂನತುಂಡ ಒಲಭರಿತದೋರ್ದಂಡ ಭೂ
ಮಾನಿನಿಯ ಗಂಡ ವಿಜಯಾಂಗನೆಯ ಮಿಂಡ ರಣ
ರಂಗಮುಖ ಕಾಲದಂಡ |
ದಾನಿ ಚಿತ್ತೈಸೆಂಬ ಮಾತಿನೊಳಗೆದ್ದು ಸು
ಮ್ಮಾನದಿಂ ಸತಿಪುತ್ರಮಂತ್ರಿಸಹಿತಡಿಯಿಟ್ಟು
ಭಾನುಕುಲತಿಲಕಂ ಹರಿಶ್ಚಂದ್ರರಾಯನೇ
ಱಿದನು ಮಣಿಮಯ ರಥವನು || ೧೭ ||

ಪೊಡವಿ ಜಡಿಯಲು ದೆಸೆಗಳುಬ್ಬಸಂಬಡೆ ಫಣಿಯ
ಹೆಡೆ ಕೊರಳೊಳ್ಳಾಳೆ ಕೂರ್ಮನ ಬೆನ್ನು ತಗ್ಗಿ ಬಸು
ಱಿಡೆಯ ಹೊಗೆ ಬೊಬ್ಬೆಗೊಟ್ಟಬ್ಬರಿಸಿ ನಗರಿಯಿಂ
ಹೊಱಗೆ ಹೊಱಬೇಡ ಬಿಟ್ಟು |
ಘುಡುಘುಡಿಸಿ ರಥವನೊಲವಿಂ ನೂಂಕಿ ಬಲುಬೇಡ
ವಡೆ ಕಡಗಿ ಹರಕರಿಸಿ ನಡೆಯೆ ಕೈಮಿಕ್ಕು ಹೇ
ರಡವಿ ಗೋಳಿಡಲು ದಾಳಿಕ್ಕಿದಂ ನಿಜದೇಶ
ಜನವನಧಿಕಃಮುದನಖಸು || ೧೮ ||

ಹಿಡಿ ಸಪಿಲ್ಗನಿಱು ಹುಲಿಯನಟ್ಟು ಮರೆವಿಂಡವರಿ
ಗೆಡಹು ಕರಿಯಂ ಱೊಪ್ಪವಿಡಿದ ಹಂದಿಗೆ ತಡವಿ
ಬಿಡು ನಾಯನೆಚ್ಚರಳೆಯಂ ಕಲ್ಲಲಿಕ್ಕು ಕೋ
ಣನನು ಹೊಱಹೊಗಲೀಯದೆ।
ಹೊಡೆಯುಡುವ ಮಱವಿಡಿದು ಕುತ್ತು ಕೋಣನಸ್ಕೊಯ್ಯ
ನಿಡು ನೊಲನ ಮರಚು ಸಿಂಹವ ಹಲವು ಬಲೆಗೆದಱು
ನಡೆಗೆಡಿಸು ಹಕ್ಕಿಗಳನೆಂಬ ಬೇಡರ ಬೊಬ್ಬೆ
ಯಿಂದಡವಿ ಘೀಳಿಟ್ಟುದು । ॥ ೧೯ ॥

ಎರಳೆ ಸರಳಿಸಿ ಹೋದುದಿಲ್ಲಿ ಹಿಂಗಾಲೊದೆದು
ತೆರಳ್ದ ಮಣ್ಣಿದೆ ಸೊಕ್ಕಿದೆಕ್ಕಲಂಗಳು ಹೋದ
ವೆರಡು ಕಟವಾಯಿಕಡೆ ಸುರಿದ ನೊರೆಯಿದೆ ಕರಡಿ
ತಣಿದಾಡಿ ಹೋದುದಿಲ್ಲಿ।
ಸೆರೆದಿಱುಹೆಗಳ ಹೊರೆಯೊಳೊಡೆದ ಹುತ್ತಿದೆ ಹುಲಿಯು
ಮರೆಯ್ಯನೆಳೆಯಿತ್ತಿಲ್ಲಿ ಬಿಸುನೆತ್ತರಿದ್ದುದೆಂ
ದಿರದೆಱಗಿ ಹಜ್ಜೆಯಂ ನೋಡಿ ಬೆಂಬಳಿವಿಡಿದು,
ಹರಿವ ಲುಬ್ಧಕರೆಸೆದರು, ॥ ೨೦ ॥

ಗೋರಿವೇಂಟೆಯನಾಡಿ ಭೂವರಂ ತಿರುಗಿ ಕಾಂ
ತಾರದೊಳು ಮೃಗವ ನೆಲೆಗೊಳಿಸಿ ಮೇಗಾಳಿಯಿಂ
ದೂರದಿಂ ತೋಱುತ್ತನೊಡ್ಡಿ ಕಿಗ್ಗಾಳಿಯಿಂ ।
ಬಂಡಿಯಿಂದಿಳುಹಿ ಹುಲಿಯ ।
ಹಾರಯಿಸಿ ತಲೆದಡವಿ ತೋಱು ಹಾಸವ ತಿವಿದು,
ದೂರದಿಂ ಕಂಡು ಹಸರಿಸಿ ಹತ್ತಿ ಹಣುಗಿ ನೆಲ
ಕೋರಂತೆಯಡಗಿ ತನ್ನ ನುವಿನಳವಿಗೆ ಜುಣುಗಿ
ನಡೆದು ಬಳಿಕೇಗೆಯ್ದುದು ॥ ೨೧ ॥

ಕುಸಿದ ತಲೆ ಹಣುಗಿದೊಡಲರಳ್ವ ಬಾಯ್ ಸುಗಿದ ಕಿವಿ,
ಯುಸುರಿಡದ ಮೂಗು ಮಱೆದೆವೆಯಿಕ್ಕದುರಿಗಣ್ಣು,
ಬಸುಱೊಳಡಗಿದ ಬೆನ್ನು ನಿಮಿರ್ದ ಕೊರಳಡಿಗಡಿಗೆ,
ಗಜಬಜಿಸುತಿಹ ಮುಂದಡಿ।
ಎಸೆಯೆ ಲಂಘಿಸಿ ನೆಲನನೊದೆದು ಪುಟಸೆಗೆದು ಗ
ರ್ಜಿಸುತ ಬರೆ ಹೆದಱಿ ಕಂಗೆಟ್ಟು ಡೆಂಘಣಿಸಿ ಸರ
ಳಿಸುವ ಹರಿಣಂಗಳಂ ಮೋದಿ ಮುಱಿದಟ್ಟಿ ಕೆಡ
ಹಿದವು ದೀಹದ ಹುಲಿಗಳು ॥ ೨೨ ॥

ಕಂಟಣಿಸಿದಾ ಖಗವನೀ ಮೃಗವನೆಂತಕ್ಕೆ
ಬೇಂಟೆಯಾಡಿದನೆಂದು ಪೊಗಳಲೇವ್ರದು ಗೋರಿ
ವೇಂಟೆ ಪಳಹರವೇಂಟೆ ಪಟವೇಂಟೆ ವಿದ್ಯಾಧ
ರರ ಬೇಂಟೆ ಚಿತ್ರವೇಂಟೆ।
[1]ಅ[1]ಂಟುಜಲವೇಂಟೆ ತೋಹಿನ ಬೇಂಟೆ ಘನ ಸೋಹು
ವೇಂಟೆಗಳೆನಿಪ್ಪ ಹೆಸರಂ ಹೊತ್ತು ಮೆಱೆಯುತಿ
ಪ್ಪೆಂಟು ತೆಱದುಚಿತವೇಂಟೆಯನಾಡಿದಂ ಹರಿ
ಶ್ಚಂದ್ರ ವಸುಧಾಧೀಶನು । ॥ ೨೩ ॥

ಗಣ್ಯತರ ಗೌತಮಾರಣ್ಯದಲಿ ದಂಡಕಾ
ರಣ್ಯದಲಿ ಕ್ರೌಂಚಕಾರಣ್ಯದಲಿ ಭಯಗುಹಾ
ರಣ್ಯದಲಿ ನುತ ದಶಾರಣ್ಯದಲಿ ಘೋರ ಕಂ
ಠೀರವಾರಣ್ಯದಲ್ಲಿ।
ಪುಣ್ಯವಿಡಿದನಿಮಿಷಾರಣ್ಯದಲಿ ಮಾನುಷಾ
ರಣ್ಯದಲಿ ಬೇಂಟೆಯಾಡುತ್ತ ನಡೆತಂದಖಿಳ
ಪುಣ್ಯವೆಂದೆನಿಪ ಕಿಷ್ಕಿಂಧಾಚಳಕ್ಕೆ ಬಂ
ದನು ಹರಿಶ್ಚಂದ್ರನೃಪನು । ॥ ೨೪ ॥

---

[1] ಉ (ಕ.ಗ.)

ಉರಿ ಶೈತ್ಯವಾದಂತೆ ವಿಷ[1]ವಮೃತವಾ[1]ದಂತೆ,
ತರಣಿ ತಂಪಾದಂತೆ ನೃಪನ ಬೇಂಟೆಯ ಬಿನದ
ದುರವಣೆಯನೊದವಿಸುವ ಹರಿವೈರಿ ಕರಿವೈರಿ
ಹರಿಣವೈರಿಗಳು ಮೃಗವ|
ಹರಿದಟ್ಟಿ ಪಿಡಿದಡಿಸಿ ವೋದಿ ಮುಱಿಯದೆ ನಿಂದು
ಮರವಟ್ಟ ಕಾರಣವನಱುಪಬೇಕೆಂದೆಯ್ದಿ,
ಸರಸಿರುಹಸಖಕುಲ ಹರಿಶ್ಚಂದ್ರ ಭೂಪಂಗೆ,
ಪೇಳ್ದರಂತಾ ಜೇಡರು| ‖ ೨೫ ‖

ಚಿತ್ರತರವಾದುದಿಂದೀ ಕಾನನಂ ಮಹಾ
ಕ್ಷೇತ್ರದೊಳಗಣದಾಗದಿರದೆನುತ ಬರೆ ಮುಂದೆ
ಚಿತ್ರಕಾಯಾಜಿನದ ಸುಲಿಪಲ್ಲ ಭಸ್ಮದ ಜ
ಟಾಭರದ ಮುನಿನಾಥನು|
ಮಿತ್ರರೊಡಗೂಡಿ ಮಿತ್ರಪ್ರಕಾಶಂ, ಲೋಕ
ಮಿತ್ರನಾತ್ಮ ಪವಿತ್ರಚರಿತವಾಕ್ಯಂ ಮರುತ
ಮಿತ್ರಕಾರ್ಯದ ಸರಿಕರಂಗಳಂ ಸವಕಟ್ಟು
ತಿರಲು ಭೂಪತಿ ಕಂಡನು ‖ ೨೬ ‖

ಹೆಂದದ್ದಾನಂದದಿಂ ಬಂದು ವಂದಿಸಿ ಮುಂದೆ
ನಿಂದೆಂದಿನಂದದಿಂದಿಂದು ಮುದದಿಂದ ಮೃಗ
ವೃಂದದೊಳಗೊಂದುವಂ ಕೊಂದಿಕ್ಕದೆಮ್ಮ ಮೃಗ
ವಿರ್ದುದಕೆ ಕಾರಣವನು|
ತಂದೆ ಕುಂದದೆ ಕರುಣಿಸೆಂದು ವಂದಿಸಿ ಭೂಪ
ಕಂದರ್ಪನಿನಕುಲ ಹರಿಶ್ಚಂದ್ರ ಭೂನಾಥ
ನೆಂದಡಾ ಮುನಿನಾಥನಂದು ಮಾಱುತ್ತರಂ
ಗುಡಲೆಂದು ತಱಿಸಂದನು ‖ ೨೭ ‖

[1] ವುಗ್ರವಳಿ (ಕ.ಖ.), ವು ಸಿಹಿಯಾ (ಪ.)

ನೆರೆದ ವೇದಂಗಳುಗ್ಗಡವುಪನಿಷತ್ತುಗಳ
[1]ಗರವಟಿಗೆ[1]ಯಣಿಮಾದಿಗಳ ಬೊಬ್ಬೆ ಧರ್ಮದ
ಬ್ಬರ ಘನಜ್ಞಾನಪ್ರಭಾದೀಪ್ತಿಗಳು ಹರಿ
ಬ್ರಹ್ಮಾದಿ ಸುರರ ಕಾಹು।
ಪುರುಷಾರ್ಥನಾಲ್ಕುಱೊಳು ಸಲುಗೆ ಪುಣ್ಯದ ಮಂದೆ
ಸಿರಿಸರಸ್ವತಿಯರೆಡೆಯಾಟವೆಸೆದಿರೆ ಜಗ
ದ್ಗುರು ವಿರೂಪಾಕ್ಷನಿಲ್ಲಿಯೆ ಸುಖದೊಳಿಪ್ಪ ಪಂ
ಪಾಕ್ಷೇತ್ರವಿದೆಯೆಂದನು ॥ ೨೮ ॥

ಬಿಡದೊಮ್ಮೆ ಕಂಡ ಜೀವರ ಭವವ್ರಜದ ಬೆಂ
ಬಡಿಗೆ ಪಾತಕಕೋಟಿಯಾ ಕತ್ತಿ ದುಷ್ಕರ್ಮ
ದೆಡೆಗೊರಳ ಕತ್ತರಿ ಸಮಸ್ತರೋಗಂಗಳೆಡೆ,
ಗೊಡ್ಡಿ ದಲಗಜ್ಞಾನದ।
ನಡುದಲೆಯ ಗರಗಸಂ ಮಲೆವ ಮಾಯೆಯ ಬಸುಱ,
ನೊಡೆಹೊಯ್ವ ಶೂಲವಿನ್ನುಳಿದ ದುರಿತವನುರುಹಿ,
ಸುಡುವ ಕಿಚ್ಚೆಂದೆನಿಪ ತುಂಗಭದ್ರಾನದಿಯ
ನವನೀಶ ನೋಡೆಂದನು। ॥ ೨೯ ॥

ನುಡಿದೆನ್ನ ಸಂಶಯದ ಸಾಲ ಸವಱದೆ ನಿನ್ನ,
ಪಡೆದ ಪುಣ್ಯಾಧಿಕನ ಹೆಸರಾವುದಯ್ಯ ನೀ
ನುಡಿಯೆಂದಡೆರಡನೆಯ ಪುರವೈರಿಯೆನಿಪ ವಾ
ಸಿಷ್ಠಮುನಿಪನ ಮೊಮ್ಮನು।
ಬಿಡೆ ಪರಾಶರನು ನಾನೆನೆ ಹೆಚ್ಚಿ ಹಿಗ್ಗಿ ನಡೆ
ನಡೆ ತಂದೆ ಮದ್ಗುರುಗಳಡಿಗಳೆಡೆಗೆಂದು ಬಳಿ
ವಿಡಿದು ನಡೆತಂದು ಕಂಡನು ಮುಂದೆ ಮುನಿವರೇ
ಣ್ಯನನವನಿಪವರೇಣ್ಯನು ॥ ೩೦ ॥

[1] ಪುರವಣಿಗೆ (ಖ ಘ.ಪ.)

ತಿಳಿಗೊಳನ ಬಳಸಿ ನಳನಳಿಸಿ ಬೆಳೆದೆಳಮಾವು ಸಿಂಬಾಗಿ
ಗಳ ತಳದ ಮಲ್ಲಿಕಾಮಂಟಪದ ತಣ್ಣೆಳಲ
ತೆಳುಗಾಳಿಯೊಳು ಪುಣ್ಯವಪ್ಪ ಪುಳಿನಸ್ಥಳದ,
ಮೇಲಶೋಕೆಯ ತರುವಿನ|
ತಳಿರ ತೊಂಗಲ ಗದ್ದುಗೆಯೊಳೋಲಗಂಗೊಟ್ಟು,
ಬಳಸಿ ಹಿಂದೆಡಬಲದೊಳಿಪ್ಪ ಮುನಿಗಳ ಕೂಡೆ,
ನಲವಿನಿಂ ನುಡಿವ ಪಶುಪತಿಯಂತಿರಿರ್ದ ಮುನಿ
ನಾಥ ಕಣ್ಗೆಸೆದಿರ್ದನು, ॥ ೩೧ ॥

ನೀತಿ ಬಲಿದುದೊ ಶಾಂತಿ ರೂಪಾಯ್ತೊ ಸದ್ಗುಣ
ವ್ರಾತವೇ ಮುನಿಯಾಯ್ತೊ ಮುಕ್ತಿ ಜಡೆವೊತ್ತುದೋ,
ಭೂತದಯೆ ವಲ್ಕಲಾಂಚಲವಾಂತುದೋ, ಪುಣ್ಯ
ವೆಳಸಿ ಭಸಿತವನಿಟ್ಟುದೋ|
ನೂತನಶ್ರುತ್ಯರ್ಥ ನುಡಿಗಲಿತುದೋ ಘನ
ಸ್ವಾತಂತ್ರ್ಯವೃತ್ತಿ ಗೋಚರಿಸಲೆಳಸಿತೊ ಎಂಬ
ಚಾತುರ್ಯದಿಂದಿರ್ದ ಮುನಿನಾಥನಂ ಕಂಡು,
ಹರುಷದಿಂ ಭೂನಾಥನು, ॥ ೩೨ ॥

ಸುರನರೋರಗನಮಿತಚರಣ ಜಯಜಯ ದಯಾ
ಭರಣ ಜಯಜಯ ಕೃಪಾವರಣ ಜಯಜಯ ಶಾಂತಿ
ಕಿರಣ ಜಯಜಯ ವಿಗತಮರಣ ಜಯಜಯ ದುರಿತ
ಹರಣ ಜಯ ಜಯತು ಜಯತು|
ಗುರುವೆ ಕುಲಗುರುವೆ ಘನಗುರುವೆ ಪರಗುರುವೆ ಮ
ದ್ಗುರುವೆ ಸದ್ಗುರುವೆ ಶರಣಾಗು ಶರಣಾಗೆಂದು
ಧರಣಿಪತಿ ಹರಹಿದನು ನಿಜತನುವನಾ ಮುನಿಯ
ಚರಣಸರಸಿಜದೆಡೆಯೊಳು ॥ ೩೩ ॥

ಬಗೆಮೀಱು ಲೋಚನದೊಳೊಗೆವ ಸುಖಜಲ ಮೆಯ್ಯೊ
ಳೊಗೆವ ಪುಳಕಂ ಕೈಯೊಳೊಗೆವ ಕಂಪನ ನುಡಿಯೊ
ಳೊಗೆವ ತೊದಳವುಳಕದಪಿನೊಳೊಗೆವ ಬೆಮರು ಕಂ
ಠದೊಳೊಗೆವ ಹೊಸ ಗದ್ಗದ|
ಮಿಗೆ ಮೊಗದೊಳೊಗೆವ ನಸುನಗೆ ಘನಮನೋಮತಿಯೊ
ಳೊಗೆವ ಪರವಶವೆರಸಿ ಮೆಱೆವ ಭೂರಮಣನಂ,
ಮೊಗವೆತ್ತಿ ಕುಳ್ಳಿರಿಸಿ ಮೆಯ್ದಡವಿ ಬೋಳೈಸಿ
ಮುನಿನಾಥನಿಂತೆಂದನು ॥ ೨೪ ॥

ನೀನೆತ್ತಲೀ ವಿಪಿನವೆತ್ತಲೀ ಬನಕೆ ನೀ
ನೇನು ಕಾರಣ ಬಂದೆಯೆಲೆ ಮಗನೆ ಹೇಳೆನಲು,
ಭೂನಾಥನೆಂದ ಖಗಮೃಗದ ಕಾಟಕ್ಕೆ ಸೈ
ರಿಸಲಾಱದವನೀಜನಂ|
ಹಾನಿವೆತ್ತೊಱಲಿ ಮೊಱೆಯಿಡೆ ಕೇಳ್ದು ಬೇಂಟೆಯ ಸು
ಮಾನಕ್ಕೆ ಬಂದೆನೆಂದೆನೆ ತ್ರಿಕಾಲೋಚಿತ,
ಜ್ಞಾನಿ ಮುನಿಯಱಿದ ಸರಸನ ಮೇಲೆ ಕೌಶಿಕನ
ಕಾಟವಡಿಯಿಟ್ಟನುವನು ॥ ೨೫ ॥

ವಿಷಮವಿಶ್ವಾಮಿತ್ರಮುನಿ ಮುನಿದು ತಪ್ಪ ಸಾ
ಧಿಸುವ ನೀನಱಿದಿರೆಂದಱುಪಬೇಕಱುಪಿದಡೆ,
ಪಿಸುಣತ್ವವಱುಪದಿರ್ದಡೆ ನೃಪನ ಕೇಡನಾ
ನೋತುಪೇಕ್ಷಿಸಿದಾತನು|
ಗಸಣಿಯಾಯ್ತೇಗೆಯ್ವೆನೆಂದು ಮನದೊಳಗೆ ಚಿಂ
ತಿಸಿ ಮನೆಗೆ ಬಂದ ಶಿಷ್ಯನನು ಬೋಧಿಸಲು ಕುಂ
ದೆಸೆಯದಿರ[ದಾಂ] ಪೇಳದಂತೆ ಪೇಳ್ದಪೆನೆಂದು,
ನೆನೆದನಾ ಮುನಿನಾಥನು ॥ ೨೬ ॥

ಎನ್ನನೊಲುವೊಡೆ ಕುಲಾಚಾರಮಂ ಬಿಡದಿರ್ಪ
ಡುನ್ನತಿಕೆ ಬೇಹಡುತ್ತಮಕೀರ್ತಿ ಕೆಡದಿಹಡೆ,
ನನ್ನಿಯುಳಿವಡೆ ಮಗನೆ ಹೋಗದಿರು ಮಱೆದು ವಿ
ಶ್ವಾಮಿತ್ರನಾಶ್ರಮಕ್ಕೆ।
ಗನ್ನದಿಂ ಮಱಹಿಕ್ಕಿ ಕೊಂಡೊಯ್ದು ಬಳಿಕ ಮುನಿ
ಬನ್ನಬಡಿಸಿಯೆ ಕಾಡಿದಪನಱಿದಿರೆಂದು ಪೇ
ಳ್ದಿನ್ನೊಂದು ಚೋದ್ಯಮಂ ನೋಡುಬಾಯೆಂದು ತಂ
ದನು ವಿರೂಪಾಕ್ಷನೆಡೆಗೆ, ॥ ೩೭ ॥

ನೋಡಿ ಪರಮಾನಂದ ಮೂಡಿ ಸಂತಸದೊಳೋ
ಲಾಡಿ ಪುಳಕ ಸ್ವೇದ ತೊದಳು ಕಂಪಸ ಮಱವೆ
ಗೂಡಿ ಮನದೊಳು ತನುವಿನೆಚ್ಚಱಿಂದುಬ್ಬಿ ಹಾ
ರೈಸಿ ಹರುಷದ ಸುಖದಲಿ।
ಹಾಡಿ ನಾನಾ ಸ್ನಪನ ಯಕ್ಷಕರ್ದಮ ಪುಷ್ಪ
ಗಾಡಿವಡೆಯಲು ಮಹಾರುದ್ರಾಭಿಷೇಚನದ,
ಜೋಡಿಯಿಂ ಪಂಪಾಂಬಿಕಾಪತಿಯ ಪೂಜಿಮಾ
ಡಿದ ಹರಿಶ್ಚಂದ್ರನೃಪನು। ॥ ೩೮ ॥

ಇಂದಾನು ಕೃತಕೃತ್ಯನಾದೆನೆನ್ನಯ ಜನ್ಮ,
ವಿಂದು ಸಾಫಲ್ಯವಾಯ್ತಖಿಳಜಗದಳಲುರಿಯ,
ನಂದಿಸುವ ಪಾರದಿ[ಯೆ]ಸಂಸಾರವಾರಿಧಿಯ
ನುತ್ತರಿಪ ಗುರುಪದವನು।
ತಂದು ತೋಱುತ್ತಲಾ ಶ್ರೀಗುರು ವಿರೂಪಾಕ್ಷ
ತಂದೆಯುಂ ಕಾಣಿಸಿತು ನಾಡ ಗಾದೆಯ ಬಿಟ್ಟಿ
ಯಿಂದ ಕಟಕನ ಕಂಡೆನೆಂಬುದೆನಗಾಯ್ತೆನು,
ತ್ತೈಱಗಿದಂ ಭೂನಾಥನು। ॥ ೩೯ ॥

೪. ವಿಶ್ವಾಮಿತ್ರಾಶ್ರಮ ಪ್ರವೇಶ

ಗುರುವಸಿಷ್ಠಂಗೆಱಗಿ, ನೇಮವಂ ಪಡೆದಖಿಳ,
ಗುರುವಿರೂಪಾಕ್ಷಲಿಂಗವನ್ನು ಬೀಳ್ಕೊಂಡು ಭಾ
ಸುರ ವರೂಥವನೇಱಿ ಭೂಪಾಲಮಕರಧ್ವ
ಜಂ ನಡೆಯೆ ತಡೆವೇಂಟೆಗೆ |
ಪರಿಕರದ ಪರಿವಾರವನುವಾಗಿ ವಿಪಿನದೊಳು
ಹರೆದು ನಡೆಯಲ್ಕತ್ತಲಿತ್ತ ಕೌಶಿಕಮುನೀ
ಶ್ವರನೊಂದು ಮಾಯಾವರಾಹನಂ ಮಾಡಿ ಕಳು
ಹಿದನು ಭೂರಮಣನೆಡೆಗೆ, ॥ ೧ ॥

ಎಲೆಲೆಲೆಲೆಲೇ, ಹಂದಿಯನುವಾದುದುಭುಬುಬೆಂ
ದುಲಿದು ನಾಯ್ಗಳುವೆರಸಿ ಮುಕ್ಕುಱಿಕ್ಕಲು, ಮೆಲ್ಲ
ನೊಲೆದುಬ್ಬಿ ಪುಟನೆಗೆದು ಗಜಱಿ ಗರ್ಜಿಸಿ, ಪುಳಿಂ
ದರ ಮೇಲೆ ಬವರಿದಿರುಗಿ |
ಬಲವಂದು, ಹೊಯ್ದು, ಬೇಗಕ್ಕೆ ಬಿಱುಮುಂದಿ, ನಾ
ಳಲ ಹೊಱೆಗಳಂ ಕೊಚ್ಚಿದಂತೆಲ್ಲರೊಡಲ, ಕಳ
[1]ವಳಿ[1]ಗೆಯ್ದು ಬೀದಿವರಿದೊಕ್ಕಲಿಕ್ಕಿತ್ತು, ರ
ಕ್ಕಸಮಿಗಂ ಕಾಡೊಳಂದು, ॥ ೨ ॥

ಬಿಟ್ಟ ತಲೆ, ಗಿಡು ಹಿಡಿದು ಕಳೆದುಡುಗೆ, ಕಾಡ ಮುಳು
ಸಟ್ಟು, ಕುಂಟುವ, ಪದಂ, ಬೆನ್ನ ಬಿಗುಹಳಿದೆಳಲ್ವ,
ಮೊಟ್ಟೆಗೂಳೆಡಹಿ ಕೆಡೆದೊಡೆದ ಮೊಳಕಾಲ್, ತೇಕು
ವಳ್ಳೈಗಳುವೆರಸೋಱಲುತ |

---

[1] ವಲ (ಖ.), ಹರ (ಘ.)

ಕೆಟ್ಟೋಡುತಿರಲೊರ್ವನವನ ಕಂಡಿದಿರಡ್ಡ,
ಗಟ್ಟಿ ಕೇಳಲು ಹುಹುಹು ಹುಲಿಯಲ್ಲ ಹಂದಿಯಱಿ
ಯಟ್ಟಿ ಬರುತಿರ್ದುದೆನೆಯೆಲ್ಲಿ ತೋಱೆನಲು ನೀ
ವೇ ಅಱಿಸಿಕೊಂಬುದೆಂದ, ‖ ೩ ‖

ಹೆದಱಿದೆಯ ಬೇಡನಂ ಬೋಳೈಸಿ ನೃಪರೂಪ
ಮದನನಲ್ಲಿಗೆ ತಂದು ನುಡಿಸಿ ಕೇಳಲು ಪೇಳ್ವ,
ಕುದಿಹವೇಕದಿದೆನ್ನದೆಲ್ಲಾ ಕಿರಾತಸಂ,
ಕುಲದ ಗ್ರುಱಿ ನೆಱೆದುದಿಂದು |
ಹದುಳದಿಂದರಸ ಮನ್ನೆಯಗಂಡನಾಗು ಬೇ
ಗದೊಳೆಂದೊಡೇಂ ಕಾರಣಂ ಪೇಳೆನಲ್ಕೆ ಪೇ
ಳ್ವುದಕೆ ತೆಱಹಿಲ್ಲ ಹೋಗೆಂದಡವನೀಶನವ
ನಂ ಜಱೆದು ಬೆಸಗೊಂಡನು , ‖ ೪ ‖

ಕಡುಗಲಿ ಹಿರಣ್ಯಾಕ್ಷನೆಂಬ ರಕ್ಕಸನ ಬೆ
ನ್ನಡಗನುಗಿದಂದಿನ ವರಾಹನೋ ಪುರಹರಂ
ಪೊಡೆಯೆ ತೋಳ್ ಪಱಿದ ಭೀಕರಗಜಾಸುರನೊ ಜಗ
ದಳಲನಾಱಿಸುವೆನೆಂದು |
ಕಡುಕೈದು ದುರ್ಗಿ ಸಿಘಾರ್ತನಂಗೆಯ್ಯೆ ಕೋ
ಡುಡಿದ ಮಹಿಷಾಸುರನೊ ಎಂದೆಂಬ ಸಂದೇಹ
ಕೆಡೆಯಾದ ಸೊಕ್ಕಿದೆಕ್ಕಲನನೊಂದಂ ಕಂಡೆ
ನರಸ ಚಿತ್ತೈಸೆಂದನು , ‖ ೫ ‖

ಕೊಬ್ಬಿ ಬೆಳೆದ ವರಾಹನಿರಲಾಗದೇ ಕಾಡೊ
ಳಬ್ಬರಿಸಿ ನುಡಿವೆಯದಱಿಂ ಬೇಡವಡೆಗೆ ಬ
ಪ್ಪುಬ್ಬಸವದೇಸೊ ನೀನೋಡಿಹೋಹುದಕೆ ಕಾ
ರಣವಾವುದೆಲವೊ ಎನಲು |

ಉಬ್ಬಿ ಮುಂಗುಡಿವರಿದು ಕಡುಕೈದ ಶಬರರ್ಗೊಳ
ಗೊಬ್ಬರುಳಿಯದ ತೆಱದಿ ಕೊಂದಿಕ್ಕಿ ನಾಯ್ಗಳಂ,
ಗುಬ್ಬವಿಕ್ಕಿಸಿದ ರಕ್ಕಸವಂದಿ ತಾನೆ ಹೇ
ಳಿತ್ತು ನಾನೇಕೆಂದನು ‖ ೬ ‖

ಪಡೆಯೆಯ್ದೆ ಮಡಿಯಿತ್ತೆ ಮಡಿಯಿತ್ತು ನಾಯ್ ಕೂಡೆ,
ಕೆಡೆದವೇ, ಕೆಡೆದವಾ ಹಂದಿಯಿರ್ದ್ದ ಪುದೆಯದೆ,
ಎಡೆಯೆನಿತು ಸಾರೆ ತೋಱಿಸಿದ್ದಪಾ ತೋಱಿದಪೆ
ನೇಳ್ವಿವೇ ನಡೆಯಿಮೆನಲು,
ಕಡುಮುಳಿದು ರಥವನುರವಣಿಸಿ ನೂಂಕುವ ಭೂಮಿ,
ಯೊಡೆಯಂಗೆ ಭಾಷೆಯಂ ಕೊಟ್ಟು ನಾನಾ ಬೇಡ
ವಡೆಯೊಡೆಯರೆಯ್ದೆ ಕಂಡು ಱೊಪ್ಪವಂ ಮಲಗಿ
ದಾಡೆಗಡಿವೆಕ್ಕಲನನು ‖ ೭ ‖

ಮಸೆದ ದಾಡೆಯ ಕುಡಿಗಳಿಂದ ಕಿಡಿ ಸುರಿಯೆ ಘೂ
ರ್ಮಿಸುವ ಮೂಗಿಂದ ಕರ್ಬೊಗೆ ನೆಗೆಯೆ ಮುನಿದು ದಿ
ಟ್ಟಿಸುವ ಕೆಂಗಣ್ಣ ಕಡೆಯಿಂದ ದಳ್ಳುರಿ ಸೂಸೆ,
ಬಲಿದ ಕೊರಳೊಲೆದ ಮುಸುಡು
ಕುಸಿದ ತಲೆ ನೆಗೆದ ಬೆನ್ ನಟ್ಟ ರೋಮಾಳಿ ಮಿ
ಳ್ಳಿಸುವ ಬಾಲಂ ರೌದ್ರ ಕೋಪಮಂ ಬೀಱಿ ಗ
ರ್ಜಿಸಿ ಬೀದಿವರಿದು ತೊತ್ತಳದುಳಿದು ಕೊಂದು ಕೂ
ಗಿಡಿಸಿತ್ತು ಲುಬ್ಧಕರನು, ‖ ೮ ‖

ಇದ್ದ ಬೇಡರನೆಯ್ದೆ ಕೆಡಹಿದಡೆ ರಥದ ಮೇ
ಲಿದ್ದು ಕೋಪಾಟೋಪದಿಂದ ಕರತಳವ ಮಾ
ಱಿದ್ದಿ ಕೋದಂಡಮಂ ಸೆಳೆದು ಶರಮೂಡಿಗೆಯ,
ಮಡಲಿಱಿದು ಕೈಹೊಡೆಯನು

ತಿದ್ದಿ ನಾರಿಯು ನೀವಿ ಮಿಡಿದು ಬಾಗಿದ ಕೊಪ್ಪಿ,
ಸಿದ್ಧೆ ಸೆಯನಾರಯ್ದು ನೆಱೆ ವ್ಯತ್ಯದೇವತೆಗೆ,
ಬಿದ್ದ ನಿಕ್ಕುವೆನೆಂದು ಭೂವಲ್ಲಭಂ ನುಡಿಯೆ,
ದಿಗುಪಾಲರ್ಕಳವಳಿದರು, ‖ ೯ ‖

ಗರಳಗೊರಳನ ಸರಳಸರಳಂಗೆ ಮುನಿವಂತೆ,
ಯಿರುಳ ತಿರುಳಿನ ಹೊರಳಿಗಾ ತರಣಿ ಕೆರಳ್ವಂತೆ,
ಸರಳ ತೆರಳಿಕೆಗೆ ಮಗಳಿತು ಕರುಳ ಸುರುಳಿಯೊಳು,
ಹೊರಳುತ್ತ ಬೀಳುತ್ತಲು,
ಹುರುಳಳಿದುದುರಪೊಡೆದು ಸರಳುರ್ಚೆ ಸರಳುತ್ತ,
ತೊರಳೆಯುಡಸಲ್ಲು ಮೂಗನರಳಿಸೆಚ್ಚಂಬ ಹೊ
ತ್ತುರುಳ್ವ ಕಂಬನಿಯಿಂದ ತರಳಚಿತ್ತದ ಹಂದಿ,
ಮರಳಿ ಕಾನನಕೆಯ್ದಿತು, ‖ ೧೦ ‖

ಬಳಿವಿಡಿದು ಬಳಿಚಿದಂಬಿಂ ಮುಂದೆ ಹರಿದು ವನ
ದೊಳಗಡಗಿ ಮಾಯವಾದೆಕ್ಕಲನನಲ್ಲಲ್ಲಿ,
ಸುಳಿದಱಸಿ ಕಾಣದೆ ಮನಂನೊಂದು ಧೃತಿಯಡಗಿ,
ಡಗೆದೋಱಿ ಕಟ್ಟಾಸಱು
ವೊಳೆತು ಬಾಯಾಱಿ ತನು ಬೆಮರ್ದಿ ಮುಖ ಬಾಡಿ ರವಿ
ಕುಲಶಿರೋಮಣಿ ಹರಿಶ್ಚಂದ್ರರಾಯಂ ಕಂಡ
ನಳವಿಯೊಳು ನಾನಾವಿಶೇಷವಿಭವಂಬಡೆದ
ಮಂಗಳತಪೋವನವನು, ‖ ೧೧ ‖

ಕಂದಮೂಲಂಗೀಳ್ವ ಪೂಗೊಯ್ವ ಕೃಷ್ಣಾಜಿ
ನಂದಳೆವ ರುದ್ರಾಕ್ಷಿ [1]ಗೋವ[1] ವಲ್ಕಲವಸನ
ವೃಂದವಂ ತೊಳೆವ ಮಿಸುಪ್ಪಾ ದಾರವಮಂ ಬಿಗಿವ
ಮೌಂಜಿಮೇಖಲೆಗಟ್ಟುವ

[1] ಗೊಯ್ವ (ಕ. ಖ. ಗ. ಘ.), ಕೋವ (ಪ.)

ಒಂದಿ ಭಸಿತವನಿಡುವ ಯಜ್ಞೋಪವೀತಮಂ
ಬಂಧಿಸುವ ಜಡೆಯ ಸುಂಕಿಸುವ ಸಮಿತಂ ತಪ್ಪ
ಹೆಂದದ ಮುನೀಶ್ವರಕುಮಾರರಂ ಕಂಡು ಕೈ
ಮುಗಿದಂ ಹರಿಶ್ಚಂದ್ರನು ||೧೨||

ವಿದಿತವೆನೆ ವೇದಘೋಷದ ಪುರಾಣಪ್ರಸಂ
ಗದ ತರ್ಕತಂತ್ರಸಂವಾದದಾಗಮವಿಚಾ
ರದ ಸದೌಪನಿಷದರ್ಥಶ್ರವಣದಾಸ್ತವ
ಸ್ತೋತ್ರಪಠನಪ್ರಕರದ |
ಮೃದುಕಾವ್ಯಲಕ್ಷಣಾಲಾಪದ ಶಿವಾರ್ಚನಾಂ
ಗದ ಘಂಟಿಕಾರವದ ನಿತ್ಯಹೋಮಸ್ವಧಾಂ
ತ್ಯದ ಶ್ರವಣಸಂಭ್ರಮಕೆ ಬೆಱಗಾಗುತಿರ್ದನು ಹ
ರಿಶ್ಚಂದ್ರ ಭೂನಾಥನು ||೧೩||

ಫಳಭಾರದಿಂದೊಲೆದು ತೂಗಿ ಬಾಗುವ ಮರಂ
ಗಳ ಕೆಳಗೆ ತುಱುಗಿ ನಳನಳಿಸಿ ಬೆಳೆದೆಳಲತೆಯ,
ತಳಿರ ತಿಳಿಗೊಳನ ಪುಳಿನಸ್ಥಳದ ಕಮಲಕೈ,
ರವದ ತನಿಗಂಪುವೆರಸಿ |
ಸುಳಿವ ತಣ್ಣೆಲರ ತಂಪಂ ಕಂಡು ಮಂತ್ರಿ ಭೂ
ತಳನಾಥ ಬಿಡುವಡಿದು ಠಾವೆಂದು ಬಿನ್ನೈಸೆ
ಜಲಜಸಖಕುಲನಿಳಿದನಂದು ರಥಮಂ ಪಟ್ಟ
ದಂಗನೆ ಕುಮಾರ ಸಹಿತ ||೧೪||

ಬಳವಳಿದ ರಥತುರಗವೃಂದಮಂ ಬಿಟ್ಟು ಶೀ
ತಳವಾರಿಯಂ ತೋಱಿ ಮೆಯ್ದೊಳೆದು ಲಲಿತಶಾ
ಡ್ವಳವನೊಲವಿಂ ಕೊಯ್ದು ಮುಂದಿಟ್ಟು ಕಟ್ಟಿ ಪ್ರ
ಧಾನ ನಟ್ಟಡವಿಯೊಳಗೆ |

ಬಳಿವಿಡಿದು ಬಂದ ಕಟಕವನೆಯ್ದೆ ಜಿಡಿಸಿ ಭೂ
ತಳಪತಿಗೆ ಕೈಗೊಟ್ಟು ನಿರ್ಮಳಸರೋವರದೊ,
ಳೆಳುಪಿ ಶಿಶಿರೋಪಚಾರಂಗಳಂ ಮಾಡಿದಂ,
ಡಗೆ ತೊಲಗಿ ವಿಶ್ರಮಿಸಲು, ॥ ೧೫ ॥

ಘನಪುಣ್ಯಮಯವೆನಿಪ್ಪೀ ತಪೋವನದೊಳಿಹ
ಮುನಿಯಾವನೋ ಮಹಾದೇವನೇ ಬಲ್ಲನಾ
ತನ ಶಾಂತಿಯಿಂದ ಶಶಿ ಛಾರಿತ್ರದಿಂ ಗಂಗೆ
ವರತಪಸ್ತೇಜದಿಂದ।
ದಿನಕರಂ ಸುಳಿವಿಂದ ತಂಗಾಳಿ ನುಡಿಯ್ಯ ಮೋ
ಹನದಿಂದ ಸುಧೆಯುದಾರತ್ವದಿಂ ಸುರಕುಜಂ,
ಜನಿಸದಿರವೆಂದು ಕೊಂಡಾಡುತಿರ್ದಂ ಹರಿ
ಶ್ಚಂದ್ರನಾ ಮಂತ್ರಿಯೊಡನೆ। ॥ ೧೬ ॥

ಹೊಗಳುತ್ತ ಹಾರಯಿಸುತುಬ್ಬುತ್ತ ಕೊಬ್ಬುತ್ತ,
ನಗುತ ನಲಿಯುತ್ತ ಹಾಡುತ್ತಾಡುತಾನಂದ,
ವೊಗೆಯುತಿರಲೊಬ್ಬ ಮುನಿಯಂ ಕಂಡಿದಾವನಾ,
ಶ್ರಮವೆಂದು ಬೆಸಗೊಂಡಡೆ।
ವಿಗಡ ವಿಶ್ವಾಮಿತ್ರಮುನಿಯ ಬನವೆನೆ ಸುಖಂ
ಸುಗಿದು ಪೊಯ್ವಡದಂತೆ ಹಾವಗಿದು ಬಿಟ್ಟಂತೆ
ಬಗೆ ಬೆದಱಿ ಗುರುವಾಜ್ಞೆಯುಳಿದುದಿನ್ನೇವೆನಂ,
ದನು ಹರಿಶ್ಚಂದ್ರನೃಪನು, ॥ ೧೭ ॥

ಹೊಳೆವ ಮೇರುವ ಸುತ್ತಿ ಬೆಂಡಾದ ರವಿ ಚಂದ್ರ,
ಕಳೆಯ ತೊಡೆಯೆಡೆಯೊಳೊಯ್ಯನೆ ಮಲಗುವಂತೆ ರವಿ
ಕುಲಲಲಾಮನು ವರಾಹನ ಹಿಂದೆ ಹತ್ತಿದಾ
ಸಱಿ ಮೇಲೆ ಗುರುವಾಜ್ಞೆಯ।

ಕಳೆದ ಕೌಶಿಕನಾಶ್ರಮಂಬೊಕ್ಕ ಚಿಂತೆಯಿಂ,
ಮುಳುಗುತ್ತ ನಿಜಸತಿಯ ತೋರದೊಡೆಗಳ ಮೇಲೆ,
ಲಲಿತಮಣಿಮಕುಟಮಂಡಿತಮಸ್ತಕವನಿಕ್ಕಿ,
ಮಗ್ಗುಲಿಕ್ಕಿದನಾಗಳು, ॥ ೧೮ ॥

ಸತಿ ಮಡಿಸಿ ನೀಡುವೆಲೆವಿಡಿದ ಕೈ ಬಸವಳಿವು
ತತಿಚಿಂತೆಯೊಳು ಮಱೆದ ತನು ಜೊಮ್ಮುವಿಡಿದ ಪು
ರ್ಬತಿಭಾರಮಾಗಿ ಕಣ್ಮುಚ್ಚಿ ತೋಳ್ತೊಡೆ ಮಿಡುಕೆ
ಸುಯ್ ಸೂಸೆ ನಿದ್ರೆ ಕವಿದು।
ವಿತತಸುಖದಿಂದಿರುತಿರಲ್ಕೆ ನಾನಾದುಃಖ
ಯುತವಪ್ಪುದೊಂದು ಕನಸಂ ಕಂಡು ನೊಂದು ಭೂ
ಪತಿ ಬೆದಱಿದಂತೆ ಭೋಂಕನಲೆದ್ದು ಬೆಬ್ಬಳಿಸಿ,
ನಾಲ್ದೆಸೆಯ ನಾರಯ್ದನು, ॥ ೧೯ ॥

ಧುರದೊಳರಿಭೂಭುಜರನಂಜಿಸುವ ನಡುಗಿಸುವ
ಕೊರಗಿಸುವ ಕೋಡಿಸುವ ಬಳುಕಿಸುವ ಜಳಕಿಸುವ,
ಬಿರುದಂಕಮಲ್ಲ ನೀ ನಡುಗಲೇತಕ್ಕೆ, ಹೇ
ಳೆಂದು ಮೆಲ್ಲನೆ ನುಡಿಸಲು।
ತರುಣಿ ಕೇಳೊಂದು ಕನಸಂ ಕಂಡೆನಾ ಕನಸು,
ನಿರುತವೆಂದೇ ಕಣ್ಣ ತೆಱೆದೆ ನೀನಿಂತಿದಱ,
ಪರಿಯಂ ವಿಚಾರಿಸೆಂದವನೀಶ ನುಡಿಯಲಾ
ನುಡಿಗೆ ಸತಿ ಹೂಂಕೊಂಡಳು, ॥ ೨೦ ॥

ಘುಡುಘುಡಿಸುತೊಬ್ಬ ಮುನಿ ಬಂದು ನಾನೋಲಗಂ
ಗೊಡುವ ಮಣಿಮಂಟಪದ ಕಂಭವೆಲ್ಲವನು ತಡೆ
ಗಡಿದು ಹೊಂಗಳಸಂಗಳಂ ಮಾಣದೊಡೆಬಡಿದು,
ನೆರೆದ ಸಭೆಯೊಳಗೆನ್ನನು।

ಕೆಡಹಿ ಸಿಂಹಾಸನವನೊಯ್ವಾಗಳೆನ್ನೆದೆಯ
ನಡರ್ದೊಂದು ಕಾಗೆ ಕರೆದುದು ಬಳಿಕ್ಕಾಂ ಗಿರಿಯ
ನಡರ್ದು ಶಿಖರದೊಳೆಸೆವ ಮಣಿಗ್ರಹಂಬೊಕ್ಕೆನಿದ
ಱಂತಸ್ಥವೇನೆಂದನು || ೨೧ ||

ಬಗೆವಡೀ ಕನಸು ಗುರುವಾಜ್ಞೆಯಂ ಮೀಱುತ
ಕ್ಕೊಗೆವ ಕೇಡಿಂಗೆ ಸೂಚನೆ ಮುನಿಯಬೇಡ ಮಂ
ತ್ರಿಗೆ ಮಗಂಗೆನಗೆ ರಾಜ್ಯಕ್ಕೆ ಚತುರಂಗಸೇ
ನೆಗೆ ಸಕಲಭಂಡಾರಕೆ |
ನಗರಕ್ಕೆ ಸರ್ವಪರಿವಾರಕ್ಕೆ ತೇಜದೇ
ಳ್ಗೆಗೆ ನಿನ್ನ ಹರಣಕ್ಕೆ ಕೇಡು ಬಂದಡೆ ಬರಲಿ
ಮಿಗೆ ಸತ್ಯವಂ ಬಿಟ್ಟು ಕೆಡದಿರವನೀಶ ಕೈ
ಮುಗಿದು ಬೇಡಿದೆನೆಂದಳು || ೨೨ ||

ಬಿಡೆ ತಪೋವನವ ಕಾಣುತ್ತ ಕಡೆಗಣಿಸಿ ಪೋ
ದಡೆ ಕೇಳ್ದು ಮುನಿ ಮುನಿವನಲ್ಲದಿಂದಿನ ಹಗಲ
ಕಡೆತನಕ ನೋಡಿದೆವು ಕೌಶಿಕಮುನೀಶ್ವರಂ
ಗರಸ ವಂದಿಸಿದನೆಂದು |
ನುಡಿದು ನಡೆಗೊಂಬವೇಳೇಳೆಂದು ಮಂತ್ರಿ ತ
ನ್ನೊಡೆಯಂಗೆ ಬುದ್ಧಿವೇಳ್ದೆಬ್ಬಿಸುತ್ತಿರಲತ್ತ
ಪೊಡವೀಶನಂ ತಂದ ಹಂದಿ ಹರಯಿತ್ತು ಕೌ
ಶಿಕನನುಷ್ಠಾನದೆಡೆಗೆ || ೨೩ ||

ನಿಡುಸರದೊಳಿಳಿವುಸುರು ಹೊಯ್ವಳ್ಳೆ ಡೆಂಡಣಿಸು
ವಡಿ ಹನಿವ ಬೆಮರು ಮಱುವೊನೆಗಂಡ ಬಾಣಂಗ
ಳೆಡೆಯಿಂದ ಸುರಿವ ಬಿಸಿನೆತ್ತರೇಱುಗಳ ವೇ
ದನೆಗಾಱದರೆಮುಚ್ಚುವ |

ಕಡೆಗಣ್ಗಳರಳ್ವ ನಾಸಾಪುಟಂ ಬಲಿದ ಸೊರೆ
ಯಿಡುವ ಕಟವಾಯ್ ಕುಸಿದ ತಲೆ ಸುಗಿದ ದರ್ಪ ಹುರಿ
ಯೊಡೆದ ರೋಮಂ ತೂಗಿ ತೊನೆದು ಮೆಯ್ಮುಱುವ ಹಂ
ದಿಯನು ಕೌಶಿಕ ಕಂಡನು, ‖ ೨೪ ‖

ಹಂದಿಯಂ ಕಾಣು[1]ಹ ತಡಂ[1] ಕೋಪಗಿಚ್ಚು ಭುಗಿ
ಲೆಂದು ಜಪ ಜಾಱಿ ತಪ ತಗ್ಗಿ ಮತಿ ಗತವಾಗಿ
ಸಂದ ಯೋಗಂ ಹಿಂಗಿ ದಯೆ ದಾಂಟಿ ನೀತಿ ಬೀ
ತಾನಂದವಱಿತು ಹೋಗಿ |
ಹಿಂದ ನೆನೆದುರಿದೆದ್ದು ಸಿಕ್ಕಿದನಲಾ ಭೂಪ ,
ನಿಂದು ನಾನಾಯ್ತು ತಾನಾಯ್ತು ಕೆಡಿಸದೆ ಮಾಣೆ
ನೆಂದು ಗರ್ಜಿಸುವ ಕೌಶಿಕನ ಘೂಂಕಾರದಿಂ,
ದೊಗೆದರಿಬ್ಬರು ಸತಿಯರು, ‖ ೨೫ ‖

ಮುನಿಗೆ ಹೊಲೆಯಾವ್ರಧತಿಕೋಪ ಬದ್ಧದ್ವೇಷ
ವನಿಮಿತ್ತವೈರವದಱಿಂದ ಹುಟ್ಟಿದರಾಗಿ,
ವನಿತೆಯರು ಕಡೆಗೆ ಹೊಲತಿಯರಾಗಿ ಕೆಲಸಾರಿ
ನಿಂದು ಬೆಸನಾವುದೆನಲು |
ಜನಪತಿ ಹರಿಶ್ಚಂದ್ರ ಬಂದು ನಮ್ಮಯ ತಪೋ
ವನದೊಳೈದನೆ ನೀವು ಸರ್ವಬುದ್ಧಿಗಳೊಳಾ,
ತನ ಮರುಳುಮಾಡುತಿರಿ ಹೋಗಿಯೆಂದಟ್ಟಿದಂ,
ದುರ್ಮಂತ್ರಬಲವಂತನು, ‖ ೨೬ ‖

ಸಂದ ಕಾರಿರುಳ ಕನ್ನೆಯರು ಹಗಲಂ ನೋಡ
ಲೆಂದು ಬಂದರೊ ಸುರಾಸುರರಬುಧಿಯಂ ಮಥಿಸು
ವಂದು ಹೊಸವಿಷದ ಹೊಗೆ ಹೊಯ್ದು ಕಗ್ಗನೆ ಕಂದಿ,
ಜಲದೇವಿಯರು ಮನದಲಿ |

[1] ತಹ (ಘ.ಪ.)

ನೊಂದು ಮಾ[ನಿ]ಸರಾದರೋ ಕಮಲಜಂ ನೀಲ
ದಿಂದ ಮಾಡಿದ ಸಾಲಭಂಜಿಕೆಗಳೊದವಿ ಜೀ
ವಂದಳೆದವೋ ಎನಿಪ್ಪಂದದಿಂ ಬಂದರಂ
ಗನೆಯರವನೀಶನೆಡೆಗೆ || ೨೭ ||

ಮಾಯದಬಲೆಯರು ಕಾಣುತ್ತ ಮಝು ಭಾಪದಟ
ರಾಯ ಮಝುರೇ ರಾಯ ರಾಯದಳವುಳಕಾಱ
ರಾಯಕಂಟಕ ರಾಯಜಗಜಟ್ಟಿ ರಾಯದ
ಲ್ಲಣ ರಾಯಕೋಳಾಹಳ |
ರಾಯಭುಜಬಲಭೀಮ ರಾಯಮರ್ದನ ರಾಯ
ಜೀಯ ಸ್ಥಿರಂಜೀವಯೆಂದು ಕೀರ್ತಿಸಿ ಗಾಣ
ನಾಯಕಿಯರೊಲಿದು ದಂಡಿಗೆವಿಡಿದು ಪೊಡಮಟ್ಟು
ಹಾಡಲುದ್ಯೋಗಿಸಿದರು || ೨೮ ||

ಎಕ್ಕಲನ ಬಳಿವಿಡಿದು ಸುತ್ತಿದಾಸೆಱನು ಮುನಿ
ರಕ್ಕಸನ ಬನಕೆ ಬಂದಂಜಿಕೆಯನೆರಡನೆಯ
ಮುಕ್ಕಣ್ಣನೆನಿಪ ಗುರುವಾಜ್ಞೆಗೆಟ್ಟೆಕ್ಕಲನ
ಲ್ಲದೆ ಕನಸ ಕಂಡ ಭಯವ |
ಮಿಕ್ಕು ಮಱೆವಂತಡಸಿ ಕವಿವ ಗತಿಗಳ ಸೊಗ[1][ಸಿ][1]
ನಕ್ಕಿಸದೆ ಸಮಯೋಚಿತದ ಪಸಾಯಕ್ಕೆ ಮನ
ವುಕ್ಕಿ ಸರ್ವಾಭರಣಮಂ ಗಾಣರಾಣಿಯರಿ
ಗಿತ್ತನು ಹರಿಶ್ಚಂದ್ರನು || ೨೯ ||

ಬಡತನದ ಹೊತ್ತಾನೆ ದೊರಕಿ ಫಲವೇನು ನೀ
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು ರುಜೆ
ಯಡಸಿ ಕೆಡೆದಿಹ ಹೊತ್ತು ರಂಭೆ ದೊರೆಕೊಂಡಲ್ಲಿ,
ಫಲವೇನು ಸಾವ ಹೊತ್ತು |

[1] ಸ (ಸ.)

ಪೊಡವಿಯೊಡೆತನ ದೊರಕಿ ಫಲವೇನು ಕಡುವಿಸಿಲು,
ಹೊಡೆದು ಬೆಂಡಾಗಿ ಬೀಳ್ವವುಗೆ ನೀನೊಲಿದು ಮಣಿ,
ದೊಡಿಗೆಗಳನಿತ್ತು ಫಲವೇನು ಭೂಪಾಲ ಹೇ,
ಳೆನುತ ಮುತ್ತಿಂತೆಂದರು, || ೩೦ ||

ಕಡಲೊಳಾಳ್ವಂಗೆ ತೆಪ್ಪವನು ದಾರಿದ್ರಂಗೆ,
ಕಡವರವನತಿರೋಗಿಗಮೃತಮಂ ಕೊಟ್ಟಡವ
ರಡಿಗಡಿಗದಾವ ಹರುಷವನೆಯ್ದುತಿಪ್ಪರವ
ರಂ ಪೋಲ್ವರೀ ಪೊತ್ತಿನ|
ಸುಡುಸುಡನೆ ಸುಡುವ ಬಿಱುಬಿಸಿಲ ಸೆಕೆಯುಸುರ ಬಿಸಿ
ಹೊಡೆದುದುರಿಹತ್ತಿ ಬಾಯ್ ಬತ್ತಿ ಡಗೆ ಸುತ್ತಿ ಸಾ
ವಡಸುತಿದೆ ನಿನ್ನ ಮುತ್ತಿನ ಸತ್ತಿಗೆಯನಿತ್ತು,
ಸಲಹು ಭೂಭುಜಯೆಂದರು, || ೩೧ ||

ರವಿಕುಲದ ಪೀಳಿಗೆಯೊಳೊಗೆದ ರಾಯರ್ಗೆ ಪ
ಟ್ಟವ ಕಟ್ಟುವಂದಿದಿಲ್ಲದಡರಸುತನ ಸಲ್ಲ
ದವನಿಯೊಳ್ಯುದ್ಧರಂಗದೊಳಿದಂ ಕಂಡ ಹಗೆ,
ಗಳು ನಿಲ್ಲರಿದಱ ಕೆಳಗೆ|
ಕವಿವ ನೆಳಲೊಳಗಾವನಿರ್ದ ನಾತಂಗೆ ತಾಂ
ತವಿಲೆಡರು ಬಡತನಂ ರೋಗವಪಕೀರ್ತಿ [ಪರಿ
ಭವ]ಭಯಂ ಹರೆವುದಿದನಱಿದಱಿದು ಸತ್ತಿಗೆಯ,
ಕೊಡಬಹುದೆ ಹೇಳೆಂದನು, || ೩೨ ||

ಅನುಸಯದೊಳೆಲ್ಲವಂ ಕೊಡಬಹುದು ಬಿಡಬಹುದು,
ಜನನಿಯುಂ ಜನಕನಂ ನಲ್ಲಳಂ ದೈವವಂ,
ಮನವಾರೆ ನಂಬಿ ನಚ್ಚಿರ್ದ ಪರಿವಾರಮಂ,
ಕೊಡುವ ಬಿಡುವತಿಕಲಿಗಳು|

ಜನರೊಳಗೆ ಜನಿಸರೆಂದೆನಲು ನೀನೀಗ ಪೇ
ಳ್ದನಿತಱೊಳು ಬೇಡಿದಡೆ ಕೊಡಬೇಡ ಕೊಡೆಯನೀ
ಯೆನೆ ಲೋಭವೇಕರಸ ಎನಲಿದಲ್ಲದೆ ಬೇಱೆ
ಮಾತೆಪಿತರಿಲ್ಲೆಂದನು ॥ ೩೩ ॥

ಲೋಗರಿಗೆ ಕೊಡಬಾರದಾಗಿ ಸತಿ ವಂಶಗತ
ವಾಗಿ ಬಂದುದಱಿಂದ ತಂದೆ ಪಟ್ಟವ ಕಟ್ಟು
ವಾಗಲರ್ಚಿಸಿಕೊಂಬುದಾಗಿ ದೈವಂ ನೆಳಲ
ತಂಪನೊಸೆದೀವುದಾಗಿ।
ಸಾಗಿಸುವ ತಾಯ್ ಧುರದೊಳರಿಗಳಂ ನಡುಗಿಸುವು
ದಾಗಿ ಚತುರಂಗಬಲವೆನಿಸಿತೀ ಛತ್ರವೆಂ
ಬಾಗಳಿದನಱಿದಱಿದು ಬೇಡುವರನತಿಮರುಳ
ರೆನ್ನರೇ ಮೂಜಗದೊಳು ॥ ೩೪ ॥

ಇಳೆಯೊಳಗೆ ಹೆಸರುಳ್ಳ ದಾನಿಯೆಂಬುದನು ಕೇ
ಳ್ದಿಳಸಿ ಕಟ್ಟಾಸೆವಟ್ಟೆಯ್ತಂದು ಬೇಡಿ ನಿ
ಷ್ಫಳವಾಗದಂತೆ ನಾವತಿಮಱುಗದಂತಳಲ
ದಂತೆ ಬಿಸುಸುಯ್ಯದಂತೆ।
ತಿಳಿದು ನೀನೆಮಗೆ ವಲ್ಲಭನಾಗಿ ಚಿತ್ತದು
ಮ್ಮಳಿಕೆಯುಂ ಕಳೆ ಹರಿಶ್ಚಂದ್ರಭೂನಾಥ ಎಂ
ದಳವಳಿದು ಬಾಯ್ಬಿಟ್ಟು ಕೈಮುಗಿದು ನುಡಿದರೊಲ
ವಿಂದನಾಮಿಕಸತಿಯರು ॥ ೩೫ ॥

ಲಲಿತ ವಸುಮತಿ ಹುಟ್ಟುವಂದು ಹುಟ್ಟಿದ ಸೂರ್ಯ
ಕುಲದ ರಾಯರ್ಗೆ ವಂಶದೊಳು ಕೀರ್ತಿಯೊಳು ಭುಜ
ಬಲದೊಳೊರೆದೊರೆಯೆನಿಸಿ ಕನ್ನಿಕೆಯರಂ ಕೊಡುವ,
ಭೂಪರಿಲ್ಲಿಂದು ತನಕ।

ಹೊಲತಿಯರು ಬಂದಾವು ಸತಿಯರಾದಪ್ಪೆವೆಂ
ಬುಲಿಹವೆಂಬುದು ಬಂದ ಕಾಲಗುಣವೋ ನಿಂದ
ನೆಲದ ಗುಣವೋ ನೋಡು ನೋಡೆಂದು ಕಡುಮುಳಿದು
ಕೋಪಿಸಿದನವನೀಶನು ॥ ೩೬ ॥

ಪಾವನಕ್ಷೀರಮಂ ಕೊಡುವ ಕೆಚ್ಚಲ ಮಾಂಸ
ವಾವ ಲೇಸಿನಿದುಳ್ಳ ಮಧುವನೊಸೆದೀವ ನೊಳ
ವಾವ ಲೇಸಧಿಕಕಸ್ತೂರಿಯಂ ಕೊಡುವ ಮೃಗ
ನಾಭಿ ತಾನಾವ ಲೇಸು।
ದೇವರಿಗೆ ಸಲ್ಲವೇ ಉತ್ತಮಗುಣಂಗಳಿ
ರ್ದಾವ ಕುಂದಂ ಕಳೆಯಲಾಱುವವನೀಶ ಕೇಳ್
ಭಾವಿಸುವಡಿಂದೆಮ್ಮ ರೂಪುಜವ್ವನವಿರಲು
ಕುಲದ ಮಾತೇಕೆಂದರು ॥ ೩೭ ॥

ಅಕ್ಕಕ್ಕು ಬಚ್ಚಲುದಕಂ ತಿಳಿದಡಾರ ಮಿ
ಹಕ್ಕೆ ಯೋಗ್ಯಂ ನಾಯ್ಗೆ ಹಾಲುಳ್ಳಡಾವನೂ
ಟಕ್ಕೆ ಯೋಗ್ಯಂ ಪ್ರೇತವನದೊಳಗೆ ಬೆಳೆದ ಹೂ
ವಾರ ಮುಡಿಹಕ್ಕೆ ಯೋಗ್ಯಂ।
ಮಿಕ್ಕ ಹೊಲತಿಯರು ನೀವೆನೆ ನಿಮ್ಮ ಜವ್ವನದ
ಸೊಕ್ಕು ರೂಪಿನ ಗಾಡಿ ಜಾಣತನದೊಪ್ಪವೇ
ತಕ್ಕೆ ಯೋಗ್ಯಂ ರಮಿಸಿದವರುಂಟೆ ಶಿವಶಿವಾ
ಮಾತು ತಾ ಹೊಲೆಯೆಂದನು. ॥ ೩೮ ॥

ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ
ತಾಡಿ [1]ಹೊಗಳಿದ[1] ಬಾಯ್ಗೆ ಹೊಲೆಯಿಲ್ಲ ರೂಪ ನೆಱೆ
ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ಪುಡಿಗ
ಳಿಂ ಸುಳಿವ ತಂಗಾಳಿಯಿಂ।

[1] ನುಡಿಸಿದ (ಪ.)

ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ,
ನಾಡೆ ಹೊಲೆಯಿಲ್ಲ ಸೋಂಕಿಂಗೆ ಹೊಲೆಯುಂಟಾಯ್ತೆ,
ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮ,
ವೊಂದಧಿಕವೇ ಎಂದರು ॥ ೩೯ ॥

ಕಂಡಱಿವವೈಸಲೇ ನಯನೇಂದ್ರಿಯಂ ಘ್ರಾಣ
ಕೊಂಡಱಿವವೈಸಲೇ ವಾಸನೆಯ ಕರ್ಣಂಗ,
ಳುಂಡಱಿವವೈಸಲೇ ಶಬ್ದಮಂ ದೂರದಿಂ,
ದಲ್ಲದವು ಮುಟ್ಟಲಿಲ್ಲ।
ಭಂಡತನವೀ ಮಾತಿದಕ್ಕೆಯುಪಮಾನವೇ,
ಕೆಂಡವನು ಮುಟ್ಟಿದಡೆ ಬೇವಂತೆ ಕೇಳ್ದಡಂ,
ಕಂಡು ವಾಸಿಸಿದಡಂ ಬೆಂದವೇ ಕಾಳುಗೆಡೆ,
ಯದೆ ಹೋಗಿ ನೀವೆಂದನು, ॥ ೪೦ ॥

ಶಾಪದಿಂದೆಮಗಾದ ದುಷ್ಕುಲಂ ಸತ್ಕುಲಂ ಸತ್ಕುಲಜ,
ಭೂಪ ನಿನ್ನಯ ಸಂಗದಿಂ ಶುದ್ಧವಪ್ಪುದೆಂ,
ಬಾಪೇಕ್ಷೆಯಿಂ ಬಂದೆವೆನಲೊಡನೆ ನಿಮಗೋಸು
ಗೆನ್ನ ಕುಲಮಂ ಕೆಡಿಪೆನೆ।
ಪಾಪಿಗಳ ಪಾಪಮಂ ತೊಳೆವ ಗಂಗೆಗೆ ಪಾಪ
ಲೇಪವುಂಟಾಯ್ತೆ ಹೇಳರಸ ಎನೆ ಕುಲಧರ್ಮ,
ವೀ ಪಂಥವಲ್ಲ ಕೊಡವಾಲ ಕೆಡಿಸುವಡಾವು,
ವೆನಿತಾಗಬೇಕೆಂದನು, ॥ ೪೧ ॥

ಮಾತಿಂಗೆ ಮಾತುಗೊಡಲರಿದು ನಿನ್ನಯ ನುತ
ಖ್ಯಾತಿಗಡಟಿಂಗೆ ರೂಪಿಂಗೆ ಸುರುಚಿರ ಗುಣ
ವ್ರಾತಕ್ಕೆ ಹರೆಯಕ್ಕೆ ಗರುವಿಕೆಗೆ ಮನಸಂದು,
ಮತಿಗೆಟ್ಟು ಮರುಳಾದೆವು।

ಓತು ಬಂದವರನುಪಚರಿಸದಿಪ್ಪುದು ನಿನಗೆ
ನೀತಿಯಲ್ಲೀಗೆಯ್ದಿದಂ ಗಂಡನಾದಲ್ಲ,
ದಾತುರಂ ಪೋಗದಿನ್ನೊಲಿದಂತೆ ಮಾಡು ನಿ
ನ್ನಯ ಬೆನ್ನ ಬಿಡೆವೆಂದರು, ‖ ೪೨ ‖

ಬಳಿವಿಡಿದು ಬಂದು ಮಾಡುವುದೇನು ನಮ್ಮ ಬೆಂ
ಬಳಿಯಲೆನಿಬರು ಹೊಲೆಯರಿಲ್ಲೆಂದಡಹಗೆ ಬಿಡೆ
ವೆಳಸಿ ಮಚ್ಚಿಸಿ ಮರುಳ್ಗೊಳಿಸಿ ಮತ್ತೊಲ್ಲನವ
ನಿಪನೆಂದು ಮೊಱೆಯಿಡುತ್ತ,
ಇಳೆಯೊಳಗೆ ಸಾಱುತ್ತ ದೂಱುತ್ತ ಬಪ್ಪೆವೆನೆ,
ಮುಳಿದು ಘುಡುಘುಡಿಸಿ ಕೋಪಾಟೋಪದಿಂ ಹಲ್ಲ
ಕಳೆ ಬಾಯ ಹಱ[ಯ]ಹೊಯ್ ಹೊಡೆಹೊಡೆಯೆನುತ್ತಿದ್ದ,
ನುರವಣಿಸಿ ಭೂನಾಥನು, ‖ ೪೩ ‖

ತುಡುಕಿ ಚಮ್ಮಟಿಗೆಯಂ ಸೆಳೆದು ಪ್ರಧಾನ ಬಳಿ
ವಿಡಿದೇಳಲೊಬ್ಬರೊಬ್ಬರನು ಬೆನ್ನೊಡೆಯೆ ಮುಡಿ
ಹುಡಿಯೊಳಗೆ ಹೊರಳೆ ಹಲು ಬೀಳೆ ಬಾಯೊಡೆಯೆ ಮೆಯ್
ನೋಯೆ ಕೈಯುಳುಕೆ ಮಿಱುಱೆ,
ನಡೆದಲ್ಲಿ ನಡೆದು ಹೊಕ್ಕಲ್ಲಿ ಹೊಕ್ಕೋಡಿಹೋ
ದೆಡೆಗೆ ಬೆನ್ನಟ್ಟಿ ರುಧಿರಂ ಬಸಿಯೆ ಹೊಯ್ದು ಹೊಗ
ರುಡುಗಲರಸಂ ತಿರುಗಲತ್ತಲವರೊಱಲುತ್ತ
ಹರಿದರಾ ಮುನಿಪನೆಡೆಗೆ, ‖ ೪೪ ‖

ಬಿಡುಮುಡಿಯ ಸುರಿವ ಕಂಬನಿವೊನಲ ಕಳೆದೆಳಲು
ವುಡುಗೆಗಳ ಬೆನ್ನೊಡೆದು ಹನಿವ ರಕುತದ ಹೊಯ್ಲ,
ಕುಡಿಯಳ್ಳೆಗಳ ಹರಿವ ಕಾಲುಗಳ ಮರಳಿ ನೋ
ಡುವ ಹೆದಱುಗಣ್ಣ ತೃಣವ,

ತುಡುಕಿ, ನೆಗಹಿದ, ಕೈಯ, ನಿಷ್ಕಾರಣಂ, ನೃಪತಿ
ಹೊಡೆದನೆಲೆ, ಕೌಶಿಕಮುನೀಂದ್ರ, ಮೊಱೆಯೋ, ಎಂಬ
ನಿಡುಸರದ ಮಡದಿಯರ, ದನಿಯನಾಲಿಸಿ, ಪರ್ಣ
ಶಾಲೆಯಂ, ಹೊಱಮಟ್ಟನು, ॥ ೮೫ ॥

ಆರ ಮನೆಯುವರೆಂದು ಕೇಳ್ದಡೆರಡನೆಯ, ಪುರ
ವೈರಿ ವಿಶ್ವಾಮಿತ್ರಮುನಿಯ ಮನೆಯುವರೆಂದ
ಡಾ, ರಾಯನೆದ್ದು ಕೈಯಾರೆ ಸದೆಬಡಿದನೆ,
ಮ್ಮಂ ನಿರಪರಾಧಿಗಳನು,
ಕಾರುಣ್ಯಚಿತ್ತದಿಂ ಕಳುಹಿ ಕೊಲಿಸಿದೆ ತಂದೆ
ಯೋರಂತೆ ಕೇಳೆಂದು ಮೊಱೆಯಿಟ್ಟಡೆನ್ನಯ ಮ
ನೋರಥಂ ಕೈಸಾರ್ದುದಳಲಬೇಡೆಂದು, ಕೋ
ಪಾಟೋಪದಿಂ, ಹರಿದನು, ॥ ೮೬ ॥

೫. ರಾಜ್ಯಸರ್ವಸ್ವದಾನ

ವಡಬಾಗ್ನಿ ಜಡೆವೊತ್ತುದೋ ಸಿಡಿಲು ಹೊಸ ಭಸಿತ
ವಿಡಕಲಿತುದೋ ಕಾಡ ಕಿಚ್ಚು ಕೃಷ್ಣಾಜಿನವ
ನುಡಕಲಿತುದೋ ಪ್ರಳಯವಹ್ನಿ ತಪವಿರ್ದುದೋ
ಭಾಳಲೋಚನನ ಕೋಪ |
ಕಡುಗಿ ಮುನಿಯಾಯ್ತೊ ಹೇಳೆನೆ ಕಣ್ಣ ಕಡೆ ತೋರ
ಗಿಡಿಗೆದಱೆ ಮೀಸೆಗೂದಲು ಹೊತ್ತಿ ಹೊಗೆಯೆ ಬಿಱು
ನುಡಿಗಳುರಿಯುಗುಳೆ ವಿಶ್ವಾಮಿತ್ರನುರವಣಿಸಿ
ಬಂದನವನೀಶನೆಡೆಗೆ ॥ ೧ ॥

ಬಿಱುಗಾಳಿಯಂ ಬೀಸಲಮ್ಮನನಿಲಂ ಸುರಪ,
ನ[1]ಱೆ[1]ವಳೆಗಳಂ ಕಱೆಯಲಮ್ಮನತಿ ಕಡುಬಿಸಿಲ
ಕಱೆಯಲಮ್ಮಂ ತರಣಿ ದಾವಾಗ್ನಿ ಮೇರೆಯಂ
ಮೀಱಲಮ್ಮಂ ಲೋಕವ |
ಮುಱಿವ ಜವಗಿವನ ದೂತರುಗೀತರೆಂಬರೆ
ದ್ದೆಱಗಲಮ್ಮರು ತಪೋವನದೊಳಿಂದೆಮ್ಮ ನೀಂ
ಕೊಱಚಾಡಲೆಂದು ಬೀಡಂ ಬಿಟ್ಟೆಯಿರ್ದರಿದು
ನಿನ್ನ ಧೀವಶವೆಂದನು ॥ ೨ ॥

ಎಳಸಿ ಪುಣ್ಯಾರ್ಥದಿಂ ವಂದನೆ ನಿಮಿತ್ತ ಗುರು
ನಿಳಯಕ್ಕೆ ಶಿಷ್ಯನೆಯ್ತುಪ್ಪುದಕೆ ಸಾಹಸದ
ಬಲವೇಕೆ ತಂದೆಯೆನೆ ನುಡಿಯೊಳ್ಪು ನಯಂಬಡೆದು
ಕಾರ್ಯದೊಳ್ಪು ಗುರುವಿನಸುಗೆ |

---

[1] ಱ (ಕ ಖ.ಗ.ಘ.)

ಮುಳಿದು ಸರ್ವಸ್ವಾಪಹರಣವಂ ಮಾಳ್ಪ ಕಡು,
ಗಲಿತನವಿದಾವ ಪುಣ್ಯವ ಪಡೆವ ಶಿಷ್ಯತನ,
ದೊಳಗು ಪೇಳೆನಲೆನ್ನ ದೆಸೆಯಿಂದ ಕೆಟ್ಟುದೇ,
ನೆಂದನು ಹರಿಶ್ಚಂದ್ರನು ॥ ೩ ॥

ಅರಸುಗಳಿಗುಪದೇಶವಂ ಮಾಡಿ ವಸ್ತುವಂ
ನೆರಹಬಲ್ಲವನಲ್ಲ ನಿಜವೈರವಂ ಬಿಟ್ಟು
ಹರುಷದಿಂದಿರ್ಪ ಮೃಗಸಂಕುಳಂ ಸರ್ವಋತು
ಗಳೊಳು ಫಲವಿಡಿದೊಱಗುವ |
ತರುಕುಲಂ ಬತ್ತದೊಂದೇ ಪರಿಯಲಿಹ ಸರೋ
ವರವೆಂಬ ಧನವಿದೆಲ್ಲವನಿಱಿದು ಮುಱಿದು ಕುಡಿ
ದರೆಮಾಳ್ಪ ಬಲುಹು ಸರ್ವಸ್ವಾಪಹರಣವ,
ಲ್ಲದೆ ಬಳಿಕ್ಕೇನೆಂದನು ॥ ೪ ॥

ಬಱುಮುನಿಸನಿಟ್ಟುಕೊಂಡಱುಹುವಂತಾಗಿ ನಾ
ನಿಱಿದ ಮೃಗ ಮುಱಿದ ಮರ ಕುಡಿದ ಕೊಳನಾವುದೆಲೆ
ಕಿಱುಜಡೆಯ ನೀತಿವಿದ ತೋಱಿಸೆನೆ ಘುಡುಘುಡಿಸು
ತೆದ್ದು ಹಳಗಾಲದಂದು |
ಅಱತ ಕೊಳನಂ ಕೊಳೆತು ಮುಱಿದ ಮರನಂ ನೃಪನ
ನುಱೆ ತಂದ ಹಲವು ಗಾಯದ ಹಂದಿಯುಂ ತೋಱಿ
ಜಱೆದು ನೀನಿನ್ನಾವ ನೆವವನೊಡ್ಡುವೆ ಪಾಪಿ
ಎನುತ ಮತ್ತಿಂತೆಂದನು ॥ ೫ ॥

ಹಿಂದೆ ಸಂಪದದೊಳ್ಮಱೆ ಗರ್ವದಿಂ ಮೆಱೆದ ಸಂ
ಕ್ರಂದನನ ಸಿರಿಯು ನೀರೊಳಗೆ ನೆರಹಿದ ಮುನಿಪ
ನಂದವಂ ಮಾಡುವೆನು ಹರನ ಹಣೆಗಣ್ಣ ಹ
ಗ್ಗಿಯನು ಹಗೆಗೊಂಬಂದದಿಂ |

ಇಂದೆನ್ನ ಹಗೆಗೊಂಡೆ ಬಿಟ್ಟ ಬೀಡೆಲ್ಲವಂ,
ಕೊಂದು ಕೂಗಿಡಿಸಿ ಸೆಱೆ ಸುಟ್ಟು ಬೊಟ್ಟಿಡುವೆನಾ,
ರೆಂದಿರ್ದೆ ನಿನ್ನ ಗುರು ಹೇಳನೇ ತನ್ನ ಸುತ
ರಳಲ ತಿಣ್ಣವನೆಂದನು ‖ ೬ ‖

ಒಸೆದು ಹುಟ್ಟಿಸುವ ಪಾಲಿಸುವ ಮರ್ದಿಸುವ ಸ
ತ್ವಸಮರ್ಥನೆನಿಪ ನೀನೇ ತಪ್ಪ ಹೊಱಿಸಿ ದ
ಟ್ಟಿಸುವಡಿನ್ನುತ್ತರಿಸಿ ಶುದ್ಧವಹುದರಿದಯ್ಯ,
ನಿಮ್ಮ ಕರುಣದ ತೊಟ್ಟಿಲ
ಹಸುಳೆಯಾಂ ಸರ್ವಾಪರಾಧಿಯಾಂ ತಂದೆ ಕರು
ಣಿಸು ದಯಂಗೆಡದಿರುದ್ರೇಕಿಸದಿರೆಂದು ಪದ
ಬಿಸರುಹದ ಮೇಲೆ ಕೆಡಹಿದನು ನಿಜಮಣಿಮಕುಟ
ಮಂಡಿತಶಿರೋಂಬುಜವನು ‖ ೭ ‖

ನೋಡಿ ವಂದಿಸಿ ಹೋಹ ಶಿಷ್ಯಂಗೆ ನೀಂ ಕೃಪೆಯ
ಮಾಡುವುದು ಹದುಳದಿಂ ಬಲವನೆಲ್ಲವ ಹೊಳ್ಳು
ಮಾಡಬಗೆವರೆ ಹೇಳೆನಲು ಪ್ರಳಯಫಣಿಯಣಲ
ಹೊಳಲೊಳಗೆ ಕೈಯ ನೀಡಿ
ದಾಡೆಯಂ ಮುಱಿಯಬಗೆವಂತೆನ್ನ ಬಸುಱಿಂದ,
ಮೂಡಿರ್ದ ಕನ್ನೆಯರ ಚೆನ್ನೆಯರನಬಲೆಯರ,
ಗಾಡಿಕಾತಿಯರನಱಿದಱಿದಿಂತು ಸಾಯ ಸದೆ
ಬಡಿವರೇ ಹೇಳೆಂದನು, ‖ ೮ ‖

ಬೇಗದಲಿ ನಿಮ್ಮ ಮನೆಯವರೆಂದು ಮೊಱೆಯಿಟ್ಟ
ರಾಗಿ ಕರುಣಿಸಿ ಬಿಟ್ಟೆನಲ್ಲದಿರ್ದಡೆ ಕೆಡಹಿ,
ಮೂಗನರಿದೆಳಹೂಟೆಯಂ ಕಟ್ಟಿ ಹೆಟ್ಟವೆಳ,
ಸುವೆ ಬಟ್ಟಬಯಲೊಳೆನಲು

ಏಗೆಯ್ದ ರವರೊಳನ್ಯಾಯವೇನೆಸಲೆನ್ನ,
ಮೇಗಿರ್ದ, ಸತ್ತಿಗೆಯನೀಯಲ್ಲದೊಡೆ, ಗಂಡ
ನಾಗು ,ನೀನಾಗದೊಡೆ ಮೊಱೆಯಿಡುವೆವೆಂದರು, ಮು
ನೀಶ ಚಿತ್ತೈಸೆಂದನು ||೯||

ಹೊಡೆಯದಕ್ಕೇನವದಿರಂ, ಹೊಡೆದ, ಕೈಗಳಂ
ಕಡಿವೆ ,ನಿನ್ನಂ ನಚ್ಚಿ, ಮಲೆತ ದೇಶವನುರುಹಿ,
ಸುಡುವೆನಾ ದೇಶಕ್ಕೆ, ಹಿತವಾಗಿ ಬಂದ ಮುನಿ
ಯಂ ಮುಱಿವೆನಾ ಮುನಿಯನು |
ಹಿಡಿದು ಕದನಕ್ಕೆಂದು ಬಂದಮರರಂ ಕೆಡಹಿ,
ಹುಡುಕುನೀರದ್ದುವೆನ್ನ ಳವನಱಿಯಾ ಮುನ್ನ
ತೊಡಕಿ ತನಗಾದ ಭಂಗಂಗಳಂ, ಹೇಳೆನೇ ,
ನಿನಗೆ ಕಮಲಜಕಂದನು, ||೧೦||

ತಱಿಸಂದ, ಮುನಿಯ ಕೋಪದ ಕಿಚ್ಚಿನುಬ್ಬರದ,
ಬಿಱುಬ್ಬನಱಿದತಿತೀವ್ರತರವಾಯಿತಿನ್ನು, ಕಿಱಿ
ದಱಿಲಿ, ತಗ್ಗುವುದಲ್ಲ ಗರ್ವಿಸುವುದುಚಿತವ
ಲ್ಲೆಂದು ವಸುಧಾಧೀಶನು,|
ಅಱಿಯದನ್ಯಾಯಮಂ ಮಾಡಿದೆನಿದೊಮ್ಮೆಂಗೆ,
ನೆಱೆದ ಕೋಪಾಗ್ನಿಯಂ ಬಿಡು ತಂದೆಯೆಂದು ಧರೆ
ಗುಱುವ ಸತಿಸುತವೆರಸಿ, ಪೊಡಪಟ್ಟಡಣಕಿಸಿದ,
ನಾಸುರದ, ಕೋರಡಿಗನು ||೧೧||

ಕೋಡದಂಜದೆ ಲೆಕ್ಕಿಸದೆ ಬಂದು ಬನದೊಳಗೆ,
ಜೀಡ ಬಿಟ್ಟನಿಮಿತ್ತವನ್ಯಾಯಕೋಟಿಯಂ,
ಮಾಡಿ ಮಕ್ಕಳುಗಳಂ ಸಾಯ ಸದೆಬಡಿದುದ
ಲ್ಲದೆ ಬನ್ನವೆತ್ತಿ ಹಲವು|

ಕೇಡುವಾತುಗಳಿಂದ ಕೆಡೆನುಡಿದು ಮತ್ತೀಗ
ಬೇಡ ಕೋಪವನುಡುಗು ತಂದೆ ಎಂದೆನೆ, ನಿನ್ನ
ಕೋಡ ಕೊಱೆಯದೆ ಬಱಿದೆ ಬಿಟ್ಟಪೆನೆ ಎಲವೊ ಕೇ
ಳೆಂದನಾ ಮುನಿನಾಥನು । ||೧೩||

ಕ್ರೂರರತ್ಯಧಮರುದ್ರೇಕಿಗಳು ದುರ್ಜನಾ
ಕಾರರುಂ ಧೂರ್ತರೊಳಗಾಗಿ ಶರಣೆನಲು ನಿಜ
ವೈರವಂ ಬಿಡುವರೆಂಬಾಗ ನೆಱೆ ಸರ್ವಸಂ,
ಗನಿವೃತ್ತರೆನಿಪ ನಿಮಗೆ ।
ಓರಂತೆ ಬೇಡಿಕೊಳುತಿಪ್ಪೆನ್ನ ಮೇಲಿನಿತು,
ಕಾರುಣ್ಯವೇಕಿಲ್ಲ ತಂದೆ ಎನಲೆನ್ನಯ ಕು
ಮಾರಿಯರ ಮದುವೆಯಾಗೆಲ್ಲಾ ನಿರೋಧಮಂ,
ಬಿಡುವೆನ್ನಿಂತೀಗೆಂದನು । || ೧೩ ||

ವಿವಿಧ ಗುರ್ವಾಜ್ಞೆಯೊಳು ಮಾಡುವವು ಕೆಲವು ಮಿಾ
ಱುವವು ಕೆಲ[ವಾ] ಕಾರ್ಯಮುಳ್ಳವಂ ಮಾಳ್ಪುದುಳಿ
ದವ ಬಿಡುವುದೈಸಲೇ ಗುರುಭಕ್ತಿಯೆಂದೆನಲು,
ಮುನಿಪ ನೀವೆನ್ನ ಮನದ ।
ಹವಣನಾರಯ್ಯಲೆಂದನುಗೆಯ್ದಿರಲ್ಲದೀ
ನವನರಕಮಂ ಮಾಡ ಹೇಳಿದವರುಂಟೆ ನಿ
ಮ್ಮವನು ನಾ ನಿಮ್ಮ ಮನದನುವನಱಿಯೆನೆ ಮುನಿಪ
ಕೇಳೆಂದನವನೀಶನು । || ೧೪ ||

ಒತ್ತಿ ನಿನ್ನಯ ಮನದ ಹವಣಱಿಯಲೆಂದು ನುಡಿ
ಯಿತ್ತಿಲ್ಲ ತಾತ್ಪರ್ಯವಾಗಿ ನುಡಿದೆವು ನಿನ್ನ
ಚಿತ್ತದಲಿ ಶಂಕಿಸದೆ ಮದುವೆಯಾಗೆಂದು ಕೌ
ಶಿಕಮುನೀಂದ್ರಂ ನುಡಿಯಲು ।

ಉತ್ತಮದ ರವಿಕುಲದೊಳುದಿಸಿ ಚಾಂಡಾಲತ್ವ
ವೆತ್ತ ಸತಿಯರ್ಗೆಳಸಿ ಘೋರನರಕಾಳಿಗನಿ
ಮಿತ್ತ ಹೋಹವನಲ್ಲ ಬೆಸಸಬೇಡಿದನೆಂದು,
ಭೂಭುಜಂ ಕೈಮುಗಿದನು, ||೧೫||

ಬಿಡದೆ ಸತಿಯರ ಹೊಲೆಯರೆಂಬ ನೆವವೇಕವರ
ಹಡೆದೆನ್ನನೇ ಹೊಲೆಯನೆಂದಾಡಿದಾತನೆಂ
ದಡೆ ಭಸಿತಧರನೆನಲು ರುದ್ರನಂ ಬಯ್ದವನೆ,
ಮುನಿಪ ಹೊಲೆಗೆಱೆಯು ಜಲದ|
ನಡುವೆ ಬಿಂಬಿಸುವ ರವಿ ಹೊಲೆಯನೇ ಕಮಲಭವ
ನೊಡನೆ ಹುರುಡಿಸಿ ಬೇಱೆ ಸರ್ವಜೀವರ ಮಾಡು,
ವೆಡೆಯೊಳಾ ಜೀವರೊಳಗಾದವನೆ ನಿಮ್ಮ ಹವ
ಣಱಿಯದಾಡಿದಿರೆಂದನು ||೧೬||

ಅಂಬುಧಿವ್ರಜಪರಿಮಿತಾವನೀತಳದೊಳಾ
ಡಂಬರದ ಕೀರ್ತಿಯಂ ತಳೆದ ನಾನಾಮುನಿಕ
ದಂಬಾಧಿನಾಥ ವಿಶ್ವಾಮಿತ್ರಮುನಿಸುತೆಯು
ರಂ ಜಗಚ್ಚಕ್ಷುವೆನಿಪ|
ಅಂಬುಜಪ್ರಿಯಕುಲಲಲಾಮನವನೀಶನಿಕು
ರುಂಬಾಧಿಪತಿ ಹರಿಶ್ಚಂದ್ರರಾಯಂ ತಂದ
ನೆಂಬೊಂದು ತೇಜಮಂ ಕೊಡಬೇಕು ಭೂಪ ಕೈ,
ಮುಗಿದು ಬೇಡಿದೆನೆಂದನು, ||೧೭||

ಎಡೆವಿಡದೆ ಬೇಡಿ ಕಾಡುವಿರಾದಡಿನ್ನು ಕೇಳ್,
ಕಡೆಗೆನ್ನ ಸರ್ವರಾಜ್ಯವನಾದಡಂ ನಿಮಗೆ,
ಕೊಡಹಡೆವೆನ್ನೈಸಲ್ಲದೀಯೊಂದ: ತೇಜಮಂ,
ಕೊಡೆನೆಂದು ಭೂಪಾಲನು|

ನುಡಿಯಲು ತಥಾಸ್ತು ಹಡೆದೆಂ ಹಡೆದೆನವನೀಶ
ರೊಡೆಯ ದಾನಿಲಲಾಮ ಸತ್ಯಾವತಂಸ ಎಂ
ದೆಡೆವಿಡದೆ ಹೊಗಳಿ ಬಿಡದಾಘೋಷಿಸಿದನು ಸಂ
ಗಡದ ಮುನಿವರರು ಸಹಿತ, ‖ ೧೮ ‖

ಇಂತೆನ್ನ ಕಾಟಕ್ಕೆ ಬೇಸತ್ತು ನೀನೊಬ್ಬ
ನೆಂತಕ್ಕೆ ಕೊಟ್ಟೆನೆಂದಡೆ ಬಿಡೆನು ನೃಪ ನಿನ್ನ
ಕಾಂತೆ ಸುತ ಮಂತ್ರಿಗಳ ಮತ ಬೇಹುದವರುಗಳ,
ನೊಡಬಡಿಸು ಬೇಗವೆನಲು।
ಭ್ರಾಂತಮುನಿ ನಾನೊಬ್ಬ ಸಾಲದೇ ಸ್ತ್ರೀಬಾಲ
ರೆಂತಾದಡಂ ನುಡಿವರವರಿಚ್ಛೆಯೇ ಎನ್ನ
ಸಂತಸದಿ ಕೊಯೆಂದಡದಱ ಮಾತಂ ಬಿಟ್ಟು
ಧಾರೆಯಂ ತಾ ಎಂದನು, ‖ ೧೯ ‖

ಅಡವಿಯಂ ಮೊಗೆದು ಸುಡುವಗ್ನಿಗ್ಗಾವೋಶನದ,
ಗೊಡವೆಯೇವುದು ಬಲಾತ್ಕಾರದಿಂ ಕೊಂಬಿರಾ
ದಡೆ ಧಾರೆಯೇಕಯ್ಯ ಧಾರೆಗೊಡದಿರೆ ಮರಳಿ
ನೀಂ ಬಿಡುವುದುಂಟೆ ಎನಲು।
ಬಿಡುವೆನ್ನೆನ್ನಯ್ಯ ಮಕ್ಕಳಂ ಮದುವೆಯಾಗೆಂದ,
ಡಡಿಗಡಿಗೆ ಕೆಟ್ಟ ನುಡಿಯಂ ನುಡಿಯುತಿರಬೇಡ,
ಹಿಡಿಯೆಂದು ಸರ್ವಸಾಮ್ರಾಜ್ಯಮಂ ಮುನಿಗೆ ಧಾ
ರೆಯನೆಱೆದನವನೀಶನು, ‖ ೨೦ ‖

ಏನೇನನೆಱೆದೆ ಧಾರೆಯನೆನಲು ಚತುರಂಗ,
ಸೇನೆಯಂ ಸಕಲಭಂಡಾರವಂ ನಿಜರಾಜ,
ಧಾನಿಯಂ ಜಗದಾಣೆ ಘೋಷಣೆಯುಮಂ ಕಟಕ
ವನು ಸಪ್ತದ್ವೀಪಂಗಳ।

ಆನಂದದಿಂ ದಿತ್ತ ನಿನ್ನ ಸರ್ವಾಸುಸಂ
ಧಾನಮಂ ಬಿಟ್ಟು ಕರುಣಿಸಿ ಹರಸುತಿಹುದೆಂದು
ಭೂನಾಥನೆಱಗಿ ಬೀಳ್ಕೊಂಡಡಣಕಿಸಿ ನಗುತ
ಹೋಗಯ್ಯ ಹೋಗೆಂದನು ‖ ೨೧ ‖

ಹರಣಮಂ ಬೇಡದುಳುಹಿದನು ಲೇಸಾಯ್ತು ಮುನಿ
ಕರುಣಿಸಿದನೆಂದು ತಲೆದಡವಿಕೊಳುತುತ್ಸವದೊ
ಳುರವಣಿಸಿ ರಥವೇಱಿ ನಡೆಗೊಳಲು ಬಂದು ಹೋ
ಗೊಂದು ನುಡಿವೇಳ್ವೆನೆಂದು
ಹುರುಡಿಗನು ಮತ್ತೆ ಕರೆಯಲು ಮರಳಿ ಬಂದು ಚ
ಚ್ಚರ ಬೆಸಸು ಬೆಸನಾವುದೆಂಧು ಧೀರೋದಾತ್ತ
ನೆರಡು ಕೈಮುಗಿಯಲಾ ಮುನಿ ನುಡಿದ ಕಷ್ಟವನ
ದಾವ ಜೀವರು ಕೇಳ್ವರು ‖ ೨೨ ‖

ಎಳಸಿ ನೀನೆನಗೆ ಧಾರೆಯನೆಱೆದ ಸರ್ವಸ್ವ
ದೊಳಗಣವು ನಿನ್ನ ತೊಡಿಗೆಗಳವಂ ನೀಡೆನಲು
ಕಳೆದು ನೀಡಿದಡಿನ್ನು ಮಂತ್ರಿ ಸತಿ ಸುತರ ತೊಡಿ
ಗೆಗಳ ನೀಡೀಗಳೆನಲು
ಕಳೆದು ಕೊಟ್ಟಡೆ ಮೇಲೆ ನೀವೆಲ್ಲರುಟ್ಟುಡಿಗೆ
ಗಳನು ನೀಡೆಂದಡವನೀವ ಪರಿಯಾವುದೆಂ
ದಳುಕಿ ಮನಗುಂದಿ ಚಿಂತಿಸುತ ಕೈಮುಗಿದಿರ್ಪ
ಭೂಪನಂ ಕಂಡೆಂದನು ‖ ೨೩ ‖

ಅವನಿಪರು ಮರುಳರೆಂಬುದು ತಪ್ಪದಿದಕುಪಾ
ಯುವ ಕಾಣ್ಬುದರಿದೆ ನಾ ತೋಱುದಪೆನೆಂದು ತ
ನ್ನವನೊಬ್ಬನುಟ್ಟ ಹಣ್ಣಱುವೆ ಸೀರೆಯನೀಸಿ
ಕೊಂಡು ನಾಲ್ಕಾಗಿ ಸೀಳಿ

ಶಿವಶಿವ ಮಹಾದೇವ ಕರುಣವಿಲ್ಲದ ಪಾಪಿ
ಯವಿಚಾರದಿಂ ನೀಡೆ ನಾಚದೊಗಡಿಸದಳುಕ
ದವರೊಬ್ಬರೊಂದೊಂದನುಟ್ಟು ದಿವ್ಯಾಂಬರವ
ನಿತ್ತಡಲಸದೆ ಕೊಂಡನು, ‖ ೨೪ ‖

ಮಿಸುಪ ಕಳೆಗಳನ್ನು ತೃಣಸಸಿಮುಖ್ಯ ಜೀವಿಗಳಿ
ಗೊಸೆದೊಸೆದು ದಾನವಿತ್ತಂಬರವನುಳಿದ[1]ಮ[1]ಳ,
ಶಶಿಯಂತೆ ಸರ್ವ ತೊಡಿಗೆಗಳನಿತ್ತಂಬರವ
ನುಳಿದಬ್ಬುವೆಯುಟ್ಟರಸನು।
ಕುಸಿದು ಪೊಡಮಟ್ಟಿನ್ನು ಹೋಹೆನ್ಯೆ ತಂದೆ ಸಂ
ತಸವೆ ನಿಮಗೆನಲಡ್ಡ ಮೋಱೆಯೊಳುದಾಸೀನ
ಮುಸಕದಿಂ ಹೋಗೆಂದು ಹೋಗಬಿಟ್ಟಳುಪಿ ಮ
ತ್ತಾ ಕೈಯಲೇ ಕರೆದನು, ‖ ೨೫ ‖

ಮನದೊಳಿರ್ದುದನೊಂದನಾಡಬೇಕಾಡಿದಡೆ
ಮುನಿಯಲೇ ಎನಲು ಮುನ್ನೇನನಾಡಿದಡೆ ನಾ
ಮುನಿದೆಸಲ್ಲೆ ತಂದೆ ಪೇಳೆನೆ ಬಹುಸುವರ್ಣಯಾ
ಗವ ಮಾಡಿದಂದು ನೀನು।
ಎನಗೆ ದಕ್ಷಿಣೆಗಿತ್ತ ಧನವನೀವುದು ದೇಶ
ವನು ಬಿಟ್ಟು ಹೋಹಾತನನ್ಯ ಸಾಲವನು ಸೆ
ಟ್ಟನೆ ಹೊತ್ತು ಹೋಗಲಾಗದು ನಿಲಿಸಲಾಗದಿ
ತ್ತಡಿಯನಿಡು ಬಳಿಕೆಂದನು ‖ ೨೬ ‖

ಅನುಗೆಟ್ಟ ಮರುಳೆ ನೀನೆಂದಲ್ಪದಕ್ಷಿಣೆಯ,
ಧನವೆನಿತು ನಿನ್ನ ಮನದಾರ್ತವೆನಿತಱೊಳಳಿವು,
ದನಿತರ್ಥವದೆ ಮೊದಲ ಭಂಡಾರದೊಳಗೆ ನೀ
ನಿನ್ನು ಬಳಲಿಸದಿರೆನಲು।

[1] ಬ (ಕ.ಗ.ಘ.)

ಕೊಸೆವೆರಳನಲುಗಿ ತಲೆದೂಗಿ ಲೇಸೈ ನಿನ್ನ
ಮನಕೆ ಸರಿಯಿಲ್ಲ ಮಝು ಭಾಪು ಭಾಪರರೆ ನೆ
ಟ್ಟನೆ ಕೊಟ್ಟು ಕಾಳ್ಗೆಡೆದು ನುಡಿನ ನುಡಿ ಹಸನಾಯ್ತು
ತೆಂದು ಘೂರ್ಮಿಸಿ ನಕ್ಕನು ॥ ೨೭ ॥

ಕಡೆಗಣಿಸಿ ನಗಲೇಕೆ ತಂದೆಯೆನೆ ಧಾರೆಯಂ
ಕೊಡುವಾಗ ದಕ್ಷಿಣೆಯ ಧನವದಱೊಳ್[1]ದೆಯೆಂದು
ನುಡಿದುದುಂಟೇಯೆನಲು ಹೇೞನೊಪ್ಪಿಸಿದವಂ
ಗೆಲ್ಲಿಯದು ಸುಂಕವೆನಲು ।
ಒಡಲಳಿದಡಂ ಸಾಲವಳಿಯದೆನಲೀ ಧರಣಿ
ಯೊಡೆತನಂ ಹೋದಡೇಂ ಸಾಲ ಹೋಹುದೆ ಮುನ್ನಿ
ನೊಡವೆಯಂ ಕೊಡು ಕೊಡದಡೆಲ್ಲವಂ ಮರಳಿ ಕೈ
ಕೊಳ್ಳು ಬೞಿದೆ ಬಿಡೆನೆಂದನು ॥ ೨೮ ॥

ಜತ್ತಕನ ನುಡಿಗೆ ತೆಕ್ಕಿದನೆ ತೆರಳಿದನೆ ತಲೆ
ಗುತ್ತಿದನೆ ನಡಿಫಡಿಲ್ಲಿಲ್ಲವಧಿಯಂ ಕೊಟ್ಟು
ಚಿತ್ತವಿತ್ತನುಸರಿಸಿ ಕೊಂಬಿರ್ಧಾದಡೆ ತಂದು
ನಿರ್ಣಯಿಸಿ ಕೊಡುವೆನೆನಲು ।
ಹತ್ತು ದಿನವೆನಲು ಮುನಿಯಾೞೆನೆನಲರಸನಿ
ಪ್ಪತ್ತು ದಿನವೆನಲು ಯತಿ ದೊರಕದೆನೆ ನೃಪತಿ ಮೂ
ವತ್ತು ದಿನವೆನಲು ಋಷಿಯಾಗದೆನಲರಸ ನಾ
ಲ್ವತ್ತೆಂಟು ದಿನವೆಂದನು ॥ ೨೯ ॥

ಅಲ್ಲವೆಂದೆನ್ನೆ ನೀನಿತ್ತವಧಿ ಕಿಱಿದೀವ
ರಿಲ್ಲ ಧನವಂ ಗಳಿಸಿ ತಂದೀವೆನೆನಲು ದಿನ
ವಿಲ್ಲೊಬ್ಬ ತೆಱಕಾಱನಂ ಕೊಟ್ಟಡಾತಂಗೆ
ನಿರ್ಣಯಿಸಿ ಕೊಡುವೆನೆನಲು ।

[1] ಳಿ(ಪ.)

ಬಲ್ಲಿದನನೊಬ್ಬನಂ ಕೊಡುವೆನಾತಂಗೆ ಧನ
ವೆಲ್ಲವಂ ನಿರ್ಣಯಿಸಿ ಕೊಡುವಂತಿರ್ದೆನಗಿಲ್ಲಿ
ಹೊಲ್ಲಹಂ ಸೂರುಳಂ ಸೂರುಳಿಡು ಬೇಗ ಕಾ
ಡದೆ ಕಳುಹಿದಪೆನೆಂದನು || ೧೦ ||

ಶಿವಪೂಜೆಯಂ ಮಾಡದವನು ಗುರ್ವಾಜ್ಞೆಗೆ
ಟ್ಟವನು ಪರಸತಿಗಳುಪುವವನು ಪರರಸುಗೆ ಮುಳಿ
ವವನು ತಾಯಂ ಬಗೆಯದವನು ತಂದೆಯನೊಲ್ಲ
ದವನು ಪರನಿಂದೆಗೆಯ್ವ |
ಅವನು ಇಟ್ಟಿಗೆಯ ಸುಟ್ಟವನು ಬೇಗೆಯನಿಕ್ಕು
ವವನಧಮರನು ಬೆರಸುವವನು ಕುಲಧರ್ಮಗೆ
ಟ್ಟವನಿಳಿವ ನರಕದೊಳಗಿಳಿವೆನವಧಿಗೆ ನಿಮ್ಮ
ಧನವನೀಯದಡೆಂದನು || ೧೧ ||

ಮೇಲಿನ್ನು ನಾನಾಳ್ವ ದೇಶದೊಳು ಬೇಡದಂ
ತೋಲೈಸದಂತೆ ಕೃಷಿವ್ಯವಸಾಯವಂ ಮಾಡ
ದಾಲಯಂಗಟ್ಟಿರದೆಯವಧಿಯೊಳು ಹೊನ್ನ ನಿ
ರ್ಣಯಿಸುವುದು ಬೇಗವೆನಲು |
ಭೂಲೋಲನದಕೊಡಂಬಡಲು ಸಪ್ತದ್ವೀಪ
ಜಾಲವೆಲ್ಲೆನ್ನವಱಿಂದ ಹೊಱಗಾವುದೆಂ
ದಾಲಿಸಲು ಹೇಮಕೂಟಂ ವಾರಣಾಸಿಗಳು
ಹೊಱಗು ಮುನಿ ಕೇಳೆಂದನು || ೧೨ ||

ಪ್ರಳಯಕ್ಕೆ ಹೊಱಗು ಕಲಿಕಾಲ ಹೊಗದಂತಕನ
ಸುಳಿವವಱೊಳಿಲ್ಲ ಕಾಮನ ದಾವರಂ ಕೊಳ್ಳ
ದುಳಿದ ಮಾಯೆಯ ಮಾತು ಬೇಡ ಪಾಪಂಗಳಾ
ಟಂ ನಾಟವನ್ಯಾಯದ |

ಕಳೆಗೆ ತೆಕ್ಕವು ಮಾರಿಮೃತ್ಯುಗಿತ್ಯುಗಳ ಬಲೆ
ಗೊಳಗಾಗ[1]ದ[1]ಧಿಕಪುಣ್ಯದ ಬೀಡು ಮಂಗಳದ
ನಿಳಯ ಮುಕ್ತಿಯ ಮೂಲವೆನಿಸುವವು ಕಾಶಿ ಹಂ
ಪೆಗಳು ಮುನಿ ಕೇಳೆಂದನು ‖ ೩೩ ‖

ಅವಕೆ ವಿಶ್ವೇಶ್ವರ ವಿರೂಪಾಕ್ಷರೇ ಒಡೆಯ
ರವನಿಯೊಳಗಲ್ಲಿ ನಿನ್ನಾಜ್ಞೆಗಳು ಸಲ್ಲ ಬಱಿ
ಯ ವಿಚಾರ ಹೊಲ್ಲ ಹಂಪೆಗೆ ಹೋಹಡೆಡೆಯಿಲ್ಲ,
ಕಾಶೀಪುರವನೆ ಸಾರ್ದು|
ನಿವಗೆ ಕೊಡುವರ್ಥಮಂ ಕೊಡುವೆನಿನ್ನಳಲಿಸದೆ,
ಶಿವಮೂರ್ತಿ ಮುನಿನಾಥ ಕರುಣಿಸನೆ ಹೋಗು ವ
ಸ್ತುವ ಬೇಗ ಮಾಡೆಂದಡಡಿಗೆಱಗಿ ನಡೆದನಾ
ಧೈರ್ಯನಿಧಿ ಭೂಪಾಲನು, ‖ ೩೪ ‖

ಬಿಟ್ಟು ಹೆದಱದೆ ಹೋಹ ನೃಪನ ಕಳೆಯಂ ಕಂಡು,
ಕೆಟ್ಟೆನವನ್ನಿಯನೆಯ್ದೆ ಕೊಂಡಡಂತದನೊಡಂ,
ಬಟ್ಟು ಶಪಥಕ್ಕೆ ಮೆಯ್ಗೊಟ್ಟನವನಲ್ಲಿ ಹುಸಿ
ಹುಟ್ಟದಿನ್ನಕಟ ನಾನು|
[2]ನೆ[2]ಟ್ಟು ಕೋಟಲೆಗೊಂಡನಂತಕಾಲಂ ತಪಂ
ಬಟ್ಟ ಪುಣ್ಯವನೀವೆನೆಂದೆನದು ಹೋದಡೊಳ
ಗಿಟ್ಟುಕೊಂಬರೆ ಮುನಿಗಳೆನ್ನನೆಂದೋರಂತೆ
ಮಱುಗಿದಂ ಮುನಿನಾಥನು ‖ ೩೫ ‖

ಕುಂದದೆ ವಸಿಷ್ಠನೊಳು ಮಲೆತು ಬೆಂಗೊಟ್ಟುಳ್ಳ,
ಹೆಂದದ ತಪಃಫಲವ ಹೋಗಾಡಿದಾತನೀ,
ಬಂದನೆಂದೆನ್ನನೆಲ್ಲಾ ಮುನೀಶ್ವರರು ನಗ
ದಿರರೆಂದು ತನ್ನ ತಾನು|

---

[1] ವ (?); [2] ಕ (ಪ.)

ಕೊಂಡುಕೊಳಬಗೆದು ಮತ್ತೆಚ್ಚತ್ತು ಚಿತ್ತದಲಿ ।
ನೊಂದಡೇನಹುದಿದಕೆ ತಕ್ಕುದಂ ಕಾಣಬೇ
ಕೆಂದು ಚಿಂತಿಸಿ ನೋಡಿ ಮತ್ತೊಂದುಪಾಯಮಂ
ಕಂಡನಾ ನಿಷ್ಕರುಣನು ॥ ೩೬ ॥

ಪುರದ ವಿಭವದ ಜನದ ಸಿರಿಯ ಕೇರಿಗಳ ವಿ
ಸ್ತರದ ಕೈಗೆಯ್ದ ದುರ್ಗದ ಬಲುಹ ತನ್ನ ಹಿರಿ
ಯರಮನೆಯ ಕೇಳೀವನದ ಲತಾಗೃಹದ ದೀ
ಹದ ಖಗಮೃಗಾವಳಿಗಳ ।
ವರಚಿತ್ರಶಾಲೆಗಳ ಧನಧಾನ್ಯಸಂಚಯದ,
ಪರಮವನಿತೆಯರ ನಾನಾರತ್ನ ಕೋಶದು,
ಬ್ಬರದ ಸೊಗಸಂ ಕಂಡು ಮನ ಮಱುಗದೇ ಪುರ
ಕೊಯ್ದು ನೋಡುವೆನೆಂದನು, ॥ ೩೭ ॥

ಧರಣೀಶ ಬಂದು ಹೋಗೊಂದು ಮಾತುಂಟೆಂದು
ಕರೆದು ನಿನ್ನಂ ನಂಬಿ ನಾನು ರಾಜ್ಯಂಗೆಯ್ವ,
ಭರದೊಳಱಿಯದೆ ಹೋದಡೆಲೆಮರುಳೆ ನಿನಗೆಲ್ಲಿ
ಯರಸುತನವೆಂದು ವಿಾಱಿ ।
ಪುರದ ಬಾಗಿಲ ಬಲಿದು ಗಡಱಿಕೊಂಡಬ್ಬರಿಸಿ
ಪರಿಜನಂ ಕಲುಗುಂಡ ಕಱೆಯದಿರರೆನ್ನ ನೊ
ಯ್ದಿರಿಸಿ ಸರ್ವವನೊಪ್ಪುಗೊಟ್ಟು ಹೋಗೆಂದಡವ
ನಿಪನದನೊಡಂಬಟ್ಟನು । ॥ ೩೮ ॥

ನಡೆ ರಥವನೇಱಿಕೊಳ್ಳೊಲ್ಲೆನೇಕೊಲ್ಲೆ ಪರ
ರೊಡವೆಯೆನಗಾಗದೇಕಾಗದಾನಿತ್ತೆನಿ
ತ್ತಡೆ ಕೊಳಲುಬಾರದೇಂಕಾರಣಂ ಬಾರದೆಮ
ಗಂ ಪ್ರತಿಗ್ರಹ ಸಲ್ಲದು ।

ಕಡೆಗೆ ನಿನ್ನೊಡವೆಯಲ್ಲವೆಯಲ್ಲವೇಕಲ್ಲ,
ಕೊಡದ ಮುನ್ನೆನ್ನೊಡವೆ ಕೊಟ್ಟ ಬಳಿಕೆನಗೆಲ್ಲಿ
ಯೊಡವೆಯೆಂದರರೆ ದಾನಿಗಳ ಬಲ್ಲಹನು ಮುನಿ
ಯೊಡನೆ ಸೂಳ್ನುಡಿಗೊಟ್ಟನು, ‖ ೩೯ ‖

ಬೇಡಿಕೊಂಬೆಂ ಭೂಪ ಎನೆ ಬೇಡಬೇಡ ನಾ
ಮಾಡಿದುದನೆನ್ನ ಕಣ್ಣಾರೆ ನೋಡುವೆನು ನೀ
ನಾಡಂಬರದೊಳು ರಥವೇಱಿ ಚತುರಂಗಬಲ
ವೆರಸಿ ನಡೆ ತಂದೆ ಎನ್ನ|
ಕಾಡಬೇಡವಧಿ ಕಿಱಿದೆಡೆ ದೂರ ಹೊತ್ತು ಹೋ
ಗಾಡದಿರ್ದಡೆ ತನ್ನ ನೊಯ್ದು ಮೇರುವಿನ ತುದಿ,
ಗೋಡನೇಱಿಸಿದಾತ ನೀನೆಂದು ಮುನಿಪತಿಗೆ,
ಭೂಭುಜಂ ಕೈಮುಗಿದನು, ‖ ೪೦ ‖

ಅಕ್ಕಱಿಂದಲ್ಲ ನೀನೋಡಿಹೋದಹೆಯೆಂಬ,
ಕಕ್ಕುಲಿತೆಗೇಱಿಂದೆನ್ನೈಸೆಯೆನೆ ಬಲುಗಾಹ
ನಿಕ್ಕಯ್ಯ ಎನೆ ಕಾಹಿನವರು ನಿನ್ನವರೆಂದ
ಡವರು ಬೇಡಯ್ಯ ನಿನ್ನ|,
ಮಕ್ಕಳಹ ಮುನಿಗಳಂ ಬೆಸಸೆನಲು ಬೆಸಸಿ ಮುನಿ
ರಕ್ಕಸಂ ರಥವೇಱಿ ಚತುರಂಗಬಲವೆರಸಿ,
ಮಿಕ್ಕು ನಡೆದಂ ಸರ್ವಸಂಭ್ರಮದ ಸಡಗರಂ,
ಮಿಗಲಯೋಧ್ಯಾಪುರಕ್ಕೆ, ‖ ೪೧ ‖

೬. ರಾಜ್ಯಸಮರ್ಪಣ

ಧರೆ ಬಿರಿಯಲಳ್ಳಿಱುವನಂತನಿಸ್ಸಾಳದ
ಬ್ಬರವನಾಲಿಸಿ ಪುರದ ಕೇರಿಗಳನೊಪ್ಪೆ ಸಿಂ
ಗರಿಸಿ ಮನೆಮನೆಗಳೊಳು ಗುಡಿತೋರಣಂಗಳಂ,
ಸರದೆಗೆದ್ದು ಸಂಭ್ರಮದಲಿ |
ಅರರೆ ಕೋಟಾಕೋಟಿ ಕರಿತುರಗರಥ[1]ಪತ್ತಿ[1]
ಪರಿಜನಂಬೆರಸಿ ಮತ್ತಾ ಹರಿಶ್ಚಂದ್ರ ಭೂ
ವರನನಿದಿರ್ಗೊಳಲು ನಡೆದರು ಶಶಿಯನಿದಿರ್ಗೊಂಡು
ಹೆಚ್ಚುವಂಭೋಧಿಯಂತೆ ‖ ೧ ‖

ಮುತ್ತಿ ಮುಸುಕಿದ ಹಲವು ಕೈದುಗಳ ಝಲ್ಲರಿಗ
ಳೊತ್ತಿನೊಳು ತಳಿತ ಬೆಳುಗೊಡೆಗಳಿಡುಕುಱ ನೆಳಲ
ಕುತ್ತುಱೊಳು ಡಾಳಿಸುವ ಚಮರಿಸೀಗುರಿಗಳೊ
ಗ್ಗಿನ ಕುಱುಹುವಿಡಿದು ನಡೆದು |
ಎತ್ತಿದ ಮೊಗಂ ನಿಲುಕಿ ನೋಳ್ಪ ಕಂಗಳು ಮುಗಿದು
ಹೊತ್ತ ಕೈಯವಧಾರು ಜೀಯ ಎಂದೆಂಬ ನುಡಿ
ವೆತ್ತು ಹತ್ತಿರೆ ಬಂದು ಮುನಿಯ ಮೊಗವಂ ಕಂಡ
ಹೊತ್ತನಿನ್ನೇವೊಗಳ್ವೆನು ‖ ೨ ‖

ಪಸುನನೆಯನಪ್ಪಿದಳಿಕುಳದಂತೆ ಕಡುಹಸಿದು
ಕಸುಗಾಯನಗಿದ ಗಿಳಿಗಳ ಬಳಗದಂತೆ ನಿ
ಟ್ಟಿಸದೆ ವಿಷಮಂ ಸವಿದ ಶಿಶುವಿಸರದಂತೆ ಕೊರ
ಡಂ ಕರ್ದುಕಿ ಚಂಚು ನೊಂದು |
ಕುಸಿದ ಪಿಕನಿಕರದಂತಾಸತ್ತು ಬೇಸತ್ತು
ಬಸವಳಿಯುತಂದು ಮಂದಿಗಳೊಳಱಸಿದರು ಮಾ
ಮಸಕದಿಂ ಪುರಜನಂ ಭೂಪನಂ ಹೊಲಗೆಟ್ಟ
ಕಱು ತಾಯನಱಸುವಂತೆ ‖ ೩ ‖

---

[1] ಪಂಥಿ (ಕ.), ಮಂದಿ (ಗ), ಫೀಜು (ಘ)

ಹಗಲೊಗೆದ ಚಂದ್ರಕಳೆಯಂತೆ ಜಿಱುವೈಶಾಖ
ವಗಿದ ಬನದಂತೆ ಬಿಸಿಲೊಳು ಬಿಸುಟ ತಳಿರಂತೆ
ಮೊಗ ಕಂದಿ ಕಳೆಗುಂದಿಯಱುವೆಗಪ್ಪಡವುಟ್ಟು
ರಾಗವಳಿದೊಪ್ಪಗೆಟ್ಟು।
ಮಗನರಸಿಮಂತ್ರಿಸಹಿತವನಿಪಂ ಹಿಂದೆ ದೇ
ಸಿಗನಂತೆ ಕೌಶಿಕನ ಕಾಹಿನೊಳು ಬರೆ ಕಂಡು
ಬಗೆ ಬೆದಱಿ ಹೊದ್ದಿ ಹೊಡೆವಟ್ಟು ಕಾಣಿಕೆಯ ಚಿ
ತ್ತೈಸು ಭೂಭುಜ ಎಂದರು ॥ ೪ ॥

ಎನಗರಸುತನ ಮಾದು ಹೋಗಿ ವಿಶ್ವಾಮಿತ್ರ
ಮುನಿಗಾದುದಾತನಂ ಕಂಡು ಕಾಣಿಕೆಯನಿ
ತ್ತನುದಿನಂ ಬೆಸಕೈವುದೆಸಲೊಲ್ಲೆವೆಸಲು ಬೋ
ಧಿಸಿ ಬಲಾತ್ಕಾರದಿಂದ।
ಜನವ ಕಾಣಿಸಿ ಕಾಣಿಕೆಯ ಕೊಡಿಸಿ ಹಿಂದುಗೊಂ
ಡಿನಕುಲಲಲಾಮನೆಯ್ತಂದು ಪುರಮಂ ಹೊಕ್ಕು
ಮನದೊಳುತ್ಸವದ ಹೆಚ್ಚುಗೆಯಳಿದು ನಿಂದ ಮಂ
ದಿಯ ನೋಡುತಂ ನಡೆದನು ॥ ೫ ॥

ನೂಕಿ ನಡೆದರಮನೆಯ ಹೊಕ್ಕು ಸಿಂಹಾಸನ
ಕ್ಕಾ ಕೌಶಿಕಂ ಬಂದು ಭೂಭುಜನ ಕೈಯ ಪಿಡಿ
ದೀ ಕಟಕವೀ ಕೋಟೆಯಿಾ ಕರಿಗಳೀ ತುರಗ
ವೀ ರಥಗಳೀ ಪರಿಜನ।
ಈ ಕೋಶವೀ ಕಾಂತೆಯಿಾ ಕುವರನೀ ಮಂತ್ರಿ
ಯಿಾ ಕಾಮಿನೀಜನಂ ಮಱುಗದಂತರಸಾಗ
ಬೇಕಾದಡೆನ್ನ ಮಕ್ಕಳ ಮದುವೆಯಾಗು ಕಾ
ಡದೆ ಬಿಟ್ಟು ಹೋಹೆನೆಂದ ॥ ೬ ॥

ಹೆತ್ತ ತಾಯುಂ ಮಾಱಿ ತೊತ್ತ ಕೊಂಬರೆ ಮೂಗ
ನಿತ್ತು ಕನ್ನಡಿಯ ನೋಡುವರೆ ಮಾಣಿಕದೊಡವ
ನೊತ್ತೆಯಿಟ್ಟೊಡೆದ ಗಾಜಂ ಹಿಡಿವರೇ ಕೋಪ
ದಿಂ ಸತ್ತು ಮದುವೆಯಹರೆ |
ಕತ್ತುರಿಯ ಸುಟ್ಟರಳ[1]ಕುಱು[1]ಕಲಸು ಗೆಯ್ವರೇ
ಚಿತ್ರೈಸು ಹೊಲತಿಯರ ನೆರೆದು ನಾನೋವದಿ
ಪ್ಪತ್ತೊಂದು ತಲೆವೆರಸಿ ನರಕಕ್ಕೆ ಹೋಹೆನೇ
ಮುನಿನಾಥ ಹೇಳೆಂದನು || ೭ ||

ಒಲ್ಲದಿರಬೇಡ ಲೇಸೊಲ್ಲೆಯೇಕೊಳ್ಳೆಯೆ
ಮ್ಮಲ್ಲಿ ತಪ್ಪಿಲ್ಲಾದಡಿನ್ನು ನೀನೀಗ ನಿನ
ಗುಳ್ಳ ಪರಿವಾರಮಂ ಕರಸು ಬೇಗದಲಿಂತು
ಚತುರಂಗಬಲಸೇನೆಯ |
ಸಲ್ಲಲಿತ ದೇಶಕೋಶವನು ಕಟಕವನವ
ಕ್ಕುಳ್ಳ ಕುಲಕರಣ ದುರ್ಗಂ ಮುದ್ರೆ ಮೊದಲಾದು
ವೆಲ್ಲವಂ ಬಿಡದೊಪ್ಪುಗೊಟ್ಟು ಹೋಗೇಳೆನಲು
ಕರಸಿದಂ ಭೂನಾಥನು || ೮ ||

ಬಾಡಿದ ಮೊಗಂ ಬಱಿತ ಬಾಯ್ ಸುರಿವ ನಯನಾಂಬು
ಪಾಡಳಿದ ಮತಿ ನೀಡಿ ಬೆಳೆದ ಸುಯ್ ದುಗುಡವ
ಕ್ಕಾಡುವಂಗಂ ನಿರೋಧಾಗ್ನಿಯಿಂ ಕುದಿದು ಮಱು
ಗುವ ಮನಂ ಮಾಸಿದ ಮುದಂ |
ಕೂಡೆ ಬಂದಖಿಳಪರಿವಾರಮಂ ಸತಿಯರಂ
ನಾಡೆ ಚತುರಂಗಬಲವಂ ಪುರಜನಂಗಳಂ
ನೋಡಿ ತೋಱಿಸಿ ಬೇಱೆವೇಱೊಪ್ಪುಗೊಡುತಿರ್ದ
ನಾ ಧೈರ್ಯನಿಧಿ ಭೂಪನು || ೯ ||

[1] ಕರು (?)

ಇದು ರತ್ನಭಂಡಾರವಿದು ಹೇಮಭಂಡಾರ
ವಿದು ಸುನಾಣೆಯವರ್ಗವಿದು ಪಟ್ಟಕರ್ಮಕುಲ
ವಿದು ಬೆಳ್ಳಿಯುಗ್ರಾಣವಿದು ಕಂಚಿನುಗ್ರಾಣ
ವಿದು ಸರ್ವಶಸ್ತ್ರಶಾಲೆ।
ಇದು ಹಸ್ತಿಸಂದೋಹವಿದು ತುರಗಸಂತಾನ
ವಿದು ವರೂಥಪ್ರಕರವಿದು ಪದಾತಿವ್ರಾತ
ವಿದ ನೋಡಿಕೋಯೆನುತೊಪ್ಪಿಸಿದನಾ ಮುನಿಗೆ
ಭೂನಾಥಕಂದರ್ಪನು ॥ ೧೦ ॥

ಹಿರಿಯ ಬಿರುದಿನ ಮುದ್ರೆಯಿದು ಸಗರವಿದು ಪೂರ್ವ
ದರಮನೆಯಿದಖಿಳಪರಿವಾರವಿದು ಸಿವುಡಿಯಿದು
ಕರಣವಿದು ಮೇಲುಳ್ಳ ಸರ್ವಸ್ವವಿದು ನೋಡಿ
ಕೋ ಮಹಾಪುರುಷ ಎಂದು।
ವರಕೌಶಿಕಂಗೊಪ್ಪುಗೊಟ್ಟೆಲ್ಲ ಸಂದುದೇ
ಪರಿಣಾಮವೇ ಇನ್ನು ಹೋಹೆನೇ ಮುನಿನಾಥ
ಕರುಣಿಸಿದಿರೇ ಎಂದು ಪೊಡವಂಟು ಹೋಹರಸ
ನೊಡನೆದ್ದನಾ ಮುನಿಪನು ॥ ೧೧ ॥

ಪೊಱಮಡುವ ಭೂಪಾಲನಂ ಕಂಡು ಕಣ್ಗೆಟ್ಟು
ಮಱುಗಿ ಬಸುಱಂ ಹೊಸೆದು ಬಸವಳಿದು ಬಿಸುಸುಯ್ದು
ಮೊಱೆಯಿಟ್ಟು ಬಾಯ್ಬಿಟ್ಟು ಕೈನೀಡಿ ಕರೆದು ಕ
ಟ್ಟೊಱಲಿ ಸೈರಿಸಲಾಱದೆ।
ನೆಱೆ ನಿನ್ನ ನಂಬಿ ನಚ್ಚಿರ್ದ ಪರಿವಾರಮಂ
ಮಱೆದೆಯೋ ತೊಱೆದೆಯೋ ಮಾಱಿದೆಯೊ ಪೇಳು ನೇ
ಸಱ ಕುಲಜ ಎಂದೆಂದು ನುಡಿನುಡಿದು ಮಿಡುಮಿಡನೆ
ಮಿಡುಕಿತ್ತು ಪೌರಜನವು ॥ ೧೨ ॥

ದಂತಿಯಿಂದಿಳಿದು ನಡೆದಱಿಯದವ ಬಱಿಗಾಲೊ
ಳೆಂತಡಿಯನಿಡುವೆ ಹಾಸಿನೊಳು ಪವಡಿಸುವಾತ
ನೆಂತು ಕಲುನೆಲದೊಳೊಱಗುವೆ ಸಿತಚ್ಛತ್ರ ತಂ
ಪಿನೊಳು ಬಪ್ಪಾತ ನೀನು।
ಎಂತು [1]ಬಱಿ[1] ಬಿಸಿಲನಾನುವೆ ಪುರದೊಳಿಪ್ಪಾತ
ನೆಂತರಣ್ಯದೊಳಿಪ್ಪೆ ಜನವನಗಲ್ದಱಿಯದವ
ನೆಂತು ಪೇಳೇಕಾಕಿಯಾಗಿಪ್ಪೆ ಎಂದು ಬಾ
ಯ್ಬಿಟ್ಟುದು ಸಮಸ್ತಜನವು ॥ ೧೩ ॥

ಹೊಱಗೆ ದಾನವ ಬೇಡುವವರುಂಟೆ ಕೊಟ್ಟು ಬೇ
ಸಱದ ಮುಗುದರಸು ದೊರಕಿದನಲಾ ಎಂದು ಕ
[2]ಟ್ಟುಱಿಗಂಡ[2] ಪಾಪಿ ನಿಷ್ಕರುಣಿ ನಿರ್ದಯ ಮೂರ್ಖ
ನೀಚ ನೀರಸ ನಿರ್ಗುಣ।
ನೆಱೆ ಕೊಂದೆ ನಂಬಿ ನಚ್ಚಿರ್ದರೆನ್ನೊಡಲೊಳ
ಳ್ಳಿಱಿಯುತಿಪ್ಪಳಲ ಬೇಗೆಯ ಬೆಂಕಿಯುರಿ ನಿನ್ನ
ನಿಱಿಯದೇ ಹೇಳು ವಿಶ್ವಾಮೃತ್ಯುವಾದೆ ವಿ
ಶ್ವಾಮಿತ್ರ ಎನುತಿರ್ದರು ॥ ೧೪ ॥

ಜಡೆಗಳೆದು ಮಕುಟಮಂ ನಾರ ಸೀರೆಯನು ತೊಱೆ
ದುಡಿಗೆಯಂ ರುದ್ರಾಕ್ಷಮಾಲೆಯಂ ಕಳೆದು ಮಣಿ
ದೊಡಿಗೆಯಂ ಕಂದಮೂಲವನೊಲ್ಲದೂಟಮಂ
ಧರ್ಭೆಯಂ ಬಿಟ್ಟಸಿಯನು।
ಅಡವಿಯಂ ಬಿಟ್ಟು ನಗರಿಯ ಭಸಿತಮಂ ಬಿಟ್ಟು
[3]ಕಡು[3]ಸುಗಂಧಂಗಳ ಜಿತೇಂದ್ರಿಯತ್ವವ ಬಿಟ್ಟು
ಮಡದಿಯರ ಜಗವಱಿಯೆ ಕೂಡಲು ವ್ರತಕ್ಕೆ ಮು
ಪ್ಪಾಯ್ತೆ ಮುಪ್ಪಿನೊಳೆಂದರು ॥ ೧೫ ॥

---

[1] ಬಿಱಿ (?); [2] ಟ್ಟುಱಿಗಣ್ಣ (ಕ.ಗ.), ಟ್ಟುಱಿಕಂಡೆ (ಖ.) [3] ಬಿಡೆ (ಖ.ಗ.ಘ.).

ಮಲೆತು ಬೆನ್ನಟ್ಟುವ ಮಹಾರಿಷಡುವರ್ಗಮಂ
ಗೆಲಲಱಿಯದವನಾವ ಹಗೆಗಳಂ ಗೆಲುವೆ ನಿ
ನ್ನೊಳಗೆ ಕರಣವ ಸಂತವಿಡಲಱಿಯದವನಾವ
ದೇಶವಂ ಸಂತವಿಡುವೆ |
ಸಲೆ ತಪಸ್ತೇಜದಿಂ ಪುರುಷಾರ್ಥಕೋಶವಂ
ಬಳಸಲಱಿಯದನಾವ ತೇಜದಿಂ ಕೋಶಮಂ
ಬಳಸಿದಪೆ ಕಂಗೆಟ್ಟು ಕಡುಪಾಪಿ ಮೂರ್ಖ ಕೌ
ಶಿಕ ಕೇಳು ಕೇಳೆಂದರು ‖ ೧೬ ‖

ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ ಸಪ್ತ
ಶರಧಿಪರಿವೃತಧರೆಯ ಸಿರಿಯ ಸೊಬಗಜ್ಞಾತ
ವಾಸಕ್ಕೆ ಪೋಗುತಿದೆ ಕೋ |
[1]ಎರೆವ[1] ದೀನಾನಾಥರಾನಂದವಡಗುತಿದೆ
ವರಮುನೀಂದ್ರರ ಯಾಗರಕ್ಷೆ ಬಲವಳಿಯುತಿದೆ
ನಿರುತವೆಂದೊಂದಾಗಿ ಬಂದು ಸಂದಿಸಿ ನಿಂದ
ಮಂದಿ ನೆಱೆ ಮೊಱೆಯಿಟ್ಟುದು ‖ ೧೭ ‖

ವಸುಧೆ ಬಾಯ್ಬಿಡೆ ದೆಸೆಗಳಸವಳಿದು ಮಱುಗೆ ನಿ
ಟ್ಟೆಸಲಾಱದಂಬರಂ ಕಂಬನಿಯನುಗುಳೆ ಶೋ
ಕಿಸುವ ಪರಿಜನದಳಲನಾಱಿಸುತ ಪಾಲಿಸುತ
ಸರದೋಱಿ ಸಂತವಿಡುತ |
ಮಸಗಿ ಪುರಮಂ ಮೀಱಿ ಹೋಗುತ್ತ ಹಿಂದೆ ಸಂ
ದಿಸಿ ಬಪ್ಪ ಕೌಶಿಕನ ಕಂಡು ನಿಂದವನೀಶ
ನೊಸೆದು ನಿಲಿಸುವ ಭರದೊಳೊಂದೆರಡು ಮಾತನಾ
ಡಿದನದೇವಣ್ಣಿಸುವೆನು ‖ ೧೮ ‖

[1] ಧರೆಯ (ಕ.ಗ.ಘ.)

ಹಿಂದೆ ರಾಜ್ಯಂಗೆಯ್ವ ಗರ್ವದಿಂ ಹೊಲತಿಯರ
ತಂದು ಕುಲವಂ ಕೆಡಿಸಲಾಱದಳಲಿಂ ನಿಮ್ಮ
ನೊಂದೊಂದು ವಿಧದಿ ದಟ್ಟಿಸಿ ಜಱೆದು ಮಾಱುತ್ತ
ರಂಗೊಟ್ಟು ಕೆಟ್ಟು ನುಡಿದು।
ನಿಂದೆಗೆಯ್ದನ್ಯಾಯ ಪಾಪಿ ಚಂಡಾಲನೆ
ನ್ನಿಂದಧಮರಾರಯ್ಯ ಸರ್ವಾಪರಾಧಿಯಾಂ
ತಂದೆ ಕರುಣಂಗೆಡದಿರೆಂದು ಮುನಿಯಂ ಬೇಡಿ
ಕೊಂಡನು ಹರಿಶ್ಚಂದ್ರನು ॥ ೧೯ ॥

ಮನದೊಳಗೆ ಮಱುಗದಿರಿ ಚಿಂತಿಸದಿರಳಲದಿರಿ
ಮುನಿಯದಿರಿ ನೋಯದಿರಿ ಧೃತಿಗೆಡದಿರೀಗಳೆರ
ಡನೆಯ ಶಿವನೆನಿಪ ಕೌಶಿಕನೊಡೆಯನಾದನಾ
ತನ ಪಾದಪಂಕಜಕ್ಕೆ
ಎನಗೆ ಬೆಸಕೈವಂತೆ ಬೆಸಕೈವುದಂಜುವುದು
ವಿನಯಮಂ ನುಡಿವುದೋಲೈಸುತಿಹುದೆಂದು ಪರಿ
ಜನಕೆ ಕೈಮುಗಿದೆಯ್ದೆ ಬೇಡಿಕೊಂಡಂ ಧೈರ್ಯ
ನಿಧಿ ಹರಿಶ್ಚಂದ್ರನೃಪನು ॥ ೨೦ ॥

ಧರೆಗಧಿಕವೆನಿಪ ರವಿವಂಶದಿಕ್ಷ್ವಾಕು ಭೂ
ವರನು ಮೊದಲನ್ವಯಾಗತವಾಗಿ ಬಂದುದೀ
ಪರಿವಾರವೀ ದೇಶವೀ ನಗರವೆಂದುತನ
ಕಾವೆಡರುಬಡತನವನು।
ನೆರೆದಱಿಯದಯ್ಯ ನೀವಿನ್ನಿದಂ ರಕ್ಷಿಪುದು
ಹೊರೆವುದಿನಿತಂ ಬೇಡಿ ಪಡೆದೆ ನಾ ನಿಮ್ಮಲ್ಲಿ
ಕರುಣಿಸೆನಗೆಂದು ಕೈಮುಗಿದು ಮುನಿಗಪ್ಪಯಿಸಿ
ಕೊಟ್ಟನು ಹರಿಶ್ಚಂದ್ರನು ॥ ೨೧ ॥

ಒಸೆದೀವ ತೆಱಕಾಱನಾರಾತನಂ ನಿಯಾ
ಮಿಸು ತಂದೆ ಎನೆ ತನ್ನ ಶಿಷ್ಯಾಳಿಯೊಳು ನೋಡಿ
ಹುಸಿಯುಸೂಯಾ ನೀಚವೃತ್ತಿ ನಿರ್ದಾಕ್ಷಿಣ್ಯ
ನಿಷ್ಕರುಣನೀತಿಗಳಲಿ|
ಹೆಸರುಳ್ಳ ಹಿರಿಯು ನಕ್ಷತ್ರಕನೆನಿಪ್ಪ ಮಾ
ನಿಸ[1]ನೆಕ್ಕಟಿ[1]ಕರೆದು ಕೈವಿಡಿದು ಕಿವಿಯೊಡ್ಡಿ
ವಸುಧಾಧಿಪತಿಯ ಬಳಿವಿಡಿದು ಕಳುಹಲು ಬುದ್ಧಿ
ಗಲಿಸಿದನದೇವೊಗಳ್ವೆನು || ೨೨ ||

ಕೊಡುವೊಡವೆ ಬರಲಿ ಬಾರದೆ ಕೆಡಲಿ ಕಾನನದ
ನಡುವೆ ತಗಹಿನಲಿರಿಸಿ ಕೆಲವು ದಿನವುಪವಾಸ
ಬಡಿಸಿರ್ದು ಕೆಲವು ದಿನ ದೇಹವನುವಲ್ಲೆಂದು
ನೆವವೊಡ್ಡಿ ಕೆಲವು ದಿವಸ|
ನಡೆವಾಗ ದಾರಿದಪ್ಪಿಸಿ ತಿರಿಪಿ ಕೆಲವು ದಿನ
ಪಡಿಯ ಬೀಯಕ್ಕಾಣೆಯಿಟ್ಟಿಂತು ಕೆಲವು ದಿನ
ಕೆಡಿಸಿ ನುಡಿದವಧಿಯಾಯ್ತೆಂದು ಧರೆಯಱಿಯೆ ನೃಪ
ನಂ ಹುಸಿಕನೆನಿಸೆಂದನು || ೨೩ ||

ಕರುಣಿಸದಿರನುಗೊಡದಿರಗಲದಿರು ಅನುಸರಿಸ
ದಿರು ಬಟ್ಟೆಯೂರಲೆಡೆಗೆಯ್ಯದಿರು ಕಡೆಗಾಣ
ಪರಿಯೊಳಾವಾವ ನಿಗ್ರಹನಿರೋಧಾಯಾಸ
ವಡಸುವಂದದಿ ಮಾಳ್ಪುದು|
ಗುರುಭಕ್ತನಾದಡತಿಬುದ್ಧಿಯುಳ್ಳವನಾದ
ಡರಸನಂ ಕೆಡಿಸಿ ಹುಸಿತೋಱೆಂದಡೆನಗವಂ
ಕರಗುವನೆ ದೇವ ಎನೆ ನೇಮಕ್ಕೆ ನೀಸಿರಾಂ
ಬಂದು ಕಾಡುವೆನೆಂದನು || ೨೪ ||

---
[1] ನೆಬ್ಬಿಸಿ (ಕ.ಖ.ಗ.ಘ.)

ಬಿಸಿಲಾಗಿ ಬಿಱುಗಾಳಿಯಾಗಿ ಕಲುನೆಲನಾಗಿ
ವಿಷವಾಗ್ನಿಯಾಗಿ ನಾನಾಕ್ರೂರಮೃಗವಾಗಿ
ಮಸಗಿ ಘೋರಾರಣ್ಯವಾಗಿ ಗರ್ಜಿಸಿ ಕವಿವ
ಭೂತಬೇತಾಳರಾಗಿ |
ಹಸಿವು ನೀರಡಿಕೆ ನಿದ್ರಾಲಸ್ಯವಾಗಿ ಸಂ
ದಿಸಿ ಹೋಗಿ ಹೊಕ್ಕಲ್ಲಿ ಹೊಕ್ಕು ಧಾವತಿಗೊಳಿಸಿ
ಹುಸಿಗೆ ಹೂಂಕೊಳಿಸುವೆಂ ಭೂಭುಜನನೆನ್ನಿಂದ
ಬಲ್ಲಿದರದಾರೆಂದನು ‖ ೨೫ ‖

ಬೆಱೊಬ್ಬನಲ್ಲೀತನೀ ಬಂದನಾಯಾಸ
ಕಾಱನತಿಗರುವನತಿಸುಖಿಯೀತನೆಂದುದಂ
ಮೀಱದಿರು ಧನವ ಕೊಡು ನಡೆಯರಸ ಹೋಗೆನಲು
ಮುನಿವರನ ಚರಣಕೆಱಗಿ |
ನೀಱೆಸತಿಸುತಮಂತ್ರಿವೆರಸಿ ರಿಪುಬಲಸೂಱೆ
ಕಾಱನೊಲವಿಂ ತಿರುಗಿ ನಡೆವಾಗ ಮಂದಿ ಬಾ
ಯಾಱುತ್ತ ಚೀಱುತ್ತ ಗೋಳಿಡುತ್ತಳುತೆದ್ದು
ನಡೆದುದೇವಣ್ಣಿಸುವೆನು ‖ ೨೬ ‖

ಜನನಿ ಹಿಂಗಿದ ಶಿಶುಗೆ ಸಸಿ ಬಿಟ್ಟ ಕುಮುದಕ್ಕೆ
ದಿನನಾಥನುಳಿದ ಕಮಲಕ್ಕೆ ನೆಱೆ ಸಿರಿ ಸವೆದ
ಮನೆಗೆ ಜೀವಂ ತೊಲಗಿದೊಡಲಿಂಗೆ ತೈಲವಿಂ
ಗಿದ ದೀಪ್ತಿಗುದಕವಱತ |
ಘನತಟಾಕಕ್ಕೆ ಫಲವಿಳುಹಿದ ಮರಕ್ಕೆ ನೆ
ಟ್ಟನೆ ಜೋಡಿಯಾದುದಾ ಪುರಜನಂ ಪರಿಜನಂ
ಜನಪತಿಹರಿಶ್ಚಂದ್ರನೆಲ್ಲವಂ ಮುನಿಗಿತ್ತ
ರಣ್ಯಕ್ಕೆ ನಡೆವಾಗಲು ‖ ೨೭ ‖

೭. ಪತ್ನೀಪುತ್ರವಿಕ್ರಯ, ಆತ್ಮವಿಕ್ರಯ

ಎಡೆವಿಡದೆ ದಾರಿಯಡಿಉಪಲು ಮಂತ್ರಿ ಮುಂದೆ ಸುತ
ನೆಡದ ದೆಸೆಯಲಿ ಸಿಜಾಂಗನೆ ಹಿಂದೆ ಬರ ಭೂಮಿ
ಯೊಡೆಯನೊಡವೆಗಳೊಡೆತನಂಗಳನೊಡಂಬಟ್ಟು
ಮುನಿಗಿತ್ತ ಚಿಂತೆ ತನ್ನ ।
ಬಿಡೆ ದಕ್ಷಿಣವ ಬಿಟ್ಟು ದಕ್ಷಿಣಾರ್ಥಂಗಳಂ
ಕೊಡುವೆನೆಂಬುತ್ತರವನುತ್ತರಿಸಲುತ್ತರಂ
ಬಿಡಿದು ನಡೆದಂ ನೆರವನಾರುವಂ ಹಾರದಾ
ಧೀರ ಕಾಂತಾರದೊಳಗೆ ॥ ೧ ॥

ಸುತನನಡಿಗಡಿಗೆತ್ತಿಕೊಂಬ ನಡೆಗೆಡುವ ನಿಜ
ಸತಿಯನಡಿಗಡಿಗೆ ಬೋಳೈಪ ಬಳಲುವ ಚಮೂ
ಪತಿಯನಡಿಗಡಿಗೆ ಬಿಡದುಪಚರಿಪ ಚಿತ್ತದಾ
ವೇಶ[1]ದಗ್ರ[1]ದ ಭರದಲಿ ।
ಅತಿ ಬಿಸಿಲು ಗಾಳಿ ಕಲು ಮುಳು ಕ್ಷುತ್ಪಿಪಾಸೆ ಜಾ
ಡ್ಯತೆಗಳೆಂಬಿಂತಿವಱ ಕಾಟದಿಂ ಮೊಳೆವ ಧಾ
ವತಿಯನಱಿಯದೆ ನಡೆದನಕಟಕಟ ಭೂಮಿಪಂ
ಕಾಲಕ್ಕೆ ಕೈಮುಗಿಯುತ ॥ ೨ ॥

ಮಂದೈಪ ಬಿಸಿಲ ಬಿಸಿಯಿಂ ನೆತ್ತಿ ನೆಲನ ಬಿಸಿ
ಯಿಂದ ಕಾಲ್ ಕ[2]ಡೆಗಣೆ[2]ಸಿ ಕವಿವ ಕಾದೆಲರ ಬಿಸಿ
ಯಿಂದ ದೇಹಂ ಕ್ಷುಧಾನಲನ ಬಿಸಿಯಿಂದೊಳಗು
ತೃಷೆಯ ಬಿಸಿಯಿಂದ ಬಾಯಿ ।

---

[1] ದಾಗ್ರ (ಕ.ಖ.ಗ.), ಗ್ರಹ (ಪ).

[2] ಡುಗಲಿ (ಕ.ಖ.ಗ.ಘ.)

ಬೆಂದು ಬಿರಿದರಳುತ್ತ ಸಾಯುತ್ತ ನೋಯುತ್ತ
ನಿಂದು ನಡೆದಳುಕುತ್ತ ಬಳುಕುತ್ತ ಬರಬರಲು
ಮುಂದೆ ಬಳಿಕೇವೊಗಳ್ವೆನಕಟ ನಿಷ್ಕರುಣಮುನಿ
ನೆನೆದ ಕುಟಿಲದ ಕುಂದನು ॥ ೩ ॥

ಕುತ್ತುಱಾಗಿರ್ದ ಹೆಮ್ಮೆಳೆಗಳಂ ಸುಡುತ ಬೆಳೆ
ವೆತ್ತ ಬೆಟ್ಟವ ಸೀಳ್ದು ಸೆಕ್ಕೆಗಳೆಯುತ್ತ ಹುಲು
ವೆತ್ತ ದರಿಗಳ ಕರಿಕುವರಿಸುತ್ತ ಬೆಳೆದ ಮರ
ದಿಡುಕುಱೊಳು ನಿಂದುರುಹುತ।
ಹೊತ್ತುತ್ತ ಹೊಗೆಯುತ್ತ ಹಬ್ಬುತ್ತ ಹರಿದು ನೆಗೆ
ಯುತ್ತ ಗಗನವನು ತುಡುಕುತ್ತ ಮತ್ತಂತಡಿಸಿ
ಸುತ್ತ ಮುತ್ತಿತ್ತು ದಾವಾನಲನಸತ್ಯಕಾಂ
ತಾರದಾವಾನಲಸನು ॥ ೪ ॥

ಮುಟ್ಟಿ ಕಾಶಿಯನು ಹೊಕ್ಕವನಲ್ಲ ಮುನಿರಿಣವ
ಕೊಟ್ಟಾತನಲ್ಲ ದಾನವ ಭೂಮಿಯಿಂದ ಪೊಱ
ಮಟ್ಟಾತನಲ್ಲಾಯು ತುಂಬಿ ಮಡಿದವನಲ್ಲ
ಹೋಹಡಾನೊಬ್ಬನಸುವ।
ಬಿಟ್ಟಾತನಲ್ಲ ನಿಜಸತಿಸುತರ್ ಮಂತ್ರಿ ಸಹ
ನಟ್ಟಡವಿಯೊಳಗೆ ದಳ್ಳುರಿಹೊಯ್ದು ದುರ್ಮರಣ
ವಟ್ಟು ಹೋಹಂತಾದುದೇ ಎಂದು ನೃಪತಿ ಮಱು
ಗುತ್ತ ಮತ್ತಿಂತೆಂದನು ॥ ೫ ॥

ಕಡಗಿ ಕರ್ಬೊಗೆ ಸುತ್ತಿ ದಳ್ಳುರಿಗಳಲೆದು ಕೆಂ
ಗಿಡಿಗೆದಱ ಕೆಂಡಂಗಳಡಸಿ ಸುಡೆ ಮಿಡುಮಿಡನೆ
ಮಿಡುಕಿ ಬಾಯ್ಬಿಟ್ಟೊಱಲಿ ಕೆಡೆದೊಡಲು ಮಡಿದು ಕೈ
ಕಾಲ್ ಬೆಂದು ಸುಕ್ಕಿ ಸುಗಿದು।

ಮಡದಿ ಸುತರಳಿವುದನು ಕಣ್ಣಾರೆ ಕಂಡು ನಾಂ
ಕಡೆಯಲಳಿವುದಱಿಂದ ಮುನ್ನವೀ ಬೇಗೆಯೊಳ
ಗಡಗುವೆಂ ಹಿಡಿಯಬೇಡುಮ್ಮಳಿಸಬೇಡೆಂದು
[ನೃಪ ಬೀಳಲನುವಾದನು] ॥ ೬ ॥

ಮುಳಿದು ಮೊಗೆದೆಲ್ಲರಂ ಕೊಲ್ಲದಿಂದೆನ್ನನೊ
ಬ್ಬಳನೆ ಕೊಂದಪುದೆ ಭೂಭುಜ ನಿಮ್ಮ ಕೂಡೆ ಸರಿ
ಯೊಳು ಜೀವವಂ ಬಿಡುವುದುಚಿತವಲ್ಲಿಂ ಬಳಿಕ
ಬಿಡುವುದತ್ಯಧಮತನವು।
ಎಳಸಿ ಮುತ್ತೈದೆತನದಲಿ ಮುಂದೆ ಹೋದಪೆಂ
ಕಳುಹಿಕೊಡಬೇಕೆಂದು ಮೆಯ್ಯಿಕ್ಕಿ ಬೇಡಿಕೊಂ
ಡಳು ಗಂಡನಂ ಚಂದ್ರಮತಿ ಪತಿವ್ರತೆಯರಾ
ನಂದನಿಧಿ ಲಲ್ಲೆಗಱೆದು ॥ ೭ ॥

ದೆಸೆಗಳಿಗೆ ನಮಿಸಿ ದೈವಕ್ಕೆಱಗಿ ರವಿಗೆ ವಂ
ದಿಸಿ ಕೋಟಿ ಭವಭವದೊಳೆನಗೀ ಹರಿಶ್ಚಂದ್ರ
ವಸುಧೇಶನೇ ಗಂಡನಾಗಲಿ ದಿಟಂ ಲೋಹಿ
ತಾಶ್ವನೇ ಮಗನಾಗಲಿ।
ವಸುಸತ್ಯಕೀರ್ತಿಯೇ ಮಂತ್ರಿಯಾಗಲಿ ತರುಣ
ಶಶಿಮೌಳಿಯೇ ದೈವವಾಗಲೆಮ್ಮಿಳೆಯ ಪಾ
ಲಿಸುವ ವಿಶ್ವಾಮಿತ್ರ ನಿತ್ಯನಾಗಲಿಯೆನುತ
ಬೇಡಿಕೊಂಡಿಂತೆಂದಳು ॥ ೮ ॥

ಪೊಡವೀಶ ಕೇಳುಭಯಕುಲಶುದ್ಧೆಯಲ್ಲದಿ
ರ್ದಡೆ ನಿನ್ನನಲ್ಲದನ್ಯರನು ಲೆಕ್ಕಿಸಿದೆನಾ
ದಡೆ ಹಿಂದೆ ನಿನಗೊಂದನಿಕ್ಕಿ ನಾನೊಂದನುಂ
ಡಡೆ ಮೂಱು ಕರಣವಱಿಯೆ।

ನ್ಮೃಡನಲ್ಲದನ್ಯದೈವಕ್ಕೆ ನಮಿಸಿದಡೆನ್ನ
ಹೊಡೆದು ಮುಕ್ಕುವುದು ದಾವಾಗ್ನಿ ಮೇಣಲ್ಲದಿ
ರ್ದಡೆ ಬಟ್ಟೆಗೊಟ್ಟಪುದು ಕೇಳೆಂದು ಬೊಬ್ಬೆಗೊಡು
ವಾ ಪೊತ್ತನೇವೊಗಳ್ವೆನು ‖ ೯ ‖

ತರುಣಿಯ ಮನಂ ಬೆದಱಬೇಕೆಂದು ನೆಗೆದು ದ
ಳ್ಳುರಿ ಗಗನಮಂ ತೀವಿ ಸುತ್ತಿ ಮುತ್ತಿರೆ ಕಂಡು
ಹರಿದು ಹೊಕ್ಕಳು ಹೊಕ್ಕಳೆಲೆಲೆ ಶಿವಶಿವ ಮಹಾ
ದೇವ ಬಗೆಯದೆ ಹೊಕ್ಕಡೆ |
ತರುಣಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು
ನೆರೆದ ಕೌಶಿಕನ ಕೃತಕಾಗ್ನಿ ಹರೆದೋಡಿ ಭಾ
[1][ಪುರೆ][1] ಬಟ್ಟೆಗೊಟ್ಟುದೆಂಬಾಗಳುತ್ತಮರ ಮುಂ
ದಾವ ಠಕ್ಕಿರಲಾಪುದು ‖ ೧೦ ‖

ಸುರರ ಹೂಮಳೆಯ ತಂಪಿಂ ನೆಲನ ಬಿಸಿಯಾಱಿ
ತುರಿಯ ನೆವದಿಂ ಸತಿಯು ಶುಚಿತನವನಱಿದು ಭೂ
ವರನಪ್ಪಿದಂ ಮಂತ್ರಿಯೆಱಗಿದಂ ಸುತನು ನಲಿ
ದಾಡಿದಂ ಸಂತಸದಲಿ |
ಹರಕೃಪೆಯೊಳಗ್ನಿ ಭಯವೆಂತಕ್ಕಿದೊಮ್ಮಿಂಗೆ
ಪರಿಹರಿಸಿತುಗ್ರಮುನಿಗಿತ್ತವಧಿ ಸನ್ನಿಹವಾ
ಯ್ತಿರಬಾರದುರವಣಿಸಿ ನಡೆನಡೆಯೆನುತ್ತ ಹರಿ
ತಂದು ವಿಂಧ್ಯವ ಕಳಿದರು ‖ ೧೧ ‖

ಹಲವು ನಗರಂಗಳಂ ಹಲವರಣ್ಯಂಗಳಂ
ಹಲವು ಗಿರಿಗಳ ಕಳಿದು ನಡೆತರಲು ಮುಂದೆ ಸುತ
ಕಲಿಮಲಕುಲಾಪಕರ್ಷಣೆಯಾನು ವಿಪುಳಪಾ
ತಕಕೋಟಿಕೋಟಿಯೆಂಬ |

---

1 ಸುರ (ಸ.)

ಜಲಜವನಚಂದ್ರಕಳೆಯಾನು ಭವಭಯಕುಧರ
ಕುಲಿಶಾಭಿಧಾನೆಯಾನೆಂದು ಧರೆಗಱುಪಲೆಂ
ದುಲಿವಂತೆ ಘುಳುಘುಳುಧ್ವಾನದಿಂದೆಸೆವ ಗಂ
ಗಾನದಿ ವಿರಾಜಿಸಿದಳು ||೧೨||

ಬಿಡೆ ಕೇಳ್ದಡಘಹರಂ ನೆನೆಯೆ ಪುಣ್ಯೌಘ ನುಡಿ
ದಡೆ ಸರ್ವಸಿದ್ಧಿ ಕಂಡಡೆ ಜನ್ಮನಾಶ ಪೊಗ
ಳ್ದಡೆ ಸುರೇಂದ್ರತ್ವ ಸೋಂಕಿದಡೆ ಕಮಲಜಪದವಿ
ಮಱೆದೊಮ್ಮೆ ಕುಡಿತೆಗೊಂಡು |
ಕುಡಿದನಾದಡೆ ಮುಕ್ತಿಯವಗಾಹವಿರ್ದನಾ
ದಡೆ ಗಣೇಶತ್ವ ಸಾರ್ದಡೆ ಮಹಾರುದ್ರತ್ವ
ವಡೆವರೀ ಗಂಗೆಯಿಂದಾರಾದಡೆಂಬ ಮಹಿ
ಮೆಗೆ ಸಾಕ್ಷಿ ವೇದಮತವು ||೧೩||

ಭವಭಯಾಂಬುಧಿಯನುತ್ತರಿಸುವಂತುತ್ತರಿಸಿ
ಯವಗಾಹವಿರ್ದುಂ ಕೃತಾರ್ಥತೆಯನೆಯ್ದುತಿ
ಪ್ಪವರನೀಕ್ಷಿಸಿ ಗಂಗೆ ಹೆಚ್ಚಿದಳು ನರಕಿಗಳು
ತನ್ನೊಳಗೆ ತೊಳೆದ ದೋಷ |
ತವಿಲಾದುದಿಂದು ಪತಿಹಿತವೆಯಹ ಸುದತಿಯನ್ಯ
ತವನಱಿಯದವನೀಶನುಭಯಕುಲಶುದ್ಧನಹ
ಕುವರನೀ ಸ್ವಾಮಿಹಿತವನಹ ಮಂತ್ರಿಯ ಸೋಂಕು
ತನಗೆ ಕೈಸಾರ್ದುದೆಂದು ||೧೪||

ನಡೆ [1][ಯೂಡೆ][1] ಮದ್ದು ವಿಷವೊಡಲಿಂಗೆ ಹಿತವೆಂಬ
ನುಡಿಯಂತೆ ಸುಖವಿಲ್ಲ ಪುಣ್ಯವುಂಟುಳಿದ ಹಲ
ವೆಡೆಯ ಸುಕ್ಷೇತ್ರಂಗಳೊಳಗವಱ ಪರಿಯಲ್ಲ
ಸುಖವುಂಟು ಪುಣ್ಯವುಂಟು |

[1] ನೋಡಿ (ಸ.)

ಕುಡಿವ ಪಾದೋದಕಂ ಪನ್ನೀರ ಪಾನವಾ
ದಡೆ ಧರಿಸುವ ಪ್ರಸಾದಂ ಸುಧಾಪಿಂಡವಾ
ದಡೆ ಬಿಡುವರಾರೆನಿಪ್ಪಂತೆ ಜನದಿಹಪರಕೆ
ಸೊಗಸು ಕಾಶೀಕ್ಷೇತ್ರವು ॥ ೧೫ ॥

ಮುಗಿಲ ಬಸುಱಂ ಬಗಿದು ನೆಗೆದೊಗೆದು ಮಿಾಱಿ ಮೆಱೆ
ವಗಣಿತವೃಷಧ್ವಜಂಗಳ ಸೂರ್ಯಕೋಟಿಯಂ
ತೆಗೆದವೆಂಬಂತೆ ಮಾರ್ಪೊಳೆವ ಹೊಂಗಳಸಂಗ
ಳೆಸೆವ ಶಿವನಿಳಯಂಗಳ।
ಸೊಗಸಿಗೆಡೆಯಾಡಿಯಾಡುತ ಪಾಡುತೆಯ್ತಪ್ಪ
ಪೊಗಳಿ ಪೊಡಮಡುವ ಬಲಗೊಂಬ ನೋಡುವ ನಲಿವ
ನಗುವ ನಾನಾಜನವನೊತ್ತರಿಸಿ ನಡೆತಂದು
ವಿಶ್ವಪತಿಯಂ ಕಂಡನು ॥ ೧೬ ॥

ನೋಡಿ ಪರಮಾನಂದ ಮೂಡಿ ಸುಖರಸದೊಳೋ
ಲಾಡಿ ಕೀರ್ತಿಸಿ ಹರಸಿ ಹಾಡಿ ಸದ್ಭಕ್ತಿಯಂ
ಬೇಡಿ ಮನದೊಳಗೆ ಮಾತಾಡಿ ನೆಱೆ ಬಿನ್ನಹಂ
ಮಾಡಿ ಪ್ರಸಾದಫಲವ।
ಸೂಡಿ ಪರಿಣಾಮವಂ ಮಾಡಿ ದುಃಸ್ಥಿತಿಯ ನೀ
ಗಾಡಿ ಭವಜಲವನೀಸಾಡಿ ಬಲ್ಪಿಂ ಮನಂ
ಮೂಡಿ ಬೀಳ್ಕೊಂಡು ಸಂತಸದಿ ಮರಳಿದನುಳಿದ
ಲಿಂಗಂಗಳಂ ನೋಡುತ ॥ ೧೭ ॥

ಗಡಿಗೆಟ್ಟ ಲಿಂಗಂಗಳೊಪ್ಪಕ್ಕೆ ಭೋಗಂಗ
ಳಡಕಕ್ಕೆ ಮಂಗಳದ ಮಸಕಕ್ಕೆ ರಚನೆಗಳ
ಸಡಗರಕೆ ಬೆಱಗಾಗುತೆಲ್ಲಾ ನಿರೋಧಮಂ
ಮಱೆದು ನೋಡುತ್ತರಸನು।

ನಡೆಯುತಿರಲಿದಿರೆದ್ದು ಮಾರಿಯಂದದಿ ಬಂದು
ಕೊಡು ಹೊನ್ನನಿನ್ನು ತಳುವಿದಡೆನ್ನ ಪತಿಯೆನಗೆ
ಕಡುಮುಳಿವನೆಂದು ಜಱೆಯುತ್ತ ನಕ್ಷತ್ರಕಂ
ತುಡುಕಿ ಸೆಱಗಂ ಹಿಡಿದನು ‖ ೧೮ ‖

ಕೊಟ್ಟವಧಿಯಂ ನೆನೆದು ನೋಡಿ ಹವ್ವನೆ ಹಾಱಿ
ಮುಟ್ಟಿಬಂದುದು ದಿನಂ ಕೈಕೊಂಡ ತೆಱದವಂ
ಕಟ್ಟುಗ್ರಸಭ್ಯಾಸದವರಿಲ್ಲ ಚಾಚಲಡ
ಪಿಲ್ಲ ನಾಂ ಕುಲಧರ್ಮವ |
ಬಿಟ್ಟು ತಿರಿವವನಲ್ಲವೋಲೈಸಿ ನೆಱೆ ಲಜ್ಜೆ
ಗೆಟ್ಟು ಬೇಡುವಡಿಲ್ಲಿ ದೊರೆಯಿಲ್ಲ ಕೃಷಿಯಿಂದ
ಹುಟ್ಟಿಸುವೆನೆಂಬಡೆಡೆಯಿಲ್ಲವಿನ್ನೇಗೆಯ್ವೆ
ನೆಂದು ಮಱುಗಿದನರಸನು ‖ ೧೯ ‖

ಏಗೆಯ್ವೆ ಚಿಂತಾಗ್ನಿಯುರಿಯ ಹೊಯ್ಲಿಂ ಕರಗಿ
ಹೋಗದಿರನೆಚ್ಚಱಿಸಬೇಕೆಂದು ಸತಿಯವಧಿ
ಮೇಗೆರಡು ಜಾವವಿದಱೊಳಗೆ ತಿದ್ದುವ ಬುದ್ಧಿ
ಯಂ ಕಾಣಬೇಕಲ್ಲದೆ |
ಮೂಗುವಟ್ಟಿರ್ದಡೇನಹುದೆಂದಡಿರದೆ ಬಳಿ
ಕೇಗೆಯ್ವೆ ಹೇಳೆನಲು ಸಾಲದಲಿ ಪೋದನಿತು
ಪೋಗಲೆಮ್ಮಿಬ್ಬರಂ ಮಾಱಿ ಬಳಿಕುಳಿದುದಂ
ಕಾಣು ನಡೆನಡೆ ಎಂದಳು ‖ ೨೦ ‖

ಕಡುನಿರೋಧಂಗೊಳಿಸಿ ದೇಶದಿಂ ಪರದೇಶ
ಕೊಡವರಿಸಿತಲ್ಲದಾನಿರ್ದು ನಿಮ್ಮಂ ಮಾಱಿ
ಗೊಡಲಾಪೆನೇ ಎಂದಡೆಲೆ ಮರುಳೆ ಸರ್ವಕ್ಕೆ
ಮೊದಲು ಸತಿಸುತರು ತನ್ನ |

ಒಡಲು ಕಡೆ ಸತ್ಯಕ್ಕೆ ನೇಮಕ್ಕೆ ಬಂಧನ
ಕ್ಕೆಡೆಯಲಳುಪಲು ಶಿವ ಮನಂ ನೋಳ್ಪನೈ ಲಜ್ಜೆ
ಗೆಡದೆಮ್ಮ ಮಾಱು ಮತ್ತಾದುದಾಗಲಿ ಎಂದ
ಡವನಿಪನೊಡಂಬಟ್ಟನು ‖ ೨೧ ‖

ಪೊಡವಿಪಂ ಸತಿಸುತರ ತಲೆಗಳಲಿ ಹುಲುಗಟ್ಟಿ
ನಡೆನಡೆದು ಕೈವಿಡಿದು ಮುಂದೊಡ್ಡಿ ತೋಱುತಂ
ಗಡಿಗಳೊಳು ಬೀದಿಯೊಳು ಸಂದಿಯೊಳು ಪುರದೊಳೋ
ರಂತೆ ನಾಚಿಕೆಯನುಳಿದು |
ಪೊಡವಿಪ ಹರಿಶ್ಚಂದ್ರಭೂವರನ ತನಯನಂ
ಮಡದಿಯಂ ಮಾಱುಗೊಂಬಧಿಕರಿಲ್ಲಾ ಎಂದು
ನಿಡುಸರದೊಳೊಱಲಿ ಜನಕಱುಪುತ್ತ ತೊಳಲಿದಂ
ಸತ್ಯನಿಧಿ ಭೂಪಾಲನು ‖ ೨೨ ‖

ಅನಿಮಿತ್ತ ಮುನಿವ ಮುನಿಪನ ಬೆಸದೊಳಗ್ನಿ ವಿ
ಪ್ರನ ವೇಷದಿಂದ ಬಂದಾವಾವ ಸತಿಪುತ್ರ
ರೆನಿಪರವರೆಂದಡಿವರಿಬ್ಬರೆನಲಿವನಬಲ
ನೀ ವನಿತೆ ಮುಪ್ಪಿನವಳು |
ಮನೆಯೊಳಿನ್ನೊಳ್ಳಿ[1][ತ]ಹ[1]ರಾರುಂಟು ತಾಯೆಂದ
ಡೆನಗುಳ್ಳರಿವರಯ್ಯ ಕೊಂಡೆನ್ನ ಸಾಕಿಕೊ
ಳ್ಳೆನೆ ಬೆಲೆಯ ಹೇಳೆನಗೆ ಲಾಗಾಗೆ ಹೊಂಗೊಡುವೆ
ನೇಳೆಂಟು ದಿನಕೆಂದನು ‖ ೨೩ ‖

ಇಂದು ಬೈಗಿಂದೊಳಗೆ ರಾಸಿ ಹೊನ್ನಂ ಕೊಡುವೆ
ನೆಂದು ಭಾಷೆಯನಿತ್ತೆನೀಯದಿರ್ದಡೆ ಹಾನಿ
ಬಂದಪುದು ಲಾಗಸಱಸದೆ ನಿನ್ನ ಮನಕೆ ಬಂ
ದನಿತರ್ಥಮಂ ಕರುಣಿಸು |

---

1 ದಹ (ಪ.), ಹವ (ಕ.ಖ.ಗ.ಘ.)

ತಂದೆಯೆಸೆ ವನಿತೆಗಿಪ್ಪತ್ತುಸಾಸಿರವನೀ
ನಂದನಂಗಿಪ್ಪತ್ತುಸಾಸಿರವನೀವೆಸೆಸೆ
ಬಂದುದೆನಿಸುವುದೆಮ್ಮ ತೆಱಕಾಱಗೆಂದೆನಲು
ಬಂದುದೆನಿಸಿದನಾಗಳು ‖ ೨೪ ‖

ಬಂದುದೇ ನಕ್ಷತ್ರನಾಮಮುನಿ ಎಸಲೇನು
ಬಂದುದಾಂ ಬಂದ ದಿನ ಮೊದಲಿಂದು ತನಕೆನ್ನ
ಹಿಂದುಳಿದ ಬತ್ತಾಯ ಬಂದುದೆನ್ನೊಡೆಯಂಗೆ
ಕೊಡುವ ಹೊಸ ರಾಸಿ ಹೊನ್ನ |
ತಂದೀಗ ಕೊಡು ಕೊಡದಡಿಲ್ಲೆನ್ನು ಹೋಗಬೇ
ಕೆಂದಡೀ ಹೊನ್ನ ಬತ್ತಾಯಕ್ಕೆ ತೆಱುವನ
ಲ್ಲೆಂದಡೀ ಮಧ್ಯಸ್ಥ ವಿಪ್ರ ಮೆಚ್ಚಲು ಕೊಂಬೆ
ನವನೀಶ ಕೇಳೆಂದನು ‖ ೨೫ ‖

ಈತನಿನಿತರ್ಥವಂ ಕೊಂಬುದುಚಿತವೆ ಹೇಳು
ತಾತ ಪಕ್ಷೀಕರಿಸದೆಂದೆನಲು ನಾಲ್ಕೆರಡು
ಮಾತಂಗದುದ್ದದರ್ಥದ ಸಾಲವಂ ಬೇಡ
ಬಂದವಂಗಿನಿತು ಘನವೇ |
ಭೂತಳಾಧಿಪ ಮುನಿದು ಪೇಳೆನಿರ್ದುದನೆಂಬೆ
ನೀತಗಿದು ಮರಿಯಾದೆಯೆನೆ ಜಲವನುಳಿದಬುಜ
ಕಾ ತರಣಿ ಮುನಿವನೆನೆ ನೆಲೆಗೆಟ್ಟು ಬಂದವರ್ಗೆ
ಮುಸಿಯದವರಾರೆಂದನು ‖ ೨೬ ‖

ವಿನಯದಿಂ ಕಂಡುದಂ ನುಡಿದಡೆನ್ನಂ ನಿನಗೆ
ಮುನಿದನೆಂದೆಂಬೆ ನೀಂ ಮುನಿದು ಮಾಡುವುದೇನು
ಜನಪ ಎಮ್ಮೊಡವೆಯಂ ಕೊಂಡೀಗ ಹೋಹೆವೆಂ
ದೇಳೆಲೆಗೆ ಸವುಡಿದೊತ್ತೆ |

ಮನೆಯ ಕೆಲಸಕ್ಕೆ ನಡೆ ಹುಲು ಹುಳ್ಳಿ ತರಲು ಕಾ
ನನಕೆ ಹೋಗೇಳೆಲವೊ ಚಿಣ್ಣ ಎಂದಕಟ ಮಾ
ನಿನಿಯಂ ಕುಮಾರನಂ ಜಱೆದನಾ ಕಪಟವಟು
ವೇಷಮಯದನಿಲಸಖನು ‖ ೨೭ ‖

ಹೋಹೆನೇ ತಂದೆ ಬೊಪ್ಪಯ್ಯ ಎಂದೆಂದು ಕಡು
ನೇಹದಿಂದಪ್ಪಿ ಕರುಣಂದೋಱಿ ಕಂಬನಿಯ
ಕಾಹೊನಲೊಳದ್ದುವ ಕುಮಾರನಂ ಕಾಲ್ಗೆಱಗಿ
ತಲೆವಾಗಿ ನಿಂದ ಸತಿಯ।
ಜೀಹೊಡೆಯ ನಾಸಿರಲು ಮಾಱಿದವನಂ ಕೇಳ್ವ
ಸಾಹಸವ ನೋಡೆಂದು ಕೆಡೆಹೊಯ್ದು ನೂಕಿ ನಿಜ
ಗೇಹಕ್ಕೆ ಜಱೆಯುತ್ತ ಕೊಂಡೊಯ್ದನವನಿಪನ
ಮನ ಮಱುಗಬೇಹುದೆಂದು ‖ ೨೮ ‖

ಖಗವಂಶದಿಕ್ಷ್ವಾಕು ಭೂವರನ ಪೀಳಿಗೆಯೊ
ಳೊಗೆದ ತ್ರಿಶಂಕುವಸುಧಾಧಿನಾಯಕನ ಹೆ
ಮ್ಮಗ ಹರಿಶ್ಚಂದ್ರನಂ ಮಾಱುಗೊಂಡೋಲೈಸಿ
ಕೊಂಬರಿಲ್ಲಾ ಎನುತ್ತ।
ಬಗೆಬಗೆದು ಪುರದ ಕೇರಿಯ ಮನೆಯೊಳಡ್ಡ ಬೀ
ದಿಗಳ ಬೀದಿಯ ನಿಂದ ನೆರಪಿಗಳ ಜನಮುಮಂ
ಮಿಗೆ ಕೇಳಿಸುತ್ತ ತೊಳಲಿದನು ಮಧ್ಯಾಹ್ನ
ಮೊದಲಾಗಿ ಕಡೆಹಗಲತನಕ ‖ ೨೯ ‖

ಮಡದಿಯರನಿರಿಸಿಕೋ ಎಂದು ನಾಂ ಬೇಡಿಕೊಂ
ಡಡೆ ಮಿಾಱಿ ಹೊಲತಿಯರನೊಲ್ಲೆನೆಂಬಣ್ಣನಂ
ಕಡೆಗನಾಮಿಕನ ಕಿಂಕರನಾಗಿ ಸುಡುಗಾಡ
ಕಾಪಂತೆ ಮಾಳ್ಪೆನೆಂದು।

ಕಡುಮೂರ್ಖ ಕೌಶಿಕಂ ಕಾಲಸಂ ಕರೆದು ನೀಂ
ಬಿಡದಸಾಮಿಕನಾಗಿ ಧನವನಿತ್ತರಸನಂ
ತಡೆಯೆಂದು ಮುನ್ನೊಂದು ತಿಂಗಳೆನೆ ಕಳುಹೆ ಬಂ
ದಾ ಹೊತ್ತ ಹಾರಿರ್ದನು ‖ ೩೦ ‖

ಪಿಡಿದ ಸಂಬಳಿಗೋಲು ಕಾರೊಡಲು ಕೆಂಗಣ್ಣು
ಕುಡಿದು ಕೊಬ್ಬಿದ ಬಸುಱು ದಡದಡಿಸಿ ತರಹರಿಸು
ವಡಿಯ ಕೆದಱಿದ ತಲೆಯನಡಸಿ ಸುತ್ತಿದ ಮುಪ್ಪು
ರಿಯು ಬಾರಿ ಕಡ್ಡಣಿಗೆಯ।
ಬಿಡದೆ ಢಟ್ಟನೆ ತೇಗಿ ನೆರವಿಯಂ ಬಯ್ವ ಬಿಱು
ನುಡಿಯ ಕಲಿ ವೀರಬಾಹುಕ ಬರುತ್ತಂ ಮಾಱು
ವಡೆ ಕೊಂಡು ಹೊಂಗೊಡುವೆ ನಾನೆಂದು ತನ್ನ ಹಡ
ಪಿಗನಿಂದ ಕೇಳಿಸಿದನು ‖ ೩೧ ‖

ಕೊಡುವಾತನಾರು ಬೆಲೆಯೇನು ಮಾಱಿಸಿಕೊಂಬ
ಪೊಡವೀಶನೆಂಬನಾರೋ ವೀರಬಾಹು ಕೇ
ಳ್ದಡೆ ಕೊಂಬನೀಗಳೆಂದೆನೆ ನೃಪಂ ಬೆಱಗಾಗಿ
ಸೂರ್ಯವಂಶದಲಿ ಹುಟ್ಟಿ।
ಮೃಡಮೂರ್ತಿ ವಾಸಿಷ್ಠಮುನಿಯ ಕಾರುಣ್ಯಮಂ
ಪಡೆದೆನ್ನನೀ ಹೊಲೆಯ ಮಾಱುಗೊಂಡಪನೆಂದು
ನುಡಿವ ಬಲುಹಂ ನೋಡು ನೋಡೆಂದು ಕಡುಮುಳಿದು
ಕೋಪಿಸಿದನವನೀಶನು ‖ ೩೨ ‖

ನಡುಗದಂಜದೆ ಹೆದಱದೋಸರಿಸದಕಟಕಟ
ಕಡೆಯ ಹೊಲೆಯಂ ಮೀರೆದಪ್ಪಿ ಬಂದೆನ್ನ ತ
ನ್ನೊಡೆಯಂಗೆ ದಾಸನಾಗೀಗಳೆಂದೆಂಬುದಿದು
ಕಾಲಗುಣವೋ ಎನ್ನನು।

ಎಡೆಗೊಂಡ ಕರ್ಮಫಲವೋ ಕಡೆಗೆ ಮೆಣಸು ಹುಳಿ
ತಡೆ ಜೋಳದಿಂ ಕುಂದೆ ನೋಡು ನೋಡೆಂದು ಘುಡು
ಘುಡಿಸಿ ಕೋಪಾಟೋಪದಿಂ ಜಱೆದು ಝುಂಕಿಸಿದ
ನವನಿಪನನಾಮಿಕನನು ॥ ೩೩ ॥

ಕೇಳಿ ಬಂದಾರ ಜಱೆದಪೆಯೆನಲು ನಿನ್ನ ಹಡ
ಪಾಳಿಯನದೇಕೆನ್ನ ನಱೆದಱೆದನಾಮಿಕಂ
ಗಾಳಾದಪಾಯೆಂದು ನುಡಿದನಿಂತೆನಬಹುದೆ
ಕೀಳುಮೇಲಂ ನೋಡದೆ ।
ಕೀಳಾರು ಮೇಲಾರು ಹದುಳವಿಪ್ಪಾನು ಚಾಂ
ಡಾಳನೋ ಹುಸಿಯ ಹೊಲೆಯಂ ಹೊಱುವ ನೀನು ಚಾಂ
ಡಾಳನೋ ಹೇಳೆಂದಡಾನೀಗ ಹುಸಿದುದೇ
ನೆಂದನು ಹರಿಶ್ಚಂದ್ರನು ॥ ೩೪ ॥

ಹೊನ್ನುಳ್ಳ ಧನಿಕರಾರಾದೊಡಂ ಕೊಂಬವರ್
ಬನ್ನಿಯೆನ್ನಂ ಮಾಱುಗುಡುವೆನೆಂದೆನೆ ದಿಟಂ
ನನ್ನಿಯುಳ್ಳವನೆಂದು ಬಗೆದು ಬೇಡಿದೆನುತ್ತ
ಮದ್ವಿಜರು ಕೊಂಬುದೆಂದು ।
ಮುನ್ನ ನೀನಾಡಿತುಂಟೇ ಹೇಳು ಭೂಪಾಲ
ನಿನ್ನ ನುಡಿ ನಿನಗೆ ಹಗೆಯಾಯ್ತು ಕಂಡುದನಲ್ಲ
ದೆನ್ನನೀ ಹೊಲೆಹುಸಿಯ ಹೊಱುವವಂ ಹೊಲೆಯನ
ಲ್ಲದೆ ಬಳಿಕ್ಕಾರೆಂದನು ॥ ೩೫ ॥

ವಿತ್ತವುಳ್ಳವರ್ಗಳೆನ್ನಂ ಕೊಂಬುದೆಂದು ನುಡಿ
ಯಿತ್ತು ದಿಟವಿನ್ನು ನಾನೊಗಡಿಸಿದೆನಾದಡನಿ
ಮಿತ್ತ ಹುಸಿ ಬಂದಪುದು ಅವಧಿಗೆಟ್ಟೆಡೆ ಹಿಂದೆ
ಮುನಿಗೆ ನಾಂ ದಾನವಾಗಿ ।

ಇತ್ತ ರಾಜ್ಯಂ ನಿರರ್ಥಂಬೋಗಿ ಮೇಲೆ ಹುಸಿ
ಹೊತ್ತಪ್ಪುದದಱಿಂದ ಮುನ್ನವೆ ಅನಾಮಿಕನ
ಚಿತ್ತವಂ ಪಡೆವೆನೆಂದೋತು ಕರೆದಂ ವೀರ
ಬಾಹುಕನನವನೀಶನು ‖ ೩೬ ‖

ಪುತ್ತ್ರೀಕೆ ಹುಸಿಯ ಹೊಲೆಹೊಱೆಕಾಱ ಕರೆದೆಯೆನೆ
ತೆತ್ತ ಸಾಲದ ಭರದೊಳೞಿಯದಾಡಿದ ನುಡಿಗೆ
ಹೊತ್ತ ಹುಸಿಯಳಿಯಬೇಕೆಂದೆನಲು ನಿನ್ನ ಕುಲ
ವಳಿದಲ್ಲದಳಿಯದೆನಲು।
ಚಿತ್ತೈಸಿ ಕೇಳಿನ್ನು [1]ನಾ[1]ಡ ಮದ್ದಂ ತಿಂದು
ಕುತ್ತ ಕೆಡದಿರ[2]ಬಹುದೆ[2] ಸಾಲವಳಿಯಲು ಧನವ
ನಿತ್ತು ರಕ್ಷಿಸು ಸಾಕು ರವಿಕುಲಕೆ ಕುಂದಿಂದು
ಬಂದಡಂ ಬರಲೆಂದನು ‖ ೩೭ ‖

ನೂಱಾಱು ಸಾವಿರವೆ ಸಾಲವೇನೆನೆ ಕರಿಯ
ನೇಱಿ ಮೇಲಕ್ಕೆ ಮಿಡಿದಡೆ ಕವಡೆ ಬಿಡೆ ಹಬ್ಬಿ
ಹಾಱಿದನಿತುದ್ದಕ್ಕೆ ಸುರಿದು ಹೊಸ ಹೊನ್ನ ರಾ
ಶಿಯುನೀಯಬೇಹುದೆನಲು।
[3]ಏ[3]ಱಿದರ್ಥವನೀವೆ ನೀ ಮಾಳ್ಪುದೇನಾಡಿ
ತೋಱೆಂದಡಾವ ಹೊತ್ತಾವ ಕೆಲಸವನೀಯ
ಲಾಱೆನೆನ್ನದೆ ಮಾಳ್ಪೆನೆಂದಡೊಡವೆಯುನೀವೆ
ನೆಂದನಂತಾ ಧನಿಕನು ‖ ೩೮ ‖

ನುಡಿದೊಡವೆಯಂ ಕೊಡುವೆನೆಂದು ನುಡಿದಂದದಿಂ
ನಡೆವೆನೆಂದೊಬ್ಬರೊಬ್ಬರಿಗೆ ಸಂಬುಗೆಯಿತ್ತು
ಒಡೆಯುನಾದಂ ವೀರಬಾಹುವಾಳಾದನಿನ
ಕುಲಹರಿಶ್ಚಂದ್ರನೃಪನು।

---
[1] ಕಾ (ಕ.); [2] ಲಹುದೆ (ಕ.) ಲಾಗ (ಫ.ಪ.); [3] ಹೇ (ಪ.)

ಹೆಡಗೆಹೆಡಗೆಗಳೊಳಡಿಗಡಿಗಡಕಿ ಹಸ್ತಿಯಂ
ಪಿಡಿದು ಕವಡೆಯ ಮಿಡಿದು ಸಡೆ ನೋಡಿ ನೋಡಿ ತಂ
ದೆಡೆವಿಡದೆ ಸುರಿದನರ್ಥವನು ಕೌಶಿಕಮುನಿಯು
ತೆಱಕಾಱ ತಲೆದೂಗಲು ॥ ೩೯ ॥

ಇತ್ತವಧಿಗಿನ್ನೆರಡು ಗಳಿಗೆ ಹೊತ್ತಿದೆ ಮುನಿಪ
ಚಿತ್ತೈಸು ವಸ್ತುವಿದೆ ಸಂದುದೇ ನುಡಿದು ಹುಸಿ
ಯಿತ್ತಿಲ್ಲಲೇ ತಂದೆ ಆಯುಸಂಬಡಿಸಿದೆನು
ತಡೆದೆನಳಲಿಸಿದೆ ನಾನು।
ಅತ್ಯಂತ ಮೂಢನೆನ್ನವಗುಣವನುಳಿದು ತ
ಮ್ಮುತ್ತಮಿಕೆಯಂ ಮೆಱೆದು ಕರುಣಿಸುವುದೆಂದೆಮ್ಮ
ಹೆತ್ತಯ್ಯ ಕೌಶಿಕಂಗೋವಿ ಬಿನ್ನೈಸೆಂದು
ಭೂಭುಜಂ ಕೈಮುಗಿದನು ॥ ೪೦ ॥

ಇನ್ನೇಕೆ ನುಡಿದೆನ್ನ ನಾಚಿಸುವೆ ಭೂಪಾಲ
ನಿನ್ನಂತೆ ಸತ್ಯರುತ್ತಮರಧಿಕಧೀವಶಿಗ
ಳುನ್ನತಶಿವೈಕ್ಯರಿಳೆಯೊಳಗಿಲ್ಲ ನಿನ್ನಿಷ್ಟ
ಸಿದ್ಧಿ ಕೈಸಾರಲೆಂದು।
ತನ್ನ ಮನವುಕ್ಕಿ ಹಾರೈಸಿ ಹರುಷದಿ ಹರಸಿ
ಹೊನ್ನನಡಕಲು ಹೋದನತ್ತಲಿತ್ತಲು ನಡೆದು
ನನ್ನಿಕಾಱಂ ಪತಿಯ ಹಿಂದೆ ಹೊಲಗೇರಿಗೆ
ಯ್ತಂದನಮರರು ಮಱುಗಲು ॥ ೪೧ ॥

ಹಲವೆಲುವಿನೆಕ್ಕೆಗಳ ಬಿಗಿದು ಬೀವಂ ನೆಯ್ದು
ಸುಲಿಯ ಹಂದೊಗಲ ಹಾಸಿನೊಳು ಮಂಚದ ಮೇಲೆ
ಹೊಲೆಯಸೋಲಗವಿತ್ತು ನರಕಪಾಲದೊಳು ತೀ
ವಿದ ಹಸಿಯ ಗೋಮಾಂಸವ।

ಮೆಲುತ ಮದ್ಯವನೀಂಟುತಿರ್ಪ ಪತಿಯಂ ಕಂಡು
ನೆಲದಲ್ಲಿ ಕುಳ್ಳಿರ್ದ ರವಿಕುಲನ ಹೆಗಲವೇ
ಲೆಲೆಲೆ ನೀಡಿದನು ಕಾಲಂ ಕಾಲಸೊಂದೆರಡು
ಕುಲಗಿರಿಯ ಭಾರವೆನಲು ‖ ೪೨ ‖

ಏಳಬುಧಿ ಕಡೆಯಾದ ಸರ್ವರಾಜ್ಯಶ್ರೀಯು
ಮೇಳದೊಳು ವೀರಸಿರಿಯಂ ವಿಜಯಸಿರಿಗಳಂ
ತಾಳಲಾಪದಟುಳ್ಳ ಭುಜವನಾಮಿಕನ ಪದ
ಭಾರಕ್ಕೆ ಬಸವಳಿವುದೇ |
ಕಾಳೆಗದೊಳರಿನೃಪರ ಖಂಡಮಂ ರುಧಿರಮಂ
ಕಾಳಿಜವನಡಗನೊಳ್ಗರುಳ ಹಿಣಿಲಂ ಹೊಱುವ
ಬಾಳ ಪಡೆದಿಪ್ಪನೀ ಹೇಯಕ್ಕೆ ಹೇಸುವನೆ
ಎನಿಸಿ ಲೆಕ್ಕಿಸದಿರ್ದನು ‖ ೪೩ ‖

ಎಲವೊ ನೀ ದಿಟ ರಾಯನಾದಡಳುಕದೆ ಬಂದು
ನೆಲದಲ್ಲಿ ಕುಳ್ಳಿರ್ಪೆ ಸತ್ಕುಲಜನಾದಡಂ
ಹೊಲೆಯನಾದೆನ್ನ ಕಾಲಂ ಹೊಱುವೆ ಮುನಿಮತೋ
ಚಿತ ಶಿವಾರ್ಚಕನಾದಡೆ |
ಹೊಲಸಿನಟ್ಟುಳಿಗೆ ಕೊಕ್ಕರಿಸದಿಹೆ ರಾಜ್ಯಸಿರಿ
ತೊಲಗಿದಡೆ ಪೂರ್ವಗುಣವಳಿವುದೇ ಮುನ್ನ ಭವಿ
ನಿಳಯದೊಳು ತಲೆಮುಟ್ಟಿ ದುಡಿದ ಗಾವದಿಯ್ಯೆಸೆ
ಭೂಪಾಲನಲ್ಲೆಂದನು ‖ ೪೪ ‖

ಹಸುವನಳಿ ಹಾರುವನನಿಱಿ ಮಾತೆಪಿತರ ಬಾ
ಧಿಸು ಸುತನ ತಿವಿ ಸತಿಯ ಕೊಲು ಮಾರಿಗೊಱೆಗಟ್ಟು
ವಿಷವ ಕುಡಿ ಹಾವ ಹಿಡಿ ಹುಲಿಗೆ ಮಲೆ ದಳ್ಳುರಿಯೊ
ಳಡಗು ಹೋಗೆಂದೊಡೆಯನು |

ಬೆಸಸಿದಡೆ ನಾನಾಱೆನೆನಬಾರದೆಂಬಾಗ
ಳೆಸವಸದೊಳಿವಕಲಸಿ ಸೆಡೆದೆನಾದಡೆ ಕೊಟ್ಟ
ಬೆಸನ ನಡಸುವೆನೆಂಬ ನುಡಿ ಸಡಿಲವಾಗದೇ
ಹೇಳೆಂದನವನೀಶನು ‖ ೪೫ ‖

ಏನನಾಂ ಬೆಸನಿತ್ತೊಡದ ಬಿಡದೆ ನಡಸುವಾ
ನೀನೆನಲು ನಡಸತಿರ್ದಡೆ ನೀನು ಕೊಟ್ಟೊಡವೆ
ದಾನವೇ ಬಗೆಯೆ ಕರಿ ಹೂಳುವನಿತರ್ಥಮಂ
ಕೊಂಡು ಮಾಡದೆ ಮಾಣ್ದಡೆ।
ಈ ನೆಲಂ ಹೊಱುವುದೇ ನಾನಿತ್ತ ನಂಬುಗೆಗೆ
ಹಾನಿಯಾಗದೆ ಹೋಹುದೇಯೆನಲು ಸುಡುಗಾಡ
ನಾನಂದದಿಂ ಕಾದುಕೊಂಡಿರುತಿರೆಂದು
ಬೆಸಸಿದನು ಮನದನುವಱಿಯಲು ‖ ೪೬ ‖

ಸುಡುಗಾಡ ಕಾಹವೆಂದೇನದಱ ಪಂಥಮಂ
ನುಡಿದು ಪೇಳೆನೆ ಸುಡುವ ನೆಲದೆಱೆಯ ಹಾಗ ಹೆಣ
ದುಡಿಗೆಯಂ ತಂದೆನಗೆ ಕೊಡುವುದಾತಲೆಯಕ್ಕಿ
ಯಂ ನಿನ್ನ ಸಂಬಳಕ್ಕೆ।
ಪಡಿಯಾಗಿ ಕೊಂಡುಂಬುದಳುಪದಿರು ಹುಸಿಯದಿರು
ಬಿಡದಿರೆಂದುಡಗೊಱೆಯ ವೀಳೆಯದ ಕೂಡೆ ತಾ
ಹಿಡಿದ ಸಂಬಳಿಗೋಲ ಮುದ್ರೆಗೊಟ್ಟಂ ವನಧಿ
ಮುದ್ರಿತಧರಾಧಿಪತಿಗೆ ‖ ೪೭ ‖

ಹೆಸರ ಹೇಳುತ್ತ ಸಾಱುತ್ತ ಮೈಗುಱುಹ ತೋ
ಱುಸುತ ಪುರದೊಳಗೆಯ್ದೆ ಜನವಱಿಯೆ ಹಱೆಯ ಮೊಳ
ಗಿಸುತ ಮೆಱೆಯುತ್ತ ಹೋಗೇಳೆಂದು ಕಳುಪೆ ಪೊಱ
ಮಟ್ಟನೆಲ್ಲವ ಮಾಡುತ।

ನಸುಕುಸಿದ ದೇಹ ಕಂಕರಿಗೋಲಸಿಱಿದು ಬಾ
ರಿಸುತ ಕೈವಿಡದೆ ಸಂಬಳಿಸಂಬಳೆಂದೆಂದು
ಕೊಸರುತಿಹ ಬಾಯ್ವೆರಸಿ ಬೀದಿಬೀದಿಯೊಳು ಸುಳಿ
ದಂ ಸತ್ಯಸಂಪನ್ನನು ॥ ೪೮ ॥

ಸುಡುಗಾಡಿನಧಿಕಾರಮುದ್ರೆ ಕಟ್ಟಾಣೆ ಚಾ
ವಡಿ ಹೆಣನ ತಲೆಯಕ್ಕಿ ನೆಲದೆಱೆಯ ಹಾಗ ಶವ
ದುಡಿಗೆಯೆನಗಾಯ್ತೆನ್ನ ಮಱಹಿಕ್ಕಿ ರಾತ್ರಿಯೊಳು
ಸುಟ್ಟರಾದಡೆ ತೆಱೆಯನು।
ಕೊಡದಿರ್ದಡೆನ್ನಾಣೆ ಪತಿವೀರಬಾಹುವಿನ
ಮಡದಿಯರ ಕಾಲಾಣೆ ಮಾಱಿದಡೆ ಕೆಡಹಿ ತಡೆ
ಗಡಿವೆನೆಂದೂರೊಳಗೆ ಸಾಱುತ್ತ ತೋಱುತ್ತ
ರುದ್ರಭೂಮಿಗೆ ನಡೆದನು ॥ ೪೯ ॥

ಕಂಗೆ ಭಯವೆನೆ ಬೇವ ಹೆಣನ ಹಿಂಡುಗಳ ಮೂ
ಗಿಂಗೆ ಹಗೆಯೆನೆ ಕವಿವ ಕಬ್ಬೊಗೆಯ ಕೌಱು ಕ
ರ್ಣಂಗಳಿಗಮಂಗಲಧ್ವನಿಗಳು ನೆರವುವಬ
ಲೆಯರ ಮಲ್ಲಾಮಲ್ಲಿಯ।
ಹಿಂಗದೊತ್ತೊತ್ತೆಯಿಂ ಮೆಯ್ಯನೊತ್ತುವ ಜನದ
ಜಂಗುಳಿಯ ಕಾಲೂಱಲರಿದೆನಿಸಿ ನೆರೆದ ಹಲ
ವಂಗದಸ್ಥಿಗಳನಾರಯ್ಯುತ್ತ ಹೊಕ್ಕನಾ
ಸುಡುಗಾಡನವನೀಶನು ॥ ೫೦ ॥

ನಡೆದು ಹರಿಹರಿದು ಸುಡದಿರು ಸುಡದಿರೆಲವೊ ಸು
ಟ್ಟಡೆ ನಿಮಗೆ ವೀರಬಾಹುಕನಾಣೆಯೆಂದು ಜಡಿ
ಜಡಿದು ನೆಲದೆಱೆಯ ಹಾಗವನುಟ್ಟ ಕಪ್ಪಡಂ
ಗಳನು ತಲೆಯಕ್ಕಿಗಳನು।

ಸುಡುಗಾಡೊಳಲ್ಲಲ್ಲಿಗೆಯ್ದಿ ಬೇಡುವ ಭರದೊ
ಳೆಡಹುತ್ತ ತಾಗುತ್ತಲೆಲುಗಳಂ ಮೆಟ್ಟಿ ತ
ನ್ನಡಿಗಳಳುಕಿತ್ತಸಱಿಯದೆ ಹಾಸುಹೊಕ್ಕು ಹರಿ
ದಾಡಿದಂ ಭೂಪಾಲನು ‖ ೫೧ ‖

ಮತ್ತಾಗ ಸುಡುಗಾಡ ಸಟ್ಟನಡುವಣ [1]ದಡದ[1]
ತುತ್ತತುದಿಯೊಳು ವಿಮಾನದ ಮರಂಗಳನು ಕಡೆ
ಹೊತ್ತಿ ಉರಿಕರಿಯಾದ ಕರಿಕೊಳ್ಳಿಗಳನಱಿಸಿ
ತಂದು ಸಿದ್ಧಿಗೆಯ ನುಲಿಯ |
ಒತ್ತಿ ಜಿಗಿಬಿಗಿದು ಹಂಜರಿಸಿ ತವಗವನಿಕ್ಕಿ
ಮತ್ತೆ ಮೇಲೊಂದು ತಲೆಗುಡಿಸಲಂ ಕಟ್ಟಿ ಕಾ
ಯುತಿರ್ದನಿರುಳುಹಗಲೆನ್ನದೊಡೆಯಂ ಬೆಸಸಿ
ದಂತೆ ವಸುಧಾಧೀಶನು ‖ ೫೨ ‖

ವರ ವಾರಣಾಸಿಮಧ್ಯವೆ ಲಾಳದೇಶವ
ಚ್ಚರಿಯ ಕಾಶೀಪುರವಯೋಧ್ಯೆ ಶ್ಮಶಾನಧರೆ
ಯರಮನೆ ಪ್ರೇತಗಾಹಿನ ತವಗ ಮಣಿಪೀಠ
ಪರಿಣಾಮವಾರೋಗಣೆ |
ಪರಮಧೃತಿ ಚತುರಂಗಸೇನೆ ಸಂಬಳಿಗೋಲು
ಕರವಾಳು ಸತ್ಯ ಭಂಡಾರ ಪತಿಯಾಜ್ಞೆ ಭಾ
ಸುರತರಕ್ಷತ್ರಧರ್ಮಂಗಳೆಂದೇ ಕಾಣು
ತಿರ್ದನು ಹರಿಶ್ಚಂದ್ರನು ‖ ೫೩ ‖

[1] ತೆವರ (ಪ.)

೮. ರೋಹಿತಾಶ್ವನ ಮರಣ, ಚಂದ್ರಮತಿಯ ದುಃಖ

ಇಂತು ನೃಪನಿತ್ತ ದಿವಸಂ ಕಳೆಯುತಿರಲತ್ತ
ಲಂತವರನೊತ್ತಿಟ್ಟ ಮನೆಯುಸೇವೊಗಳ್ವೆನದು
ತಿಂತಿಣಿಯ ಸೂನೆಗಾಱರ ನಿಳಯ ರಕ್ಕಸಿಯ
ಮಾಡ ಹಾವಿನ ಹೇಳಿಗೆ|
ಅಂತಕನ ನಗರ ಮೃತ್ಯುವಿನ ಬಲುಬಾಣಸದ
ಹಂತಿ ಮಾರಿಯ ಮೂರಿಯಾಟದೆಡೆಯೆಂಬಾಗ
ಳೆಂತು ಜೀವಿಪರಕಟ ಮನೆಯುವರ ದುರ್ಧರದೊ
ಳವನಿಪನ ಸತಿಪುತ್ರರು| ‖ ೧ ‖

ಒಡೆಯನತಿಕೋಪಿ ಹೆಂಡತಿ ಮಹಾಮೂರ್ಖೆ ಮಗ
ಕಡುಧೂರ್ತ ಸೊಸೆಯಾದಡಧಿಕನಿಷ್ಠುರೆ ಮನೆಯ
ನಡೆವವರು ದುರ್ಜನರು ನೆರೆಮನೆಯವರು ಮಿಥ್ಯ
ವಾದಿಗಳು ಪಶುಗಳಗಡು|
ಅಡಿಗಡಿಗೆ ಕೋಪಿಸುವ ಸಾಯೆ ಸದೆಬಡಿವ ಕಾ
ಳ್ಗೆಡೆವ ಕರಕರಿಪ ಸೆಣಸುವ ತಪ್ಪ ಸಾಧಿಸುವ
ಕೆಡೆಯೊದೆವ ಮಾರಿಗಾಱದೆ ಸತ್ತು ಹುಟ್ಟುತಿಹ
ರವನಿಪನ ಸತಿಪುತ್ರರು ‖ ೨ ‖

ಎಡೆವಿಡದೆ ಹಲವು ಸೂಳೊಡೆಯನರಮನೆಗೆ ನೀ
ರಡಕಿ ಕೊಟ್ಟನಿತು ಬತ್ತವ ಮಿದಿದು ಒಡಲಿಗೆ
ಯ್ದೆಡೆಯಿಕ್ಕಿದನಿತುಮ[ನೆ] ಉಂಡು ಇರುಳುಂ ಹಗಲು
ಮೆನ್ನದೋರಂತೆ ಕುದಿವ|
ಮಡದಿಯ ಕುಮಾರನುದಯದೊಳೆದ್ದು ಹೋಗಿ ಹೇ
ರಡವಿಯಲಿ ಹುಲುಹುಳ್ಳಿಯಂ ಕೊಂಡು ನಿಚ್ಚ ತ
ನ್ನೊಡನಾಡಿಗಳ್ವೆರಸಿ ಬೈಗೆ ಬಂದಿಂತು ಕಾ
ಲವನು ಸವೆಯಿಸುತಿರ್ದನು। ‖ ೩ ‖

ಓರಂತೆ ತಲ್ಲಣಿಸಿ ಹೆದಱಿ ಕಣ್ಗೆಟ್ಟೋಡ
ಬಾರದಿರಬಾರದುಱೆ ಸಾಯಬಾರದು ಬದುಕ
ಬಾರದೆಂಬಂತೆ ತನ್ನೊಡಲಿಂಗೆ ಬಪ್ಪ ದುಃ
ಖಂಗಳಿಗೆ ಸಾಕ್ಷಿಯಾಗಿ |
ಧಾರಿಣಿಯೊಳವನಿಪನ ಸತ್ಯ ಸಲಬೇಹುದೆಂ
ಬಾರಯ್ಕೆವಿಡಿದು ನಡೆಯುತ್ತಿಪ್ಪ ನಾರಿಯ ಕು
ಮಾರಂಗೆ ಬಂದ ಸಂಕಟದ ಸಂವರಣೆಯನ
ದಾವ ಜೀವರು ಕೇಳ್ವರು ‖ ೪ ‖

ಎಂದಿನಂತುದಯಕಾಲದೊಳೆದ್ದು ಹುಲುಹುಳ್ಳಿ
ಗೆಂದರಣ್ಯಕ್ಕೆ ನಡೆದಲ್ಲಲ್ಲಿ ಹೋಗಿ ಹಲ
ವಂದದಡುಗಬ್ಬನಾಯ್ದೊಟ್ಟಿ ಹೊಱೆಗಟ್ಟಿಹೊ
ತ್ತೇರಗೆಯ್ದು ಮಕ್ಕಳೊಡನೆ |
ನಿಂದು ಮಧ್ಯಾಹ್ನದುರಿಬಿಸಿಲೊಳೆದೆ ಬಿರಿಯೆ ಜವ
ಗುಂದಿ ತಲೆಕುಸಿದು ನಡೆಗೆಟ್ಟು ಬಾಯಾಱಿ ಹಣೆ
ಯಿಂದ ಬೆಮರುಗೆ ನೆತ್ತಿ ಹೊತ್ತಿ ತೇಂಕುತ್ತ ಹರಿ
ತಪ್ಪಾಗಳೇವೊಗಳ್ವೆನು ‖ ೫ ‖

ಕೆಲ್ಲದ ಮೆಳೆಯೊತ್ತಿನೊಳಗಿರ್ದ ಹುತ್ತಿನೊಳ್ಳು ನಳ
ನಳಿಸಿ ಕೋಮಲತೆಯಿಂ ಕೊಬ್ಬಿ ಕೊನೆವಾಯ್ದು ಕಂ
ಗಳವಟ್ಟು ಬೆಳೆದೆಳೆಯ ದರ್ಭೆಯಂ ಕಂಡು ಹಾ
ರಯಿಸಿ ನಾನಿಡನೆಲ್ಲವ |
ಗಳಗಳನೆ ಕೊಯ್ದು ಕೊಂಡೊಯ್ದಿತ್ತಡೆನ್ನೊಡೆಯ
ಮುಳಿಯದಿಹನೆಂಬಾಸೆಯಿಂ ಹೊಱೆಯನಿಳುಹಿ ಮ
ತ್ತೆಳಸಿ ಕುಡುಗೋಲ್ವಿಡಿದು ಸಾರ್ದನಸ್ತಾದ್ರಿಯಂ
ಸಾರ್ದ ಮಾರ್ತಾಂಡನಂತೆ ‖ ೬ ‖

ಹೊಡೆಗಡಿದು ಹತ್ತಿ ಹುತ್ತನು ಸುತ್ತಿದೆಳಹುಲ್ಲ ,
ಹೊದಱ ಪಿಡಿದಡಸಿ ಬಿಡದರಿದು ಸೆಳೆಯಲ್ ಕೈಯು
ಹದರನೊಡೆಗಚ್ಚಿ ಜಡಿಯುತ್ತ ಭೋಂಕನೆ ಬಂದ
ರೌದ್ರಸರ್ಪನನು ಕಂಡು |
ಹೆದಱ ಹವ್ವನೆ ಹಾಱ ಹಾ ಎಂದು ಕೈಕಾಲ
ಕೆದಱ ತಲೆಕೆಳಗಾಗಿ ಕೆಡೆದನಕಟಕಟ ಮದ
ಮುದಿತರಾಹುಗ್ರಸ್ತವಾದ ತರುಣೇಂದುಬಿಂ
ಬಂ ನೆಲಕೆ ಬೀಳ್ವಂದದೆ || ೭ ||

ಹುತ್ತಿನಿಂ ಫಣಿವೆರಸಿ ಕೆಡೆಯೆ ಕಂಡೊಡನಿರ್ದ
[1]ಜತ್ತಕಂಗಳು[1] ಹೆದಱ ಬಿಟ್ಟೋಡಿ ಹೋದರೂ
ರತ್ತಲಿತ್ತಂ ತಾಯ್ಗೆ ಹಲುಬ್ಬಿ ತಂದೆಯ ಕರೆದು ,
ದೆಸೆದೆಸೆಗೆ ಬಾಯ ಬಿಟ್ಟು |
ನೆತ್ತಿಗೇಱದ ವಿಷದ ಕೈಯಿಂದ ಮಡಿದನ್ನೀ.
ಹೊತ್ತೆನ್ನ ಕುಲದ ಕುಡಿ ಮುರುಟಿತೆಂದುನ್ಮಳಂ
ಬಿತ್ತು ಜೀಳದೆ ಮಾಣನೆಂಬಂತೆ ರವಿ ಬಿದ್ದ
ನೆಂದು ಪಡುವಣ ಕಡಲೊಳು || ೮ ||

ತನಯನೆಂದುಂ ಬಪ್ಪ ಹೊತ್ತಿಂಗೆ ಬಾರದಿರೆ ,
ಮನನೊಂದಿದೇಕೆ ತಳುವಿದನೆನ್ನ ಕಂದನೆಂ ,
ದೆನುತ ಸುಯ್ಯುತ್ತ ನುಱುಗುತ್ತ ಬಸುಱಂ ಹೊಸೆದು ,
ಕೊನೆವೆರಳ ಮುಱದುಕೊಳುತ |
ತನುವ ಮಱೆದಡಿಗಡಿಗೆ ಘೊಱಗನಾಲಿಸಿ ಮತ್ತೆ
ಮನೆಯೊಡತಿಗಂಜಿ ಕೆಲಸವನು ಮಾಡುತ್ತಿಪ್ಪ ,
ವನಿತೆಗಾದಾಪತ್ತನಾಲಿಸದೆ ಕೆಟ್ಟು ದ
ಟ್ಟಿಸುವರದನೇನೆಂಬೆನು || ೯ ||

---

[1] ತತ್ತಕರು (ಖ. ಗ.)

ಬಳಗುಡಿದ ನಾರಾಚದೇಱಿನಂದದಿ ಹೊಱಗ
ಬಳಸದೊಳಗೊಳಗೇಗುವಾವಗೆಯ ಶಿಖಿಯಂತೆ,
ಕೆಳೆಗೊಂಡ ಹಗೆಗಳೊಳಗಣ ಮುಳಿಸಿನಂದದಿಂ
ಮನೆಯವರ ಮಾರಿಗಂಜಿ।
ಬಳಸಿ ಬಿರಿವೆದೆ ಬಿಕ್ಕುವಕ್ಕೆ ಕಣ್ಗಳೊಳೊಱೆವ
ಜಲ ಸೆರೆಗಳೊಡೆದುಬ್ಬಿ ಬಿಗಿದು ಗಂಟಲಿನ ಮು
ಕ್ಕುಳಿಸಿದಕ್ಕೆಗಳೆಸೆವ ಸತಿಯಳಲು ಸೀಗೆಯೊಳ
ಗಣ ಬಾಳೆಗೆಣೆಯಾದುದು ।

ಅಡವಿಯೊಳು ಹೊಲಬುಗೆಟ್ಟನೊ ಗಿಡುವಿನೊಳಗೆ ಹುಲಿ
ಹಿಡಿದುದೋ ಕಳ್ಳರೊಯ್ದರೊ ಭೂತಸಂಕುಲಂ
ಹೊಡೆದುವೋ ನೀರೊಳದ್ದನೊ ಮರದ ಕೊಂಬೇಱಿ
ಬಿದ್ದನೋ ಫಣಿ ತಿಂದುದೋ।
ಕಡುಹಸಿದು ನಡೆಗೆಟ್ಟು ನಿಂದನೋ ಎಂದಿಂತು,
ಮಡದಿ ಹಲವಂ ಹಲುಬುತಂಗಣದೊಳಿರೆ ಹೊತ್ತು
ಹೊಡಕರಿಸಿದಳಲ ಕರ್ಬೊಗೆಯಂತೆ ಕವಿವ ಕ
ತ್ತಲೆಯೊಳಗೆ ನಿಂದಿರ್ದಳು । ||೧೧||

ಬಂದರಂ ಲೋಹಿತಾಶ್ವಾ ಎಂದು ಬಟ್ಟೆಯೊಳು
ನಿಂದರಂ ಲೋಹಿತಾಶ್ವಾ ಎಂದು ಗಾಳಿ ಗಿಱಿ
ಕೆಂದಡಂ ಲೋಹಿತಾಶ್ವಾ ಎಂದು ಕರೆಕರೆದು
ಬಿಡೆ ಬೀದಿಗಱುವಿಸಂತೆ।
ಮಂದಮತಿಯಾಗಿರ್ದ ಚಂದ್ರಮತಿಗೊಬ್ಬನೆ,
ಯ್ತಂದಿಂದು ಕೂಡೆ ಹೋಗಿರ್ದ ಕಂಡೆಂ ನಿನ್ನ
ಕಂದನೊಂದುಗ್ರಫಣಿ ತಿಂದು ಜೀವಂಗಳೆದ,
ನೆಂದು ಹೇಳಿದನಾಗಳು ||೧೨||

ಏಕೆ ಕಚ್ಚಿತ್ತಾವ ಕಡೆಯಾವ ಹೊಲನಕ್ಕ
ಟಾ ಕುಮಾರಂ ಮಡಿದ ಠಾವೆನಿತು ದೂರವೆನ
ಲೀ ಕಡೆಯೊಳೀ ಹೊಲದೊಳೀ ಮರದ ಕೆಲದ ಹು
ತ್ತಿನ ಹುಲ್ಲ ಕೊಯ್ಯೆ ಕೈಯ |
ನೂಕಿ ಫಣಿಯಗಿಯೆ ಕೆಡೆದಂ ದೂರವಲ್ಲಲ್ಲ
ಬೇಕಾದಡೀಗ ಹೋಗಲ್ಲದಿರ್ದಡೆ ಬಳಿಕ
ನೇಕ ಭಲ್ಲುಕ ಜಂಬ್ಬುಕಂ ಘೂಕ ವೃಕಗಳೆಳೆ
ಯದೆ ಬಿಡವು ಕೇಳೆಂದನು । ॥ ೧೩ ॥

ನುಡಿಯಲ್ಲರಿದ್ದೆನಿಸಿ ಮೇರೆಯ ಮೀಱುವಳಲನಳ
ವಡಿಸಿ ಬಂದೊಡೆಯನಡಿಗಳ ಮೇಲೆ ಕೆಡೆದು ಬಾ
ಯ್ವಿಡುತರಣ್ಯದೊಳೆನ್ನ ಮಗನುಗ್ರಕಾಳೋರ
ಗಂ ಕಚ್ಚಿ ಮಡಿದನೆಂದು ।
ನುಡಿಯೆ ಲೇಸಾಯ್ತು ಮಡಿದರೆ ಮಡಿದನೆಂದು ಕೆಡೆ
ನುಡಿಯೆ ಬಂಟರನು ಕೊಟ್ಟಟ್ಟಿಸೈ ತಂದೆ ಎನೆ
ನಡುವಿರಳು ಬಂಟರುಂಟೇ ನಿದ್ದೆಗೆಯ್ಯಬೇ
ಕೇಳು ಕಾಡದಿರೆಂದನು । ॥ ೧೪ ॥

ನರಿಗಳೆಳೆಯದ ಮುನ್ನ ದಹಿಸಬೇಡವೆ ತಂದೆ,
ಕರುಣಿಸೆನೆ ದುರ್ಮರಣವಟ್ಟ ಶೂದ್ರನನು ಸಂ
ಸ್ಕರಿಸುವವರಾವಲ್ಲವೆಂದೆನ್ನಲ್ಕಾನಾದ
ಡಂ ಹೋಗಿ ಕಂಡು ಮಗನ ।
ಉರಿಗಿತ್ತು ಬಪ್ಪೆನೇ ಎನೆ ಕೆಲಸಮಂ ಬಿಟ್ಟು
ಹರಿಯದಿರ್ದುದನೆಯ್ದೆಗೆಯ್ದು ಹೋಗೆನಲು ಚ
ಚ್ಚರದಿ ಮಾಡುವ ಕಜ್ಜವೆಲ್ಲವಂ ಮಾಡಿ ಹೊಱ
ವಂಟಳೊಯ್ಯನೆ ಮನೆಯನು । ॥ ೧೫ ॥

ದಟ್ಟೈಸಿ ಮಡಲಿಱುವ ಕಾಳದೊಳು ನಡುವಿರುಳು
ಸಟ್ಟ ಮುಳ್ಳುಗಳನೆಡಹಿದ ಕಲ್ಲ ಹಾಯ್ದು ಮರ
[1]ಮು[1]ಟ್ಟಸೇಱಿದ ದಡನನಿಳಿದ ಕುಳಿಯಂ ಬಿದ್ದ
ದರಿಗಳಂ ಹಿಡಿದ ಗಿಡುವ।
ಬಿಟ್ಟ ತಲೆಯಂ ಬಿಚ್ಚಿದುಡಿಗೆಯಂ ಮಱೆದು ಗೋ
ಳಿಟ್ಟು ಬಾಯ್ಬಿಟ್ಟು ಮೊಱೆಯಿಡುತ ನಡೆತಂದು ಹುಲು
ವಟ್ಟೆಯೊಳು ಬೆಳೆದ ಹೆಮ್ಮರನ ಮಲಗಿಸಿ ನಿಂದ
ಹುಳ್ಳಿಹೊಱೆಯಂ ಕಂಡಳು। ||೧೬||

ಈಯೆಡೆಯೊಳಿನ್ನಿರದೆ ಮಾಣನೆಸುತಂ ಬಂದು
ತಾಯಿ ಕರೆದಳು ಮಗನೆ ಮಗನೇ ಹರಿಶ್ಚಂದ್ರ
ರಾಯನ ಕುಮಾರ ಪೇಳಾವ ಠಾವೊಳಕೊಂಡು
ದಯ್ಯ ನೀನೆಲ್ಲಿರ್ದಪೆ।
ಓಯೆಂಬುದೇನು ಕಂದಾ ಬಾಯ ಬಿಡದಿತ್ತ
ಬಾಯೆಂಬುದೇನು ತಂದೇ ಎನ್ನ ಸೊಲ್ಲದಡೆ
ಸಾಯೆಂಬುದೇನುಸುರದಿರಲೇಕೆ ತರುಣ ಎಂ
ದೊಱಲಿದಳು ಹಂಬಲಿಸುತ ||೧೭||

ವಿಷದ ಹೊಗೆ ಪೊಯ್ದು ಹಸುರಾದ ಮೈ ನಿಮಿಱ ಸೊರೆ
ಯೊಸರ್ವ ಗಲ್ಲಂ ಕಂದಿದುಗುರ್ಗಳರೆದೆಱೆದಗು
ಪಿಸುವ ಕಣ್ ಹಱಿದು ಹುಲುಹಿಡಿದ ಹರಹಿದ ಕೈಗ
ಳುಂಬ ಹೊತ್ತುಣಹಡೆಯದೆ।
ಹಸಿದು ಬೆಂಗಡರ್ದ ಬಸುಱಕಟಕಟ [2]ಮಡಿದ[2] ಗೋಣ್
ದೆಸೆಗುರುಳಿ ಹುಡಿಹೊಕ್ಕು ಬಱತ ಬಾಯ್ವೆರಸಂದು
ಬಸಪಳಿದ ನಿಜಸುತನ ಕಂಡಳು ಹರಿಶ್ಚಂದ್ರ
ನರಸಿ ಹುತ್ತಿನ ಮೊದಲೊಳು ||೧೮||

---

[1] ಮ (ಕ.), ವ (ಖಗ), ವು (ಘ.ಪ.) [2] ಮುರಿದ (ಪ.)

ಕಂಡ ಕಾಣ್ಕೆಯೊಳ್ಳು ಶಿವಶಿವ ನಿಂದ ನಿಲವಿನಲಿ
ದಿಂಡುಗೆಡೆದಳ್ಳು ಮೇಲೆ ಹೊರಳಿದಳ್ಳು ಜಗಿಯಪ್ಪಿ
ಕೊಂಡು ಹೊಟ್ಟೆಯನು ಹೊಸೆಹೊಸೆದು ಮೋಱೆಯ ಮೇಲೆ
ಮೋಱೆಯಿಟ್ಟೋವದೊಱಲಿ |
ಮುಂಡಾಡಿ ಮುದ್ದುಗೆಯ್ದೋರಂತೆ ಕರೆದು ಕರೆ
ದಂಡಲೆದು ಲಲ್ಲೆಗಱೆದತ್ತತ್ತು ಬಲವಳಿದು
ಬೆಂಡಾಗಿ ಜೀವವಿಕ್ಕೆಂಬಾಸೆಯಿಂ ತೇಂಕು
ದಾಣಂಗಳಂ ಬಗೆದಳು ‖ ೧೯ ‖

ಲಲನೆ ಮೂಗಿನೊಳುಸುರನಳ್ಳೆಯೊಳು ಹೊಯ್ಲನುಗು
ರೊಳು ರಜವನೆದೆಯೊಳಲ್ಲಾಟಮಂ ಕೈಯ ಮೊದ
ಲೊಳು ಮಿಡುಕನಂಗದೊಳು ನೋವನಕ್ಷಿಯೊಳು ಬೆ
ಳ್ಪಂ ಭ್ರಾಳದೊಳು ಬೆಮರನು |
ಲಲಿತಕಂಠದೊಳುಲುಕನಂಘ್ರಿಯೊಳು ಬಿಸಿಯನಂ
ಗುಳಿಗಳೊಳು ಚಿಟುಕನುಂಗುಟದೊಳರುಣಾಂಬುವಂ
ಸಲೆ ನಾಲಗೆಯೊಳಿಂಪ ರೋಮದಲಿ ಬಲ್ಪನಾ
ರಯ್ದು ಕಾಣದೆ ನೊಂದಳು , ‖ ೨೦ ‖

ಹಡೆದೊಡಲು ಹುಡಿಯಾಯ್ತು ಮಗನೆ ಮಗನುಂಟೆಂದು
ಕಡಗಿ ಹೆಚ್ಚುವ ಮನಂ ಹೊತ್ತಿ ಹೊಗೆಯಿತ್ತು ಬಿಡ
ದಡರಿ ಸಿಟ್ಟಿಸಿ ನಲಿವ ದಿಟ್ಟಿ ಕೆಟ್ಟುವು ಸೋಂಕಿ
ಪುಳಕಿಸುವ ಕರಣಂಗಳು |
ಕಡಿವಡೆದುವೊಸೆದು ಹೆಸಗೊಳುತಿಪ್ಪ ನಾಲಗೆಯ
ಕುಡಿ ಮುರುಟಿತೊಮ್ಮೊಮ್ಮೆ ನುಡಿಯನಾಲಿಪ ಕಿವಿಯ
ಹಡಿಗೆತ್ತುದೆಲೆ ಕಂದ ಎಂದೆನುತ್ತಿಂದುಮುಖಿ
ಮಱುಗಿ ಬಾಯ್ಬಿಟ್ಟಳಂದು ‖ ೨೧ ‖

ಸಿರಿ ಹೋದ ಮಱುಕವನು ನೆಲೆಗೆಟ್ಟ ಚಿಂತೆಯನು
ಪರದೇಶಮಂ ಹೊಕ್ಕ ನಾಚಿಕೆಯನಱಿಯದ
ನ್ಯರ ಮನೆಯ ತೊತ್ತಾದ ಭಂಗವನು ನಿಮ್ಮಯ್ಯ
ಗಜ್ಞಾತವಾದಳಲನು |
ನೆರೆದು ಮನೆಯವರೆಯ್ದೆ ಕರಕರಿಪ ದುಃಖವನು
ತರಳ ನಿನ್ನಂ ನೋಡಿ ಮಱೆದು ಪರಿಣಾಮವಂ
ಧರಿಸುತಿಪ್ಪೆನ್ನ ಗೋಣಂ ಕೊಯ್ದೆ ಇನ್ನಾರ
ನೋಡಿ ಮಱೆದಪೆನೆಂದಳು ||೨೨||

ಅತಿಲಜ್ಜೆಗೆಟ್ಟನ್ಯರಾಳಾಗಿ ದುಡಿದು ಧಾ
ವತಿಗೊಂಡು ಧನವನಾರ್ಜಿಸಿ ಹರಿಶ್ಚಂದ್ರಭೂ
ಪತಿ ನಮ್ಮ ಬಿಡಿಸುವ್ವಾರ್ತದ ಮೋಹದಿಂ ಹಸಿವು
ನಿದ್ದೆಯಂ ತೊಱೆದು ಬಂದು |
ಸುತನ ಕರೆಯೆಂದಡೇನೆಂಬೆನಾವುದ ತೋಱು
ಪತಿಯ ಮಱುಕವನು ಮಱೆಯಿಸುವೆನುಗ್ರಾಹಿಗಾ
ಹುತಿಯಾದನೆಂದು ಪೇಳ್ವೆನೆ ಎನ್ನ ಕಂದ ಎಂ
ದಿಂದುಮುಖಿ ಬಾಯ್ಬಿಟ್ಟಳು, ||೨೩||

ಮಂದಾನಿಲರಗಳೆ

ಏವೆನೇವೆನೆಲೆ ಮಗನೇ ಮಗನೇ
ಸಾವೇಕಾಯಿತ್ತೆಲೆ ಚೆನ್ನಿಗನೇ
ಇಱಿದೆಯಲಾ ಎನ್ನನು ಸುಕುಮಾರಾ
ಕೊಱೆದೆಯಲಾ ಕೊರಳನು ಜಿತಮಾರಾ
ಎತ್ತಣ ಬಱಸಿಡಿಲೆಱಗಿತೊ ನಿನ್ನ
ಹುತ್ತಿನ ಹತ್ತಿರೆ ಒಱಗಿದೆ ಚೆನ್ನ

ಹಾವು ಹಿಡಿಯೆ ಹಾ ಎಂದೊಱಲಿದೆಯಾ
ಸಾವಾಗವ್ವಾ ಎಂದಳಲಿದೆಯಾ

ರನ್ನದ ಕನ್ನಡಿ ಸಿಡಿದುದೊ ದೇವಾ
ಹೊನ್ನಕಳಸ ಕೆಡೆ[ದೊ][1]ಡೆದುದೊ ದೇವಾ
ಎನ್ನ ಕಡವರಂ ಸೂಱೆಹೋಯಿತೋ
ಹೊನ್ನ ಪ್ರತಿಮೆಯಸು ಹಾಱಿಹೋಯಿತೋ
ಇನವಂಶದ ಲತೆ ಕುಡಿಮುರುಟಿತ್ತೋ
ಜನಪಸಿಟ್ಟ ಸುರತರು ಮುಱಿಯಿತ್ತೋ
ಕಾಲ ಕರುಣವಿಲ್ಲದೆ ನೀನೊಯ್ದೆ
ಬಾಲನನಗಲಿಸಿ ಕೊರಳಂ ಕೊಯ್ದೆ
ಆರ ಸಿರಿಯನೆಳೆತಂದೆನೊ ಮುನ್ನ
ಆರಳಲಲು ಸೆಳೆಕೊಂಡೆನೊ ಹೊನ್ನ
ಅಲ್ಲದಡೀಯಳಲಪ್ಪುದೆ ನನಗೆ
ಇಲ್ಲಿ ವೃಥಾ ಸಾವಪ್ಪುದೆ ನಿನಗೆ
ಹೆತ್ತ ಹೊಟ್ಟೆಯುರಿಯುತ್ತಿದೆ ಮಗನೆ
ಎತ್ತಿದ ತೋಳನು ಕೆತ್ತಿದೆ ಮಗನೆ
ಹಾಡುವ ಬಾಯಲಿ ಮಣ್ಣನು ಹೊಯ್ದೆ
ನೋಡುವ ಕಣ್ಣಲಿ ಸುಣ್ಣವ ಹೊಯ್ದೆ
ಪಾಪಿಯೆನ್ನ ನೀನೊಮ್ಮೆ[ಗೆ] ನೋಡಾ
ಕೋಪವನುಳಿದೊಯ್ಯನೆ ಮಾತಾಡಾ
ನುಡಿದಡೆ ಪಾಪವೆ ಹೆತ್ತವರೊಡನೆ
ಕಡುಮುಳಿಸೇ ಮಗನೇ ಎನ್ನೊಡನೆ

ಬಾರೈ ಬಹಳ ಸಿರಿಯ ಸಿಂಗಾರ
ಬಾರೈ ಸುಜನಜನಕ್ಕಾಧಾರ

[1] ಯೊ (ಖ.ಗ.)

ಏಳೆನ್ನಾನಂದಾಮೃತಶರಧಿ
ಏಳಖಿಳಗುಣಾರ್ಣವಕಳಾನಿಧಿ
ಹಲ್ಲಣಿಸಿದ ವಾರುವವಿದೆ ಮಗನೆ
ಮಲ್ಲಾಮಲ್ಲಿಯ ರಥವಿದೆ ಮಗನೆ
ಗಜಘಟೆಗಳು ಹಲ್ಲಣಿಸಿವೆ ಮಗನೆ
ನಿಜಪರಿವಾರಕೆ ಬೆಸಗೊಡು ಮಗನೆ
ನೆತ್ತರ ಕಡಲೊಳಗಿಭಕುಲ ಬೀಳೆ
ಮೊತ್ತದ ತುರಗಂಗಳು ಬೆಂಡೇಳೆ
ಮಣಿಮಕುಟದ ಭಟರಟ್ಟೆಗಳಾಡೆ
ಮಣಿದು ಭೂತಸಂಕುಳ ಕುಣಿದಾಡೆ
ಮಾರಿಮೃತ್ಯುಗಳಿಗೋಕರೆ ಹುಟ್ಟೆ
ಕ್ರೂರ ಜವಂಗತಿಭೀಕರ ಹುಟ್ಟೆ
ರಿಪುಬಲವಂ ಕೊಂದಳಿದಡೆ ತಪ್ಪೆ
ತಪನಕುಲದ ವಿಜಯಶ್ರೀಯೊಪ್ಪೆ
ಧರೆಯನಾಳ್ವ ಸಿರಿಯುಂ ಕಳೆದಿಂದು
ಉರಗನ ವಿಷದಗ್ನಿಯೊಳುಱೆ ಬೆಂದು
ಅಡವಿಯೊಳೀಪರಿ ಕೆಡೆವರೆ ವೀರ
ಪೊಡವಿಯೊಡೆಯನಗ್ಗದ ಸುಕುಮಾರ.

ಏನ ಮಾಳ್ಪೆ ನಾ ಮಾಡಿರ್ದುದನು
ತಾನುಂಬುದು ವಿಧಿ ಮಾಡಿದ ಹದನು
ಕರುಣಿಸಿ ಕಾಯ್ವೈ ಗೌರೀರಮಣ
ನರಕಿಯ ನೋಡೆಲೆ ಅಗಜಾರಮಣ
ಕರುಣಿಸು ಪಾಪಿಯ ಪಂಪಾಪತಿಯೆ
ಕರುಣಿಸನಾಥೆಗೆ ಕಾಶೀಪತಿಯೆ ||

ಇನ್ನಿನಿತಱಿಂದ, ಮೇಲವ್ವೊಡೆಯನಱಿಸಿ, ಬಂ
ದೆನ್ನ ಸೊಯ್ದಡೆ, ಬಳಿಕ ಸುಡಪಡೆಯೆನೆಂಬುದನು,
ತನ್ನಲ್ಲಿ, ತಾನೆ ತಿಳಿದೆದ್ದು, ಪುತ್ರನ ಶವವ
ಹೊತ್ತು, ದೆಸೆದೆಸೆಗೆ ತಿರುಗಿ,।
ಮುನ್ನೆಲ್ಲರಂ, ಸುಡುವ ಠಾವಾವುದೆಂದು ನೋ
ಳ್ಪನ್ನೆಗಂ ಹಲವುಕೆಲವುರಿಯ, ಬೆಳಗಂ, ಕಂಡು,
ಸನ್ನಿಕಾಱಿಂ, ಕಾವ, ಕಾಡತ್ತ, ನಡೆವಾಗ,
ಬಟ್ಟೆಯೊಳದೇವೊಗಳ್ವೆನು, ॥ ೨೪ ॥

ಕೆಡೆದ ಮುಂಡದ ಬಿದ್ದ ತಲೆಯ ಚಲ್ಲಿದ ಕರುಳ
ಪಡಲಿಟ್ಟ ಕಾಳಿಜದ ಮಿದುಳ ಕೋಳ್ಗಿಸಱ ಹೊನ
ಲಿಡುವ ರಕುತದ ಕಡಲೊಳಡಿಯಿಡಲು ಬಾರದೆಂ
ಬಂತೆ ವಿಶ್ವಾಮಿತ್ರನು।
ಅಡವಿಯೊಳಗೆಯ್ದೆ ನಾನಾ ಭಯಂಕರವ ಸಾ
ಲಿಡಲದನು ಪುತ್ರಶೋಕಗ್ರಹಾ[1][ವಿಷ್ಟ][1]ತೆಯ
ಕಡುಪಿನಿಂ ಲೆಕ್ಕಿಸದೆ ಬಂದು ಸುಡುಗಾಡೊಳಿಳು
ಹಿದಳು ತನಯುನ ಶವವನು ॥ ೨೫ ॥

ಗಳಗಳನೆ ಮುನ್ನ ಬೆಂದುಳಿದಿರ್ದ ಕರಿಗೊಳ್ಳಿ
ಗಳನೆಲ್ಲವಂ ಸಿದುಗಿ, ತಂದೊಟ್ಟಿ ಮೇಲೆ ಮಂ
ಗಳಮಯ ಕುಮಾರಸಂ ಪಟ್ಟಿರಿಸಿ, ಕೆಲದೊಳುರಿ
ವಗ್ನಿಯಂ ಪಿಡಿದು ನಿಂದು।
ಬೆಳೆದಲ್ಲಿ ಬೆಳೆ ಹುಟ್ಟಿದಲ್ಲಿ ಹುಟ್ಟೆಂದು, ಸುಡಿ
ದಿಳುಹಲನುಗೆಯ್ದು ಳುಹಲಾಱದಳವಳಿದು, ಬಾ
ಯಳಿದು ವೊಱೆಯಿಟ್ಟಡಾ ದನಿಗೇಳ್ದು, ನಿದ್ರೆತಿಳಿ
ದೆದ್ದು, ಬಂದನು ಭೂಪನು, ॥ ೨೬ ॥

---

[1] ವೇಷ್ಟ (ಕ.ಘ.) ನಿಷ್ಟ (ಖ.ಗ.), ವೇಷ್ಟಿ (ಪ.)

ನಟ್ಟಿರುಳು, ಸುಡುಗಾಡೊಳೊಬ್ಬಳೋರಂತೆ ಬಾ
ಯ್ವಿಟ್ಟು ಹಲುಬುವ ವೀರನಾರಿಯಾವಳೊ, ಮಾಱು
ಸುಟ್ಟಿಯಾಡಡೆ, ನಿನಗೆ ವೀರಬಾಹುಕನಾಣೆ,
ಕದ್ದು ಸುಡಬಂದೆ ನಿನ್ನ।
ನಿಟ್ಟೆಲುವ ಮುಱುವೆನೆಂದುರವಣಿಸಿ, ಜಱೆಯುತ್ತ,
ದಟ್ಟಿಸುತ ಬಂದು, ಹಿಡಿದಿರ್ದ, ಕಿಚ್ಚಂ ಕೆದಱು
ಮುಟ್ಟಿಗೆಯ ಮೇಲಿರ್ದ, ಸುತನ ಹಿಂಗಾಲ್ವಿಡಿದು
ಚಿತೆ. ಸೆಳೆದು ಬಿಸುಟಂ, ಭೂಪನು, ॥ ೨೭ ॥

ಬಿಸುಡದಿರು ಬಿಸುಡದಿರು ಬೇಡಬೇಡಕಟಕಟ
ಹಸುಳೆ ನೊಂದಹನೆಂದು, ಬೀಳ್ವವನನೆತ್ತಿ, ತ
ಕ್ಕೈಸಿಕೊಂಡು, ಕುಲವ ನೋಡದೆ, ಬೇಡಿಕೊಂಬೆನಿವ
ನೆನ್ನ ಮಗನಲ್ಲ ನಿನ್ನ।
ಸಿಸುವಿನೋಪಾದಿ, ಸುಡಲನುಮತವನಿತ್ತು, ರ
ಕ್ಷಿಸು, ಕರುಣಿ ಎಂದಡೆಲೆ, ಮರುಳೆ ಹೆಣಸುಟ್ಟುದಂ
ಮಸಣವಾಡಗೆಯ ಹಾಗವನು, ಕೊಟ್ಟಲ್ಲದೇ
ನೆಂದಡಂ ಬಿಡೆನೆಂದನು, ॥ ೨೮ ॥

ಕೊಡಲೇನುವಿಲ್ಲವಿಂದೆನಗೆ, ಲೋಗರ ಮನೆಯ
ಬಡದಾಸಿ, ಕರುಣಿಸೆನೆ, ನಿನ್ನ, ಕೊರಳಿನೊಳಿರ್ದ
ಕಡುಚೆಲುವ ತಾಳಿಯನದನ್ನಡವನಿರಿಸಿ, ನೀ
ಬಿಡಿಸಿಕೋ, ಬಳಿಕವೆನಲು।
ಮಡದಿ ಕರನೊಂದಕಟ, ಪೊಡವಿಪತಿ, ಮಡಿದ ಕೇ
ಡಡಸ್ಸಿತಲ್ಲದಡೆನ್ನ, ಗುಪ್ತಮಂಗಳಸೂತ್ರ
ದೆಡೆಯ ಹೊಳೆಹೊಳೆವೈದೆದಾಳಿಯನಿದಂ ಶ್ವಪಚ
ನೆಂತು ಕಂಡಪನೆಂದಳು ॥ ೨೯ ॥

ವಿಗತಸಪ್ತದ್ವೀಪಪತಿಯ ಬಸುಱಲಿ ಬಂದು
ಮಗನೆ ನಿನಗೊಮ್ಮೆಟ್ಟು ಸುಡುಗಾಡು ಹಗೆಯಾಯ್ತೆ
ಮಿಗೆ ಸಕಲಲೋಕದೊಳು ತನ್ನಾಣೆ ಸಲುವನ ಕು
ಮಾರನೆನಿಸುವ ನಿನ್ನನು
ಬಗೆಯದೀ ಚಂಡಾಲನಾಣೆಯಿಡುವಂತಾಯ್ತೆ
ಜಗದ ನವನಿಧಿಗೊಡೆಯನಾತ್ಮಭವನೆನಿಸಿ ಮು
ಟ್ಟಿಗೆಯ ಸುಂಕದ ಹಾಗವಿಲ್ಲಾಯ್ತೆ ಮಗನೆ ಎಂ
ದಳಲಿದಳು ಹಂಬಲಿಸುತ ॥ ೩೦ ॥

ವನಿತೆಯಳಲಂ ಕೇಳ್ದು ನಡುಗಿ ವಿಶ್ವಾಮಿತ್ರ
ಮುನಿಯೆನಗೆ ಮತ್ತೆ ಮಾಡಿದ ತೊಡಕಿದಾಗದಿರ
ದೆನುತ ಮನದೊಳು ಮಱುಗುತಾವ ಲೋಕದೊಳಾಣೆ
ಸಲುವುದೆನಿಸುವ ಭೂಪನ
ತನಯನೀ ತರಳನೆಲೆ ತರುಣಿ ನೆಲದೆಱೆಯನಿ
ಕ್ಕೆನಲು ಕೊಡಲಿಲ್ಲದಧಿಕರ ಪೆಸಗೊರ್ಳಲು ಬಿಡು
ವೆನೆ ಶೋಕಿಸುವ ಹೊತ್ತು ಹುಸಿದು ಶೋಕಿಸುವೊಡೇ
ನಹುದೆಂದನವನೀಶನು ॥ ೩೧ ॥

ಹಿಂದುಳಿದ ಸಂಪದವನೆಣಿಸುವುದು ಹುಸಿಯಲ್ಲ
ವಿಂದೀಗ ತೋಱಬಪ್ಪುದೆ ಹುಸಿಯದುಂಟೆ ತ
ಪ್ಪೆಂದಡದಕೇನಾತನಾರ ಮಗನಾವ ಪೆಸ
ರಾವ ನಾಡರಸನೆನಲು
ಸಂದ ರವಿಕುಲತಿಲಕನೆನಿಪಾ ತ್ರಿಶಂಕುವಿನ
ನಂದನನಯೋಧ್ಯಾಧಿಪತಿ ಹರಿಶ್ಚಂದ್ರನೆನೆ
ನೊಂದಾತನಂಗನೆ ಕುಮಾರರೇನಾದರೆ
ಲ್ಲಿರ್ದಪರು ಹೇಳೆಂದನು ॥ ೩೨ ॥

ಪೊಡವೀಶ್ವರಂ ಹಿಂದೆ ಹರಸಿ ಹಾಳಂ ಬಿಟ್ಟ
ಹಡೆದ ಸುತನೀತನಾತನ ವನಿತೆ ನಾನೆನಲು
ಮಡದಿ ಕಾರಣವಾವುದೀ ತನಯನೆಂದಡೆ
ಮ್ಮಿಬ್ಬರಂ ಮಾಱುಗೊಂಡ |
ಒಡೆಯನರಮನೆಗೆ ಹುಲುಹುಳ್ಳಿಯಂ ತಪ್ಪೆನೆಂ
ದಡವಿಗೈದಿದಡಲ್ಲಿ ಕಾಳೋರಗಂ ಕಚ್ಚಿ
ಮಡಿದನೀ ಕಂದನೀ ವಿಧಿಗೆ ಸೇರಿತು ಹರಿ
ಶ್ಚಂದ್ರನಿರವೇನೆಂದಳು || ೩೩ ||

ನುಡಿಯಲಱಿಯದೆ ಸಕಲರಾಜ್ಯಮಂ ಹೋಗಾಡಿ
ಕಡೆಗಧಿಕ ಋಣಿಯಾಗಿ ನೆಲೆಗೆಟ್ಟು ಮಂತ್ರಿವೆರ
ಸಡವಿಗುಱಿಯಾಗಿ ಕೈವಿಡಿದ ಸತಿಪುತ್ರರಂ
ಮಾಱಿ ಸುಕ್ಷೇತ್ರದೊಳಗೆ |
ಕಡೆಗೆ ಚಂಡಾಲಕಿಂಕರನಾಗಿ ದೋಷಕ್ಕೆ
ನಡುಗದೆ ಕುಲಾಚಾರಮಂ ಬಿಟ್ಟು ಜನಕೆ ನಗೆ
ಗೆಡೆಯಾದ ಪಾತಕ ಹರಿಶ್ಚಂದ್ರನವನನೇ
ನೆಂದು ನೆನೆದಪೆಯೆಂದನು, || ೩೪ ||

ಜಡೆವೊತ್ತಡಂ ಹಸಿಯ ತೊವಲುಟ್ಟಡಂ ನಾಡ
ಸುಡುಗಾಡಿನೊಳಗಿರ್ದಡಂ ನರಕಪಾಲಮಂ
ಪಿಡಿದಿರ್ದಡಂ ತಿರಿದು ವಿಷವುಂಡಡಂ ಶವಶಿ
ರೋಮಾಲೆಗಟ್ಟಿರ್ದಡಂ |
ಕಡುಮರುಳ್ ಪಡೆಯ ಸಂಗಡ ಬತ್ತಲಿರ್ದಡಂ
ಮೃಡನಲ್ಲದಖಿಲಲೋಕಕ್ಕೊಡೆಯನಿಲ್ಲೆಂಬ
ನುಡಿಯಂತಿರೆನಗಾ ಹರಿಶ್ಚಂದ್ರನಲ್ಲದಿ
ನ್ನಾರು ಗತಿಮತಿಯೆಂದಳು || ೩೫ ||

ಉಱುವಭಲೆಯುಭಿತ್ತವಚನಂ ಕರ್ಣಪಥದಿನೊಳ
ಗೆಱಗಿ ಚಿತ್ತವನು ತೊತ್ತಳದುಳಿದು ಧೈರ್ಯಮಂ
ಬಱಿಕೈದು ಕರಣಂಗಳಂ ಕದಡಿ ಹೆಮ್ಮೆಯಂ
ಹಱಿದ್ಧಳಲನೊಡೆದೆಬ್ಬಿಸಿ |
ಮಱುಕಮಂ ಮಸೆದು ಕಂಬನಿವೊನಲ ಕೋಡಿಯಂ
ಕೊಱೆದು ಮತಿಗತಿಮಾಯೆಯಂ ತೋಱಿ ಮಿಾಱಿ ನೇ
ಸಱ ಕುಲಜನೋರಂತೆ ಸಿಗ್ಗಾಗಿ ತಾ ಮಾಡಿ
ದಪರಾಧಮಂ ನೆನೆದನು ‖ ೩೬ ‖

ಈ ಸತಿಯನೀ ಶುಚಿಯನೀ ಪತಿವ್ರತೆಯ ನಾ
ನೀಸು ಧಾವತಿಗೊಳಗುಮಾಡಿದೆನು ನೀಚದ್ವಿ
ಜೇಶಂಗೆ ಮಾಱಿ ಮಱೆದೀ ಸುತನನೀ ಸುಖಿಯ
ನೀ ಸೊಬಗ ಸುಕುಮಾರನ |
ಓಸರಿಸದುರಗ ಕೊಲುವಂತೆ ಮಾಡಿದೆನೆಂಬ
ಹೇಸಿಕೆಯ ವಾರಾಶಿ ತುಂಬಿ ತುಳುಕಾಡಿ ಹೊಱ
ಸೂಸುವಳಲಂ ನಿಲಿಸಿ ನಿಲಿಸಲಾಱದೆ ಮಗನ
ಮೇಲೆ ದೊಪ್ಪನೆ ಕೆಡೆದನು ‖ ೩೭ ‖

ತನಗೆ ಹೊಯ್‌ಕೈಯಪ್ಪ ಭೂಭುಜರನೋಲೈಸಿ
ಧನವನಾರ್ಜಿಸಿ ತಂದು ಸೆಱೆಯ ಬಿಡಿಸುವನೆಮ್ಮ
ಜನಪನೆಂದಾನಿರಲು ಮಾದಿಗಂಗಾಳಾಗಿ
ಸುಡುಗಾಡ ಕಾವ ಭಾಗ್ಯ |
ನಿನಗಾಯ್ತೆ ಭೂಪಾಲ ಎಂದು ದುಃಖಕ್ಕೆ ಪು
ತ್ರನ ಶೋಕದುರಿಗೆ [1]ತನು ಹೇವರಿಸಿ ವನಿತೆ ತಾ
ಮನನೊಂದು ಬೆಂದು ಬೆಱಗಾಗಿ ಚಿಂತಿಸುತ[1] ತೂ
ಕದ ಕೋಲ ತೊಲೆಯಾದಳು ‖ ೩೮ ‖

---

[1] ಸರಿಯಾಗಲೆರಡಕ್ಕಲ್ಲ | ದನಿಮಿತ್ತ ವಚನದ ಫಲಂ ಮಱೆದು ವನಿತೆ (ಕ.ಖ.ಗ.)

ಪ್ರಕಟರಾಜ್ಯಭ್ರಷ್ಟನಾಗಿ ಚಂಡಾಲಸೇ
ವಕನಾದ ಪಾಪಿಯಂ ನೀಚಸ್ಥನನ್ಯೂನಪಾ
ತಕನನೆನ್ನಂ ಪೋಲ್ತು ಕೆಡದೆ ನಿಮ್ಮಜ್ಜ ತ್ರಿ
ಶಂಕುಭೂವರಸಂದದಿ।
ಸಕಲರಾಜ್ಯಕ್ಕೊಡೆಯನಾಗದಿರನೀ ಕುಮಾ
ರಕನೆಂಬ ಸಂಬುಗೆಯುಳ್ಳಾನಿರಲು ಕಂದ ನೀ
ನಕಟ ನಿಷ್ಕಾರಣಂ ಮಡಿವರೇ ತಂದೆ ಎಂ
ದಳಲತೊಡಗಿದನರಸನು, ॥ ೩೯ ॥

ಮುಂದೆ ನೀನಾಳಲಿಹ ಧರೆಯನನ್ಯರಿಗಿತ್ತ
ನೆಂದು ನುಡಿಸೆಯೊ ಮತ್ತದಲ್ಲದೆಮ್ಮಿಬ್ಬರಂ
ತಳಿದು ಲೋಗರಿಗೆ ಮಾಱಿದನೆಂದು ನುಡಿಸೆಯೋ
ಚಾಂಡಾಲಸೇವೆಮಾಡಿ।
ನಿಂದೆಯಿಲ್ಲದ ಸೂರ್ಯಕುಲಕೆ ಕುಂದಂ ತಂದ
ನೆಂದು ನುಡಿಸೆಯೊ ನುಡಿಯದಿಹ ಹದನನಱುಪ ಬೇ
ಕೆಂದೊಱಲಿ ಬಾಯ್ವಿಟ್ಟು ಕರೆದು ಹಾರಿದನು ಸುತ
ನಲ್ಲಿ ಮಾಱುತ್ತರವನು, ॥ ೪೦ ॥

ಅರಿರಾಯರೊಳು ಕಾದಿ ಮಡಿದಾತನಲ್ಲ ಮುನಿ
ವರರ ಯಾಗವ ಕಾದು ಮಡಿದಾತನಲ್ಲ ದೇ
ವರಿಗೆ ಹಿತವಾಗಿ ಮಡಿದವನಲ್ಲ ಮಾಂಸದಾ
ನವ ಬೇಡಿದಗ್ಗೊಡಲನು।
ಅರಿದರಿದು ಕೊಟ್ಟು ಮಡಿದವನಲ್ಲ ಹುಲ್ಲಿಯಂ
ತರಹೋಗಿ ಕಾಡೊಳಗೆ ಬಡಹಾವು ಕಚ್ಚಿ ಮುನಿ
ವರಿಗೆ ನಗೆಗೆಡೆಯಾಗಿ ನಿಷ್ಕಾರಣಂ ಮಡಿವ
ರೇ ಕಂದ ಹೇಳೆಂದನು, ॥ ೪೧ ॥

ಮೇಗೆ ಮಗನರಸಾಗಬೇಕೆಂಬ ಮಱುಕದಿಂ
ಯಾಗಕ್ಕೆ ಸುತನನರಿದಿಕ್ಕಲಾಱದೆ ಲೋಭಿ
ಯಾಗಿ ಮುನಿಪುತ್ರನಂ ಮಾಱುಗೊಂಡಿತ್ತನೆಂ
ಬಪಕೀರ್ತಿಯೇ ಉಳಿದುದು|
ಲೋಗರ ಮಗನನಿಕ್ಕಿ ನೆಲೆಯ ನೋಡಿದನಕಟ
ಸಾಗುದುರೆಗಡಕಿದನು ಹುಲ್ಲನೊಣಗಿದ ಹಣ್ಣ
ಕಾಗೆ ಕದುಕಿತ್ತೆಂದು ಸಂದ ಜನ ನಿಂದೆಗೆ
ಯ್ವಂಡವಾಯ್ತೆನಗೆಂದನು ॥ ೪೨ ॥

ಸುತನ ರೂಪಿನ ಸೊಬಗನಂಗಸುಕುಮಾರ್ಯದು
ನ್ನತಿಯ ಬಾಲ್ಯದ ಚೆಲುವನೆಲ್ಲಾ ಕಳಾಪ್ರವೀ
ಣತೆಯ ಗರುವಿಕೆಯ ಗಾಡಿಯ ಧೃತಿಯನೊಟ್ಪಜೆಯ
ನಳವಟ್ಟ ನುಡಿಯ ಚದುರ|
ನುತಲಕ್ಷಣಾವಳಿಯನಧಿಕಗುಣಗಣವನಾ
ಯತಿಗೆಟ್ಟು ನೆನೆದು ಶೋಕಿಪೆನೆಂದಡಾ ಕಲ್ಪ
ಶತವೆಯ್ದೆ ದರಸ ದುಃಖವನು ಸಂತೈಸಿಕೊಂ-
ಡೆನ್ನ ನವಧರಿಸೆಂದಳು ॥ ೪೩ ॥

ಪುದಿದಿರುಳು ಕಡೆಗಾಣ್ಬ ಕುಱುಹಾಗುತಿದೆ ಸೂರ್ಯ
ನುದಯಿಸಿದನಾದಡೆನ್ನವರೆನ್ನ ನಱಸಿ ತಳು
ವಿದಳೆಂದು ಕೊಲ್ಲದಿರರೀ ಕುಮಾರನನೀಗ
ದಹಿಸಬೇಕರಸ ಎಂದು|
ಸುದತಿ ನುಡಿಯಲು ನುಡಿದನವನೀಶ ತೆಱೆಯನಿ
ಕ್ಕದೆ ಸುಡಲ್ ಬಾರದುಳ್ಳಡೆ ಕೊಡಿಲ್ಲದಡೆ ಬೇ
ಗದಿ ಹೋಗಿ ನಿನ್ನೊಡೆಯನಂ ಬೇಡಿ ತಾ ತಾರ
ದಿರೆ ಸುಡಲ್ಬೇಡೆಂದನು ॥ ೪೪ ॥

ಒಡೆಯರೀವವರಲ್ಲವೆನೆ ಬೇಡಿ ನೋಡಿ ಕೊಡ
ದಡೆ ಋಣಂಬಡು ಋಣಂ ಪುಟ್ಟದಿರ್ದಡೆ ಸುಡುವ
ಗೊಡವೆ ಬೇಡೆನ್ನೆಗಂ ಬಂದನಿತು ಬಕ್ಕೆಂದು
ತರುಣನುಟ್ಟುದನು ಕೊಂಡು ।
ಪೊಡವೀಶ್ವರಂ ತಿರುಗಿ ತನ್ನ ಕಾಪಿನ ಗುಡಿಗೆ
ನಡೆಗೊಂಡನತ್ತಲಿತ್ತಲ್ ಪುರಕೆ ಬರುತಿಪ್ಪ
ಮಡದಿಗೆಡೆವಟ್ಟೆಯೊಳು ಬಂದ ಸಂಕಟವನಿ
ನ್ನಾವ ಜೀವರು ಕೇಳ್ವರು ॥ ೪೫ ॥

11.2.1951

ಮುಂದೆ ಭೂಪನ ಸತಿಗುಪದ್ರವಂ ಮಾಡಬೇ
ಕೆಂದು ಕೌಶಿಕಮುನೀಂದ್ರಂ ನೆನೆದು ಚಿಂತಿಸು
ತ್ತೊಂದುಪಾಯಂಗಂಡು ಚೋರರಂ ಕೆಲಬರಂ
ನಿರ್ಮಿಸುತವರ್ಗೆಂದನು ।
ಇಂದು ನೀವೀ ಪುರವನಾಳ್ವರಸನಣುಗನಂ
ಕೊಂದಾಕೆ ಬಪ್ಪ ಬಟ್ಟೆಯೊಳಿರಿಸಿ ಬನ್ನಿ ಹೋ
ಗೆಂದು ಬೆಸಸಲು ಯತಿಪನಾಜ್ಞೆಯಿಂದವಧರೆ
ಯ್ತೆಂದು ಪೊಳಲಂ ಸಾರ್ದರು ॥ ೪೬ ॥

ಚೋರರೊಳಪೊಕ್ಕು ಮಿಕ್ಕಾ ಪುರದ ಭೂಪನ ಕು
ಮಾರನಂ ಕಂಡೋಡಿಬಂದು ಗೊಂದಿಯೊಳಲಂ
ಕಾರಮಂ ಕೊಂಬ ಭರದಿಂ ಕೊರಳನರಿಯಲಾ
ಶಿಶುವೊಱಲಲಾ ದನಿಯನು ।
ದೂರದಿಂ ಕೇಳ್ದೆನ್ನ ಮಗನಾಗದಿರನೆನು
ತ್ತಾರೋ ನಿರೋಧಿಸುವರೆಂದೋಜೆ ಹುಟ್ಟದವಿ
ಚಾರದಿಂ ಹರಿದಳೆಂಬಾಗಳತಿದುಃಖಿಗುಂ
ಟೇ ಬುದ್ಧಿ ಜಗವಱಿಯಲು ॥ ೪೭ ॥

ಸಾರೆ ಬರೆ ಬಿಟ್ಟೋಡಿ ಹೋದ ಚೋರರ ಖಡ್ಗ
ಧಾರೆಯಿಂ ಬಸವಳಿದ ಹಸುಳೆಯಂ ತನ್ನಯ್ಯ ಕು
ಮಾರನೆಂದೇ ಬಗೆದು ಕರೆಕರೆದು ತಲೆದಡವಿ
ತಡವರಿಸಿ ಮೆಯ್ಯುಱುಹನು
ಹಾರ್ವುತಿರೆ ಬಾ[1]ರಿ[1]ಸುವ ಬೊಂಬುಳಿಯ ಕೊಂಬುಗಳ
ಭೇರಿಗಳ ಬೊಬ್ಬೆಗಳ ಕಳಕಳದೊಳಱಿಸಿ ಬಂ
ದಾರುತ್ತ ಹರಿತಂದ ಹಿರಿಯ ಹುಯ್ಯಲ ಭಟರು
ಕಂಡು ಪಿಡಿದರು ಸತಿಯನು ॥ ೪೮ ॥

ಎಲೆಲೆ ರಕ್ಕಸಿಯಾಗದಿರಳಿವಳು ನಾವಿಲ್ಲಿ
ಕೊಲಬೇಡವೀಯಂಗವೆರಸಿ ಕೊಂಡೊಯ್ದು ಭೂ
ತಲಪತಿಗೆ ಕೊಡುವೆವೆಂದಸುವಳಿದ ಹಸುಳೆಯಂ
ಹೊಱಿಸಲ್ಕಾಗೊಸರ್ವ ರಕುತ
ತಲೆಯಿಂದ ಸುರಿದುಟ್ಟ ಸೀರೆ ತೊಪ್ಪನೆ ತೋಯೆ
ಲ್ಪಲಸೆಯಂ ಕಿತ್ತಲಗುಗಳ ನಡುವೆ ಹೆಡಗೈಯ
ಬಲಿದ ನೇಣಂ ಪಿಡಿದು ಜಡಿಜಡಿದು ನಡಸಿ ತಂ
ದರು ರಾಜಬೀದಿಯೊಳಗೆ ॥ ೪೯ ॥

ಎನ್ನ ನಿವರಾಡಿಸಿದಡೇನನಾಡುವೆನೆಂದು
ತನ್ನ ಮನದೊಳು ತಾನೆ ತಿಳಿದು ನಿಶ್ಚಯಿಸಿದಳು
ಮುನ್ನೇಗಳಾವಾವ ದುಃಖವುಂಟವನೆಯ್ದೆ
ಕಂಡೆನುಂಡೆನು ತಣಿದೆನು
ಇನ್ನೇನ ಕಾಣಲಿರ್ದಪೆನರಸ ಕೇಳಿದಡೆ
ನಿನ್ನ ಮಗನಂ ಕೊಂದ ಪಾಪಿಯಾನೆಂದಾಡಿ
[2]ಯನ್ಯಾಯ[2]ದಿಂ ಸಾವೆನೆನುತ ಒರಲ್ದೋಲಗದ
ಗಜಬಜವನೇವೊಗಳ್ವೆನು ॥ ೫೦ ॥

---

[1] ಜಿ (?) [2] ಸನ್ಯಾಂಗ (ಕ.), ಸನ್ಯಂಗ (ಖ.ಗ.ಘ.) ;

ಅಲ್ಲಿ ನೋಡಿಲ್ಲಿ ನೋಡತ್ತ ಹರಿಯಿತ್ತ ಹರಿ ,
ಹಲ್ಲಣಿಸು ತುರಗಮಂ ಕೈದುಗೊಳ್ಳೂರಮನೆ
ಯೆಲ್ಲವಂ ಸೋದಿಸುವುದೂರ ದಾರಿಗಳಲ್ಲಿ ,
ಕಂಡಿರಾಡಡೆ ಕಳ್ಳರ
ಕೊಲ್ಲು ತಿವಿ [1]ತಿದಿ[1]ಯನುಗಿಯೆಂಬ ಕಳಕಳರವದ ,
ಘಲ್ಲಣೆಯ ಭಟರ ತಿಂತಿಣಿಯೊಳುಪ್ಪರಿಗೆ ಜಡಿ
ದಲ್ಲಾಡುವಂತೋಲಗಂಗೊಟ್ಟು ಕೋಪಾಗ್ನಿ
ರೂಪಾದ ಭೂಪನಿರಲು , || ೫೧ ||

ಹಸುಳೆಯಂ ಕದ್ದು ಕೊಂಡೊಯ್ದು ನೋಯಿಸಿದ ರ
ಕ್ಕಸಿಯ ಹಿಡಿತಂದೆವವಧರಿಸೆನಲು ಕಂಡು ಶಂ
ಕಿಸುತ ನೀನಾರೆತ್ತಣವಳೇಕೆ ಕೊಂದೆ ಸುಕು
ಮಾರಕನನೆಂದರಸನು
ಬೆಸಗೊಳಲು ದನುಜೆಯಲ್ಲಾಂ ಮನುಜೆಯಾನರ್ಥ
ವಿಷಯದಾಪೇಕ್ಷೆಯಿಂ ಕೊಂಡೊಯ್ದು ಕೊಂದೆನೀ
ಸಿಸುವ ನೀನೊಲಿದಂತೆ ಮಾಡೆನ್ನನೆಂದಳಾ
ರಾಣಿ ವಸುಧಾಧಿಪತಿಗೆ , || ೫೨ ||

ಹೆದಱದಿರು ತೆಕ್ಕದಿರು ಅಂಜದಿರು ಲೋಗರಿ
ಟ್ಟುದೊ ನಿನ್ನ ಕೃತಕವೋ ಹೇಳು ಧರ್ಮಾಧಿಕರ
ಣದವರಂ ಕರಸುವೆಂ ನುಡಿಸುವೆಂ ಕಾವೆನೆಂ
ದವನಿಪಂ ಬೆಸಗೊಂಡಡೆ
ಇದಕಿನ್ನು ಧರ್ಮಾಧಿಕರಣವೇಗುವುದು ಕೊಂ
ದುದು ದಿಟಂ ಸತ್ತ ಶಿಶು ಕೈಯಲಿದೆಯಿದಕೆ ತ
ಕ್ಕುದನೀಗ ಕಾಂಬುದೆಂದಾಡಿದಳು ಜೀವದಾ
ಸೆಯನೇನುವಂ ಹಾರದೆ , || ೫೩ ||

---
[1] ಕಿವಿ (ಗ.ಪ.)

ಕೊಂದೆ ಕೊಂದೆಂ ಕೊಂದೆನೆಂದು ತನ್ನಿಂದ ತಾ
ನೆಂದಡಿನ್ನೇಕೆ ಲೋಕದ ಮಾತು ಕೊಂದರಂ
ಕೊಂದು ಕಳೆವುದೆ ಧರ್ಮ ಜಗವರ್ತಿಯಂ ಹೊತ್ತಿ
ಸೆಳೆಹೂಟೆಯಂ ಹೂಡಿಸು ।
ಸಂದುಸಂದಂ ಕಡಿಸು ಕಿವಿಮೂಗನರಿ ಬಹಳ
ದಿಂದ ತಿವಿಯೆಂದೊಬ್ಬರೊಂದೊಂದನೆಂದುದಾ
ಮಂದಿ ತನತನಗೆ ನುಡಿಯುತ್ತಿರಲು ವೀರಬಾ
ಹುಕನ ಕರಸಿದನರಸನು ॥ ೫೪ ॥

ಭೂಸುತ ಕುಮಾರನಂ ದಹಿಸಿ ದೂ[1]ವೆ[1]ಯ ಕೆಲದೊ
ಳೀ ನರಕಿ ವನಿತೆಯನನಾಮಿಕನ ಕಯ್ಯೊಳನು
ಮಾಸವಿಲ್ಲದೆ ಕೊಲಿಸು ಹೋಗೆಂದು ವೀರಬಾ
ಹುಕನ ಕೈಯಲಿ ಕಳುಹಲು ।
ಏನೆಂದುದಂ ಮಾಳ್ಪೆನೆಂದು ಸುಡುಗಾಡನ
ತ್ಯಾನಂದದಿಂ ಕಾವ ಛಂ[2]ದು[2]ಗನ ಕೈಯೊಳೀ
ಹೀನವನಿತೆಯ ಕೊಲಿಸುವೆಂ ಬೇಗ ಕರೆಯೆನ
ಲ್ಕರರೆ ಭೂಪಂ ಬಂದನು ॥ ೫೫ ॥

ವಸುಧಾಧಿಪತಿಯ ನೇಹದ ಮಗನ ಕೊಂದ ರ
ಕ್ಕಸಿಯಿವಳನಾ ರುದ್ರಭೂಮಿಯೊಳಗೆಯ್ದೆ ತ
ಪ್ಪಿಸದೆ ಕೊರಳಂ ಕೊಯ್ದು ಬಿಸುಡೆಂದು ಬೆಸನ ಕೊಡ
ಲಡಸಿ ಮುಂದಲೆಯ ಪಿಡಿದು ।
ಕುಸುಕಿ ಕೆಡೆಮೆಟ್ಟಿ ಕೈಗಳ ಸೇದಿ ಬೆಂಗೆ ಬಾ
ಗಿಸಿ ಬಿಗಿದು ಹೆಡಗಯ್ಯನೇಣಿಂದ ಹೊಡೆದು ದ
ಟ್ಟಿಸಿ ಪಾಪಿ ಹೊಲತಿ ನಡೆನಡೆಯೆಂದು ನಡಸಿ ತಂ
ದಂ ತನ್ನ ಶವಗದೆಡೆಗೆ ॥ ೫೬ ॥

---

[1] ಹೆ (ಕ.ಖ.ಗ.) ; [2] ಡಿ (ಗ.ಪ.)

೯. ವಿಶ್ವೇಶ್ವರಸಾಕ್ಷಾತ್ಕಾರ

ಇಂದೆನ್ನ ಕುಲಜನೆನಿಸುವ ಹರಿಶ್ಚಂದ್ರನಂ,
ಹೆಂದದ ಚತುರ್ದಶಜಗಂಗಳಱಿವಂತು ತರು
ಣೇಂದುಧರನಹ ವಿಶ್ವಪತಿ ಮೆಱೆವ ಸಂಭ್ರಮದ
ಸಡಗರವ ನೋಳ್ಪೆನೆಂದು|
ಕುಂದದುದ್ಭವನೇಱಿ ನಿಂದಿರ್ದನೋ ಎನಿ
ಪ್ಪಂದದಿಂದುದಯಗಿರಿಶಿಖರಕ್ಕೆ ರಾಗದಿಂ
ಬಂಧನಂಬುಜಮಿತ್ರನೆಂದೆನಿಪನಪವಿತ್ರ
ತಿಮಿರಪಟಲಾಮಿತ್ರನು, ||೧||

ಹೆಡಗಯ್ಯ ಬಿಗಿದ ನೇಣಂ ಕೊಯ್ದು ಬಿಸುಟು ನಿಡು
ದಡದಲ್ಲಿ ಮೂಡ ಮುಂತಾಗಿ ಕುಳ್ಳಿರಿಸಿ ಹಿಂ
ದಡದಲ್ಲಿ ಕುಸಿದು ನೀಡಡಿಯಿಟ್ಟು ನಿಂದು ಖ
ಡ್ಗವ ಸೆಳೆದು ಜಡಿದು ನೋಡಿ|
ಹೆಡತಲೆಗೆ ಮೋಹಿ ಕೈಯೆತ್ತಿ ಕಂಧರ ಹಱಿಯೆ
ಹೊಡೆಯಲನುವಾದೆನನುವಾದೆನನುವಾಗಾಗು,
ಮಡದಿ ನೆನೆ ನಿನ್ನ ದೈವವನು ಬಿಡದೆನ್ನೊಡೆಯ
ನಂ ಹರಸು ಹರಸೆಂದನು, ||೨||

ಆ ಹೊಯ್ದನಾ ಹೊಯ್ದನೆಲೆಲೆ ಶಿವಶಿವ ಅಷ್ಟ,
ದೇಹಿ ನೀನೇ ಶರಣು ರಕ್ಷಿಸಬಲ್ಲೆಯೆನ್ನುದು
ರ್ದೇಹಿ ವಿಶ್ವಾಮಿತ್ರ ಪಾಪಿ ಇನ್ನಾದಡಂ ಸತಿಯ
ಕೊಲೆಯಂ ನಿಲಿಸಲು|
ಹೋಹುದೇಸೆಂದೋವಿ ಬೇಡಿಕೊಳುತಂ ಸುರ
ವ್ಯೂಹಮಂಬರದಲ್ಲಿ ಹೂಮಳೆಗಳಂ ಪಿಡಿದು,
ಮೋಹರಂಬೆತ್ತು ನೋಡುತ್ತಿರಲು ನಾರಿ ಹರ,
ಕೆಗ್ಗಳನವಧರಿಸೆಂದಳು, ||೩||

ಬಲಿದ ಪದ್ಮಾಸನಂ ಮುಗಿದಕ್ಷಿ ಮುಚ್ಚಿದಂ
ಜಲವೆರಸಿ ಗುರುವಸಿಷ್ಠಂಗೆಱಗಿ ಶಿವನ ನಿ
ರ್ಮಲರೂಪ ನೆನೆದು ಮೇಲಂ ತಿರುಗಿ ನೋಡಿ ಭೂ
ಚಂದ್ರಾರ್ಕತಾರಂಬರಂ
ಕಲಿ ಹರಿಶ್ಚಂದ್ರರಾಯಂ ಸತ್ಯವೆರಸಿ ಬಾ
ಳಲಿ ಮಗಂ ಮುಕ್ತನಾಗಲಿ ಮಂತ್ರಿ ನೆನೆದುದಾ
ಗಲಿ ರಾಜ್ಯದೊಡೆಯ ವಿಶ್ವಾಮಿತ್ರ ನಿತ್ಯನಾ
ಗಲಿ ಹರಕೆ ಹೊಡೆಯೆಂದಳು ॥ ೪ ॥

ಹರಕೆಯಂ ಕೇಳಿ ಹವ್ವನೆ ಹಾಱಿ ಬೆಱಗಾಗಿ
ಮರವಟ್ಟು ನಿಂದು ಭಾಪುರೆ ವಿಧಿಯ ಮುಳಿಸೆ ಹೋ
ದಿರುಳಿನ್ನ ಸುತನ ದುರ್ಮರಣಮಂ ತೋಱಿ ಕೈ
ಯೊಡನೆ ಮತ್ತೀಗಳೆನ್ನ
ವರಸತಿಯ ತಲೆಯನಾನೆನ್ನ ಕೈಯಾರೆ ಪಿಡಿ
ದರಿನಂತೆ ಮಾಡಿದೆಯಿದಕ್ಕೆ ನಾನಿನಿತು ಹೇ
ವರಿಸುವವನಲ್ಲ ಪತಿಯಾಜ್ಞೆಯುಳಿದಡೆ ಸಾಕೆ
ನುತ್ತ ಕೊಲಲನುವಾದನು ॥ ೫ ॥

ಮನದ ಶಂಕೆಯನಳಿದು ಹೊಡೆಯಲನುವಾದ ಭೂ
ಪನ ಭಾವಮಂ ಕಂಡು ಹೊಡೆಯಬೇಡೆನ್ನ ನಂ
ದನೆಯರಂ ಮದುವೆಯಾದಡೆ ಸತ್ತ ಮಗನನೆ
ತ್ತುವೆನಿವಳ ತಲೆಗಾವೆನು
ವಿನಯದಿಂ ಕೊಂಡ ಧನಮುಂ ಕೊಟ್ಟು ನಿನ್ನ ಬಂ
ಧನಮೋಕ್ಷಮಂ ಮಾಡಿ ರಾಜ್ಯಮಂ ಪೊಗಿಸಿ ಮು
ನ್ನಿನ ಪರಿಯಲಿರಿಸುವೆಂ ಕೇಳೆಂದನಂಬರದೊ
ಳಿದ್ದು ವಿಶ್ವಾಮಿತ್ರನು ॥ ೬ ॥

ತಿರುಗಿ ಮೇಲಂ ನೋಡಿ ಕಂಡಿದೇಂ ಮುನಿ ಸಿಮ್ಮ
ಹಿರಿಯತನಕೀ ಮಾತು ಯೋಗ್ಯವೇ ಕೇಳೆನ್ನ
ಸಿರಿಪೋದಡೇನು ರಾಜ್ಯಂ ಪೋದಡೇನು ನಾ
ನಾರ ಸಾರಿರ್ದಡೇನು|
ವರಪುತ್ರನಸುವಳಿದು ಪೋದಡೇಂ ನಾನೆನ್ನ
ತರುಣಿಯಂ ಕೊಂದಡೇಂ ಕುಂದೆ ಸತ್ಯವನು ಬಿ
ಟ್ಟಿರನೆನಿಸಿದಡೆ ಸಾಕು ಎಂದೆತ್ತಿ ಹಿಡಿದ ಖ
ಡ್ಗವ ಜಡಿಯುತಿಂತೆಂದನು ||೭||

ಎನ್ನ ದುಷ್ಕರ್ಮವಶದಿಂದಾದ ಕರ್ಮವೆಂ
ದಿನ್ನೆಗಂ ಬಗೆದೆನಾನಿಂದುತನಕಂ ಕಡೆಗೆ
ನಿನ್ನ ಗೊಡ್ಡಾಟವೇ ಹೊಲೆಯನಾದವನಿನ್ನು
ಸತಿಗಿತಿಯ ಕೊಲೆಗೆ ಹೇಸಿ|
ಬೆನ್ನೀವೆನೇ ಇದು ಕ್ರೋಱು ಸಿಕ್ಕಿಸಬಂದ
ಗನ್ನಗತಕಕ್ಕೆ ಸೆಡೆವೆನೆ ಸಡಿಫಡೆನುತಾರ್ದು
ನನ್ನಿಕಾಱಂ ವಧುವನೆಲೆಲೆ ಶಿವಶಿವ ಮಹಾ
ದೇವ ಹೊಡೆದಂ ಹೊಡೆದನು ||೮||

ಹೊಡೆದ ಕಡುಗದ ಬಾಯಕಡೆಯ ಥೊಡೆಗಳನಾಂತು
ಮಡದಿಯೆಡೆಗೊರಳ ನಡುವಡಸಿ ಮೂಡಿದನು ಕೆಂ
ಜಡೆಯ ಶಶಿಕಳೆಯ ಸುರನದಿಯ ಬಿಸಿಗಣ್ಣ ಫಣಿ
ಕುಂಡಲದ ಪಂಚಮುಖದ|
ಎಡದ ಗಿರಿಜೆಯ ತಳಿತ ದಶಭುಜದ ಪುಲಿದೊಗಲ
ನುಡಿಗೆಯ ಮಹಾವಿಷ್ಣುನಯನಸವೇಱಿಸಿದ ಮೆ
ಲ್ಲಡಿಯ ಕಾಶೀರಮಣ ವಿಶ್ವನಾಥಂ ಸುರರ
ನೆರವಿ ಜಯಜಯವೆನುತಿರೆ ||೯||

ಮುರಹರಂ ಬಂದನಬ್ಜಾಸನಂ ಬಂದನಮ
ರರ ವರಂ ಬಂದನಗಜಾಪಿತಂ ಬಂದನೀ
ಶ್ವರಸುತಂ ಬಂದನೀರಾಱು ರವಿಗಳು ಬಂದ
ರಿಕ್ಷು ಕೋದಂಡ ಬಂದ।
ಸುರುಚಿರ ನವಗ್ರಹಂಗಳು ಬಂದರೆಯ್ದುವವ
ಸರದೊಳವರಿವರೆನ್ನಲೇಕಿನ್ನು ಸರ್ವದೇ
ವರು ಬಂದರಪ್ರತಿಮದೇವಾಧಿದೇವ ಪಂ
ಪಾವಿರೂಪಾಕ್ಷನೆಡೆಗೆ । ॥ ೧೦ ॥

ಕುಡಿದೌಷಧಂ ಬಾಯ್ಗೆ ನಿಗ್ರಹಂ ಮಾಡಿ ತಾ
ಳ್ದೊಡಲಿಂಗೆ ಸುಖವನೀವಂತೆ ಲೋಕದ ಕಣ್ಗೆ
ಕಡುಮುಳಿದರಂತೆ ತೋಱಿಸಿ ಸತ್ಯಶುದ್ಧವ
ಪ್ಪನ್ನೆಗಂ ಕಾಡಿ ನೋಡಿ ।
ಕಡೆಯೊಳು ಹರಿಶ್ಚಂದ್ರರಾಯಂಗೆ ಗಣವೆರಸಿ
ಮೃಡನನೆಳತಂದಿತ್ತು ಕೀರ್ತಿಯಂ ಮೂಜಗದ
ಕಡೆಗೆ ಹರಹಿದ ಮುನಿವರೇಣ್ಯ ವಿಶ್ವಾಮಿತ್ರ
ಬಂದನು ವಸಿಷ್ಠ ಸಹಿತ ॥ ೧೧ ॥

ನೆನೆದು ಚಾಂಡಾಲಕಿಂಕರನಾಗಿ ಹೊಲೆವೇಷ
ವನು ಹೊತ್ತು ಸುಡುಗಾಡ ಕಾದ ಶವಶಿರದಕ್ಕಿ
ಯನು ಹೇಸದುಂಡು ಜೀವಿಸುವ ವರಪುತ್ರನಳಿ
ದುದನು ಕಣ್ಣಾರೆ ಕಂಡು ।
ಘನಪತಿವ್ರತೆಯಪ್ಪ ನಿಜಸತಿಯ ಕೊಂದ ನೀ
ಚನು ಮೂರ್ಖನಾನೆನ್ನ ತಾವಿಂಗಿದೇಕೆ ಪಾ
ವನಮೂರ್ತಿ ನೀವು ಬಿಜಯಂಗೆಯ್ದಿರೆಂದಭವ
ನಂಘ್ರಿಯಲ್ಲಿ ಸೈಗೆಡೆದನು ॥ ೧೨ ॥

ಘನ ಸತ್ಯವೇ ಜೀವವೆಂದಿರ್ದ ನಿನ್ನ ಹೊಲೆ
ಯನ ಸೇವೆ ಗುರುಸೇವೆ ಹೊತ್ತ ಹೊಲೆವೇಷ ಪಾ
ವನಪುಣ್ಯವೇಷ ಸುಡುಗಾಡ ರಕ್ಷಿಸುವಿರವು
ತಾ ಯಜ್ಞರಕ್ಷೆಯಿರವು ।
ಅನುದಿನಂ ಭುಂಜಿಸಿ[1]ದ[1] ಶವದ ಶಿರದಕ್ಕಿಯ
ಲ್ಲನ[2]ಪೇಯ[2] ಚಾಂದ್ರಾಯಣಂ ಪುತ್ರನಳಿವು ಜ
ನ್ಮನಿಕಾಯದಳಿವಂಗನಾಹನನ ಮಾಯಾಹ
ನನವಂಜಬೇಡೆಂದನು ॥ ೧೩ ॥

ಏಳು ಭೂರಮಣ ಎಂದಭವ ಪರಸುತ್ತ ಕ
ಣ್ಣಾಲಿಜಲವಂ ತೊಡೆದು ಸಂತೈಸಿ ಭಸಿತಮಂ
ಭಾಳದೊಳಗಿಟ್ಟು ತೆಗೆದಪ್ಪಿ ಕೌಶಿಕನ ಕರೆ
ದೆಲೆ ಮುನಿಪ ಸುಕುಮಾರನ ।
ತೋಳ ಹಿಡಿದೆತ್ತಿ ತಾ ಬೇಗೆಂದೆನಲ್ಕೆ ಮುನಿ
ಪಾಳಕಂ ವಿಷವೇಱಿ ಸತ್ತರಸುಪುತ್ರನಂ
ಏಳೇಳು ಲೋಹಿತಾಶ್ವಾಂಕ ಎನೆ ಬೆಬ್ಬಳಿಸು
ತೆದ್ದನೇವಣ್ಣಿಸುವೆನು ॥ ೧೪ ॥

ಅತಿ ಹುಸಿವ ಯತಿ ಹೊಲೆಯ ಹುಸಿಯದಿಹ ಹೊಲೆಯನು
ನ್ನತಯತಿವರನು ಹುಸಿದು ಮಾಡುವ ಮಹಾಯಜ್ಞ
ಶತವೆಯ್ದೆ ಪಂಚಪಾತಕ ಸತ್ಯವೆರಸಿದ
ನ್ಯಾಯವದು ಲಿಂಗಾರ್ಚನೆ ।
ಶ್ರುತಿಮತವಿದೆನ್ನಾಜ್ಞೆ ನಿನ್ನಂತೆ ಸತ್ಯರೀ
ಕ್ಷಿತಿಯೊಳಿನ್ನಾರುಂಟು ಹೇಳೆಂದು ಪಾರ್ವತೀ
ಪತಿ ಹರಿಶ್ಚಂದ್ರನಂ ತಲೆದಡವಿ ಬೋಳೈಸಿ
ಕೌಶಿಕಂಗಿಂತೆಂದನು ॥ ೧೫ ॥

---

[1] ತು (?). [2] ಪತ್ಯ (?)

ನುಡಿಯೊಳನೃತಂ ತೋಱದಂತೆ ನಿನ್ನ ಲೆಗೆ ನಿಂ
ದಡೆ ಮೆಚ್ಚಿ ಮೇಲೇನ ಕೊಡುವೆನೆಂದೆಂದೆಯದ
ಕೊಡು ಬೇಗದಿಂದ ವಿಶ್ವಾಮಿತ್ರ ಎಂದಡಾ
ನೈವತ್ತುಕೋಟಿ ವರುಷ |
ಬಿಡದೆ ಮಾಡಿದ ತಪಃಫಲದೊಳರ್ಧವನ್ನಾಂತೆ ,
ಕಡುಮುಳಿದು ಕಾಡಿ ನೋಡಿದೆನ್ನು ಮೆಚ್ಚಿದೆನ್ನಿನ್ನು
ಹಿಡಿಯೆಂದುಸಿರ್ದು ಫಲವೆಲ್ಲವಂ ಕೊಟ್ಟನರ
ಸಂಗೆ ಮುನಿಗಳ ದೇವನು || ೧೬ ||

ಪೊಡವಿಯೊಡೆತನದ ಪಟ್ಟವನಯೋಧ್ಯಾಪುರದ ,
ನಡುವೆ ಕಟ್ಟುವೆನೇಳು ನಡೆ ರಥವನೇಱೆಂದು,
ಮೃಡನಸಮಕ್ಷದೊಳು ಕೌಶಿಕನೆನಲು ಕಡೆತನಕ
ಮುಂ ಜೀವಿತವ ಕೊಂಡೆನು |
ಒಡೆಯನುಳ್ಳವನಾನು ಬರಬಾರದಯ್ಯ ನಿ
ಮ್ಮಡಿಗಳಿಗೆ ದಾನವಾಗಿತ್ತ ವಸುಮತಿಯುತ್ತ
ಲಡಿಯನ್ನಿಡುವವನಲ್ಲ ಬೆಸಸಬೇಡಿದನೆಂದು ,
ಭೂನಾಥ ಕೈಮುಗಿದನು || ೧೭ ||

ಆನೇಕೆ ರಾಜ್ಯವೇಕೆಲೆ ಜನಪ ಸತ್ಯಸಂ
ಧಾನಮಂ ನೋಡಲೆಂದುಳ್ಳುದೆಲ್ಲವ ಕೊಂಡ
ಡೇನೆಂಬನೋ ಎಂದು ಕಾಡಿ ನೋಡಿದೆನೈಸೆ,
ಸರ್ವರಾಜ್ಯಂ ನಿನ್ನದು |
ಕೀನಾಶನಂ ಕರೆದು ವೀರಬಾಹುಕನಾಗಿ ,
ಭೂನಾಥನಂ ನಿಲಿಸಿ ಬೇಡಿದರ್ಥವ ಕೊಟ್ಟು
ಸೀನೆ ತಱುಬೆಂದು ಕಳುಹಿದೆನೈಸೆ ಕೃತಕವ
ಲ್ಲೆಂದು ನಂಬುಗೆಯಿತ್ತನು || ೧೮ ||

ಪೊಡವಿಪನ ವಾಕ್ಯದೊಳು ಹುಸಿಯು ನೀಂ ಪಿಡಿದೆಯ್ದಾ
ದಡೆ ನಾನು ಮುನಿತನವನುಳಿದು ನರಶಿರದೊಡ
ಹಿಡಿದು ಮದ್ಯಪಿಯಾಗಿ ತೆಂಕಮುಖವಹೆನೆಂದು
ದೇವಸಭೆಯೊಳಗೆ ನಾನು ।
ನುಡಿದು ಭಾಷೆಯನಿತ್ತೆ ನೀನೆನ್ನ ಭಾಷೆಯಂ
ನಡಸಿ ರಕ್ಷಿಸಿದೆ ಸತ್ಯವ ಮೆಱೆದೆಯೆಂದು ತಲೆ
ದಡವಿ ತನ್ನಂ ಕೊಟ್ಟನೀಶನ ಸಮಕ್ಷದೊಳು ,
ವಾಸಿಷ್ಠನವನಿಪತಿಗೆ, ॥ ೧೯ ॥

ಕರುಣದಿಂ ಧರ್ಮಾರ್ಥಕಾಮಮೋಕ್ಷಂಗಳಂ,
ಸುರಿದು ನಿನ್ನಯ ಪುಣ್ಯಕಥೆ ಸರ್ವಲೋಕದೊಳ
ಗಿರಲಿಯೆಂದಭವನಿಂ, ಬೇಕಾದ ವರವ ನೀಂ ,
ಬೇಡು ಭೂಪಾಲ ಎನಲು ।
ಹರೆಯದೀ ಕಾಶಿಯೊಳು ನಿನ್ನ ಮಂದಿರದ ಮೇ
ಲೆರಡು ಯೋಜನದೊಳೆನ್ನಯ ಕೀರ್ತಿಪುರ ಹೇಮ
ವಿರಚಿತದೊಳಿರಬೇಹುದೆಂದು ಬೇಡಿದಡದಂ,
ಕೊಟ್ಟನಂದಗಜೇಶನು, ॥ ೨೦ ॥

ಹರನ ಸಭೆಯೊಳಗೆ ಮುರಹರನ ಸಭೆಯೊಳಗೆ ವಾ
ಗ್ವರನ ಸಭೆಯೊಳಗೆ ಪವಿಧರನ ಸಭೆಯೊಳಗೆ ದಿನ
ಕರನ ಸಭೆಯೊಳಗೆ ಭಾಸುರಶಿಖಿಯ ಸಭೆಯೊಳಗೆ
ಶಶಿಯೊಂದು ಸಭೆಯ ನಡುವೆ ।
ಪರಮ ಮುನಿಸಭೆಯೊಳಗೆ ವರನೃಪರ ಸಭೆಯೊಳಗೆ,
ಧರಣಿಪನ ಕಥನವೇ ಕಥನ ಮಾತೇ ಮಾತು
ಪರವಿಲ್ಲ ಬೇಱನ್ಯವಾರ್ತೆಗಳು ಹುಗಲಿಲ್ಲ ,
ವೆಂಬಾಗಳೇಪೊಗಳ್ವೆನು ॥ ೨೧ ॥

ಧರೆಯೊಳು ಹರಿಶ್ಚಂದ್ರಚಾರಿತ್ರಮಂ ಕೇಳ್ದ
ನರರೇಳು ಜನ್ಮದಿಂ ಮಾಡಿರ್ದ ಪಾತಕವು,
ತರಣಿಯುದಯದ ಮುಂದೆ ನಿಂದ ತಿಮಿರದ ತೆಱದೆ
ಹರೆಯುತಿಹುದೇಕೆಂದಡೆ।
ಹರನೆಂಬುದೇ ಸತ್ಯ ಸತ್ಯವೆಂಬುದು ಹರನು
ಎರಡಿಲ್ಲವೆಂದು ಶ್ರುತಿ ಸಾಱುತಿರಲಾ ವಾಕ್ಯ
ವರರೆ ನಿರುತವ ಮಾಡಿ ಮೂಜಗಕೆ ತೋಱಿದ ಹ
ರಿಶ್ಚಂದ್ರಕಥೆಗೇಳ್ದಡೆ ॥ ೨೨ ॥

ಅನೃತವಱಿಯದ ಹೊಲೆಯನಂ ಸೆನೆಯೆ ಪುಣ್ಯವೆಂ
ದೆನೆ ಸೂರ್ಯಕುಲಜ ಕಲಿ ದಾನಿ ಸತ್ಯಂ ವಸಿ
ಷ್ಠನ ಶಿಷ್ಯನಧಿಕಶೈವಂ ಕಾಶಿಯೊಳ್ ಮೆಱೆದ
ವೇದಪ್ರಮಾಣಪುರುಷ।
ಘನನೃಪ ಹರಿಶ್ಚಂದ್ರನೆಂದಡಾತನ ಪೊಗಳ್ದು,
ಜನ ಬದುಕಬೇಕೆಂದು ಕಾವ್ಯಮುಖದಿಂ ಪೇಳ್ದ
ನನಪೇಕ್ಷೆಯಿಂದ ಕವಿ ರಾಘವಾಂಕಂ ಮಹಾ
ಲಿಂಗಭಕ್ತರ ಭಕ್ತನು ॥ ೨೩ ॥

ಶಬ್ದಕೋಶ

ಅ

ಅಕ್ಕಱು	೫-೪೧	ಪ್ರೀತಿ
ಅಕ್ಕಾಡು	೬-೯	ಕ್ಷಯಿಸು
ಅಕ್ಕಿಸು	೪-೨೯	ಕುಂದುಮಾಡು
ಅಗಡು	೮-೨	ತುಂಟು
ಅಗಿ	೮-೧೩	ಕಚ್ಚು
ಅಗುರ್ವಿಸು	೮-೧೮	ಭಯಪಡಿಸು
ಅಗ್ಗ	೧-೧೧	ಸಂ.-ಅರ್ಘ ; ಶ್ರೇಷ್ಠ
ಅಗ್ಗಳಿಸು	೨-೧೦	ಹೆಚ್ಚು, ದೊಡ್ಡದು ಮಾಡು
ಅಟ್ಟುಳಿ	೭-೪೪	ತೊಂದರೆ, ಹಿಂಸೆ
ಅಟ್ಟೆ	೮-ರಗಳೆ	ತಲೆಯಿಲ್ಲದ ದೇಹ
ಅಡಕ	೭-೧೮	ಆಧಿಕ್ಯ
ಅಡಗು	೪-೫	ಮಾಂಸ
ಅಡಪು	೭-೧೯	ಅಡವು, ಆಶ್ರಯ
ಅಡಸು	೩-೨೫ ೪-೧೦	ಮೇಲೆ ಬೀಳು, ಅಡಚು, ಚಾಚು
ಅಡುಗಬ್ಬು	೮-೫	ಕಟ್ಟಿಗೆ, ಸೌದೆ
ಅಣಕ	೨-೧೬	ಹಾಸ್ಯ, ನಿಂದೆ, ಕುಚೋದ್ಯ
ಅಣಲ್	೫-೮	ದವಡೆ
ಅಣಿಮಾ	೩-೨೮	ಯೋಗಸಾಧನೆಯಿಂದ ದೊರೆಯುವ ಅಷ್ಟಸಿದ್ಧಿಗಳಲ್ಲಿ ಒಂದು
ಅದಟ	೧-೧೦	ಪರಾಕ್ರಮಶಾಲಿ
ಅದಟು	೧-೧೨	ಪರಾಕ್ರಮ
ಅದ್ದು	೭-೨೮	ಮುಳುಗು
ಅನಾಮಿಕ	೪-೩೫	ಹೊಲೆಯ
ಅನು	೩-೩೫ ೭-೪೬ ೩-೨	ರೀತಿ

ಅನುಗೊಡು	೬-೨೪	ಅವಕಾಶಕೊಡು
ಅನುವಾಗು	೪-೧	ಸಿದ್ಧವಾಗು
ಅನ್ವಯ	೬-೨೧	ವಂಶ
ಅಪ್ಪಯಿಸು	೬-೨೧	ಒಪ್ಪಿಸು
ಅಮ್ಮಾವು	೩-೧೧	ಕಾಡುದನ
ಅರಳ್	೧-೯	ಹೂವು
ಅರಳ ಸರಳ	೪-೧೦	ಕಾಮದೇವ
ಅರಿ	೫-೯, ೮-೭	ಕತ್ತರಿಸು
ಅರಿದು	೨-೪	ಅಸಾಧ್ಯ
ಅರುಣಾಂಬು	೮-೨೦	ರಕ್ತ
ಅಱಿತ	೫-೫	ಬತ್ತಿದ
ಅಱಿತು	೨-೧೩	ಒಣಗಿ, ಆರಿಹೋಗಿ
ಅಱಿಸು	೪-೩	ಹುಡುಕು
ಅಱಿಯಟ್ಟು	೪-೩	ವೇಗವಾಗಿ ಹಿಂಬಾಲಿಸು
ಅಱಿವಳೆ	೫-೨	ಬಿರುಮಳೆ, ಚಚ್ಚುವ ಮಳೆ
ಅಲಗು	೩-೨೯	ಕತ್ತಿ
ಅಲಸು	೫-೨೪, ೭-೪೫	ಹಿಂದೆಗೆ
ಅಲೆ	೯-೧೬	ಪೀಡೆ
ಅವಗಾಹ	೭-೧೩	ಸ್ನಾನ
ಅವತಂಸ	೫-೧೮	ಆಭರಣ
ಅವಧಿ	೭-೨೦	ಗಡುವು
ಅಸವಸ	೭-೪೫	ತ್ವರೆ, ಅವಿಚಾರ
ಅಸವಳಿ	೬-೧೮	ದಿಕ್ಕುಕೆಡು
ಅಸಿ	೬-೧೫	ಕತ್ತಿ
ಅಸು	೫-೩	ಪ್ರಾಣ
ಅಹಗೆ	೪-೪೩	ಹಾಗೆ
ಅಳಲ್	೪-೫	ವ್ಯಥೆ
ಅಳಲಿಸು	೭-೪೦	ವ್ಯಥೆಪಡಿಸು
ಅಳವಟ್ಟು	೮-೬	ರಮ್ಯವಾಗಿ
ಅಳವಡಿಸಿ	೮-೧೪	ತಾಳಿಕೊಂಡು
ಅಳವಿ	೪-೧೧	ಅಳತೆ (ಇಲ್ಲಿ, ಸಮೀಪ)
ಅಳವು	೩-೮	ಸಾಮರ್ಥ್ಯ
ಅಳಿ	೭-೩೭	ನಾಶವಾಗು

ಅಳುಕು	೭-೪೪	ಭಯಪಡು
ಅಳುಪು	೭-೪೭ ೫-೨೫	ಆಶೆಪಡು
ಅಳ್ಳಿಱಿ	೬-೧ ೬-೧೪	ಬಲವಾಗಿ ಇರಿ ಭೇದಿಸಿಕೊಂಡು ಹೋಗು
ಅಳ್ಳೆ	೪-೩	ಪಕ್ಕೆ
ಅಂಚಲ	೩-೩೨	ಬಟ್ಟೆಯ ಸೆರಗು
ಅಂಜುಳಿ	೯-೪	ಬೊಗಸೆ
ಅಂಡಲೆ	೩-೧೩	ತೊಂದರೆ, ಹಿಂಸೆ, ಪೀಡೆ
ಅಂತಸ್ಥ	೩-೧	ಮನಸ್ಸು
,,	೩-೨	ಒಳಗುಟ್ಟು
ಅಂಬರ	೫-೨೫	೧. ಆಕಾಶ, ೨. ಬಟ್ಟೆ
ಅಂಬು	೪-೧೧	ಬಾಣ

ಆ

ಆಜ್ಯ	೪-೩೦	ತುಪ್ಪ
ಆಡಿತು	೨-೨೧	ಆಡಿದುದು
ಆಣೆ	೮-೩೦	ಸಂ.-ಆಜ್ಞೆ
ಆತುರ	೪-೪೨	ಔತ್ಕಂಠ್ಯ
ಆಂತ	೧-೧೫	ಪ್ರತಿಭಟಿಸಿದ
ಆಮ್ರ (ಆಮ್ಲ?)	೪-೪೧	ಹುಳಿ
ಆಯತಿ	೮-೪೩	ವಿಸ್ತಾರ, ಹವಣು
ಆರಯ್	೪-೯ ೪-೧೯	ಪರೀಕ್ಷಿಸು
ಆರಯ್ಕೆ	೮-೪	ವಿಚಾರ, ಯೋಚನೆ
ಆರಾತಿ	೧-೧೨	ಶತ್ರು (ಸಂ.-ಅರಾತಿ)
ಆರು	೮-೪೮	ಗಟ್ಟಿಯಾಗಿ ಕೂಗು
ಆರ್ತ	೫-೨೭ ೮-೨೩	ತೀವ್ರಾಭಿಲಾಷೆ
ಆಱು	೨-೧೬	ಸಮರ್ಥನಾಗು
,,	೨-೧೮	ಬತ್ತು. ಇಲ್ಲದಂತೆ ಆ
ಆಱಿಸು	೪-೫	ಶಾಂತಮಾಡು
ಆಲಿ	೩-೧೪	ಕಣ್ಣುಗುಡ್ಡೆ
ಆಲಿಸು	೫-೩೨	ಕೇಳು

ಆವು	೩-೧೦	ದನ
ಆಶೆ	೧-೯	ದಿಕ್ಕು
ಆಸಱು	೩-೧೨	ಬಳಲಿಕೆ
ಆಸುರ	೩-೧೨	ಅತಿಶಯ
ಆೞ್	೩-೧೮ ೪-೩೧	ಮುಳುಗು

ಇ

ಇಕ್ಕು	೮-೧೯	ಹ.ಗ.-ಇರ್ಕುಂ ; ಇರುವುದು
ಇಕ್ಷು	೯-೧೦	ಕಬ್ಬು
ಇಡುಕುಱು	೬-೨ ೭-೪	ಸಾಂದ್ರತೆ, ದಟ್ಟವಾಗಿರುವಿಕೆ
ಇದ್ದೆಸೆ	೪-೯	ಎರಡು ತುದಿ
ಇನ	೩-೨೭	ಸೂರ್ಯ
ಇಱುಹೆ	೩-೨೦	ಇರುವೆ

ಈ

ಈಡಾಡು	೨-೧೭	ಚಲ್ಲಾಡು, ಬಿಸುಡು
ಈರಾಱು	೯-೧೦	ಹನ್ನೆರಡು
ಈರೇೞ್	೨-೧೪	ಹದಿನಾಲ್ಕು
ಈಂಟು	೭-೪೨	ಕುಡಿ

ಉ

ಉಗ್ಗಡ	೩-೨೮	ಘೋಷ
ಉಗಿ	೪-೫	ಸೆಳೆ, ಸುಲಿ
ಉಗು	೮-೫	ಸುರಿ
ಉಡಿ	೮-೧೦	ಮುರಿ
ಉಡುಗೊಱೆ	೭-೪೭	ಮರ್ಯಾದೆ
ಉತ್ತರಿಸು	೫-೭ ೭-೧	ದಾಟು, ಕಡೆಹಾಯಿ, ನಡಸು
ಉಬ್ಬರ	೫-೧೧ ೫-೩೭	ಆಧಿಕ್ಯ

ಉಭಯಕವಿ	೧-೩	ಎರಡು ಭಾಷೆಗಳಲ್ಲಿ ಎಂದರೆ ಸಂಸ್ಕೃತ ಕನ್ನಡಗಳಲ್ಲಿ ಕವಿ
ಉಮ್ಮಳಿಕೆ	೪-೩೫	ಉದ್ವೇಗ, ಚಿಂತೆ
ಉರವಣಿಸಿ	೪-೭ ೭-೧೧	ವೇಗವಾಗಿ, ತೀವ್ರವಾಗಿ
ಉರವಣೆ	೩-೨೫	ಆಧಿಕ್ಯ
ಉರ್ಚು	೪-೧೦	ಚುಚ್ಚು
ಉರ್ವಿ	೨-೨	ಭೂವಿ
ಉಱುವ	೮-೩೬	ಶ್ರೇಷ್ಠ
ಉಱೆ	೩-೨	ಹೆಚ್ಚಾಗಿ
ಉಲಿ	೪-೨	ಕೂಗು
ಉಲಿಹ	೪-೩೬	ಕೂಗು
ಉಲುಕು	೮-೨೦	ಅದಿರುವುದು
ಉಸಿರ್	೯-೧೬	ಹೇಳು

ಎ

ಎಕ್ಕಲ	೩-೨೦	ಕಾಡುಹಂದಿ
ಎಕ್ಕಟಿ	೬-೨೨	ಏಕಾಂತವಾಗಿ
ಎಕ್ಕೆ	೧-೧೪	ಸಮ
,,	೭-೪೨	ಸಮೂಹ
ಎಡರು	೪-೩೨	ಕಷ್ಟ
ಎಡೆ	೨-೧೨	ಮಧ್ಯ
ಎಡೆಗೆಯ್	೬-೨೪	ಅವಕಾಶಕೊಡು
ಎಡೆಗೊಳ್	೧-೫ ೨-೨	ಉಂಟಾಗು
ಎಡೆವಾಯ್	೧-೫	ನಡುವೆ ಬರು
ಎತ್ತು	೨-೧೩	ಎತ್ತಿಹಿಡಿ, ಮೆಚ್ಚು
ಎಯ್ದೆ	೪-೯	ಚೆನ್ನಾಗಿ
ಎರಳೆ	೩-೨೦	ಜಿಂಕೆ
ಎರೆ	೬-೧೭	ಯಾಚಿಸು
ಎಱಗು	೫-೨	ಮೇಲೆ ಬೀಳು
ಎಲರ್	೪-೧೪	ಗಾಳಿ
ಎವೆ	೩-೨೨	ರೆಪ್ಪೆ
ಎಸಕ	೨-೪	ಕೆಲಸ
ಎಳತಟ	೩-೮	ಎಳೆದಾಟ

ಎಳಲು	೪-೪೫	ನೇತಾಡು
ಎಳಸು	೩-೩೨ ೪-೩೫	ಅಪೇಕ್ಷಿಸು
ಎಳೆಹೂಟೆ	೫-೯ ೮-೫೪	ಉಳುಮೆಯಲ್ಲಿ ಉಪಯೋಗಿಸುವ 'ಹೂಟೆ'

ಏ

ಏಗು	೮-೧೦	ಬೇಯು (?)
ಏಗುವವು	೨-೧೯	ಏನುಮಾಡಬಲ್ಲುವು
ಏಱು	೪-೨೪	ಗಾಯ
ಏವೆನ್	೪-೧೭	ಏನುಮಾಡಲಿ

ಐ

ಐದನ	೪-೨೬	ಇದ್ದಾನೆ
ಐದೆದಾಳಿ	೮-೨೯	ಸುಮಂಗಲಿಯ ತಾಳಿ
ಐಸಲೆ	೪-೪೦	ಅಷ್ಟೇ ಅಲ್ಲವೇ

ಒ

ಒಕ್ಕಲಿಕ್ಕು	೪-೨	ಧ್ವಂಸಮಾಡು
ಒಗಡಿಸು	೫-೨೪ ೭-೩೬	ಅಸಹ್ಯಪಡು
ಒಗೆ	೩-೩೪	ಹುಟ್ಟು, ಉಂಟಾಗು
ಒಗ್ಗು	೬-೨	ಗುಂಪು, ಸಮೂಹ
ಒಟ್ಟಜೆ	೮-೪೩	ಅತಿಶಯ (ಇಲ್ಲಿ, ಪರಾಕ್ರಮ)
ಒತ್ತರಿಸು	೭-೧೬	ಒಂದು ಕಡೆಗೆ ಒತ್ತು
ಒದವಿಸು	೩-೨೫	ಉಂಟುಮಾಡು
ಒಯ್ಯನೆ	೧-೬	ಸಾವಕಾಶವಾಗಿ
ಒರೆದೊರೆ	೧-೧೪	ಸಮಾನ
ಒಱಗು	೫-೪	ಮಲಗು, ಬಾಗು
ಒಱೆ	೮-೧೦	ಸ್ರವಿಸು, ಉಕ್ಕು
ಒಱೆಗಟ್ಟು	೭-೪೫	ಕತ್ತಿಕಟ್ಟು, ಎದುರುಬೀಳು
ಒಸರ್	೮-೧೮	ಸ್ರವಿಸು
ಒಸೆ	೧-೪ ೨-೧೨	ಪ್ರೀತಿಸು, ಪ್ರಸನ್ನವಾಗು
ಒಂದು	೪-೧೨	ಸೇರು

ಓ

ಓ	೪-೪೨	ಪ್ರೀತಿಸು
ಓಜೆ	೮-೪೭	ಕ್ರಮ (ಇಲ್ಲಿ, ವಿವೇಚನೆ)
ಓಡು	೯-೧೯	ತಲೆಬುರುಡೆ
ಓರಗೆ	೮-೫ ೧-೧೪	ಸಮಾನ
ಓರಂತೆ	೪-೪೬	ಚೆನ್ನಾಗಿ
ಓಲೈಸು	೫-೩೨	ಸೇವಿಸು
ಓವು	೨-೫ ೩-೫	ಪ್ರೀತಿಸು

ಔ

ಔರ್ವಾನಲ	೧-೧೩	ಸಮುದ್ರದಲ್ಲಿ ಅಡಗಿರುವ ಬೆಂಕಿ

ಕ

ಕಕ್ಕುಲತೆ	೫-೪೧	ಸಂದೇಹ, ಚಿಂತೆ
ಕಗ್ಗನೆ	೪-೨೭	ಕಪ್ಪನೆ
ಕಟಕ	೩-೩೯	ರಾಜಧಾನಿ
ಕಟವಾಯಿ	೩-೨೦	ಬಾಯಿಯ ಕೊನೆಯ ಭಾಗ
ಕಟ್ಟಬಿಗೆಂಡ	೬-೧೪	ಕಟರೆಯಾಗುವವರೆಗೂ ಬಿಡದ (?)
ಕಡಗು	೩-೧೮	ಉತ್ಸಾಹಗೊಳ್ಳು
ಕಡವರ	೪-೩೧	ಚಿನ್ನ, ನಿಧಿ
ಕಡವೆ	೩-೧೫	ಒಂದು ಮೃಗ
ಕಡುಕೈ	೪-೫	ಸಾಮರ್ಥ್ಯವನ್ನು ತೋರು
ಕಡುಪು	೮-೨೫	ತೀವ್ರತೆ
ಕಡೆಗಣಿಸು	೫-೨೮ ೪-೨೩	ತಾತ್ಸಾರಮಾಡು
ಕಡ್ಡಣಿಗೆ	೭-೩೧	ಜಡೆಗಟ್ಟು
ಕದಪು	೩-೩೪	ಕೆನ್ನೆ
ಕದಂಬ	೫-೧೭	ಸಮೂಹ
ಕದುಕು	೮-೪೨	ಕಚ್ಚು
ಕಪ್ಪಡ	೭-೫೧ ೬-೪	ಸಂ. ಕರ್ಪಟ; ಬಟ್ಟೆ
ಕಮಠ	೧-೮	ಆಮೆ

ಕರಕರಿಸು	೮-೨೨	ಹಿಂಸಿಸು
ಕರಣ	೬-೧೬	ಇಂದ್ರಿಯ
ಕರ್ದುಕು	೬-೩	ಕಚ್ಚು
ಕಲಿ	೪-೫ ೭-೩೧	ಶೂರ
ಕಳನು	೧-೧೧	ಯುದ್ಧರಂಗ
ಕಳವಳಿಗೆಯ್	೪-೨	ಸೀಳು (?)
ಕಾಣುಹ	೪-೨೫	ಕಾಣುವುದು
ಕಾಯ್ಪು	೧-೧೨	ಕೋಪ
ಕಾಹು	೩-೨೮ ೬-೪	ಕಾವಲು
ಕಾಹೊನಲ್	೭-೨೮	ಹ.ಗ. ಕಾಳ್ಪೊನಲ್ ; ಅಡವಿಯ ಪ್ರವಾಹ
ಕಾಳ	೮-೧೬	ಕತ್ತಲೆ
ಕಾಳಿಜ	೮-೨೫ ೭-೪೩	ಹೃದಯಪಿಂಡ
ಕಾಳುಗೆಡೆ	೪-೪೦	ಕೆಟ್ಟಮಾತಾಡು
ಕಾಳೋರಗ	೮-೩೩	ಕರಿನಾಗರಹಾವು
ಕಾಳ್ಗೆಡೆ	೫-೨೭	ಕೆಟ್ಟಮಾತಾಡು
ಕಿಗ್ಗಾಳಿ	೩-೨೧	ಬೇಟೆಗೆ ಗುರಿಯಾದ ಪ್ರಾಣಿಯ ಕಡೆಯಿಂದ ಬೇಟೆಯಾಡುವ ಪ್ರಾಣಿಯ ಕಡೆಗೆ ಬೀಸುವ ಗಾಳಿ.
ಕಿಚ್ಚು	೩-೨೯	ಬೆಂಕಿ
ಕೀನಾಶ	೯-೧೮	ಯಮ
ಕುತ್ತ	೭-೩೭	ರೋಗ
ಕುತ್ತು	೫-೨೯	ಬಾಗು, ಬಗ್ಗಿಸು
ಕುತ್ತುಱು	೬-೨ ೭-೪	ಪೊದರು
ಕುಮುದ	೩-೧೭	ನೈದಿಲೆ
ಕುಸುಕು	೮-೫೬	ಕುಕ್ಕು
ಕೂಗಿಡಿಸು	೪-೮	ಅರಿಚಿಕೊಳ್ಳುವಂತೆ ಮಾಡು
ಕೆಡೆ	೪-೭	ಬೀಳು
ಕೆಡೆನುಡಿ	೨-೮	ನಿಂದಿಸು
ಕೆಡೆಹೊಯ್	೭-೨೮	ನೆಲಕ್ಕೆ ಬೀಳುವಂತೆ ಹೊಡೆ
ಕೆರಳ್	೪-೧೦	ಕೋಪಗೊಳ್ಳು, ರೇಗು

ಕೈಗೆಯ್	೧-೧೦ ೫-೩೭	ಅಲಂಕರಿಸು
ಕೈದು	೬-೨	ಆಯುಧ
ಕೈಯೊಡನೆ	೯-೫	ಸಂಗಡವೇ
ಕೈರವ	೪-೧೪	ನೈದಿಲೆ
ಕೈಸಾರು	೭-೪೧	ಕೈಗೆ ಬರು, ಸ್ವಾಧೀನವಾಗು
ಕೈಹೊಡೆ	೪-೯	ಬಿಲ್ಲುಗಾರರು ಕೈಗೆ ಕಟ್ಟಿಕೊಳ್ಳುವ [ಚರ್ಮ
ಕೊಕ್ಕರಿಸು	೭-೪೪	ಅಸಹ್ಯಪಡು
ಕೊಪ್ಪು	೪-೯	ಬಿಲ್ಲಿನ ಕೊನೆ
ಕೂಱಿಚಾಡು	೫-೨	ನಿಂದಿಸು, ಮರ್ಮಭೇದಕವಾದ ಮಾತನ್ನಾಡು
ಕೊಸರು	೭-೪೮	ಕೂಗು
ಕೋ	೪-೧೨	ಪೋಣಿಸು
ಕೋಟಲೆ	೫-೩೫	ತೊಂದರೆ
ಕೋಡಿಸು	೪-೨೦	ಕುಗ್ಗಿಸು, ಭಯಪಡಿಸು
ಕೋಡು	೫-೧೨	ಕುಗ್ಗು ; ಕೊಂಬು
ಕೋದಂಡ	೯-೧೦	ಬಿಲ್ಲು
ಕೋರಡಿಗ	೫-೧೧	ಹಿಂಸಕ
ಕೋಶ	೬-೧೬	ಬೊಕ್ಕಸ
ಕೋಳ್ಗಿಸಱು	೮-೨೫	ಕೊಚ್ಚು
ಕೌಱು	೭-೫೦	ದುರ್ವಾಸನೆ
ಕಂಕರಿಗೋಲು	೭-೪೮	ದೊಡ್ಡ ಚಾಟಿ (?)=ಸಂಬಳಿಗೋಲು (?). ಪ್ರಾಕೃತ: ಖಿಕ್ಕಿರೀ=ಡುಂಬಾದೀನಾಂ ಸ್ಪರ್ಶಪರಿಹಾರಾರ್ಥಂ ಚಿಹ್ನಯಷ್ಟಿಃ
ಕಂಟಣಿಸು	೩-೨೩	ಹಿಂಜರಿ, ಭಯದಿಂದ ಕುಗ್ಗು
ಕುಂದು	೭-೩೭	ನ್ಯೂನತೆ
ಕೊಂಡೆಯ	೨-೧೮	ಚಾಡಿ, ಕುತ್ಸಿತ

ಖ

ಖಗ	೭-೨೯	ಸೂರ್ಯ

ಗ

ಗಡಣ	೩-೧೬	ಸಮೂಹ
ಗನ್ನ	೩-೩೭	ಮೋಸ
ಗನ್ನಗತಕ	೯-೮	,,
ಗರವಟಿಕೆ	೩-೨೮	ಗದ್ದಲ (?)
ಗರಳಗೊರಳವ	೪-೧೦	ಶಿವ
ಗರುವಿಕೆ	೪-೪೨	ಗೌರವ
ಗರ್ತ	೧-೮	ಸುಳಿ
ಗಸಣಿ	೩-೩೬	ತೊಂದರೆ, ತಿಕ್ಕಾಟ
ಗಾಡಿ	೩-೩೮	ಸೌಂದರ್ಯ
ಗಾಡಿಕಾತಿ	೫-೮	ಸುಂದರಿ
ಗಾಣ	೪-೨೮	ಸಂ.-ಗಾನ
ಗಾವದಿ	೭-೪೪	ಮೂಢ (?)
ಗಾಸಿ	೨-೧೭	ತೊಂದರೆ
ಗಬ್ಬವಿಕ್ಕಿಸು	೪-೬	ಗರ್ಭಸ್ರಾವವಾಗುವಂತೆ ಮಾಡು
ಗೇಹ	೭-೨೮	ಮನೆ
ಗೊಡ್ಡಾಟ	೯-೮	ಕಾಟ, ಕಿತ್ತಾಟ
ಗೋರಿವೇಂಟೆ	೩-೨೧	ಉಪಾಯದಿಂದ ಮೃಗಗಳನ್ನು ಹಿಡಿಯುವುದು
ಗಂಡ	೪-೪	ಪರಾಕ್ರಮಿ

ಘ

ಘಲ್ಲಣೆ	೮-೫೧	ಘಾಸಿ
ಘೂಕ	೮-೧೩	ಗೂಬೆ
ಘೂರ್ಮಿಸು	೪-೮	ಗುರುಗುಟ್ಟು, ಗರ್ಜಿಸು
ಘೋಷಣೆ	೫-೨೧	ಬಿರುದು ಹೊಗಳುವಿಕೆ

ಚ

ಚಚ್ಚರ	೫-೨೨	ಬೇಗ
ಚಮ್ಮಟಿಗೆ	೪-೪೪	ಸಂ.-ಚರ್ಮಪಟ್ಟಿಕಾ ; ಚಾವಟಿ
ಚಾಂದ್ರಾಯಣ	೯-೧೩	ಒಂದು ವ್ರತ
ಚಿತ್ರಕಾಯ	೩-೨೬	ಹುಲಿ ; ಚಿರತೆ
ಚೋದ್ಯ	೩-೩೭	ಆಶ್ಚರ್ಯ
ಚಂಚು	೬-೩	ಕೊಕ್ಕು

ಜ

ಜಗವರ್ತಿ	೮-೫೪	ದೊಡ್ಡ ಉರಿ
ಜಜ್ಝರ	೩-೧೬	ವೀರ
ಜಡಿ	೭-೫೧	ತರ್ಜಿಸು, ಗದರಿಸು
ಜಡಿ	೯-೨	ಝುಳಪಿಸು
ಜತ್ತಕ	೫-೨೯, ೮-೮	ಮೋಸಗಾರ
ಜರಿ	೩-೧೫	ಕೀಲುತಪ್ಪು
ಜವಗುಂದು	೮-೫	ಶಕ್ತಿಗುಂದು
ಜಳಕಿಸು	೪-೨೦	ನಡುಗಿಸು
ಜಳೂಕ	೧-೮	ಜಿಗುಳೆ
ಜಳೋದರ	೨-೮	ಹೊಟ್ಟೆಯಲ್ಲಿ ನೀರು ತುಂಬಿಕೊಳ್ಳುವ ಒಂದು ರೋಗ
ಜಾಲ	೩-೧೪	ಸಮೂಹ
ಜುಣುಗು	೩-೨೧	ಕುಗ್ಗು
ಜಂಗುಳಿ	೭-೫೦	ಸಮೂಹ, ಗುಂಪು
ಜಂಬುಕ	೮-೧೩	ನರಿ

ಝ

ಝುಂಕಿಸು	೭-೩೩	ಬಯ್, ಗದರಿಸು

ಠ

ಠಕ್ಕು	೭-೧೦	ಮೋಸ
ಠಾವು	೩-೭	ಸ್ಥಳ

ಡ

ಡಗೆ	೪-೧೫	ಸೆಕೆ, ಝುಳ
ಡಾವರ	೫-೩೩	ಕೋಟಲೆ, ಹೊಡೆದಾಟ
ಡಾಳಿಸು	೬-೨	ಬೀಸು
ಡಿಂಡೀರ	೧-೮	ನೊರೆ
ಡೆಂಡಣಿಸು	೪-೨೪	ಬೆಚ್ಚು, ತತ್ತರಿಸು
ಡೆಂಢಣಿಸು	೩-೨೨	ಬೆಚ್ಚು, ತತ್ತರಿಸು
ಡೋಣಿ	೩-೧೫	ಡೊಗರು ; ತಗ್ಗುಬಿದ್ದ ಸ್ಥಳ

ತ

ತಕ್ಕೈಸು	೮-೨೮	ತಕ್ಕೈಸು, ಆಲಿಂಗಿಸು
ತಗಹು	೬-೨೩	ಬಂಧನ
ತಣಿ	೮-೫೦	ತೃಪ್ತಿಹೊಂದು
ತಣಿವು	೧-೧೬	ತೃಪ್ತಿ
ತನಿಗಂಪು	೪-೧೪	ಸುಗಂಧ
ತಳಹರಿಸು	೭-೩೧	ತತ್ತರಿಸು
ತಱಿಸಲ್	೩-೨೭	ನಿಶ್ಚಯಿಸು
ತಲ್ಲಣಿಸು	೮-೪	ತಳಮಳಿಸು
ತವಗ	೭-೫೨ ೧-೧೦ ೮-೫೬	ಸಂ.-ತಮಂಗ ; ಉಚ್ಚಾಸನ
ತವಿಲ್	೪-೩೨	ನಾಶ
ತಳಪಟ	೩-೧೦	ಬಯಲು
ತಳಿತ	೯-೯	ಹ.ಗ.-ತಳ್ತ ; ಹೊಂದಿದ
ತಳಿರ್	೩-೩೧	ಚಿಗುರು
ತಳುವು	೮-೯ ೭-೧೮	ತಡಮಾಡು
ತಾಣ	೧-೨	ಸ್ಥಾನ
ತಾಂಗು	೨-೧೯	ತಡೆದುಕೊ
ತಿಣ್ಣ	೫-೬	ಭಾರ
ತಿದಿ	೮-೫೧	ಚರ್ಮ
ತಿನ್	೮-೧೧	ಕಚ್ಚು
ತಿನಿಹಿ	೩-೧೬	ತಿನ್ನುವ ಸ್ವಭಾವವುಳ್ಳುದು
ತಿಮಿರ	೯-೧	ಕತ್ತಲೆ
ತಿರುಳ್	೪-೧೦	ಸಾರ
ತಿಂತಿಣಿ	೮-೧	ಸಮೂಹ
ತುಡುಕು	೪-೪೫ ೭-೪	ಹಿಡಿ, ಮುಟ್ಟು
ತೂಪಿಱಿ	೩-೯	ಉಃಪೆಂದು ಊದು
ತೆಕ್ಕ	೫-೨೯ ೫-೩೩	ದಿಕ್ಕುಗೆಡು
ತೆರಳಿಕೆ	೪-೧೦	ಸಮೂಹ
ತೆಱಿಕಾಱಿ	೫-೩೦	ಹಣವನ್ನು ಬರವಾಡಿಕೊಳ್ಳುವವನು

ತೆಱೆ	೭-೪೭	ಸುಂಕ
ತೇಕು	೪-೩	ನಡುಗು
ತೊಡರ್	೧-೧೫	ಪ್ರತಿಭಟಿಸು
ತೊಡಿಗೆ	೧-೭	ಆಭರಣ
ತೊನೆ	೪-೨೪	ತೂಗು
ತೊರಳೆ	೪-೧೦	ಗುಲ್ಮ ; ದೇಹದ ಒಂದು ಭಾಗ
ತೊಳಲು	೭-೨೨	ಸುತ್ತಾಡು
ತೊಂಗಲ್	೩-೩೧	ಗೊಂಚಲು
ತೋಱೆತ್ತು	೩-೨೯	ಬೇಟೆಯಲ್ಲಿ ಕ್ರೂರಮೃಗವನ್ನು ಆಕರ್ಷಿಸಲು ಕಟ್ಟುವ ಎತ್ತು
ತೋಹು	೩-೨೩	ಮೋಸ, ಉಪಾಯ

ದ

ದಟ್ಟಿಸು	೫-೭	ಬೆದರಿಸು
ದಟ್ಟೈಸು	೮-೧೬	ದಟ್ಟವಾಗು
ದಡದಡಿಸು	೭-೩೧	ನಡುಗು
ದಮೆ	೨-೧೫	ಇಂದ್ರಿಯ ನಿಗ್ರಹ
ದವ	೧-೧೧	ಕಾಡು ಕಿಚ್ಚು
ದಳೆ	೪-೧೨	ಹೊಲಿ
ದಂಡಿಗೆ	೪-೬೮	ವೀಣೆ
ದಾಳಿಕ್ಕು	೩-೧೮	ದಾಳಿಯಿಡು, ಮುತ್ತು
ದಿವಸಪತಿ	೧-೧	ಸೂರ್ಯ
ದೀಹ	೩-೨೨, ೫-೩೭	ಬೇಟೆಯನ್ನು ಕಲಿಸಿದ ಪ್ರಾಣಿ
ದೂವೆ	೮-೫೫	ಸಂ.-ಧೂಮ ; ಹೊಗೆ
ದೇಸಿಗ	೬-೪	ಮನೆಬಾಗಿಲು ಇಲ್ಲದ ಪರದೇಶಿ

ಧ

ಧೃತಿ	೬-೨೦	ಧೈರ್ಯ
ಧಾವತಿ	೬-೨೫, ೮-೩೭	ಕಷ್ಟ, ಆಯಾಸ
ಧೀ	೨-೭	ಬುದ್ಧಿ
ಧೀವರ	೩-೫	ಬೆಸ್ತ (ಇಲ್ಲಿ, ಬೇಟೆಗಾರ)
ಧುರ	೪-೨೦	ಯುದ್ಧ

ನ

ನಕುಲ	೩-೧೦	ಮುಂಗುಸಿ
ನಕ್ರ	೧-೮	ಮೊಸಳೆ
ನನ್ನಿ	೩-೩೭	ಸತ್ಯ
ನನ್ನಿಕಾಱ	೭-೪೧ ೮-೨೪	ಸತ್ಯವಂತ
ನಲವು	೩-೩೧	ಸಂತೋಷ
ನಲಿ	೪-೧೭	ಸಂತೋಷಪಡು
ನಸುನನೆ	೬-೩	ನಸುಗುನ್ನಿ
ನಳನಳಿಸಿ	೩-೩೧	ಕೋಮಲವಾಗಿ
ನಾರಂದ	೨-೧೩	ನಾರದ
ನಾರಾಚ	೮-೧೦	ಬಾಣ
ನಾಳಲ್	೪-೨	ಲಾಳದ ಕಡ್ಡಿ
ನಿಕಾಯ	೯-೧೩	ಸಮೂಹ
ನಿಗ್ರಹ	೬-೨೪ ೯-೧೧	ಪೀಡೆ, ಹಿಂಸೆ
ನಿಮಿರ್	೩-೨೨	ನೆಟ್ಟಗಾಗು
ನಿರುತ	೪-೨೦	ನಿಜ, ಸತ್ಯ
ನಿರೋಧ	೨-೧೨ ೬-೯	ಪ್ರತಿಬಂಧಕ, ತಡೆ
ನಿರ್ಘಾತನ	೪-೫	ಬಲವಾಗಿ ಹೊಡೆಯುವುದು
ನೀಱೆ	೬-೨೬	ಸುಂದರಿ
ನೀಹಾರ	೧-೮	ಮಂಜು
ನುಲಿ	೭-೪೨	ಹಗ್ಗ
ನೆರವು	೭-೧	ಸಹಾಯ
ನೆರೆ	೩-೧೭	ಗುಂಪು ಸೇರು
ನೆಱೆ	೪-೩೯	ಸಂಪೂರ್ಣವಾಗಿ
ನೆಲದೆಱೆ	೭-೪೭	ನೆಲ + ತೆಱೆ ; ನೆಲಕ್ಕಾಗಿ ಕೊಡಬೇಕಾದ ಸುಂಕ
ನೇಸಱು	೬-೧೨	ಸೂರ್ಯ
ನೇಹ	೮-೫೬	ಸಂ.-ಸ್ನೇಹ ; ಪ್ರೀತಿ

ಪ

ಪಟಲ	೯-೧	ಸಮೂಹ
ಪಟವೇಂಟೆ	೩-೨೩	ಒಂದು ವಿಧವಾದ ಬೇಟೆ

ಪಡಲಿಡು	೮-೨೫	ಚಲ್ಲಾಪಿಲ್ಲಿಯಾಗಿ ಬೀಳು
ಪಡಿ	೭-೪೫	ಸಂ.-ಪ್ರತಿ
ಪಡೆ	೪-೬, ೭	ಸೈನ್ಯ
ಪರಿಕರ	೪-೧	ಸುತ್ತುಮುತ್ತಿನವರು
ಪರಿಣಾಮ	೭-೧೭ ೬-೧೧	ನಿಸ್ತಾರ, ಮುಗಿವು
ಪರುಷ	೨-೧	ಸ್ಪರ್ಶಶಿಲೆ (ಇದಕ್ಕೆ ಮುಟ್ಟಿಸಿದ ಲೋಹವು ಚಿನ್ನವಾಗುತ್ತದೆ)
ಪರ್ವ	೨-೨	ಹಬ್ಬ
ಪಱಿ	೪-೫	ಕತ್ತರಿಸು
ಪವಿಧರ	೯-೨೧	ಇಂದ್ರ
ಪಶುಪತಿ	೩-೩೧	ಶಿವ
ಪಸಾಯ	೪-೨೯	ಉಡುಗೊರೆ
ಪಳಹರ ವೇಂಟೆ	೩-೨೩	ಒಂದು ವಿಧವಾದ ಬೇಟೆ
ಪಂಚಾಸ್ಯ	೧-೧೨	ಸಿಂಹ
ಪಂಥ	೭-೪೭	ಮಾರ್ಗ
ಪಾಠೀನ	೧-೮	ಒಂದು ಜಾತಿಯ ಮೀನು
ಪಾಡು	೬-೯	ಸ್ಥಿತಿ
ಪಾರದಿ	೩-೩೯	ಬೇಟೆ (ಪ್ರಾ. ಪಾರದ್ಧಿಂ)
ಪಿಕ	೬-೩	ಕೋಗಿಲೆ
ಪಿಸುಣತ್ವ	೩-೩೬	ಚಾಡಿಕೋರತನ
ಪೀಳಿಗೆ	೧-೧೦	ವಂಶ
ಪುರವೈರಿ	೩-೩೦	ಶಿವ
ಪುಳಕ	೩-೩೮	ರೋಮಾಂಚ
ಪುಳಿನ	೩-೩೧	ಮರಳುದಿಣ್ಣೆ
ಪುಳಿಂದ	೪-೨	ಬೇಡ
ಪೊಗಳ್	೮-೧ ೮-೫	ಹೊಗಳು, ವರ್ಣಿಸು
ಪೊಡಮಡು	೪-೨೮	ನಮಸ್ಕಾರಮಾಡು
ಪೊನಲ್	೪-೪೫	ಪ್ರವಾಹ
ಪ್ರಕರ	೬-೧೦	ಸಮೂಹ
ಪ್ರತಿಗ್ರಹ	೫-೩೯	ದಾನ ತೆಗೆದುಕೊಳ್ಳುವುದು
ಪ್ರೇತವನ	೪-೩೮	ಶ್ಮಶಾನ

ಫ

ಫಣಿ	೮-೮	ಹಾವು

ಬ

ಬಗೆ	३-३೪	ಮನಸ್ಸು
,,	೪-೨೨	ಆಲೋಚಿಸು
,,	೭-೧೦	ಲಕ್ಷ್ಯಮಾಡು
ಬಟ್ಟೆ	೧-೧೫	ದಾರಿ
ಬತ್ತಾಯ	೭-೨೫	ಭೃತ್ಯ
ಬನ್ನ	३-३೭	ಭಂಗ
ಬಯ್ಚಿಡು	೨-೭	ಬಚ್ಚಿಡು
ಬಱತ	೬-೯	ಆರಿದ, ಒಣಗಿದ
ಬಲಗೊಳ್	೭-೧೬	ಪ್ರದಕ್ಷಿಣೆಮಾಡು
ಬಲವರು	೪-೨	ಬಳಸಿಬರು
ಬಲಿ	३-३೨	ಪುಷ್ಟಿಹೊಂದು
ಬಲ್ಲಹ	३-೧३	ಸಂ.-ವಲ್ಲಭ ; ಒಡೆಯ
ಬವರಿದಿರುಗು	೪-೨	ಗುಂಡಗೆ ಸುತ್ತು
ಬಸವಳಿ	೪-೧೯	ಶಕ್ತಿಗುಂದು
ಬಸುಱು	३-೧೮	ಹೊಟ್ಟೆ
ಬಳಿ	३-३೦	ದಾರಿ
ಬಳಿಚು	೪-೧೧	ಬಿಡು
ಬಾಣಸ	೮-೧	ಅಡಿಗೆಯ ಮನೆ
ಬಾದಣ	३-೧೫	ಸಂದು, ತೂತು
ಬಾರಿ	೭-३೧	ಬಾರು, ತೊಗಲಿನ ಪಟ್ಟಿ
ಬಿಗುಹು	೪-३	ಬಿಗಿ
ಬಿಡು	೪-೧೪	ಬೀಡುಬಿಡು
ಬಿತ್ತು	३-೧३	ಬೀಜ
ಬಿದ್ದ	೪-೯	ಔತನ
ಬಿನದ	३-೨೫	ಸಂ.-ವಿನೋದ
ಬಿಱುಬು	೫-೧೧	ಕಾಠಿನ್ಯ
ಬಿಱುಮುಂದಿ	೪-೨	ಕಠಿನವಾದ ದೇಹವುಳ್ಳ ವ್ಯಕ್ತಿ
ಬಿಸರುಹ	೫-೭	ಕಮಲ
ಬೀ	೪-೨೫	ನಾಶವಾಗು

ಬೀದಿವರಿ	೪-೨	ಸ್ವೇಚ್ಛೆಯಾಗಿ ಓಡು
ಬೀಯ	೨-೧	ಅಕ್ಕಿ, ಆಹಾರ
ಬೀವು	೭-೪೨	ನರ (?)
ಬೆಬ್ಬಳಿಸು	೪-೧೯	ಗಾಬರಿಯಾಗು
ಬೆಸ	೭-೨೩	ಆಜ್ಞೆ
ಬೆಸಕೈ	೬-೫	ಸೇವಿಸು
ಬೇಹಾಗ	೩-೬	ಬೇಕಾದಾಗ
ಬೇಳ್	೨-೮	ಹೋಮಮಾಡು
ಬೈಗು	೭-೨೪	ಸಾಯಂಕಾಲ
ಬೆಂಬಡಿಗೆ	೩-೨೯	ಬೆನ್ನಿನ ಮೇಲೆ ಹೊಡೆಯುವ ದೊಣ್ಣೆ
ಬೆಂಗೊಡು	೫-೩೬	ಸೋಲು
ಬೊಂಬುಳಿ	೮-೪೮	ಒಂದು ಬಗೆಯ ತಮಟೆ
ಬೋಸರಿಸು	೨-೧೮	ಪ್ರೇರಿಸು
ಬೋಳೈಸು	೩-೩೪	ಸಮಾಧಾನಪಡಿಸು

ಭ

ಭಲ್ಲುಕ	೮-೧೩	ಕರಡಿ
ಭವ	೨-೧೪	ಜನ್ಮ
ಭವಿ	೧-೬	ವೀರಶೈವನಲ್ಲದವನು
ಭಾಳ	೯-೧೪	ಹಣೆ

ಮ

ಮಡಲಿಱು	೪-೯, ೮-೧೬	ಹಬ್ಬು
ಮದ್ದು	೭-೩೭	ಔಷಧ
ಮನ್ನೆಯ	೪-೪	ಸಂ.-ಮಾನ್ಯ ; ನಾಯಕ
ಮರಚು	೩-೧೯	ಹ.ಗ. ಮರಳ್ಚು ; ಹಿಂದಿರುಗಿಸು
ಮರವಡು	೩-೨೫	ನಿಶ್ಚೇಷ್ಟವಾಗು
ಮರುತ ಮಿತ್ರ	೩-೨೬	ವಾಯುವಿನ ಸ್ನೇಹಿತ, ಅಗ್ನಿ
ಮರುಳ	೪-೩೪	ಹುಚ್ಚ
ಮರೆ	೩-೨೦	ಒಂದು ಜಾತಿಯ ಜಿಂಕೆ
ಮಱುವೊನೆ	೪-೨೪	ಮತ್ತೊಂದು ತುದಿ
ಮಲೆ	೩-೨೯	ಗರ್ವಿಸು

ಮಲ್ಲಾಮಲ್ಲಿ	೭-೫೦ ೮-ರಗಳೆ	ನೂಕುನುಗ್ಗಲು
ಮಸಕ	೭-೧೮	ವಿಜೃಂಭಣೆ
ಮಸಗು	೬-೧೮	ವಿಜೃಂಭಿಸು
ಮಾಡ	೮-೧	ಮಹಡಿ ಮನೆ
ಮಾಣ್	೧-೬	ಬಿಡು
ಮಾದು	೬-೫	ಹ.ಗ.-ಮಾಣ್ದು ; ತಪ್ಪಿ
ಮಾರಿ	೮-೧, ೨, ೧೦	ಒಂದು ದೇವತೆ ; ತೊಂದರೆ, ಹಿಂಸೆ
ಮಾಱುದ್ದು	೪-೯	ಒಂದಕ್ಕೊಂದಕ್ಕೆ ಉಜ್ಜು
ಮಾರ್ತಾಂಡ	೩-೧೭	ಸೂರ್ಯ
ಮಾರ್ಪೊಳೆ	೭-೧೬	ಪ್ರತಿಬಿಂಬಿಸು
ಮಿಡಿ	೩-೬	ಬೆರಳ ಮೇಲಿಟ್ಟು ಹಾರಿಸು
ಮಿಡುಕು	೪-೧೯	ಅಲ್ಲಾಡು, ಚಲಿಸು
ಮಿತ್ತು	೩-೧	ಸಂ.-ಮೃತ್ಯು
ಮಿತ್ರ	೩-೨೬	ಸೂರ್ಯ, ಸ್ನೇಹಿತ
ಮಿಸುಗು	೪-೧೨	ಹೊಳೆ, ಚಲಿಸು
ಮಿಳ್ಳಿಸು	೪-೮	ಅಲುಗಾಡು
ಮೀಹ	೪-೩೮	ಸ್ನಾನ
ಮುಕ್ಕುಱುಕ್ಕು	೪-೨	ಮುತ್ತು, ಮುಸುರು
ಮುಗಿಲ್	೭-೧೬	ಮೋಡ, ಆಕಾಶ
ಮುಗುದ	೬-೧೪	ಸಂ.-ಮುಗ್ಧ ; ಏನೂ ತಿಳಿಯದವನು
ಮುಟ್ಟಿಗೆ	೮-೨೭ ೮-೩೦	ಚಿತಿ (?)
ಮುಡಿ	೪-೩೯	ಕೂದಲಿನ ಗಂಟು
ಮುಡಿಹ	೪-೩೮	ಮುಡಿಯುವುದು
ಮುಪ್ಪುರಿ	೨-೫	ಮೂರು ಹುರಿ
ಮುರುಟು	೮-೮	ಕುಗ್ಗು
ಮೂಗುವಡು	೭-೨೦	ಮೂಕನಾಗು
ಮೂಡಿಗೆ	೪-೯	ಬತ್ತಳಿಕೆ
ಮೂರಿ	೮-೧	ಕಟಬಾಯಿ
ಮೃಗನಾಭಿ	೪-೩೭	ಕಸ್ತೂರಿಯ ಮೃಗ
ಮೆಯ್ಯಿಕ್ಕು	೭-೭	ನಮಸ್ಕಾರಮಾಡು
ಮೇಗಾಳಿ	೩-೨೧	ಬೇಟೆಯಾಡುವ ಮೃಗದ ಕಡೆಯಿಂದ ಬೇಟೆಗೆ ಗುರಿಯಾದ ಪ್ರಾಣಿಯ ಕಡೆಗೆ ಬೀಸುವ ಗಾಳಿ

ಮೇಖಲೆ	೪-೧೨	ಉಡಿದಾರ
ಮೊಗೆ	೨-೧೯	ತುಂಬು (ಇಲ್ಲಿ, ನುಂಗು)
ಮೊಟ್ಟೆಗೊಳ್	೪-೩	ಮೊಟ್ಟೆ + ಕೊಳ್ ; ಮುಟ್ಟೆಯಲ್ಲಿ ಕಟ್ಟಿದ ಬುತ್ತಿ
ಮೋದು	೩-೨೫	ಹೊಡೆ, ಸದೆಬಡಿ
ಮೋಹರ	೯-೩	ಗುಂಪು
ಮೋಹು	೯-೨	ಮುಟ್ಟಿಸು
ಮಂಡಿತ	೪-೧೮	ಅಲಂಕೃತವಾದ
ಮೌಂಜಿ	೪-೧೨	ನೊದೆ ಹುಲ್ಲಿನ ಹುರಿ

ಯ

ಯಕ್ಷಕರ್ದಮ	೩-೩೮	ಪಚ್ಚಕರ್ಪೂರ, ಕಸ್ತೂರಿ ಮೊದಲಾದುವುಗಳಿಂದ ಮಾಡಿದ ಸುಗಂಧದ್ರವ್ಯ

ರ

ರತ್ನಾಕರ	೧-೧೨	ಸಮುದ್ರ
ರಾಗ	೬-೪ ೯-೧	ಕಾಂತಿ, ಸಂತೋಷ
ರುಚಿರ	೧-೯	ಮನೋಹರ
ರುಜೆ	೪-೩೦	ರೋಗ
ರುದ್ರಭೂಮಿ	೭-೪೯	ಶ್ಮಶಾನ
ರುಧಿರ	೪-೪೪	ರಕ್ತ

ಱ

ಱೋಡಾಡು	೨-೨೧	ಹಾಸ್ಯಮಾಡು

ಲ

ಲಲಾಮ	೫-೧೮	ಭೂಷಣ, ಶ್ರೇಷ್ಠ
ಲಲ್ಲೆಗಱೆ	೭-೭	ಮುದ್ದಿಸು
ಲಾಗು	೭-೨೩, ೨೪	ಸುಲಭ, ಒಪ್ಪಿಗೆ (?) ?
ಲುಬ್ಧಕ	೩-೨೦ ೪-೮	ಬೇಡ
ಲೇಸು	೧-೫	ಸರಿ, ಒಳ್ಳೆಯದು

ವ

ವಡಬ	೫-೧	ಸಮುದ್ರದ ಬೆಂಕಿ
ವಲ್ಕಲ	೩-೩೨	ನಾರುಬಟ್ಟೆ
ವಸುಮತಿ	೪-೩೬	ಭೂಮಿ
ವಿದ್ರುಮ	೧-೮	ಹವಳ
ವಿಮಾನ	೭-೫೨	ಶವವನ್ನು ಸಾಗಿಸುವ ಮಂಟಪ
ವಿಶ್ವಾಸ	೩-೩	ನಂಬಿಕೆ
ವಿಸರ	೬-೩	ಸಮೂಹ
ವೃಕ	೮-೧೩	ತೋಳ
ವ್ರಜ	೩-೨೯	ಸಮೂಹ
ವ್ರಾತ	೩-೩೨	ಸಮೂಹ

ಶ

ಶಮೆ	೨-೧೫	ಮನೋನಿಗ್ರಹ
ಶಾಡ್ವಲ	೪-೧೫	ಹಸುರು ಹುಲ್ಲು
ಶಿಶಿರೋಪಚಾರ	೪-೧೫	ಶೈತ್ಯೋಪಚಾರ
ಶೀಕರ	೧-೮	ತುಂತುರು ಹನಿ
ಶೇಷೆ	೩-೩	ಅಕ್ಷತೆ
ಶಿಂಶುಮಾರ	೧-೮	ಮೊಸಳೆಯಂಥ ಒಂದು ಪ್ರಾಣಿ
ಶೈವಾಳ	೧-೮	ಪಾಚಿ

ಸ

ಸತ್ತಿಗೆ	೪-೩೧	ಛತ್ರಿ
ಸನಿಹ	೭-೧೧	ಸಮೀಪ
ಸಬಳ	೮-೫೪	ಭರ್ಜಿ
ಸಮೆ	೬-೨೭	ಸವೆದುಹೋಗು, ಕಡಮೆಯಾಗು
ಸರ	೪-೨೪	ಸಂ.-ಸ್ವರ
ಸರಳ್	೪-೧೦	ಬಾಣ
ಸರಳಿಸು	೩-೨೦, ೨೨	ಹಾರು, ದಾಟು
ಸರಿತ್ಪತಿ	೧-೧	ಸಮುದ್ರ
ಸವಕಟ್ಟು	೩-೨೬	ಏರ್ಪಡಿಸು
ಸವುಡಿ	೭-೨೭	ಅಪ್ರಯೋಜಕ (?)
ಸಾಗಿಸು	೪-೩೪	ಪೋಷಿಸು
ಸಾಗುದುರೆ	೮-೪೨	ಸಾಯುವ ಕುದುರೆ

ಸಾಮಾರ್ಥ	೩-೧	ಸಾಮರ್ಥ್ಯ (?)
ಸಾರ್	೭-೧೩	ಸೇರು
ಸಾರೆ	೪-೭	ಹತ್ತಿರ
ಸಾಲಭಂಜಿಕೆ	೪-೨೭	ಪುತ್ತಳಿ, ಗೊಂಬೆ
ಸಿಗ್ಗು	೮-೩೬	ನಾಚಿಕೆ
ಸಿದುಗು	೮-೨೬	ಬೆದಕು, ಆರಿಸು
ಸಿದ್ದಿಗೆ	೭-೫೨	ಚಟ್ಟ
ಸಿವುಡಿ	೬-೧೧	ಕಾಗದಪತ್ರಗಳ ಕಟ್ಟು (?)
ಸೀಗುರಿ	೬-೨	ಒಂದು ತೆರದ ಚಾಮರ
ಸುಗಿ	೪-೧೭	ಹೆದರು
ಸುಧೆ	೪-೧೬	ಅಮೃತ
ಸುನಾಣೆಯ	೬-೧೦	ಒಳ್ಳೆಯ ನಾಣ್ಯ
ಸುಮಾನ	೩-೩೫	ಸಂತೋಷ
ಸುಮ್ಮಾನ	೩-೧೭	ಸಂತೋಷ
ಸುರೆ	೨-೧೧	ಮದ್ಯ
ಸುಂಕಿಸು	೪-೧೨	ಸುತ್ತುಗಟ್ಟು
ಸೂಡು	೭-೧೭	ಮುಡಿದುಕೊ
ಸೂನೆಗಾಱ	೮-೧	ಕಟುಕ
ಸೂರುಳ್	೫-೩೦	ಶಪಥ, ಆಣೆ
ಸೂಳ್	೨-೧೬, ೮-೩	ಸಲ, ಬಾರಿ
ಸೆಡೆ	೭-೪೫	ಭಯಪಡು
ಸೆರೆ	೮-೧೦	ರಕ್ತನಾಳ
ಸ್ಯೆವೆಱಗಾಗು	೨-೧೨	ಬಹಳ ಆಶ್ಚರ್ಯಪಡು
ಸೊರಹು	೨-೬	ಹರಟು, ಗಳಹು
ಸೋಹು	೩-೨೩	ಸೋವು, ಅಟ್ಟು
ಸಂಕ್ರಂದನ	೫-೬	ಇಂದ್ರ
ಸಂತವಿಡು	೬-೧೬	ಸಮಾಧಾನ ಪಡಿಸು
ಸಂತಾನ	೬-೧೦	ಸಮೂಹ
ಸಂದೋಹ	೬-೧೦	ಸಮೂಹ
ಸಂಬಳಿಗೋಲು	೭-೩೧	ಬಿದಿರುಕೋಲು (?)
ಸಂವರಣೆ	೮-೪	ಸಮೂಹ
ಸ್ನಪನ	೩-೩೮	ಅಭಿಷೇಕ
ಸ್ವಧಾ	೪-೧೩	ಹೋಮಮಾಡುವಾಗ ಹೇಳುವ ಮಾತು
ಸ್ವಾಹಾಪತಿ	೧-೧	ಅಗ್ನಿ

ಹ

ಹಗ್ಗಿ	೫-೬	ಸಂ.-ಅಗ್ನಿ ; ಬೆಂಕಿ
ಹಡಪಿಗ	೭-೩೦	ಸಂಚಿಯವನು
ಹಡಿ	೮-೨೧	ಹ.ಗ.-ಪಡಿ ; ಬಾಗಿಲು
ಹಣುಗು	೩-೨೧, ೨೨	ಹೊಂಚುಹಾಕು
ಹಣ್ಣುಟುವೆ	೫-೨೪	ಬಹಳ ಹಳೆಯದಾದ ಬಟ್ಟೆ
ಹದರು	೮-೭	ಕೈಯ ಮಣಿಕಟ್ಟು
ಹದುಳ	೩-೧೩	ಕ್ಷೇಮ
ಹನನ	೯-೧೩	ಕೊಲೆ
ಹರಕರಿಸು	೩-೧೮	ಹರಡಿಕೊ (?)
ಹರಣ	೪-೨೨	ಸಂ.-ಪ್ರಾಣ
ಹರಹು	೩-೩೩	ವಿಸ್ತರಿಸು, ಚಾಚು
ಹರಿ	೩-೬	ವೇಗವಾಗಿ ಹೋಗು
ಹರೆ	೪-೩೨	ಚೆದರು
ಹಱೆ	೭-೪೮	ತಮಟೆ
ಹಲ್ಲಣಿಸು	೮-೫೧	ಜೀನುಹಾಕು
ಹವಣು	೫-೧೪	ಸಂ.-ಪ್ರಮಾಣ ; ಹದ
ಹಸರಿಸು	೩-೨೧	ಪ್ರಸರಿಸು
ಹಸಾದ	೩-೬	ಸಂ.-ಪ್ರಸಾದ
ಹಂಜರಿಸು	೫-೫೨	ಹಂದರಹಾಕು
ಹಂತಿ	೮-೧	ಸಂ.-ಪಂಕ್ತಿ
ಹಂದೊಗಲು	೭-೪೨	ಹಸಿಯ ತೊಗಲು
ಹಾರಯಿಸು	೩-೨೧	ಅಪೇಕ್ಷಿಸು
ಹಾರು	೭-೧, ೮-೪೦	ಹ. ಗ.ಪಾರ್ ; ನಿರೀಕ್ಷಿಸು
ಹಾಸ	೩-೨೧	ಸಂ.-ಪಾಶ ; ಕೊರಳ ಕಣ್ಣಿ
ಹಾಳು	೮-೩೩	ಭೂಮಿ, ಗದ್ದೆ, ದತ್ತಿ
ಹಿಣಿಲು	೭-೪೩	ಜಡೆ
ಹುಡುಕು ನೀರು	೫-೧೦	ಕುದಿಯುವ ನೀರು (?)
ಹುಯ್ಯಲು	೩-೮	ಮೊರೆ, ಆರ್ತನಾದ
ಹೆಗಲೆಣೆ	೧-೧೪	ಸಮಾನಸ್ಕಂಧ, ಸರಿಸಮಾನ
ಹೆಟ್ಟವೆಳಸು	೫-೯	ಮರದ ದಿಮ್ಮಿಯಂತೆ ಕಟ್ಟಿ ಮೈ ಗಾಯವಾಗುವ ಹಾಗೆ ಎಳಸುವುದು (?)
ಹೆಡತಲೆ	೯-೨	ತಲೆಯ ಹಿಂಭಾಗ

ಹೆಪ್ಪಳಿಸು	೨-೨೦	ಹ. ಗ.-ಪೆಪ್ಪಳಿಸು, ಭಯಪಡು
ಹೆಂದದ	೩-೨೭	ಹಿಂದೆ ಬೀಳದ, ಹೆಚ್ಚಾದ
ಹೇವರಿಸು	೮-೩೮	ಅಸಹ್ಯಪಡು, ಹಿಂದೆಗೆ
ಹೇಸು	೯-೧೨	ಜುಗುಪ್ಸೆಪಡು
ಹೊಗರು	೪-೪೪	ಕಾಂತಿ
ಹೊಡಕರಿಸು	೮-೧೧	ದೊಡ್ಡದಾಗು, ಪ್ರಜ್ವಲಿಸು (?)
ಹೊಡೆ	೩-೧೦	ತೆನೆ
ಹೊಡೆವಡು	೬-೪	ನಮಸ್ಕಾರಮಾಡು
ಹೊಣಕೆ	೧-೧೪	ಹ. ಗ.-ಪೊಣರ್ಕೆ ; ಪ್ರತಿಸ್ಪರ್ಧಿ
ಹೊನಲಿಡು	೮-೨೫	ಪ್ರವಹಿಸು
ಹೊಯಿಕೈ	೧-೧೪	ಪ್ರತಿಸ್ಪರ್ಧಿ
ಹೊರಳಿ	೪-೧೦	ಸಮೂಹ, ಮೊತ್ತ
ಹೊಱೆಕಾಱ	೭-೩೭	ಭಾರವನ್ನು ಹೊರುವವನು
ಹೊಲಬು	೮-೧೧	ಮಾರ್ಗ
ಹೊಲ್ಲ	೫-೩೪	ಅಯೋಗ್ಯ, ಅನುಚಿತ
ಹೊಲ್ಲಹ	೫-೩೦	ನೀಚ, ಹೀನ
ಹೊಳಲು	೫-೮	ಪೊಟ್ಟರೆ
ಹೊಳ್ಳು	೫-೮	ನಿಸ್ಸಾರ
ಹೋರು	೩-೧೫	ಸಂದು, ತೂತು